ಶುಕ್ರವಾರ, ಜುಲೈ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 184 | ಪುಟ 22

prajavani.net prajavani ● www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಶುಭಮನ್ ದ್ವಿಶತಕ..**

ಎಜ್‌ಬಾಸ್ಟನ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಗುರುವಾರ ದ್ವಿಶತಕ (269 ರನ್) ಗಳಿಸಿದ ಭಾರತ ತಂಡದ ನಾಯಕ ಶುಭಮನ್ ಗಿಲ್





ಇಂದಿನ ಸಂಚಿಕೆ ಜತೆಗೆ ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಕುರಿತ ಎಂಟು ಪುಟಗಳ ಪುರವಣಿ ಇದೆ

ಸೆನ್ಸೆಕ್ಸ್ 83,239 | ನಿಫ್ಟಿ 25,405 | $/₹ 85.55 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13 ಲಕ್ಷ (ಬೆಂಗಳೂರು)

## ನೀಟ್: ರಾಜ್ಯದ ಅಭ್ಯರ್ಥಿಗಳ ರ‍್ಯಾಂಕ್ ಪ್ರಕಟ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಪ್ರಸಕ್ತ ಸಾಲಿನ ಯುಜಿ–ನೀಟ್ ಅರ್ಜಿಯಲ್ಲಿ ಕರ್ನಾಟಕ ಎಂದು ನಮೂದಿಸಿ, ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದ 87,909 ಅಭ್ಯರ್ಥಿಗಳ ನೀಟ್ ರ‍್ಯಾಂಕ್ ಮತ್ತು ಪಡೆದ ಅಂಕಗಳ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜಾಲತಾಣದಲ್ಲಿ ಪ್ರಕಟಿಸಿದೆ.

'ಅತಿ ಹೆಚ್ಚು ಅಂದರೆ 670 ಅಂಕ ಪಡೆದ ಅಭ್ಯರ್ಥಿ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿ ಇದ್ದಾರೆ. 113 ಅಂಕ ಪಡೆದ ಅಭ್ಯರ್ಥಿ ಕೊನೆಯಲ್ಲಿ ಇದ್ದು, ಅವರು ಕೂಡ ಅರ್ಹತೆ ಪಡೆದಿದ್ದಾರೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

'ನೀಟ್ ರೋಲ್ ನಂಬರ್ ನಮೂದಿಸಿ, ನೀಟ್ ಕೌನ್ಸೆಲಿಂಗ್‌ಗೆ ನೋಂದಣಿ ಮಾಡಿಕೊಳ್ಳಲು ಶೀಘ್ರ ಲಿಂಕ್ ಬಿಡುಗಡೆ ಮಾಡಲಾಗುವುದು. ನೀಟ್‌ನಲ್ಲಿ ಅರ್ಹತೆ ಪಡೆದು, ಇದು ವರೆಗೂ ಅರ್ಜಿಯನ್ನೇ ಸಲ್ಲಿಸದಿರುವ ವರಿಗೂ ನೋಂದಣಿಗೆ ಅವಕಾಶ ನೀಡಲಾಗುವುದು' ಎಂದಿದ್ದಾರೆ.

# ಶ್ರೀನಾಥ್ ವಿರುದ್ಧ ಕ್ರಮಕ್ಕೆ ಪತ್ರ

### 41 ಸುಲಿಗೆ ಪ್ರಕರಣ: ಮುಖ್ಯ ಕಾರ್ಯದರ್ಶಿಗೆ ಲೋಕಾಯುಕ್ತದಿಂದ ವರದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೋಕಾಯುಕ್ತದ ಹೆಸರಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಹಿಂದೆ ಬೆಂಗಳೂರು ನಗರ ಘಟಕದ ಎಸ್‌ಪಿಯಾಗಿದ್ದ ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಲೋಕಾಯುಕ್ತವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದೆ.

ಈ ಪ್ರಕರಣದ ತನಿಖೆಯ ಈವರೆಗಿನ ಪ್ರಗತಿ ಕುರಿತು ಲೋಕಾಯುಕ್ತ ರಿಜಿಸ್ಟ್ರಾರ್ ಅವರು ಗುರುವಾರ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

'ಲೋಕಾಯುಕ್ತ ಸಂಸ್ಥೆಯ ಹೆಸರು ದುರ್ಬಳಕೆ ಮಾಡಿಕೊಂಡು ಹಣ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದ ಕೂಡಲೇ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲರ ಸೂಚನೆಯಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದು ಪ್ರಕಟಣೆ ಹೇಳಿದೆ.

'ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ, ಬೆದರಿಸಿ ಹಣ ವಸೂಲಿ ಮಾಡಿದ ಆರೋಪದಲ್ಲಿ ಮಾಜಿ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪನನ್ನು ಬಂಧಿಸಲಾಗಿತ್ತು. ಲೋಕಾಯುಕ್ತ ಎಸ್‌ಪಿಯಾಗಿದ್ದ ಶ್ರೀನಾಥ್ ಜೋಷಿ ಜತೆಗೆ ಆತ ನಿರಂತರ ಸಂಪರ್ಕದಲ್ಲಿ ಇದ್ದ ಎಂಬುದು ವಿಚಾರಣೆ ವೇಳೆ ಪತ್ತೆಯಾಯಿತು' ಎಂದು ವಿವರಿಸಿದೆ.

'ಶ್ರೀನಾಥ್ ಜೋಷಿ ಜತೆಗೆ ಸಂಪರ್ಕದಲ್ಲಿ ಇದ್ದಾಗಲೇ, ನಿಂಗಪ್ಪನು ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡಿದ್ದಾನೆ ಎಂಬುದು ಗೊತ್ತಾಗಿದೆ. ವಸೂಲಿಯಿಂದ ಬಂದ ಕಪ್ಪು ಹಣವನ್ನು ಕಾನೂನು ಬದ್ಧಗೊಳಿಸಿಕೊಳ್ಳುವ ಉದ್ದೇಶದಿಂದ ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆ ಮಾಡಿದ್ದಾನೆ' ಎಂದು ಮಾಹಿತಿ ನೀಡಿದೆ.

'ನಿಂಗಪ್ಪನ ಪ್ರಕರಣದಲ್ಲಿ ಶ್ರೀನಾಥ್ ಜೋಷಿ ಅವರು ಅಖಿಲ ಭಾರತ ಸೇವಾ ನಿಯಮ–1968 ಅನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಮುಖ್ಯ ಕಾರ್ಯದರ್ಶಿಗೆ ಈಗಾಗಲೇ ಪತ್ರ ಬರೆಯಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

▸11

### ಕ್ರಿಪ್ಟೊ ಕರೆನ್ಸಿಯಲ್ಲಿ ₹4.92 ಕೋಟಿ ಹೂಡಿಕೆ

- ಹಣ ವಸೂಲಿ ವ್ಯವಹಾರಗಳಿಗೆ ಸಂಬಂಧಿಸಿದ ಸಂದೇಶಗಳಲ್ಲಿ, ಹಣಕ್ಕೆ 'ಕೆ.ಜಿ' ಎಂಬ ಕೋಡ್‌ವರ್ಡ್ ಬಳಕೆ
- ಆರೋಪಿ ನಿಂಗಪ್ಪನ ಮೊಬೈಲ್‌ನಲ್ಲಿ 24 ಕ್ರಿಪ್ಟೊ ಕರೆನ್ಸಿ ವ್ಯಾಲೆಟ್‌ಗಳು
- 13 ಕ್ರಿಪ್ಟೊ ವ್ಯಾಲೆಟ್‌ಗಳಲ್ಲಿ ಒಟ್ಟು ₹4.92 ಕೋಟಿ ಹೂಡಿಕೆ
- ವಸೂಲಿಯ ಹಣವನ್ನು ಕಾನೂನುಬದ್ಧಗೊಳಿಸಿ ಕೊಳ್ಳಲು ಕ್ರಿಪ್ಟೊ ಹೂಡಿಕೆ ಮಾರ್ಗ ಬಳಕೆ



### ಆಂತರಿಕ ನಿಗಾ ಘಟಕ: ಮತ್ತೆ ಪತ್ರ

ದಾಳಿ ಮತ್ತು ಟ್ರ್ಯಾಪ್ ಕಾರ್ಯಾಚರಣೆಗಳನ್ನು ಗೋಪ್ಯವಾಗಿ ನಡೆಸಲು ಜಿಲ್ಲಾ ನ್ಯಾಯಾಧೀಶರ ಮಟ್ಟದ ಹುದ್ದೆಗಳನ್ನು ಒಳಗೊಂಡ ಆಂತರಿಕ ನಿಗಾ ಘಟಕ ರಚಿಸಲು ಅಧಿಕಾರಿ ಮತ್ತು ಸಿಬ್ಬಂದಿಯನ್ನು ಒದಗಿಸಿ ಎಂದು ಲೋಕಾಯುಕ್ತವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

'ಆಂತರಿಕ ನಿಗಾ ಘಟಕ ಆರಂಭಿಸಲು 24 ಅಧಿಕಾರಿ/ಸಿಬ್ಬಂದಿಯನ್ನು ಮಂಜೂರು ಮಾಡಿ ಎಂದು ಸರ್ಕಾರಕ್ಕೆ 2023 ಮತ್ತು 2024ರ ಡಿಸೆಂಬರ್‌ನಲ್ಲಿ ಪತ್ರ ಬರೆಯಲಾಗಿತ್ತು. ಭ್ರಷ್ಟಾಚಾರ ನಿಗ್ರಹ ದಳದಿಂದ ವರ್ಗಾವಣೆಯಾದ ಸಿಬ್ಬಂದಿಯನ್ನು ಬಳಸಿಕೊಂಡು ಆಂತರಿಕ ನಿಗಾ ಘಟಕ ರಚಿಸಿ ಎಂದು ಸರ್ಕಾರವು ನಮ್ಮ ಪ್ರಸ್ತಾವವನ್ನು ತಿರಸ್ಕರಿಸಿತ್ತು' ಎಂದು ಲೋಕಾಯುಕ್ತವು ತಿಳಿಸಿದೆ.

'ಸಂಸ್ಥೆಯಲ್ಲಿ ಲಭ್ಯವಿರುವ ಸಿಬ್ಬಂದಿ ಬಳಸಿಕೊಂಡೇ ತಾತ್ಕಾಲಿಕ ಆಂತರಿಕ ನಿಗಾ ಘಟಕಗಳನ್ನು ಆರಂಭಿಸಲಾಗಿದೆ. ಲೋಕಾಯುಕ್ತದ ಕಾರ್ಯಾಚರಣೆಯ ಗೋಪ್ಯತೆಯನ್ನು ಕಾಪಾಡಿಕೊಳ್ಳಲು ಜಿಲ್ಲಾ ನ್ಯಾಯಾಧೀಶರ ವೃಂದದ ಅಧಿಕಾರಿಗಳನ್ನು ಒಳಗೊಂಡ ಘಟಕದ ಅವಶ್ಯಕತೆ ಇದೆ ಎಂದು ಇದೇ ಜೂನ್ 23ರಂದು ರಾಜ್ಯಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ಮಾಹಿತಿ ನೀಡಿದೆ.



ದೇವನಹಳ್ಳಿಯ ಸುತ್ತಮುತ್ತ ಭೂಸ್ವಾಧೀನ ಮಾಡುವ ಸರ್ಕಾರದ ನಿರ್ಧಾರದ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ನಾಯಕರು ಮತ್ತು ಸಂಯುಕ್ತ ಹೋರಾಟ ಕರ್ನಾಟಕದ ಪ್ರತಿನಿಧಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

### ಎಸ್‌ಕೆಎಂ ನಾಯಕರ ಎಚ್ಚರಿಕೆ ● ಭೂಸ್ವಾಧೀನಕ್ಕೆ ವಿರೋಧ

# 'ದೆಹಲಿ ಮಾದರಿ ಚಳವಳಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರವು ದೇವನಹಳ್ಳಿ ಸುತ್ತಮುತ್ತ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವ ಮೂಲಕ ರೈತಪರ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ದೆಹಲಿಯಲ್ಲಿ ಮಾಡಿದ್ದ ಹೋರಾಟದ ಮಾದರಿಯಲ್ಲಿ ಇಲ್ಲಿಯೂ ಚಳವಳಿ ಕೈಗೊಳ್ಳಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ರಾಷ್ಟ್ರೀಯ ನಾಯಕರು ಎಚ್ಚರಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಕೇಶ್ ಟಿಕಾಯತ್, 'ಬಹಳಷ್ಟು ಚಳವಳಿಗಳಲ್ಲಿ ರೈತರು ಸರ್ಕಾರದ ಜೊತೆಗೆ ಮಾತುಕತೆಗೆ ಕೂರುತ್ತಾರೆ. ನಮಗೆ ಮಾತುಕತೆಯೇ ಬೇಕಾಗಿಲ್ಲ ಎಂದು ರೈತರೇ ಪಟ್ಟುಹಿಡಿದಿರುವ ವಿಶಿಷ್ಟ ಚಳವಳಿ ಇದು. ಜಮೀನು ಕೊಡುವುದಿಲ್ಲ ಎಂದು ರೈತರೇ ಹೇಳಿದ ಮೇಲೆ ಜಮೀನು ಕಸಿದುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ' ಎಂದರು.

'ಎಸ್‌ಕೆಎಂ ಕಾರ್ಯಸೂಚಿಯಲ್ಲಿ ಈ ಹೋರಾಟದ ವಿಚಾರವಿದೆ. ಮುಖ್ಯಮಂತ್ರಿ ಕರೆದಿರುವ ಸಭೆಯಲ್ಲಿ ರೈತಪರ ನಿರ್ಧಾರ ತೆಗೆದುಕೊಳ್ಳದೇ ಇದ್ದರೆ ಇಲ್ಲಿನ ರೈತರು, ಸಂಘಟನೆಗಳೊಂದಿಗೆ ನಾವಿರುತ್ತೇವೆ' ಎಂದರು.

1,200 ದಿನಗಳಿಂದ ರೈತರು ನಡೆಸುತ್ತಿರುವ ಹೋರಾಟ ಮಾದರಿ ಆಗಿದೆ. ಜುಲೈ 9ರಂದು ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಕರೆಯಂತೆ ನಡೆಯುವ ಭಾರತ ಮುಷ್ಕರಕ್ಕೆ ಎಸ್‌ಕೆಎಂ ಬೆಂಬಲ ನೀಡಲಿದೆ. ಭೂಸ್ವಾಧೀನದ ವಿರುದ್ಧವೂ ಹೋರಾಟ ನಡೆಯಲಿದೆ ಎಂದು ದರ್ಶನ್ ಪಾಲ್ ತಿಳಿಸಿದರು.

▸4B

### ಸಿ.ಎಂ ನೇತೃತ್ವದಲ್ಲಿ ಸಭೆ ಇಂದು

ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯ ಕುರಿತು ರೈತರು ಮತ್ತು ಹೋರಾಟಗಾರರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ (ಜುಲೈ 4) ಬೆಳಿಗ್ಗೆ 11.30ಕ್ಕೆ ಸಭೆ ನಡೆಸಲಿದ್ದಾರೆ. ವಿಧಾನಸೌಧದಲ್ಲಿ ಈ ಸಭೆ ನಡೆಯಲಿದೆ.

ಈ ಸಭೆಗೂ ಪೂರ್ವಭಾವಿಯಾಗಿ, ರೈತರ ಹೋರಾಟ ಮತ್ತು ಬೇಡಿಕೆಗಳ ಕುರಿತಂತೆ ತಮ್ಮ ನಿವಾಸ 'ಕಾವೇರಿ'ಯಲ್ಲಿ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಜೊತೆ ಗುರುವಾರ ಸಂಜೆ ಮುಖ್ಯಮಂತ್ರಿ ಸಭೆ ನಡೆಸಿದರು. ಈ ಸಭೆಯಲ್ಲಿ ಸಾಧಕ– ಬಾಧಕಗಳ ಬಗ್ಗೆ ಚರ್ಚೆ ನಡೆಯಿತು. ಆದರೆ, ಯಾವುದೇ ಅಂತಿಮ ತೀರ್ಮಾನ ಆಗಿಲ್ಲ ಎಂದು ಗೊತ್ತಾಗಿದೆ.

ರೈತ ಹೋರಾಟಗಾರರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ ಮುಖ್ಯಮಂತ್ರಿ, 10 ದಿನಗಳ ಸಮಯಾವಕಾಶ ಕೋರಿದ್ದಾರೆ. ಅಲ್ಲದೆ, ಸಭೆಯಲ್ಲಿ ರೈತರ ಪರವಾಗಿ ನಿಲುವು ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ .ಶಿವಕುಮಾರ್, ಕಾನೂನು ಸಚಿವ ಎಚ್. ಕೆ. ಪಾಟೀಲ, ಆಹಾರ ಸಚಿವ ಕೆ. ಎಚ್. ಮುನಿಯಪ್ಪ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿದ್ದರು.

**ಚಿನಕುರುಳಿ** ಪ್ರಕಾಶ್ ಶೆಟ್ಟಿ




## ಕಾಗದ ರಹಿತ ಗ್ರಾಮಾಡಳಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರಾಮ ಆಡಳಿತಾಧಿಕಾರಿಗಳು ಕಾಗದ ರಹಿತವಾಗಿ ಕಾರ್ಯನಿರ್ವಹಿಸುವ ಮತ್ತು ಆನ್‌ಲೈನ್ ಮೂಲಕವೇ ಎಲ್ಲ ಕಡತಗಳನ್ನು 'ಇ– ಆಫೀಸ್'ಗೆ ಕಳುಹಿಸುವ ಡಿಜಿಟಲ್ ವ್ಯವಸ್ಥೆ ಜಾರಿ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಕಾಸಸೌಧದಲ್ಲಿ ಗುರುವಾರ ವಿವಿಧ ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದದ ಮೂಲಕ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದರು. ಎಲ್ಲ ಗ್ರಾಮ ಆಡಳಿತಾಧಿಕಾರಿಗಳಿಗೂ ಗ್ರಾಮ ಪಂಚಾಯಿತಿ ಕಟ್ಟಡಗಳಲ್ಲಿ ಕಚೇರಿ ವ್ಯವಸ್ಥೆ ಮಾಡಲಾಗುತ್ತಿದೆ. ಬಹುತೇಕ ಕಡೆಗಳಲ್ಲಿ ಕಚೇರಿ ವ್ಯವಸ್ಥೆ ಇಲ್ಲ. ಅಲ್ಲದೇ, 4,000 ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದೆ.



**ಸಮರ್ಪಕವಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳಿಗೆ ಚಾಟಿ ಬೀಸಿ ಕೆಲಸ ಮಾಡಿಸಬೇಕಾಗುತ್ತದೆ. ನಿರ್ಲಕ್ಷ್ಯ ಮತ್ತು ನಿಧಾನಗತಿಯನ್ನು ಸಹಿಸುವುದಿಲ್ಲ**

**ಕೃಷ್ಣ ಬೈರೇಗೌಡ,** ಕಂದಾಯ ಸಚಿವ

▸11

## ಚಾಲಕರ ತಪ್ಪಿನಿಂದಾದ ಅಪಘಾತ ಕುಟುಂಬಕ್ಕೆ ಪರಿಹಾರ ನೀಡಬೇಕಿಲ್ಲ

ಪ್ರಜಾವಾಣಿ ವಾರ್ತೆ



**ನವದೆಹಲಿ:** ಅತಿ ವೇಗ ಹಾಗೂ ಅಜಾಗರೂಕತೆಯಿಂದ ವಾಹನ ಚಲಾಯಿಸಿ ಸವಾರ ಮೃತಪಟ್ಟರೆ ಅವರ ಕುಟುಂಬಕ್ಕೆ ಮೋಟಾರು ವಾಹನ ಕಾಯ್ದೆಯಡಿ ವಿಮಾ ಕಂಪನಿಯು ಪರಿಹಾರ ನೀಡಬೇಕಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅತಿವೇಗದಲ್ಲಿ ಕಾರು ಚಾಲನೆ ಮಾಡಿ ಮೃತಪಟ್ಟ ವ್ಯಕ್ತಿಯ ಪತ್ನಿ, ಮಗ ಮತ್ತು ಪೋಷಕರು ಕೋರಿದ ₹80 ಲಕ್ಷ ಪರಿಹಾರ ನೀಡಲು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಆರ್. ಮಹಾದೇವನ್ ಅವರ ಪೀಠ ನಿರಾಕರಿಸಿತು. ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶದ ವಿರುದ್ಧ ಮೇಲ್ಮನವಿದಾರರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ವಿಮಾ ಕಂಪನಿ ಪರಿಹಾರ ನೀಡಬೇಕು ಎಂದು ಕೋರಿ ಮೃತರ ಕಾನೂನುಬದ್ಧ ಉತ್ತರಾಧಿಕಾರಿಗಳು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ಹೈಕೋರ್ಟ್ 2024ರ ನವೆಂಬರ್‌ನಲ್ಲಿ ನಿರಾಕರಿಸಿತ್ತು.

▸11

ಸೂರ್ಯೋದಯ: 5:58 ಸೂರ್ಯಾಸ್ತ : 6:50 ಚಂದ್ರೋದಯ: ಮ. 12:41 ಚಂದ್ರಾಸ್ತ: ರಾ. 12:07 | ಗುರುವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 20°

ಶುಕ್ರವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ | ಶನಿವಾರ 30° - 20° | ಭಾನುವಾರ 30° - 20° | ಸೋಮವಾರ 30° - 20°

ಶುಕ್ರವಾರ • ಜುಲೈ 4, 2025
ಪ್ರಜಾವಾಣಿ

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ. ಆಗಾಗ ತುಂತುರು ಮಳೆ ಆಗಲಿದೆ.




ನಗರದ ವರ್ಚುಸಾ ಕಾರ್ಪೊರೇಷನ್‌, ಸಿಎಸ್‌ಆರ್ ಅಡಿ ಶಿವನಹಳ್ಳಿಯ ಶಾರದಾ ದೇವಿ ವಿದ್ಯಾಕೇಂದ್ರಕ್ಕೆ ಎರಡು ಎಲೆಕ್ಟ್ರಿಕ್ ಬಸ್‌ಗಳನ್ನು ಕೊಡುಗೆಯಾಗಿ ನೀಡಿದೆ

# ಶಾರದಾ ದೇವಿ ವಿದ್ಯಾಕೇಂದ್ರಕ್ಕೆ ಬಸ್‌ಗಳ ಕೊಡುಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಿಜಿಟಲ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸೇವೆಗಳಲ್ಲಿ ಮುಂಚೂಣಿಯಲ್ಲಿರುವ ವರ್ಚುಸಾ ಕಾರ್ಪೊರೇಷನ್, ಸಿಎಸ್‌ಆರ್ ಅಡಿ ಶಿವನಹಳ್ಳಿಯ ರಾಮಕೃಷ್ಣ ಮಿಷನ್‌ನ ಶಾರದಾ ದೇವಿ ವಿದ್ಯಾಕೇಂದ್ರದ ಮಕ್ಕಳ ಅನುಕೂಲಕ್ಕಾಗಿ ಎರಡು ಎಲೆಕ್ಟ್ರಿಕ್ ಬಸ್‌ಗಳನ್ನು ಕೊಡುಗೆಯಾಗಿ ನೀಡಿದೆ.

ಶಿಕ್ಷಕರಿಗಾಗಿ 16 ವಸತಿ ಗೃಹಗಳನ್ನು ನಿರ್ಮಿಸಿಕೊಟ್ಟಿದ್ದು, ಸಭಾಂಗಣ, ನಾಲ್ಕು ಪ್ಯಾಂಟ್ರಿ ಪ್ರದೇಶ ಮತ್ತು ಶೌಚಾಲಯ ಒಳಗೊಂಡಿದೆ. 34 ಶಿಕ್ಷಕರಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿದೆ.

ವರ್ಚುಸಾ ಕಾರ್ಪೊರೇಷನ್‌ನ ಮುಖ್ಯ ಹಣಕಾಸು ಅಧಿಕಾರಿ ಅಮಿತ್ ಬಜೋರಿಯಾ ಮಾತನಾಡಿ, 'ವರ್ಚುಸಾ ಫೌಂಡೇಷನ್ ಮೂಲಕ ಹಲವು ಜನಪಯೋಗಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನ ಸ್ವಾಮಿ ಆತ್ಮವಿದಾನಂದಜಿ ಮಹಾರಾಜ್, ಸ್ವಾಮಿ ಮುಕ್ತಿದಾನಂದಜಿ ಹಾಜರಿದ್ದರು.



# ಘನತ್ಯಾಜ್ಯ ನಿರ್ವಹಣೆ: ಎಂಎಸ್‌ಜಿಪಿಗೆ ನೋಟಿಸ್

## ಅವೈಜ್ಞಾನಿಕ ಸಂಸ್ಕರಣೆ, ಎಸ್‌ಡಬ್ಲ್ಯುಎಂ ನಿಯಮ, ಜಲ ಕಾಯ್ದೆ ಉಲ್ಲಂಘನೆ ಆರೋಪ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಸಾವಯವ ಗೊಬ್ಬರ ತಯಾರಿಸಲು ಅನುಮತಿ
- ಅವೈಜ್ಞಾನಿಕ ಸಂಸ್ಕರಣೆಯಿಂದ ಪರಿಸರಕ್ಕೆ ಧಕ್ಕೆ
- ಜುಲೈ 10ಕ್ಕೆ ಹಾಜರು ಆಗದಿದ್ದರೆ ಕ್ರಮ

**ಬೆಂಗಳೂರು:** ನಗರದಿಂದ ಸಾಗಣೆಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ ಗೊಬ್ಬರ ತಯಾರಿಸುವ ಪ್ರಕ್ರಿಯೆಯಲ್ಲಿ ವಿಫಲವಾಗಿರುವ ಎಂಎಸ್‌ಜಿಪಿ ಇನ್‌ಫ್ರಾಟೆಕ್ ಸಂಸ್ಥೆಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ಜಾರಿ ಮಾಡಿದೆ.

ಘನತ್ಯಾಜ್ಯ ನಿರ್ವಹಣೆ ನಿಯಮಗಳ ಉಲ್ಲಂಘನೆ, ತಣ್ಣೀರಹಳ್ಳಿ ಗ್ರಾಮಸ್ಥರ ದೂರು, ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘದ ದೂರು ಸೇರಿದಂತೆ ಮಂಡಳಿಯ ದೊಡ್ಡಬಳ್ಳಾಪುರದ ಪ್ರಾದೇಶಿಕ ಅಧಿಕಾರಿಯವರ ತಪಾಸಣಾ ವರದಿಯನ್ನು ಪರಿಗಣಿಸಿ ನೋಟಿಸ್ ನೀಡಲಾಗಿದೆ. ಮಂಡಳಿ ಅಧ್ಯಕ್ಷರ ಸಮ್ಮುಖದಲ್ಲಿ ಜುಲೈ 10ರಂದು ಎಂಎಸ್‌ಜಿಪಿಯ ಪ್ರಮುಖರು ಖುದ್ದಾಗಿ ಹಾಜರಾಗಿ, ತಾಂತ್ರಿಕ ಚರ್ಚೆಯಲ್ಲಿ ಭಾಗವಹಿಸಬೇಕು. ಇಲ್ಲದಿದ್ದಲ್ಲಿ, ಜಲ ಕಾಯ್ದೆಯಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಲಾಗಿದೆ.

ದೊಡ್ಡಬೆಳವಂಗಲದ ಚಿಗರೇನಹಳ್ಳಿಯಲ್ಲಿರುವ ಎಂಎಸ್‌ಜಿಪಿ ಸಂಸ್ಕರಣಾ ಘಟಕದಲ್ಲಿ ಪ್ರತಿ ದಿನ 750 ಟನ್ ತ್ಯಾಜ್ಯವನ್ನು ವಿಂಗಡಿಸಿ, ಸಾವಯವ ಗೊಬ್ಬರ/ ವರ್ಮಿ ಕಾಂಪೋಸ್ಟ್ ತಯಾರಿಸಲು 2022ರ ಡಿಸೆಂಬರ್ 29ರಿಂದ 2026ರ ಜೂನ್ 30ರವರೆಗೆ ಘನತ್ಯಾಜ್ಯ ನಿರ್ವಹಣೆ ನಿಯಮಗಳಡಿ ಬಿಬಿಎಂಪಿ ಆದೇಶಿಸಿದೆ. ಅವೈಜ್ಞಾನಿಕ ತ್ಯಾಜ್ಯವನ್ನು ಸಂಸ್ಕರಿಸುತ್ತಿರುವುದರಿಂದ ಪರಿಸರಕ್ಕೆ ಬಹಳಷ್ಟು ಹಾನಿಯಾಗಲಿದೆ. ಅಲ್ಲದೆ, ಜಲ (ರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ) ಕಾಯ್ದೆ 1974ರಂತೆ ನಿಯಮಗಳನ್ನು ಉಲ್ಲಂಘಿಸಿದಂತಾಗಿದೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

'ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘದ ದೂರಿನನ್ವಯ 2024ರ ಆಗಸ್ಟ್ 13ರಂದು ಸಂಸ್ಕರಣೆ ಘಟಕಕ್ಕೆ ಮಂಡಳಿಯ ಪ್ರಾದೇಶಿಕ ಅಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. 2024ರ ಅಕ್ಟೋಬರ್ 18ರಂದು ಶೋಕಾಸ್ ನೋಟಿಸ್ ಜಾರಿ ಮಾಡಿ, ಜಲ ಕಾಯ್ದೆಯಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಆದರೆ, ಈ ಬಗ್ಗೆ ನೀವು ಯಾವುದೇ ಕ್ರಮ ಕೈಗೊಂಡಿಲ್ಲದ ಕಾರಣ, ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಡಿಸೆಂಬರ್ 19ರಂದು ನೋಟಿಸ್ ಜಾರಿ ಮಾಡಿದ್ದಾರೆ' ಎಂದು ವಿವರಿಸಲಾಗಿದೆ.

'ಈ ನೋಟಿಸ್‌ಗೆ ಸಮಯಾವಕಾಶ ಕೋರಿಕೊಂಡಿದ್ದ ಎಂಎಸ್‌ಜಿಪಿ ಯವರು, 2025ರ ಫೆಬ್ರುವರಿ ಎರಡನೇ ವಾರ ಮತ್ತು ಮಾರ್ಚ್ ಮೊದಲ ವಾರದಲ್ಲಿ ವಿವರಣೆ ನೀಡಿ, ಸಂಸ್ಕರಣೆ ಘಟಕದಲ್ಲಿ ಅಗತ್ಯ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದೀರಿ. ಅಲ್ಲದೆ, ಹೆಚ್ಚುವರಿ ನಿಧಿ ಅಥವಾ ಅನುದಾನ ಪಡೆಯುವಲ್ಲಿ ಸ್ಥಳೀಯ ಸಂಸ್ಥೆಯಿಂದ ತೊಂದರೆಯಾಗುತ್ತಿದೆ, ಬ್ಯಾಂಕ್‌ಗಳೂ ಸಾಲ ನೀಡುತ್ತಿಲ್ಲ. ರಿಯಲ್ ಎಸ್ಟೇಟ್‌ನವರು ಎಂಎಸ್‌ಜಿಪಿಯನ್ನು ಮುಚ್ಚಿಸಬೇಕೆಂಬ ಹುನ್ನಾರ ಹೊಂದಿದ್ದಾರೆ ಎಂದು ಹೇಳಿದ್ದೀರಿ. ಈ ಹೇಳಿಕೆ ಮೂಲಕ ನೀವು ಘನತ್ಯಾಜ್ಯ ನಿರ್ವಹಣೆ ನಿಯಮಗಳನ್ನು ಅಳವಡಿಸಿಕೊಳ್ಳುವಲ್ಲಿ ಇನ್ನೂ ಸಾಕಷ್ಟು ಹಿಂದೆ ಉಳಿದಿದ್ದೀರಿ ಎಂಬುದು ಸಾಬೀತಾಗುತ್ತದೆ. ಜಲ ಕಾಯ್ದೆಯಂತೆ ಕ್ರಮ ಕೈಗೊಳ್ಳುವ ಮೊದಲು ಒಂದು ಬಾರಿ ತಾಂತ್ರಿಕ ಚರ್ಚೆ ನಡೆಸಬೇಕೆಂಬ ಬೆಂಗಳೂರು ಉತ್ತರ ವಲಯದ ಹಿರಿಯ ಪರಿಸರ ಅಧಿಕಾರಿಯವರ ಸಲಹೆಯಂತೆ ಈ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಹೇಳಲಾಗಿದೆ.

## ಸಂಕ್ಷಿಪ್ತ ಸುದ್ದಿ

### '60 ಸಾವಿರ ಆಂತರಿಕ ದೂರು ಸಮಿತಿ ರಚನೆ'

**ಬೆಂಗಳೂರು:** 'ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ನಿಯಂತ್ರಿಸಲು ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ 60,507 ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಹೇಳಿದರು



ಡಾ. ನಾಗಲಕ್ಷ್ಮಿ ಚೌಧರಿ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಕೆ) 2013ರ ಅಧಿನಿಯಮದ ಪ್ರಕಾರ 10ಕ್ಕಿಂತ ಹೆಚ್ಚು ಸಿಬ್ಬಂದಿ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಥವಾ ಖಾಸಗಿ ಕಚೇರಿಗಳು, ಕಾರ್ಖಾನೆಗಳು, ಗಾರ್ಮೆಂಟ್ಸ್, ವಿಶ್ವವಿದ್ಯಾಲಯಗಳು, ಸಂಘ–ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ' ಎಂದರು.

ಸರ್ಕಾರಿ ಕಚೇರಿಗಳಲ್ಲಿ 22,516 , ಖಾಸಗಿ ಸಂಸ್ಥೆಗಳಲ್ಲಿ 37,991 ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ ಎಂದರು.

### ಸಮೀಕ್ಷೆಯಾಗದೆ ಸ್ಟಿಕರ್: ಮೂವರು ಅಮಾನತು

**ಬೆಂಗಳೂರು:** ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ-2025ರ ಸಂಬಂಧ ನಿವಾಸಿಗಳಿಂದ ಮಾಹಿತಿ ಪಡೆಯದೆ ಮನೆಗೆ ಸ್ಟಿಕರ್ ಅಂಟಿಸಿದ ಬಿಬಿಎಂಪಿಯ ಮೂವರು ನೌಕರರನ್ನು ಅಮಾನತು ಮಾಡಲಾಗಿದೆ. ಎಚ್‌ಬಿಆರ್ ಲೇಔಟ್ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಪರಿವೀಕ್ಷಕ ರಮೇಶ್, ಕಂದಾಯ ವಸೂಲಿಗಾರ ಪೆದ್ದುರಾಜು ಹಾಗೂ ಕೆಂಗೇರಿ ಉಪ ವಿಭಾಗ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ವಸೂಲಿಗಾರ ಸಿ. ಸಂದಿಲ್ ಕುಮಾರ್ ಅವರನ್ನು ಕರ್ತವ್ಯಲೋಪದ ಮೇರೆಗೆ ಅಮಾನತುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

## ನಗರದಲ್ಲಿ ಇಂದು

**ಬೆಂಗಳೂರಿನಿಂದ ಮಂತ್ರಾಲಯ, ಪ್ರಯಾಗರಾಜ್, ಅಯೋಧ್ಯೆ ಮತ್ತು ವಾರಾಣಸಿಗೆ ಪಾದಯಾತ್ರೆ ಮೂಲಕ ಹೋಗಿ ಬಂದ ಎಂ.ಎ. ಶ್ರೀನಿವಾಸಯ್ಯ, ಎಂ. ಆನಂದಕುಮಾರ್ ಅವರಿಗೆ ಅಭಿನಂದನಾ ಸಮಾರಂಭ:** ಅತಿಥಿ: ಕೆ.ಜಿ. ರಾಘವನ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

**20 ದಿನಗಳ ಬಂಜಾರ ಸಾಹಿತ್ಯ, ಕಾವ್ಯ ಹಾಗೂ ನಾಟಕ ರಚನಾ ವಸತಿ ತರಬೇತಿ ಕಮ್ಮಟದ ಸಮಾರೋಪ:** ಉದ್ಘಾಟನೆ: ಎ.ಆರ್. ಗೋವಿಂದಸ್ವಾಮಿ, ಅಧ್ಯಕ್ಷತೆ: ಆರ್. ಸದಾಶಿವಯ್ಯ ಜರಗನಹಳ್ಳಿ, ಉಪಸ್ಥಿತಿ: ಬಾಲಗುರುಮೂರ್ತಿ, ಎಚ್.ಬಿ. ಸಿದ್ಯಾನಾಯಕ್, ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಆರ್. ಸದಾಶಿವಯ್ಯ ಕಲಾಮಂಟಪ, ಅಗರ, ಮಧ್ಯಾಹ್ನ 2

**ಸೌಹಾರ್ದ ನಡಿಗೆಯ ಸಮಾರೋಪ:** ಆಯೋಜನೆ: ಎಸ್‌ಎಸ್‌ಎಫ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಮಧ್ಯಾಹ್ನ 2.30

**ಮುಜೀಬುರ್ ರೆಹಮಾನ್ ಅವರ 'ಶಿಕ್ವಾ–ಎ–ಹಿಂದ್ ದಿ ಪೊಲಿಟಿಕಲ್ ಫ್ಯೂಚರ್ ಆಫ್ ಇಂಡಿಯನ್ ಮುಸ್ಲಿಮ್ಸ್' ಪುಸ್ತಕ ಬಿಡುಗಡೆ, ಚರ್ಚೆ:** ಅತಿಥಿ: ನಸೀರ್ ಅಹಮದ್, ಉಪಸ್ಥಿತಿ: ಡಾ.ಎಚ್. ವಾಸು, ಸುಹೇಲ್ ಅಹಮದ್, ಅಧ್ಯಕ್ಷತೆ: ಎ. ನಾರಾಯಣ, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಶಾಸಕರ ಭವನ–1, ಮಧ್ಯಾಹ್ನ 3

**'ಬುದ್ಧಗಯಾ ಆಡಳಿತ ಮಂಡಳಿ ವಿವಾದ– ಇಂದಿನ ಬೌದ್ಧರ ನಡೆ' ಒಂದು ಸಂವಾದ:** ಅತಿಥಿಗಳು: ಭಿಕ್ಕುಣಿ ಬುದ್ಧಮ್ಮ, ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ಭಾರತೀಯ ಬೌದ್ಧ ಮಹಾಸಭಾ, ಸ್ಥಳ: ವಶಿಷ್ಠ ಸಭಾಂಗಣ, ಕಾನಿಷ್ಕ ಗ್ರ್ಯಾಂಡ್ ಹೋಟೆಲ್, ಗಾಂಧಿನಗರ, ಮಧ್ಯಾಹ್ನ 3

**ಜಸ್ಟಿಸ್ ಕೆ.ಆರ್. ಗೋಪಿವಲ್ಲಭ ಐಯಂಗಾರ್ ಸ್ಮಾರಕ 'ಪತ್ರಿಕಾ ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನಡುವಿನ ಸಮತೋಲನ' ಕುರಿತು ಉಪನ್ಯಾಸ:** ಅರವಿಂದ್ ಕುಮಾರ್, ಅತಿಥಿ: ಡಾ. ಪ್ರತಿಮಾ ಮೂರ್ತಿ, ಅಧ್ಯಕ್ಷತೆ: ಉದಯ್ ಹೊಳ್ಳ, ಆಯೋಜನೆ: ವಕೀಲರ ವಾಹಿನಿ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5ರಿಂದ

**ಭಕ್ತಿ ಭಾವ ಸಂಗಮ:** ಗಾಯನ: ನರಹರಿ ದೀಕ್ಷಿತ್ ಮಂಚಾರ ಮತ್ತು ತಂಡ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಮಲ್ಟಿ ಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಜಯನಗರ, ಸಂಜೆ 5

**ಗೊರೂರು ರಾಮಸ್ವಾಮಿ ಅಯ್ಯಂಗಾರ ಜನ್ಮದಿನ:** ಭಾಗವಹಿಸುವವರು: ಟಿ.ಎಸ್. ಗೋಪಾಲ್, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

**ಸುಗತ ಶ್ರೀನಿವಾಸರಾಜು ಅವರ 'ದಿ ಕನ್‌ಸೈನ್ಸ್ ನೆಟ್‌ವರ್ಕ್' ಪುಸ್ತಕ ಬಿಡುಗಡೆ, ಸಂವಾದ:** ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಚಿರಂಜೀವಿ ಸಿಂಘ್, ಕೆ. ಮರುಳಸಿದ್ಧಪ್ಪ, ಎ.ವಿ.ಎಸ್. ನಂಬೂದಿರಿ, ಆಯೋಜನೆ: ಪ್ರದರ್ಶಕ ಮೀಡಿಯಾ ಫೌಂಡೇಷನ್, ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಸಂಜೆ 6.30ರಿಂದ



ಸಂತೋಷ್ ಹೆಗ್ಡೆ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in




ಬೆಂಗಳೂರಿನಲ್ಲಿ ಕಳೆದ ಏಪ್ರಿಲ್‌ನಲ್ಲಿ ನಡೆದ ಟಿಸಿಎಸ್ ವಿಶ್ವ 10ಕೆ ಓಟದ ಪ್ರಕಟಿತ ಛಾಯಾಚಿತ್ರಗಳ ಸ್ಪರ್ಧೆಯಲ್ಲಿ 'ಪ್ರಜಾವಾಣಿ'ಯ ರಂಜು ಪಿ. (ಮಧ್ಯದಲ್ಲಿ) ಪ್ರಥಮ ಸ್ಥಾನ, 'ಡೆಕ್ಕನ್ ಹೆರಾಲ್ಡ್'ನ ಪುಷ್ಕರ್ ವಿ. (ಎಡಗಡೆ) ದ್ವಿತೀಯ ಸ್ಥಾನ, ಟೈಮ್ಸ್ ಆಫ್ ಇಂಡಿಯಾದ ಚೇತನ್ ಶಿವಕುಮಾರ್ (ಬಲಗಡೆ) ತೃತೀಯ ಸ್ಥಾನ ಪಡೆದಿದ್ದು, ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು — ಪ್ರಜಾವಾಣಿ ಚಿತ್ರ

# ಮದುವೆಯಾದ ದಿನವೇ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಕೋಲಾರ:** ಪ್ರೀತಿಸುತ್ತಿದ್ದ ಸಹೋದ್ಯೋಗಿ ಯುವತಿ ಜೊತೆ ರಿಜಿಸ್ಟ್ರರ್ ಮದುವೆ (ಅಂತರ್ಜಾತಿ) ಆದ ದಿನವೇ ನೌಕರ ತಾನು ಕೆಲಸ ಮಾಡುತ್ತಿದ್ದ ನಗರದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಂಗಾರಪೇಟೆ ತಾಲ್ಲೂಕಿನ ನಾಯಕರಹಳ್ಳಿಯ ಹರೀಶ್ ಬಾಬು ಎನ್.ಎಂ (33) ಆತ್ಮಹತ್ಯೆ ಮಾಡಿಕೊಂಡವರು.

'ಸಾವಿಗೆ ಯುವತಿ ಮನೆಯವರು ಕಾರಣ' ಎಂದು ಯುವಕನ ಪೋಷಕರು ಆರೋಪಿಸಿದ್ದಾರೆ.

# ‘ಮರುನೇಮಕ: ವಿಕಾಸ್ ಒತ್ತಾಯಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಇತ್ಯರ್ಥವಾಗುವ ತನಕ ತಮ್ಮನ್ನು ಕರ್ತವ್ಯಕ್ಕೆ ಮರು ನೇಮಕ ಮಾಡಿ ಎಂದು ಒತ್ತಾಯಿಸಬಾರದು’ ಎಂದು ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರಿಗೆ ಹೈಕೋರ್ಟ್ ಗುರುವಾರ ಮೌಖಿಕವಾಗಿ ಆದೇಶಿಸಿದೆ.

ವಿಕಾಸ್ ಅವರ ಅಮಾನತು ಆದೇಶ ರದ್ದುಪಡಿಸಿರುವ ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ಅಮಾನತು ಆದೇಶವನ್ನು ಸಮರ್ಥನೆ ಮಾಡಿಕೊಳ್ಳುವ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಲಾಗುವುದು. ಹೀಗಾಗಿ, ಸಿಎಟಿ ಆದೇಶಕ್ಕೆ ತಡೆ ನೀಡಿ’ ಎಂದು ಮನವಿ ಮಾಡಿದರು.

ವಿಕಾಸ್ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, ‘ನಾವು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವುದಿಲ್ಲ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅಮಾನತು ಆದೇಶ ರದ್ದಾಗಿದೆ. ಸರ್ಕಾರ ಪುನರ್ ನೇಮಕದ ಆದೇಶ ಹೊರಡಿಸಬೇಕಾಗಿದೆ. ಹಾಗಾಗಿ, ಈ ಮೇಲ್ಮನವಿ ವಿಲೇವಾರಿ ಆಗುವ ತನಕ ಪುನರ್ ನೇಮಕಕ್ಕೆ ಒತ್ತಾಯ ಮಾಡಬಾರದು’ ಎಂದು ಸೂಚಿಸಿ ಇದೇ 9ಕ್ಕೆ ವಿಚಾರಣೆ ಮುಂದೂಡಿತು.

## ಚಿಟಿಕೆ ಸುದ್ದಿ

### ತೆರಿಗೆ ವಂಚನೆ: ₹ 1.41 ಕೋಟಿ ದಂಡ



ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡಿರುವ ಫೆರಾರಿ ಕಾರು

**ಬೆಂಗಳೂರು:** ತೆರಿಗೆ ಪಾವತಿಸದೇ ಎರಡು ವರ್ಷಗಳಿಂದ ರಾಜ್ಯದಲ್ಲಿಯೇ ಸಂಚಾರ ನಡೆಸುತ್ತಿದ್ದ ಐಷಾರಾಮಿ ಫೆರಾರಿ ಕಾರನ್ನು ಜಯನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ತೆರಿಗೆ ಮತ್ತು ದಂಡ ಸೇರಿ ₹ 1.41 ಕೋಟಿ ಪಾವತಿಸುವಂತೆ ಕಾರು ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.

ಮಹಾರಾಷ್ಟ್ರದ ನೋಂದಣಿ ಹೊಂದಿರುವ ₹ 7.49 ಕೋಟಿ ಮೌಲ್ಯದ ಫೆರಾರಿ ಕಾರನ್ನು ವಶಕ್ಕೆ ಪಡೆದಿದ್ದಾರೆ. ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ನೇತೃತ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ವಿ.ಪಿ. ರಮೇಶ್, ಸಿಬ್ಬಂದಿ ಅಸಾದುಲ್ಲಾ ಬೇಗ್, ರಂಜತ್ ಎನ್., ವಿಜಯಕುಮಾರ್, ಮಂಜುನಾಥ್, ಗಂಗಸ್ವಾಮಿ ಕಾರ್ಯಾಚರಣೆ ನಡೆಸಿದ್ದರು.

### 22 ಆಟೊಗಳ ಮುಟ್ಟುಗೋಲು

**ಬೆಂಗಳೂರು:** ಪ್ರಯಾಣ ದರ ಅಧಿಕ ವಸೂಲಿ ಮಾಡುತ್ತಿದ್ದ 22 ಆಟೊಗಳನ್ನು ಗುರುವಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದಾಪುರ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 125 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

# ಉಪನಗರ ರೈಲು, ಮೆಟ್ರೊಗೆ ಬೇಕು ವೇಗ

## ಕಾಲಮಿತಿಯಲ್ಲಿ ಪೂರ್ಣಗೊಳ್ಳದ ಕಾಮಗಾರಿಗಳು
## • ಬೆಂಗಳೂರು ನಗರದಲ್ಲಿ ಹೆಚ್ಚುತ್ತಲೇ ಇದೆ ವಾಹನ ದಟ್ಟಣೆ

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ನಗರದಲ್ಲಿ ಸುರಂಗ ರಸ್ತೆ ನಿರ್ಮಿಸುವ ಬದಲು ಸ್ಥಗಿತಗೊಂಡಿರುವ ಬೆಂಗಳೂರು ಉಪನಗರ ರೈಲು ಯೋಜನೆ, ನಿಧಾನಗತಿಯಲ್ಲಿ ಸಾಗುತ್ತಿರುವ ನಮ್ಮ ಮೆಟ್ರೊ ಹೊಸ ಮಾರ್ಗಗಳ ಕಾಮಗಾರಿಗಳಿಗೆ ವೇಗ ನೀಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸಾರ್ವಜನಿಕ ಸಾರಿಗೆ ಬಳಸುವುದರ ಮೂಲಕ ನಗರದಲ್ಲಿ ವಾಹನದಟ್ಟಣೆ ಕಡಿಮೆ ಮಾಡಬಹುದು. 2025ರ ಹೊತ್ತಿಗೆ ಐದು ಮಾರ್ಗಗಳಲ್ಲಿ ಮೆಟ್ರೊ ಸಂಚರಿಸಬೇಕಿತ್ತು. ಆದರೆ, ಇಂದಿಗೂ ಎರಡೇ ಮಾರ್ಗದಲ್ಲಿ ಮೆಟ್ರೊ ಸಂಚಾರವಿದೆ. ನಮ್ಮ ಮೆಟ್ರೊ ಕಾಮಗಾರಿಗಳು ಮಂದಗತಿಯಲ್ಲಿ ಸಾಗಿದ್ದು, ಯಾವ ಮಾರ್ಗದಲ್ಲೂ ಪೂರ್ವನಿಗದಿಯಂತೆ ಸಂಚಾರ ಆರಂಭವಾಗಿಲ್ಲ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದರು.

ನಿಧಾನಗತಿಯಲ್ಲಿರುವ ಯೋಜನೆಗಳನ್ನು ಬೇಗ ಪೂರ್ಣಗೊಳಿಸಿದರೆ, ಆರಂಭವಾಗಬೇಕಾದ ಯೋಜನೆಗಳನ್ನು ಶೀಘ್ರವೇ ಶುರು ಮಾಡಿ ಕಾಲಮಿತಿಯೊಳಗೆ ಮುಕ್ತಾಯಗೊಳಿಸಿ, ರೈಲು ಸಂಚಾರ ಆರಂಭಿಸಿದರೆ ಸುರಂಗ ಮಾರ್ಗದ ಅಗತ್ಯವೇ ಇಲ್ಲ ಎಂದು ವಕೀಲ ಎಚ್. ರಮೇಶ್, ಸಾಫ್ಟ್‌ವೇರ್ ಎಂಜಿನಿಯರ್ ಸ್ವಜನ್ ಪಿ. ಮತ್ತಿತರರು ಅಭಿಪ್ರಾಯಪಟ್ಟರು.

2011ರಲ್ಲಿಯೇ ನೇರಳೆ ಮಾರ್ಗದಲ್ಲಿ ಬೈಯಪ್ಪನಹಳ್ಳಿಯಿಂದ ಎಂ.ಜಿ.ರಸ್ತೆವರೆಗೆ ಮೆಟ್ರೊ ಸಂಚಾರ ಆರಂಭವಾಗಿತ್ತು. ಆದರೆ ಪೂರ್ಣ ಪ್ರಮಾಣದಲ್ಲಿ ಶುರುವಾಗಿದ್ದು 2023ರಲ್ಲಿ. ಈಗ ಚಲ್ಲಘಟ್ಟ ಟರ್ಮಿನಲ್‌ನಿಂದ ವೈಟ್‌ಫೀಲ್ಡ್ ವರೆಗಿನ 43.49 ಕಿ.ಮೀ.ವರೆಗೆ ಸಂಚಾರ ಹೊಂದಿದೆ. ಹಸಿರು ಮಾರ್ಗದಲ್ಲಿ 2014ರಲ್ಲಿ ಸಂಚಾರ ಆರಂಭವಾಗಿದ್ದರೂ 2024ಕ್ಕೆ ಪೂರ್ಣಗೊಂಡಿತು. ಹಂತ ಹಂತವಾಗಿ 33.5 ಕಿ.ಮೀ. ದೂರದ ಕಾಮಗಾರಿ ಮುಕ್ತಾಯವಾಗಿದ್ದು ಈಗ ಮಾದಾವರದಿಂದ ಸಿಲ್ಕ್ ಇನ್‌ಸ್ಟಿಟ್ಯೂಟ್‌ವರೆಗೆ ಮೆಟ್ರೊ ಸಂಚರಿಸುತ್ತಿದೆ.

ಈ ಎರಡು ಮಾರ್ಗಗಳಲ್ಲಿ ಪ್ರತಿ ದಿನ ಸರಾಸರಿ 7.24 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆ.

ರಾಷ್ಟ್ರೀಯ ವಿದ್ಯಾಲಯ-ಬೊಮ್ಮಸಂದ್ರ (18.8 ಕಿ.ಮೀ.) ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗದ ಕಾಮಗಾರಿ 2018ರಲ್ಲಿ ಆರಂಭವಾಗಿತ್ತು. 2021ರಲ್ಲಿ ಕೊನೆಗೊಳ್ಳಬೇಕಿತ್ತು. ಕೋವಿಡ್ ಇನ್ನಿತರ ಕಾರಣದಿಂದ ತಡವಾಗಿತ್ತು. 2023ಕ್ಕೆ ಆರಂಭಿಸಲು ಗುರಿ ಪುನರ್‌ನಿಗದಿಯಾಗಿತ್ತು. ಆದರೆ, ಕಾಮಗಾರಿ ಮತ್ತೊಂದು ವರ್ಷ ತಡವಾಗಿ 2024ರ ಜೂನ್‌ಗೆ ಪೂರ್ಣವಾಯಿತು. ಈ ಮಾರ್ಗಕ್ಕೆ ಬೇಕಾದ ರೈಲು ಕೋಚ್‌ಗಳು ಸಕಾಲದಲ್ಲಿ ಪೂರೈಕೆಯಾಗದ ಕಾರಣ ಕಾಮಗಾರಿ ಮುಗಿದು ವರ್ಷವಾದರೂ ಸಂಚಾರ ಆರಂಭವಾಗಿಲ್ಲ.

2019ರಲ್ಲಿ ಆರಂಭವಾಗಿರುವ ಗುಲಾಬಿ ಮಾರ್ಗದ ಕಾಮಗಾರಿ 2023ರಲ್ಲಿ ಮುಕ್ತಾಯವಾಗಬೇಕಿತ್ತು. ಆದರೆ, ಇನ್ನೂ ಪೂರ್ಣಗೊಂಡಿಲ್ಲ. ಕಾಳೇನ ಅಗ್ರಹಾರ-ನಾಗವಾರ ನಡುವೆ ನಿರ್ಮಾಣಗೊಳ್ಳುತ್ತಿರುವ ಈ ಮಾರ್ಗವು 21 ಕಿ.ಮೀ. ಉದ್ದವಿದ್ದು, 2024ಕ್ಕೆ ಪೂರ್ಣಗೊಳಿಸುವ ಗುರಿ ಮರುನಿಗದಿಯಾಗಿತ್ತು. ಆ ನಂತರ 2025ರ ಅಂತ್ಯಕ್ಕೆ ಮುಕ್ತಾಯಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಈಗ 2026ರ ಆಗಸ್ಟ್ ವೇಳೆಗೆ ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿಯಿಂದ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ನೀಲಿ ಮಾರ್ಗದ (58 ಕಿ.ಮೀ.) ಕಾಮಗಾರಿ ಪೂರ್ವನಿಗದಿಯಂತೆ 2024ಕ್ಕೆ ಮುಕ್ತಾಯಗೊಳ್ಳಬೇಕಿತ್ತು. ಸದ್ಯ 2027ಕ್ಕೆ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ.

ಕೆಂಪಾಪುರ-ಜೆ.ಪಿ.ನಗರ ನಾಲ್ಕನೇ ಹಂತ ಹಾಗೂ ಹೊಸಹಳ್ಳಿ-ಕಡಬಗೆರೆ ಸಂಪರ್ಕಿಸುವ ಕಿತ್ತಳೆ ಮಾರ್ಗಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಡಬಲ್ ಡೆಕರ್ ಯೋಜನೆಯನ್ನು ಸೇರಿಸಲು ಮರುಸರ್ವೆ ನಡೆಯುತ್ತಿದೆ.

ಸರ್ಜಾಪುರ-ಹೆಬ್ಬಾಳ ಸಂಪರ್ಕಿಸುವ ಕೆಂಪು ಮಾರ್ಗಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿ ಆರು ತಿಂಗಳು ಕಳೆದರೂ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿಲ್ಲ. ಈ ಯೋಜನೆಯ ಅಂದಾಜು ವೆಚ್ಚ ಅಧಿಕವಾಗಿರುವುದು ಏಕೆ ಎಂದು ಪ್ರಶ್ನಿಸಿರುವ ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಸಚಿವಾಲಯವು, ಬಿಎಂಆರ್‌ಸಿಎಲ್‌ನಿಂದ ಈ ಬಗ್ಗೆ ವಿವರಣೆ ಕೇಳಿದೆ.

ತಾಂತ್ರಿಕ ತೊಂದರೆ, ಇನ್ನಿತರ ಅಡೆತಡೆಗಳನ್ನು ಸರಿಪಡಿಸಿಕೊಂಡು ಜನ ಸಂಚಾರಕ್ಕೆ ಸಾರ್ವಜನಿಕ ಸಾರಿಗೆ ಒದಗಿಸಬೇಕು ಎಂಬುದು ಜನರ ಒತ್ತಾಯವಾಗಿದೆ.

### ಜನ ಏನಂತಾರೆ?



ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿ ಸುರಂಗ ಮಾರ್ಗ ನಿರ್ಮಿಸಲು ರಾಜ್ಯ ಸರ್ಕಾರ ಹೊರಟಿರುವುದು ಜನರಿಗೆ ಅಥವಾ ನಗರಕ್ಕೆ ಒಳ್ಳೆಯದು ಮಾಡಲು ಅಲ್ಲ. ಸರ್ಕಾರದ ಕೆಲವರು ಕಮಿಷನ್ ಹೊಡೆಯಲು ಮಾಡಿದಂತಿದೆ. ಬೆಂಗಳೂರಿನ ದಟ್ಟಣೆ ಕಡಿಮೆ ಮಾಡಲು ಮೆಟ್ರೊ, ಬಸ್ ವ್ಯವಸ್ಥೆಯನ್ನು ಹೆಚ್ಚಿಸಬೇಕು. ಇನ್ನಷ್ಟು ಖಾಸಗಿ ವಾಹನಗಳು ರಸ್ತೆಗೆ ಇಳಿಯುವಂತೆ ಮಾಡಬಾರದು.
**ಅಶ್ವತನಾರಾಯಣ ಕೆ.,** ಆರ್‌.ಟಿ.ನಗರ



ನಮ್ಮ ಮೆಟ್ರೊ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಿ ರೈಲು ಸಂಚರಿಸುವಂತೆ ಮಾಡಬೇಕು. ಇಂಟರ್‌ಚೇಂಜ್‌ಗಳು ಈಗ ಮೆಜೆಸ್ಟಿಕ್‌ಗೆ ಹೋಗಬೇಕು. ಅದರ ಬದಲು ನಗರದ ಬೇರೆ ಬೇರೆ ಭಾಗಗಳಲ್ಲಿ ಇಂಟರ್‌ಚೇಂಜ್‌ಗಳನ್ನು ಮಾಡಬೇಕು. ಅನಗತ್ಯವಾಗಿ ಸುರಂಗಮಾರ್ಗ ನಿರ್ಮಿಸುವುದನ್ನು ಕೈಬಿಡಬೇಕು.
**ಚಂದನ್ ನಂಜನಗೂಡು ಪ್ರಸನ್ನಕುಮಾರ್,** ಜಾಲಹಳ್ಳಿ, ಬೆಂಗಳೂರು



ನೆಲದ ಮೇಲೆ ರಸ್ತೆ ನಿರ್ಮಿಸುವುದು ಸುಲಭ. ಸುರಂಗ ಮಾರ್ಗಗಳನ್ನು ನಿರ್ಮಿಸುವುದು ಹೆಚ್ಚು ವೆಚ್ಚದಾಯಕ. ಅಲ್ಲದೇ ಸುರಂಗ ತೋಡಿದರೆ ಅಂತರ್ಜಲ ಇನ್ನಷ್ಟು ಕುಸಿಯುತ್ತದೆ. ಇದರಿಂದ ಪರಿಸರಕ್ಕೂ ಹಾನಿ. ವಾಹನದಟ್ಟಣೆಯೂ ಕಡಿಮೆಯಾಗುವುದಿಲ್ಲ.
**ಮಧುಸೂದನ್,** ಎಂಜಿನಿಯರ್



ವೈಜ್ಞಾನಿಕವಾಗಿ ಯೋಚಿಸದೇ ಸುರಂಗ ಮಾರ್ಗ ಯೋಜನೆ ರೂಪಿಸಿರುವಂತೆ ಇದೆ. ಮೆಟ್ರೊ, ಸಂಪರ್ಕ ಯೋಜನೆಗಳು ಎಲ್ಲಿ ಅನುಷ್ಠಾನಗೊಳ್ಳುತ್ತಿವೆಯೋ ಅಲ್ಲೇ ಸುರಂಗ ಮಾರ್ಗಗಳೂ ಬರುತ್ತಿವೆ. ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆಯಂತಾಗಿದೆ.
**ಕವಿತಾ ಕೆ.,** ಜಯನಗರ



ಸುರಂಗ : ಅಂತರಂಗ



ನಾಗವಾರದಲ್ಲಿ ನಮ್ಮ ಮೆಟ್ರೊ ನೀಲಿ ಮತ್ತು ಗುಲಾಬಿ ಮಾರ್ಗಗಳು ಸೇರುವ ಜಂಕ್ಷನ್‌ನಲ್ಲಿ ಮೆಟ್ರೊ ನಿಲ್ದಾಣ ಕಾಮಗಾರಿ ನಡೆಯುತ್ತಿದೆ
ಪ್ರಜಾವಾಣಿ ಚಿತ್ರಗಳು: ರಂಜು ಪಿ.

### ಉಪನಗರ ಯೋಜನೆ ಸ್ಥಗಿತ

ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್‌ಗಳ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿತ್ತು. ಕಳೆದ ನಾಲ್ಕು ತಿಂಗಳಿನಿಂದ ಸಂಪೂರ್ಣ ಸ್ಥಗಿತಗೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ತಿಕ್ಕಾಟದಿಂದ ಈ ಪರಿಸ್ಥಿತಿ ಉಂಟಾಗಿದೆ.

ನಗರದ ವಾಹನದಟ್ಟಣೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಲಿರುವ ಉಪನಗರ ರೈಲು ಯೋಜನೆಯ ಕಾಮಗಾರಿಯನ್ನು ಮತ್ತೆ ಆರಂಭಿಸಬೇಕು. ಶೀಘ್ರ ರೈಲು ಸಂಚರಿಸುವಂತೆ ಮಾಡಬೇಕು ಎಂದು ರಾಜಾಜಿನಗರದ ರಾಘವೇಂದ್ರ ಶೆಟ್ಟಿ ಆಗ್ರಹಿಸಿದ್ದಾರೆ.



ಕಲ್ಯಾಣನಗರದಲ್ಲಿ ನಮ್ಮ ಮೆಟ್ರೊ ನೀಲಿ ಮಾರ್ಗಕ್ಕೆ ಸಿದ್ಧವಾಗುತ್ತಿರುವ ಪಿಲ್ಲರ್‌ಗಳು

## ಸುದ್ದಿ 2 ನಿಮಿಷ

### 'ಬೈಕ್ ಟ್ಯಾಕ್ಸಿಗೆ ಅನುಮತಿಯಿಲ್ಲ'

**ಬೆಂಗಳೂರು:** ಕೇಂದ್ರ ಸರ್ಕಾರ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಯನ್ನು ಕಾನೂನು ಬದ್ಧಗೊಳಿಸಲು, ಕೇಂದ್ರದ ಮಾರ್ಗಸೂಚಿ ಸಹಾಯ ರೂಪವಾಗಲಿದ್ದು, ಕಾನೂನು ಸ್ವರೂಪ ಪಡೆದುಕೊಂಡಿಲ್ಲ ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈ ಮಾರ್ಗಸೂಚಿಯನ್ನೇ ಕಾನೂನು ಎಂಬಂತೆ ಅಗ್ರಿಗೇಟರ್‌ಗಳು ಬಿಂಬಿಸಿ ಸಾರ್ವಜನಿಕರಲ್ಲಿ ಗೊಂದಲ ಮೂಡಿಸುತ್ತಿವೆ' ಎಂದು ಆರೋಪಿಸಿದರು.

ದಟ್ಟಣೆಯ ಅವಧಿಯಲ್ಲಿ ನಿಗದಿತ ದರದ ಎರಡುಪಟ್ಟು ಹಾಗೂ ದಟ್ಟಣೆ ಇಲ್ಲದ ಸಮಯದಲ್ಲಿ ಶೇ 50ರಷ್ಟು ಕಡಿಮೆ ದರ ವಿಧಿಸಬಹುದು ಎಂದು ಮಾರ್ಗಸೂಚಿಯಲ್ಲಿ ಅವಕಾಶ ನೀಡಿದೆ. ಇದು ಮೋಟಾರು ವಾಹನ ಕಾಯ್ದೆ-1988ರ ಸೆಕ್ಷನ್ 67ರ ಉಲ್ಲಂಘನೆಯಾಗಿದೆ ಎಂದರು.

ಮಾರ್ಗಸೂಚಿಯ ಹಲವು ಲೋಪಗಳಿಂದ ಕೂಡಿದೆ. ದರ ನಿಗದಿ ಹಕ್ಕು ರಾಜ್ಯ ಸರ್ಕಾರದ್ದಾಗಿದೆ. ದುಪ್ಪಟ್ಟು ದರ ವಿಧಿಸುವುದರಿಂದ ಪ್ರಯಾಣಿಕರಿಗೆ ಹೊರೆಯಾಗಲಿದೆ. ಸರ್ಕಾರದಿಂದಲೇ ಚಾಲಕ ಅಥವಾ ಪ್ರಯಾಣಿಕ ಸೇವೆ ರದ್ದು ಪಡಿಸಿದರೆ ಶುಲ್ಕದ ಶೇ 10ರಷ್ಟು ಹಣ ಕಡಿತ ಮಾಡುವ ಮಾರ್ಗಸೂಚಿ ಅಗ್ರಿಗೇಟರ್‌ಗಳಿಗೆ ಅಧಿಕ ಲಾಭ ನೀಡುವ ಉದ್ದೇಶ ಹೊಂದಿದೆ. ಈ ಮಾರ್ಗಸೂಚಿಗಳಿಗೆ ತಿದ್ದುಪಡಿ ತರುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿ, ರಾಜ್ಯ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಒಕ್ಕೂಟದ ಪದಾಧಿಕಾರಿಗಳಾದ ಗಂಡಸಿ ಸದಾನಂದ ಸ್ವಾಮಿ, ಸಂತೋಷ್ ಕುಮಾರ್, ಆದರ್ಶ ಮಂಜುನಾಥ್, ಶಬರಿನಾಥ್, ರವಿಕುಮಾರ್, ಪ್ರತಿಮಾ, ರಾಜು ಕನ್ನಡಿಗ ಮತ್ತು ಸಂಜಾರಿ ಸತೀಶ್ ಉಪಸ್ಥಿತರಿದ್ದರು.

### ಬೆಸ್ಕಾಂ ವಿರುದ್ಧ ಕ್ರಮಕ್ಕೆ ಆಗ್ರಹ




**ಕೆ.ಆರ್.ಪುರ:** 'ಅಯ್ಯಪ್ಪನಗರದಲ್ಲಿ ಹೈಟೆನ್ಷನ್ ವಿದ್ಯುತ್ ಪ್ರವಹಿಸಿ 10 ವರ್ಷದ ಬಾಲಕ ಮೃತಪಟ್ಟಿದ್ದು, ಇದಕ್ಕೆ ಕಾರಣರಾದ ಬೆಸ್ಕಾಂ ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಮತಾ ಸೈನಿಕ ದಳದ ಕಾರ್ಯಕರ್ತರು ಬಿಬಿಎಂಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಮತಾ ಸೈನಿಕ ದಳ ಯುವ ಘಟಕದ ಪ್ರಧಾನ ಕಾರ್ಯದರ್ಶಿ ದಲಿತ ಚಳವಳಿ ನಾಗೇಶ್ ಮಾತನಾಡಿ, 'ನೇಪಾಳದ ತುಲಾವೋರ್ ಮತ್ತು ದೊಡ್ಡಪ್ಪದೇವ ದಂಪತಿಯ ಪುತ್ರ ಅನಂತ್, ಹೈಟೆನ್ಷನ್ ವಿದ್ಯುತ್ ಪ್ರವಹಿಸಿ ಪ್ರಾಣ ಕಳೆದುಕೊಂಡು 15 ದಿನ ಕಳೆದರೂ ಬೆಸ್ಕಾ ಮತ್ತು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದರು.

'ಕೆ.ಆರ್.ಪುರದಲ್ಲಿ ಹಾದುಹೋಗಿರುವ ಹೈಟೆನ್ಷನ್ ಲೈನ್‌ನಿಂದಾಗಿ ಹತ್ತಕ್ಕೂ ಹೆಚ್ಚು ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಆದರೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಪೊಲೀಸರು ಸಹ ದೂರು ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಕಿಡಿಕಾರಿದರು.

ಪದಾಧಿಕಾರಿಗಳಾದ ಅಂಬರೀಶ್, ಶೋಭಾ, ಕೃಷ್ಣ, ಸಂತೋಷ್, ನವೀನ್ ಭಾಗವಹಿಸಿದ್ದರು.

## ಕೇಂದ್ರ, ಸುಪ್ರೀಂಗೆ ಮೊರೆ: ಖಂಡ್ರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅರಣ್ಯ ಪ್ರದೇಶದಲ್ಲಿ ಹಲವು ದಶಕಗಳಿಂದ ಇರುವ ಜನವಸತಿ ಪ್ರದೇಶಗಳಿಗೆ ಪರಿಹಾರಾತ್ಮಕವಾಗಿ ಪರ್ಯಾಯ ಭೂಮಿ ಪಡೆದು, ಬಡ ಜನರ ಸಂಕಷ್ಟ ಪರಿಹರಿಸಲು ಕೇಂದ್ರ ಸರ್ಕಾರ ಮತ್ತು ಸುಪ್ರೀಂಕೋರ್ಟ್ ಮೊರೆ ಹೋಗಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಹೇಳಿದರು.

ಇಂಧನ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್, ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ಜನಪ್ರತಿನಿಧಿಗಳ ಜತೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಸೆಕ್ಷನ್ 4 ಮತ್ತು ಪರಿಭಾವಿತ ಅರಣ್ಯಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಸಮಸ್ಯೆ ಇದೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರ ಕಂದಾಯ ಇಲಾಖೆ ಸಹಕಾರದೊಂದಿಗೆ ಮಾರ್ಗೋಪಾಯ ಹುಡುಕುತ್ತಿದೆ ಎಂದು ಅವರು ಹೇಳಿದರು.

## 'ತುಂಗಭದ್ರಾ ಸ್ವಚ್ಛತೆಗೆ ಯೋಜನೆ ರೂಪಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತುಂಗಭದ್ರಾ ನದಿಯನ್ನು ಸ್ವಚ್ಛಗೊಳಿಸಲು ರಾಜ್ಯ ಸರ್ಕಾರ ಕ್ರಿಯಾ ಯೋಜನೆ ರೂಪಿಸಬೇಕು ಎಂದು ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಹಾಗೂ ಪರ್ಯಾವರಣ ಟ್ರಸ್ಟ್ ಆಗ್ರಹಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ತುಂಗಭದ್ರಾ ರಕ್ಷಿಸುವ ಅಭಿಯಾನದ ಸಮೀಕ್ಷಾ ವರದಿ ಬಿಡುಗಡೆಗೊಳಿಸಿ ಮಾತನಾಡಿದ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ರಾಷ್ಟ್ರೀಯ ಘಟಕದ ಅಧ್ಯಕ್ಷ ಬಸವರಾಜ, 'ತುಂಗಭದ್ರಾ ನದಿಯ ಪಾವಿತ್ರ್ಯ ಕಾಪಾಡುವ ಉದ್ದೇಶದಿಂದ 2024ರ ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಶೃಂಗೇರಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ ಬಳಿಯ ಕಿಷ್ಕಿಂಧೆ ವರೆಗೆ ಪಾದಯಾತ್ರೆ ನಡೆಸಿ, ಸಾರ್ವಜನಿಕರಲ್ಲಿ ತುಂಗಭದ್ರಾ ನದಿಗೆ ಸಂಬಂಧಿಸಿದಂತೆ ಜಲಜಾಗೃತಿ ಮೂಡಿಸಲಾಯಿತು' ಎಂದು ಹೇಳಿದರು.

'ತುಂಗಾಭದ್ರಾ ನದಿ ತೀರದ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲಾಯಿತು. ಏಳು ಜಿಲ್ಲೆಗಳಲ್ಲಿ ಒಟ್ಟು 430 ಕಿ.ಮೀ ಪಾದಯಾತ್ರೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ನದಿ ನೀರು ಕಲುಷಿತವಾಗಲು ಕಾರಣಗಳೇನು, ನದಿ ಸ್ವಚ್ಛಗೊಳಿಸುವ ಪರಿಹಾರ ಕ್ರಮಗಳ ಬಗ್ಗೆ ಸಮೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಪರಿಸರ ತಜ್ಞ ಬಿ.ಎಂ. ಕುಮಾರಸ್ವಾಮಿ, ವಿಜ್ಞಾನಿ ಶ್ರೀಪತಿ, ಶಿವಮೊಗ್ಗ ನಗರಸಭೆಯ ಮಾಜಿ ಅಧ್ಯಕ್ಷ ಎಂ. ಶಂಕರ್ ಸುದ್ದಿಗೋಷ್ಠಿಯಲ್ಲಿದ್ದರು.

## 'ವೃಷಭಾವತಿ ನೀರು ಯೋಗ್ಯವಿಲ್ಲವಾದರೆ ವಾಪಸ್'

ಪ್ರಜಾವಾಣಿ ವಾರ್ತೆ

**ನೆಲಮಂಗಲ:** 'ತಾಲ್ಲೂಕಿನಲ್ಲಿರುವ 64 ಕೆರೆಗಳ ಪೈಕಿ 50 ಕೆರೆಗಳಿಗೆ ವೃಷಭಾವತಿ ಕಣಿವೆಯ ಸಂಸ್ಕರಿಸಿದ ನೀರು ಹರಿಸಲಾಗುತ್ತದೆ. ಮೊದಲ ಕೆರೆಗೆ ನೀರು ಬಂದ ಕೂಡಲೆ ತಜ್ಞರಿಂದ ಪರೀಕ್ಷಿಸೋಣ, ಬಳಸಲು ಯೋಗ್ಯವಲ್ಲ ಎಂದಾದರೆ ವಾಪಸ್ ಕಳುಹಿಸೋಣ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಆರ್. ಗೌಡ ತಿಳಿಸಿದರು.

## ನೇ.ಭ.ರಾಮಲಿಂಗ ಶೆಟ್ಟಿಯಿಂದ ಸುಳ್ಳು ಆರೋಪ: ಜೋಶಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಗೌರವ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನೇ.ಭ. ರಾಮಲಿಂಗ ಶೆಟ್ಟಿ ಅವರ ಆರೋಪಗಳು ಸತ್ಯಕ್ಕೆ ದೂರವಾಗಿದ್ದು, ಸೂಕ್ತ ಸಮಯದಲ್ಲಿ ಉತ್ತರಿಸಲಾಗುವುದು' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಅವರನ್ನು ಗೌರವ ಕಾರ್ಯದರ್ಶಿ ಸ್ಥಾನದಿಂದ ಮುಕ್ತಗೊಳಿಸಲು ತೀರ್ಮಾನಿಸಲಾಗಿತ್ತು. ಈ ವಜಾದಿಂದ ತಪ್ಪಿಸಿಕೊಳ್ಳಲು ಅವರು ರಾಜೀನಾಮೆ ನೀಡಿ, ಹಲವು ಸುಳ್ಳು ಆರೋಪಗಳನ್ನು ಮಾಧ್ಯಮ ಹಾಗೂ ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟಿದ್ದಾರೆ. ಈ ಕುರಿತು ಸಾಕ್ಷಿ, ಆಧಾರ ಸಹಿತ ಮುಂಬರುವ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆ ನಿರ್ಧಾರವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.



ಮಹೇಶ ಜೋಶಿ

## ವರ್ಚುವಲ್ ಸಿಮ್ಯುಲೇಶನ್ ತರಬೇತಿಗೆ ಚಾಲನೆ

**ಬೆಂಗಳೂರು:** ಕರ್ನಾಟಕ ರಾಜ್ಯ ಔಷಧ ವಿಜ್ಞಾನ ಪರಿಷತ್ತು (ಕೆಎಸ್‌ಪಿಸಿ) ಫಾರ್ಮಸಿ ವಿದ್ಯಾರ್ಥಿಗಳಿಗೆ ರೂಪಿಸಿರುವ ವರ್ಚುವಲ್ ಸಿಮ್ಯುಲೇಶನ್ ಆಧಾರಿತ ಔಷಧ ತಯಾರಿಕಾ ತರಬೇತಿಗೆ ನಗರದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಕೆಎಸ್‌ಪಿಸಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮ ಉದ್ಘಾಟಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ತರಬೇತಿಗೆ ಸರ್ಕಾರದಿಂದ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಫಾರ್ಮಾಸಿಸ್ಟ್‌ಗಳು ಮತ್ತು ಫಾರ್ಮಸಿ ಕಾಲೇಜುಗಳ ಅಧ್ಯಾಪಕರು ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ತರಬೇತಿ ನೀಡಬೇಕು' ಎಂದು ಸಲಹೆ ನೀಡಿದರು.

ಕೆಎಸ್‌ಪಿಸಿ ರಿಜಿಸ್ಟ್ರಾರ್ ಸಿರ್ಸೆ ಕ್ರಾಂತಿ ಕುಮಾರ್, ಕೌಶಲಾಭಿವೃದ್ಧಿ ಕೇಂದ್ರದ ಸಂಯೋಜಕಿ ಸಲ್ಮಾ ಖಾನಂ ಮಾತನಾಡಿದರು.

# ‘ನಗರಕ್ಕೆ ಪ್ರತ್ಯೇಕ ಆರೋಗ್ಯ ನೀತಿ’

## 393 ಆಶಾಕಿರಣ ದೃಷ್ಟಿ ಕೇಂದ್ರಗಳಿಗೆ ಚಾಲನೆ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೆಂಗಳೂರಿಗೆ ಪ್ರತ್ಯೇಕ ಆರೋಗ್ಯ ನೀತಿಯ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ತಜ್ಞರ ತಂಡ ವರದಿ ಸಿದ್ಧಪಡಿಸುತ್ತಿದ್ದು, ಶೀಘ್ರದಲ್ಲಿಯೇ ಪ್ರತ್ಯೇಕ ಆರೋಗ್ಯ ನೀತಿಯನ್ನು ಜಾರಿಗೆ ತರಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲಾಖೆಯು ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯ-ಕ್ರಮದಲ್ಲಿ ರಾಜ್ಯದಾದ್ಯಂತ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುವ 393 ‘ಆಶಾಕಿರಣ ದೃಷ್ಟಿ ಕೇಂದ್ರ’ಗಳಿಗೆ (ವಿಷನ್ ಸೆಂಟರ್) ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ದಿನೇಶ್ ಗುಂಡೂರಾವ್, ‘ಬೆಂಗಳೂರಿನ ಆರೋಗ್ಯ ವ್ಯವಸ್ಥೆಯನ್ನು ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ನಿರ್ವಹಿಸುತ್ತಿವೆ. ಕೆಲವೆಡೆ ಉತ್ತಮ ಕಟ್ಟಡಗಳಿದ್ದರೂ ವೈದ್ಯಕೀಯ ಸೌಲಭ್ಯ ಸಿಗುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳ ಪ್ರಯೋಜನ ಜನರಿಗೆ ಸಿಗುವಂತಾಗಬೇಕು. ಆರೋಗ್ಯ ನೀತಿಗೆ ಸಂಬಂಧಿಸಿದಂತೆ ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಸೇರಿ ವರದಿ ತಯಾರಿಸುತ್ತಿದೆ. ಈ ವರದಿ ಸಿದ್ಧವಾದ ಬಳಿಕ ಸರ್ಕಾರಕ್ಕೆ ಸಲ್ಲಿಸಲಾಗುವುದು.

> **ಆಶಾಕಿರಣ ಒಂದು ಮಾದರಿ ಯೋಜನೆಯೆಂದು ವಿಶ್ವ ಆರೋಗ್ಯ ಸಂಸ್ಥೆ ಶ್ಲಾಘಿಸಿದೆ. ಯೋಜನೆಯ ಅಧ್ಯಯನಕ್ಕೆ ವಿಶ್ವ ಆರೋಗ್ಯ ಸಂಸ್ಥೆಯು ರಾಜ್ಯಕ್ಕೆ ತಂಡ ಕಳುಹಿಸುತ್ತಿರುವುದು ಹೆಮ್ಮೆಯ ಸಂಗತಿ**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, ನೀತಿಯನ್ನು ಜಾರಿ ಮಾಡಲಾಗುವುದು’ ಎಂದರು.

‘ಆಶಾಕಿರಣ ಯೋಜನೆಯನ್ನು ಮರುವಿನ್ಯಾಸಗೊಳಿಸಿ, ನಿರಂತರ ಕಣ್ಣಿನ ಆರೋಗ್ಯ ಸೇವೆ ಒದಗಿಸಲು 393 ಶಾಶ್ವತ ಆಶಾಕಿರಣ ದೃಷ್ಟಿ ಕೇಂದ್ರಗಳನ್ನು ತೆರೆಯಲಾಗಿದೆ. ರಾಜ್ಯದ ಎಲ್ಲ ಜಿಲ್ಲಾ-ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿ ಕೇಂದ್ರಗಳು ಕಾರ್ಯನಿರ್ವಹಿಸ-ಲಿವೆ. ದೃಷ್ಟಿದೋಷ ಹೊಂದಿದವರು ತಪಾಸಣೆ ಮಾಡಿಸಿಕೊಂಡು, ಉಚಿತವಾಗಿ ಕನ್ನಡಕಗಳನ್ನು ಪಡೆಯ-ಬಹುದಾಗಿದೆ. ಅಲ್ಲದೆ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನೂ ಉಚಿತವಾಗಿ ನಡೆಸ-ಲಾಗುತ್ತದೆ’ ಎಂದು ಹೇಳಿದರು.

ಇಲಾಖೆ ಜಂಟಿ ನಿರ್ದೇಶಕಿ ರಜನಿ ಎಂ., ‘ರಾಜ್ಯದಲ್ಲಿ 2022ರಲ್ಲಿ ಆರಂಭವಾದ ಆಶಾಕಿರಣ ಕಾರ್ಯ-ಕ್ರಮವನ್ನು ಎರಡು ಹಂತಗಳಲ್ಲಿ, 8 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿತ್ತು. ಒಟ್ಟು 1.40 ಕೋಟಿ ಜನರು ಪ್ರಾಥಮಿಕ ನೇತ್ರ ತಪಾಸಣೆಗೆ ಒಳಗಾಗಿದ್ದು, 24.50 ಲಕ್ಷ ಜನರಲ್ಲಿ ಕಣ್ಣಿನ ತೊಂದರೆ ಇರುವುದು ಪತ್ತೆಯಾಗಿತ್ತು. 4.3 ಲಕ್ಷ ಜನರಿಗೆ ಉಚಿತವಾಗಿ ಕನ್ನಡಕ ವಿತರಿಸಲಾಗಿದೆ. 1.05 ಲಕ್ಷ ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ’ ಎಂದರು.

ಗೋವಿಂದರಾಜ ನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಅವಿನಾಶ್ ಮೆನನ್, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ವಿಕಾಸ್ ಸುರಳ್ಕರ್ ಕಿಶೋರ್, ಆರೋಗ್ಯ ಇಲಾಖೆ ನಿರ್ದೇಶಕಿ ಡಾ. ಉಮಾ ಬುಗ್ಗಿ, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಎಸ್.ಎಸ್. ಮದನಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ಅವರು ಮಹಿಳೆಯೊಬ್ಬರಿಗೆ ಕನ್ನಡಕ ವಿತರಿಸಿದರು. ದಿನೇಶ್ ಗುಂಡೂರಾವ್, ಪ್ರಿಯಕೃಷ್ಣ ಉಪಸ್ಥಿತರಿದ್ದರು
– ಪ್ರಜಾವಾಣಿ ಚಿತ್ರ

### ‘ಸರ್ಕಾರದಿಂದ ದೃಷ್ಟಿ ಗ್ಯಾರಂಟಿ’

ನೂತನ ದೃಷ್ಟಿ ಕೇಂದ್ರಗಳಿಗೆ ಚಾಲನೆ ನೀಡಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಕಣ್ಣು, ದೃಷ್ಟಿಗೆ ಸಮಸ್ಯೆಯಾದಲ್ಲಿ ಚಿಕಿತ್ಸೆ ನೀಡುವ ‘ದೃಷ್ಟಿ ಗ್ಯಾರಂಟಿ’ಯನ್ನು ಆಶಾಕಿರಣ ಯೋಜನೆ ಮೂಲಕ ಕಾಂಗ್ರೆಸ್ ಸರ್ಕಾರ ನೀಡುತ್ತಿದೆ. ಯೋಜನೆಯಡಿ ಉಚಿತವಾಗಿ ಕನ್ನಡಕ ನೀಡಲಾಗುತ್ತಿದೆ. ಜನರಿಗೆ ಇದರಿಂದ ಕನ್ನಡಕ ಸೇರಿದಂತೆ ಚಿಕಿತ್ಸೆಯ ಸಾವಿರಾರು ರೂಪಾಯಿ ಹಣ ಉಳಿತಾಯವಾಗುತ್ತದೆ’ ಎಂದು ಹೇಳಿದರು.

## ತಳ್ಳುವ ಸಾಹಸದ ಸಹಾಯ..

ಪ್ರಜಾವಾಣಿ ಚಿತ್ರ:
ಕಿಶೋರ್ ಕುಮಾರ್ ಬೋಳಾರ್



ತಳ್ಳುಗಾಡಿಯಲ್ಲಿ ಮಣಭಾರದ ವಸ್ತುಗಳನ್ನು ಇಟ್ಟುಕೊಂಡು ಒಯ್ಯುತ್ತಿದ್ದ ಕಾರ್ಮಿಕನನ್ನು ನೋಡಿ ಮನಕರಗಿದ ಸಾರ್ವಜನಿಕರು, ಪೊಲೀಸರು ಸಹಾಯ ಮಾಡುವ ದೃಶ್ಯ ಬಿ.ವಿ.ಕೆ ಅಯ್ಯಂಗಾರ್ ರಸ್ತೆಯಲ್ಲಿ ಗುರುವಾರ ಕಂಡು ಬಂತು.

## ಎಎಸ್‌ಪಿ ಭರಮನಿ ಸಮಾಧಾನ ಪಡಿಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಮ್ಮ ವಿರುದ್ಧ ಮುಖ್ಯಮಂತ್ರಿ ಕೈಯೆತ್ತಿದ್ದರಿಂದ ನೊಂದು ಸ್ವಯಂ ನಿವೃತ್ತಿಗೆ ಕೋರಿಕೆ ಸಲ್ಲಿಸಿದ್ದ ಧಾರವಾಡದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ) ಎನ್‌.ವಿ. ಭರಮನಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ಮಾಡಿ ಸಮಾಧಾನಪಡಿಸಿದ್ದಾರೆ.

ಬೆಳಗಾವಿಯಲ್ಲಿ ಸಮಾವೇಶವೊಂದರಲ್ಲಿ ಭದ್ರತೆ ವಿಚಾರಕ್ಕೆ ಸಂಬಂಧಿಸಿದಂತೆ ವೇದಿಕೆಯಲ್ಲಿ ಎನ್‌.ವಿ.ಭರಮನಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಎತ್ತಿ ರೇಗಿದ್ದ ಪ್ರಸಂಗ ಇತ್ತೀಚೆಗೆ ನಡೆದಿತ್ತು. ಇದರಿಂದ ನೊಂದಿದ್ದ ಅವರು, ಸ್ವಯಂ ನಿವೃತ್ತಿ ಕೋರಿ ಒಂದು ತಿಂಗಳ ಹಿಂದೆ ಗೃಹ ಇಲಾಖೆಗೆ ಮನವಿ ಸಲ್ಲಿಸಿದ್ದರು.

**‘ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ’:** ಭರಮನಿ ಅವರಿಗೆ ಕರೆ ಮಾಡಿದ ಮುಖ್ಯಮಂತ್ರಿ, ‘ಸ್ವಯಂನಿವೃತ್ತಿ ನಿರ್ಧಾರ ಬೇಡ. ಅದನ್ನು ವಾಪಸ್ ಪಡೆಯಿರಿ. ನಾನು ಅಂದು ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ. ನಿಮಗೆ ಅಗೌರವ ತೋರಬೇಕು ಎಂದು ಮಾಡಿದ್ದಲ್ಲ. ಅಪಮಾನ ಮಾಡುವ ಉದ್ದೇಶವೂ ನನಗಿರಲಿಲ್ಲ’ ಎಂದು ಮನವರಿಕೆ ಮಾಡಿದ್ದಾರೆ.

‘ಕಾಂಗ್ರೆಸ್ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬಿಜೆಪಿ ಕಾರ್ಯಕರ್ತರು ಅಡ್ಡಿಪಡಿಸಿದರು. ಹೀಗಾಗಿ, ಕೋಪ ಬಂದು ಮಾತನಾಡಿದ್ದೇನೆ. ಯಾವುದೇ ಬೇಸರ ಮಾಡಿಕೊಳ್ಳಬೇಡಿ. ಸ್ವಯಂ ನಿವೃತ್ತಿ ಕೋರಿ ಸಲ್ಲಿಸಿರುವ ಮನವಿಯನ್ನು ವಾಪಸ್ ಪಡೆದುಕೊಳ್ಳಿ. ನೋವಾಗಿದ್ದರೆ ಕ್ಷಮಿಸಿ ಎಂದು ಸಮಾಧಾನಪಡಿಸಿದ್ದಾರೆ’ ಎಂದು ತಿಳಿದುಬಂದಿದೆ.

## 6ಕ್ಕೆ ಭಕ್ತರ ಭಂಡಾರದ ಕುಟೀರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೇತೋಹಳ್ಳಿಯಲ್ಲಿ ನಿರ್ಮಿಸಿರುವ ಕಾಗಿನೆಲೆ ಕನಕಗುರು ಪೀಠದ ಶಾಖಾ ಮಠದ ‘ಭಕ್ತರ ಭಂಡಾರದ ಕುಟೀರ’ ಉದ್ಘಾಟನಾ ಕಾರ್ಯಕ್ರಮ ಜುಲೈ 5 ಮತ್ತು 6ರಂದು ನಡೆಯಲಿದೆ ಎಂದು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌. ಎಂ.ರೇವಣ್ಣ ಹೇಳಿದರು.



ಎಚ್‌.ಎಂ. ರೇವಣ್ಣ

ದೊಡ್ಡ ಆಲದ ಮರದ ಹತ್ತಿರದ ಕೇತೋಹಳ್ಳಿಯಲ್ಲಿ ₹6 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಶಾಖಾ ಮಠದ ಗುರು ಪ್ರವೇಶ ಮತ್ತು ಧಾರ್ಮಿಕ ಸಭೆ ಜುಲೈ 5ರ ಸಂಜೆ 6 ಗಂಟೆಗೆ ನಡೆಯಲಿದ್ದು, ಕೈಲಾಸಾಶ್ರಮ ಮಠದ ಜಯೇಂದ್ರಪುರಿ ಸ್ವಾಮೀಜಿ ಹಾಗೂ ವಿವಿಧ ಮಠಗಳ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವರು. 6ರಂದು ಬೀರೇಂದ್ರ ಕೇಶವ ತಾರಕಾನಂದಪುರಿ 19ನೇ ವರ್ಷದ ಪುಣ್ಯಾರಾಧನೆಯ ಸ್ಮರಣಾರ್ಥ ‘ಭಕ್ತರ ಭಂಡಾರದ ಕುಟೀರ’ ಉದ್ಘಾಟನೆಯಾಗಲಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 11ಕ್ಕೆ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಖಾ ಮಠ ಉದ್ಘಾಟಿಸುವರು. ಮೇಘಾಲಯ ರಾಜ್ಯಪಾಲ ಸಿ.ಎಚ್‌.ವಿಜಯಶಂಕರ್ ಅವರು ವೇದಿಕೆ ಕಾರ್ಯಕ್ರಮ ಉದ್ಘಾಟಿಸುವರು. ಹೊಸದುರ್ಗದ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ, ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಸಚಿವರು ಭಾಗವಹಿಸುವರು ಎಂದರು.

ಮೂರು ಅಂತಸ್ತಿನ ಶಾಖಾ ಮಠದಲ್ಲಿ ಪ್ರತಿ ಶನಿವಾರ ಸತ್ಸಂಗ, 4ನೇ ಶನಿವಾರ ಸಮಾಜದ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಗೋಷ್ಠಿಯಲ್ಲಿ ಮಠದ ಟ್ರಸ್ಟಿ ರಘುನಾಥರಾವ್ ಮಲ್ಕಾಪೂರೆ, ಕಾಗಿನೆಲೆ ಕನಕ ಗುರುಪೀಠದ ಕಾರ್ಯದರ್ಶಿ ಮಂಜಪ್ಪ, ರಾಮಚಂದ್ರಪ್ಪ ಹಾಜರಿದ್ದರು.

### ಬಿಬಿಎಂಪಿ: ಅರ್ಜಿ ಸಲ್ಲಿಸಿದ ಒಂದೇ ದಿನದಲ್ಲಿ ತಾತ್ಕಾಲಿಕ ನಕ್ಷೆ

# 15 ದಿನದಲ್ಲಿ ಕಟ್ಟಡಕ್ಕೆ ‘ನಂಬಿಕೆ ನಕ್ಷೆ’


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ‘ನಂಬಿಕೆ ನಕ್ಷೆ’ ಯೋಜನೆಯಡಿ 4,000 ಚದರಡಿವರೆಗಿನ ನಿವೇಶನಗಳಿಗೆ ಒಂದೇ ದಿನದಲ್ಲಿ ಕಟ್ಟಡ ನಕ್ಷೆ ನೀಡಲಾಗುತ್ತದೆ. 15 ದಿನದಲ್ಲಿ ಅನುಮೋದಿತ ನಕ್ಷೆ ಲಭ್ಯವಾಗಲಿದೆ.

ನಿವೇಶನಗಳಿಗೆ ಇ–ಖಾತಾ ಇಲ್ಲದಿದ್ದರೆ, ಕಟ್ಟಡ ನಕ್ಷೆಗೆ ಮಂಜೂರಾತಿ, ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ (ಸಿಸಿ), ಸ್ವಾಧೀನಾನುಭವ ಪತ್ರ (ಒಸಿ) ಇನ್ನು ಮುಂದೆ ಸಿಗುವುದಿಲ್ಲ.

‘ವಸತಿ ಕಟ್ಟಡಗಳ ನಿರ್ಮಾಣಕ್ಕೆ ಒಂದೇ ದಿನದಲ್ಲಿ ನಕ್ಷೆ ನೀಡಲಾಗುತ್ತದೆ. ಕಟ್ಟಡ ನಕ್ಷೆ ನಿಮ್ಮ ಮನೆ ಬಾಗಿಲಿಗೆ’ ಎಂಬ ಘೋಷ ವಾಕ್ಯದಲ್ಲಿ ‘ನಂಬಿಕೆ ನಕ್ಷೆ’ ಯೋಜನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 2024ರ ಸೆಪ್ಟೆಂಬರ್‌ನಲ್ಲಿ ಚಾಲನೆ ನೀಡಿದ್ದರು. 2025 ಜನವರಿವರೆಗೂ ಕುಂಟುತ್ತಾ ಸಾಗಿದ್ದ, ಯೋಜನೆ ನಂತರ ವೇಗ ಪಡೆದುಕೊಂಡಿತ್ತು. ಎಲ್ಲ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲೇ ನಡೆಸಲಾಗುತ್ತಿದ್ದರೂ, ಕಾಲಮಿತಿಯಾದ 15 ದಿನದಲ್ಲಿ ಅನುಮೋದಿತ ನಕ್ಷೆ ಸಿಗುತ್ತಿರಲಿಲ್ಲ. ಜುಲೈ 3ರಿಂದ ಎಲ್ಲ ವ್ಯವಸ್ಥೆಯನ್ನೂ ಆನ್‌ಲೈನ್‌ನಲ್ಲೇ ನಡೆಸಲಾಗುತ್ತಿದ್ದು, ಬಿಬಿಎಂಪಿ ಕಚೇರಿಗೆ ಹೋಗದೆ ಕಟ್ಟಡ ನಕ್ಷೆಯನ್ನು ಪಡೆಯಬಹುದಾಗಿದೆ.

‘ನಂಬಿಕೆ ನಕ್ಷೆ’ ಯೋಜನೆಯಲ್ಲಿ ಕಾಲಮಿತಿಯಾದ 15 ದಿನದಲ್ಲಿ ಅನುಮೋದಿತ ನಕ್ಷೆ ಆನ್‌ಲೈನ್‌ನಲ್ಲೇ ಅನುಮೋದನೆಯಾಗುತ್ತದೆ. ಇ–ಖಾತಾ ದಾಖಲಿಸುವುದರಿಂದ ಕಂದಾಯ ಅಧಿಕಾರಿಗಳ ಪರಿಶೀಲನೆ ಅಗತ್ಯ ಇರುವುದಿಲ್ಲ. ಅಧಿಕಾರಿಗಳು ಅವರಿಗೆ ನೀಡಿರುವ ಅವಧಿಯೊಳಗೆ ಪರಿಶೀಲನೆ ನಡೆಸಿ, ಅನುಮೋದನೆ ನೀಡಲಿದ್ದರೆ ಸ್ವಯಂಚಾಲಿತವಾಗಿ (ಡೀಮ್ಡ್) ಕಟ್ಟಡ ನಕ್ಷೆ ಅನುಮೋದನೆಯಾಗುವ ವ್ಯವಸ್ಥೆ ಇದೀಗ ಜಾರಿಯಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಈ ವ್ಯವಸ್ಥೆ ಜಾರಿಯಾಗಿದ್ದು, ಇನ್ನಷ್ಟು ಸುಲಲಿತ-ವಾಗಲಿದೆ’ ಎಂದು ಬಿಬಿಎಂಪಿ ನಗರ ಯೋಜನೆಯ ಹೆಚ್ಚುವರಿ ನಿರ್ದೇಶಕ ಗಿರೀಶ್ ಹೇಳಿದರು. ‘ಮ್ಯಾನ್ಯುಯಲ್ ಖಾತಾ’ ಹೊಂದಿರುವವರಿಗೆ ಕಟ್ಟಡ ನಕ್ಷೆ ನೀಡುವುದನ್ನು ನಿಲ್ಲಿಸಲಾಗಿದೆ. ಕಟ್ಟಡ ನಕ್ಷೆಗೆ ಅರ್ಜಿ ಸಲ್ಲಿಸುವಾಗ ಇ–ಖಾತಾ ಕಡ್ಡಾಯ. ಇದರಿಂದ, ಆಸ್ತಿಗೆ ಸಂಬಂಧಿಸಿದಂತೆ ಇತರೆ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿಲ್ಲ. ಕಂದಾಯ ಅಧಿಕಾರಿಗಳ ಪರಿಶೀಲನೆ ಅಗತ್ಯವಿಲ್ಲ. ಆಸ್ತಿ ತೆರಿಗೆ, ಕ್ರಯಪತ್ರ, ಆಸ್ತಿಯ ಸ್ಥಳ (ಅಕ್ಷಾಂಶ, ರೇಖಾಂಶ), ಮಾಲೀಕರ ಚಿತ್ರ, ಆಧಾರ್ ಎಲ್ಲವೂ ಇ–ಖಾತಾದಲ್ಲಿಯೇ ನಮೂದಾಗಿರುವುದರಿಂದ ಈ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲಿಯೇ ಲಭ್ಯವಾಗುತ್ತವೆ. ನಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ಮಾತ್ರ ಸಲ್ಲಿಸಬೇಕಾಗುತ್ತದೆ’ ಎಂದರು.




### ಮುಖ್ಯಾಂಶಗಳು

- ಕಂದಾಯ ನೌಕರರ ಪರಿಶೀಲನೆ ಅಗತ್ಯವಿಲ್ಲ
- ಬಫರ್ ಝೋನ್, ಕೆರೆ ಅಂಗಳ ಸ್ವಯಂ ಚಾಲಿತವಾಗಿ ಪರಿಶೀಲನೆ

### ಪ್ರಕ್ರಿಯೆ ಹೇಗೆ?

ಬಿಬಿಎಂಪಿಯಿಂದ ಅನುಮತಿ ಪಡೆದಿರುವ ಆರ್ಕಿಟೆಕ್ಟ್‌ಗಳು ಅಥವಾ ಎಂಜಿನಿಯರ್‌ಗಳು, ಮಾಲೀಕರು ಒದಗಿಸುವ ದಾಖಲೆ ಮತ್ತು ಕಟ್ಟಡ ನಕ್ಷೆಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bpas.bbmpgov.in/BPAMSClient4/Default.aspx? TAV-1) ಅಪ್‌ಲೋಡ್ ಮಾಡಬೇಕು.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಆನ್‌ಲೈನ್‌ನಲ್ಲೇ ಪರಿಶೀಲಿಸಿ, ಕೆರೆ, ಸರ್ಕಾರಿ ಪ್ರದೇಶಗಳ ಯಾವುದೇ ಬಫರ್ ಝೋನ್‌ನಲ್ಲಿ ಈ ಕಟ್ಟಡ ಬರುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಆಟೊ ಡಿಸಿಆರ್ ಮೂಲಕ ವರದಿ ಸಿದ್ಧಗೊಂಡು, ತಾತ್ಕಾಲಿಕ ನಕ್ಷೆ ಹಾಗೂ ಅನುಮತಿ ಪತ್ರವನ್ನು ಒಂದು ದಿನದಲ್ಲಿ ನೀಡಲಾಗುತ್ತದೆ.

ನಂತರ ನಗರ ಯೋಜನೆ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ನಕ್ಷೆ ಮಂಜೂರು ಮಾಡುತ್ತಾರೆ. ದಾಖಲೆಗಳಲ್ಲಿ ಯಾವುದಾದರೂ ಸಮಸ್ಯೆ ಅಥವಾ ತಪ್ಪಿದ್ದರೆ ಬಿಬಿಎಂಪಿ ಕಾಯ್ದೆಯಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ‘ತಾತ್ಕಾಲಿಕ ನಕ್ಷೆ’ಯನ್ನು ರದ್ದುಗೊಳಿಸಿ, ಕಟ್ಟಡ ನಿರ್ಮಿಸದಂತೆ ನಿರ್ಬಂಧಿಸಲಾಗುತ್ತದೆ. 15 ದಿನದಲ್ಲಿ ಎಲ್ಲ ಪ್ರಕ್ರಿಯೆಗಳೂ ಮುಗಿಯಲಿವೆ.

ಪ್ರತಿಯೊಂದು ಅನುಮೋದನೆಯನ್ನೂ ಆನ್‌ಲೈನ್‌ನಲ್ಲೇ ನಡೆಸಲು ಅಧಿಕಾರಿಗಳಿಗೆ ಲಾಗಿನ್ ನೀಡಲಾಗಿದೆ. ಅಧಿಕಾರಿಗಳಿಗೆ ನಿಗದಿಯಾದ ಅವಧಿಯಲ್ಲಿ ಅವರು ಪರಿಶೀಲನೆ ನಡೆಸಿ, ಸಮ್ಮತಿ ನೀಡದಿದ್ದರೆ, ‘ಡೀಮ್ಡ್’ ವ್ಯವಸ್ಥೆಯಲ್ಲಿ ಸ್ವಯಂಚಾಲಿತವಾಗಿ ಕಟ್ಟಡ ನಕ್ಷೆ ಅನುಮೋದನೆಯಾಗುತ್ತದೆ.

# ಕಾಫಿ ಕಪ್‌ಗಾಗಿ ಗಲಾಟೆ: ವ್ಯಕ್ತಿ ಸೆರೆ

## ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು, ಮೂವರಿಗೆ ನೋಟಿಸ್



ಶೇಷಾದ್ರಿಪುರದಲ್ಲಿರುವ 'ನಮ್ಮ ಫಿಲ್ಟರ್ ಕಾಫಿ ಶಾಪ್'ನಲ್ಲಿ ಸಿಬ್ಬಂದಿ ಹಾಗೂ ಗ್ರಾಹಕರ ಮಧ್ಯೆ ಗಲಾಟೆ ನಡೆಯಿತು

ಪ್ರಜಾವಾಣಿ ವಾರ್ತೆ



ಅರುಣ್ ಕುಮಾರ್

**ಬೆಂಗಳೂರು:** ನಗರದ ಶೇಷಾದ್ರಿಪುರದ 'ನಮ್ಮ ಫಿಲ್ಟರ್ ಕಾಫಿ ಶಾಪ್'ನಲ್ಲಿ ಸಿಬ್ಬಂದಿ ಹಾಗೂ ಗ್ರಾಹಕರ ಮಧ್ಯೆ ಕಾಫಿ ಕಪ್ ವಿಚಾರಕ್ಕೆ ಪರಸ್ಪರ ಹೊಡೆದಾಟ ನಡೆದಿದೆ.

ಈ ಸಂಬಂಧ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪ್ಯಾಲೇಸ್ ಗುಟ್ಟಹಳ್ಳಿಯ ನಾಗಪ್ಪ ರಸ್ತೆಯ ನಿವಾಸಿ ಅರುಣ್ ಕುಮಾರ್ (33) ಅವರನ್ನು ಬಂಧಿಸಲಾಗಿದೆ.

ಬುಧವಾರ ಸಂಜೆ ಕಾಫಿ ಶಾಪ್‌ಗೆ ಬಂದಿದ್ದ ನಾಲ್ವರು ಗ್ರಾಹಕರು, ಕಾಫಿ ತರಲು ಹೇಳಿದ್ದರು. ಶಾಪ್‌ನ ಸಿಬ್ಬಂದಿ ಕಾಫಿ ತಂದುಕೊಟ್ಟಾದ ಬಳಿಕ ಅರುಣ್ ಕುಮಾರ್ ಅವರು ಹೆಚ್ಚುವರಿ ಕಾಫಿ ಕಪ್ ಕೇಳಿದ್ದರು. ಆಗ ಖಾಲಿ ಕಪ್ ಕೊಡುವುದಕ್ಕೆ ಹೋಟೆಲ್ ಸಿಬ್ಬಂದಿ ನಿರಾಕರಿಸಿದ್ದರು. ಆಗ ಸಿಬ್ಬಂದಿ ಹಾಗೂ ಗ್ರಾಹಕರ ಮಧ್ಯೆ ವಾಗ್ವಾದ ನಡೆದಿದೆ. ಎರಡೂ ಕಡೆಯವರು ಪರಸ್ಪರ ತಳ್ಳಾಟ, ಹಲ್ಲೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ದೃಶ್ಯವು ಶಾಪ್‌ನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ಕಾಫಿ ಕುಡಿಯಲು ಬಂದ ಗ್ರಾಹಕರು, ಹೋಟೆಲ್ ಸಿಬ್ಬಂದಿಗೆ ಅವಾಚ್ಯವಾಗಿ ನಿಂದಿಸಿ ಮನಬಂದಂತೆ ಥಳಿಸಿದ್ದಾರೆ. ಕಪಾಳಕ್ಕೆ ಹೊಡೆದು, ಮುಖಕ್ಕೆ ಗುದ್ದಿ, ಕಾಲಿನಿಂದ ಹೊಟ್ಟೆಗೆ ಒದ್ದು ಹಲ್ಲೆ ಮಾಡಿದ್ದಾರೆ ಎಂದು ಸಿಬ್ಬಂದಿ ದೂರು ನೀಡಿದ್ದರು. ಆ ದೂರು ಆಧರಿಸಿ ಅರುಣ್ ಅವರನ್ನು ಬಂಧಿಸಲಾಗಿದೆ. ವಿಚಾರಣೆಗೆ ಬರುವಂತೆ ಉಳಿದ ಮೂವರು ಗ್ರಾಹಕರಿಗೆ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಹೆಚ್ಚುವರಿ ಕಪ್ ಕೊಡುವುದಿಲ್ಲ ಎನ್ನುವ ವಿಚಾರಕ್ಕೆ ಗಲಾಟೆ ನಡೆದಿದೆ. ಕಾಫಿ ಶಾಪ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಶೀಘ್ರದಲ್ಲೇ ಉಳಿದ ಆರೋಪಿಗಳನ್ನು ಬಂಧಿಸಿ ವಿಚಾರಣೆ ಮಾಡುತ್ತೇವೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ತಿಳಿಸಿದ್ದಾರೆ.

## ನಿವೃತ್ತ ಡಿಜಿ, ಐಜಿಪಿ ಓಂ ಪ್ರಕಾಶ್ ಪುತ್ರಿ ಕೃತಿಕಾ ವಿರುದ್ಧ ಎನ್‌ಸಿಆರ್ ದಾಖಲು

# ನಂದಿನಿ ಪಾರ್ಲರ್‌ಗೆ ನುಗ್ಗಿ ದಾಂದಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ ಅವರ ಪುತ್ರಿ ಕೃತಿಕಾ ಅವರು ನಂದಿನಿ ಮಿಲ್ಕ್ ಪಾರ್ಲರ್‌ವೊಂದಕ್ಕೆ ನುಗ್ಗಿ ದಾಂದಲೆ ನಡೆಸಿದ್ದು, ಆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಘಟನೆಯು ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ನಂದಿನಿ ಮಿಲ್ಕ್ ಪಾರ್ಲರ್ ಮಾಲೀಕರು ನೀಡಿದ ದೂರಿನ ಮೇರೆಗೆ ಕೃತಿಕಾ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಗಂಭೀರ ಸ್ವರೂಪವಲ್ಲದ ಪ್ರಕರಣ(ಎನ್‌ಸಿಆರ್) ದಾಖಲಿಸಿಕೊಂಡಿದ್ದಾರೆ.

ಕಳೆದ ಸೋಮವಾರ ರಾತ್ರಿ ಮನೆ ಪಕ್ಕದಲ್ಲಿರುವ ನಂದಿನಿ ಮಿಲ್ಕ್ ಪಾರ್ಲರ್‌ಗೆ ತೆರಳಿದ್ದ ಕೃತಿಕಾ, ಏಕಾಏಕಿ ಅಂಗಡಿಯಲ್ಲಿದ್ದ ಬಿಸ್ಕತ್ ಹಾಗೂ ಚಾಕೊಲೇಟ್ ತುಂಬಿದ್ದ ಬಾಟಲಿಗಳನ್ನು ಒಡೆದು ಹಾಕಿದ್ದಾರೆ. ಅದನ್ನು ತಡೆಯಲು ಬಂದ ಮಾಲೀಕನ ಮೇಲೂ ಹಲ್ಲೆ ನಡೆಸಿದ್ದಾರೆ. ಈ ದೃಶ್ಯವನ್ನು ಕಂಡ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಹೊಯ್ಸಳ ಸಿಬ್ಬಂದಿ, ಕೃತಿಕಾ ಅವರನ್ನು ಸಮಾಧಾನ ಪಡಿಸಿ ಮನೆಗೆ ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಏಪ್ರಿಲ್ 20ರಂದು ಓಂ ಪ್ರಕಾಶ್ ಅವರ ಕೊಲೆ ನಡೆದಿತ್ತು. ಕೊಲೆ ಪ್ರಕರಣ ಆರೋಪದ ಅಡಿ ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಓಂ ಪ್ರಕಾಶ್ ಅವರ ಪುತ್ರ ಬೇರೆ ಮನೆಗೆ ತೆರಳಿದ್ದು, ಇದೀಗ ಫ್ಲ್ಯಾಟ್‌ನಲ್ಲಿ ಕೃತಿಕಾ ಒಬ್ಬರೇ ಇದ್ದಾರೆ ಎಂದು ಮೂಲಗಳು ತಿಳಿಸಿವೆ.

### ಅಪಘಾತ: ಯುವಕ ಸಾವು

**ಬೆಂಗಳೂರು:** ಮೈಸೂರು ಮುಖ್ಯರಸ್ತೆಯ ಕೆಂಗೇರಿ ಬಳಿ ಸರಕು ಸಾಗಣೆ ವಾಹನ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಯುವಕ ಮೃತಪಟ್ಟಿದ್ದಾರೆ.

ರಾಮನಗರ ಜಿಲ್ಲೆಯ ಹೆಜ್ಜಾಲದ ಬಿ.ವಿನಯ್ (19) ಮೃತಪಟ್ಟವರು.

'ವಿನಯ್ ಅವರು ಬುಧವಾರ ಸಂಜೆ ಕೆಂಗೇರಿ ಕಡೆಯಿಂದ ಬಿಡದಿಯ ಕಡೆಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಎಂಪರರ್ ಲೆಗಸಿ ಹೋಟೆಲ್ ಎದುರು ಹಿಂದಿನಿಂದ ವೇಗವಾಗಿ ಬಂದ, ವಿಆರ್‌ಎಲ್ ಸರಕು ಸಾಗಣೆ ವಾಹನವು ಡಿಕ್ಕಿ ಹೊಡೆದು, ಸವಾರರನ್ನು 20 ಮೀಟರ್ ದೂರಕ್ಕೆ ಎಳೆದುಕೊಂಡು ಹೋಗಿತ್ತು. ವಿನಯ್ ಅವರ ಮುಖ, ತಲೆ, ಕೈಕಾಲುಗಳಿಗೆ ತೀವ್ರ ಸ್ವರೂಪದಲ್ಲಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು' ಎಂದು ಸಂಚಾರ ಠಾಣೆ ಪೊಲೀಸರು ಹೇಳಿದರು.

ಚಾಲಕ ಮಹೇಶ್ (32) ವಿರುದ್ಧ ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಿದ್ಯಾರ್ಥಿನಿ ಆತ್ಮಹತ್ಯೆ

**ಬೆಂಗಳೂರು:** ಸುಲ್ತಾನ್‌ಪಾಳ್ಯದಲ್ಲಿ ನೆಲಸಿದ್ದ 15 ವರ್ಷದ ವಿದ್ಯಾರ್ಥಿನಿಯೊಬ್ಬಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ವಿದ್ಯಾರ್ಥಿನಿ ತಂದೆ ಆಟೊ ಚಾಲಕರಾಗಿದ್ದಾರೆ. ತಾಯಿ ಮನೆಗೆಲಸ ಮಾಡುತ್ತಾರೆ. ಆಕೆ 9ನೇ ತರಗತಿ ಓದುತ್ತಿದ್ದಳು. ಓದಿನ ವಿಚಾರಕ್ಕೆ ಮಗಳಿಗೆ ತಾಯಿ ಬುದ್ಧಿಮಾತು ಹೇಳಿದ್ದರು. ಬುಧವಾರ ಬೆಳಿಗ್ಗೆ ಸಹ ತಾಯಿ ಶಾಲೆಗೆ ಹೋಗುವಂತೆ ಹೇಳಿ ಕೆಲಸಕ್ಕೆ ತೆರಳಿದ್ದರು. ಆದರೆ, ಶಾಲೆಗೆ ಹೋಗದೆ ಮನೆಯಲ್ಲೇ ಇದ್ದ ಆಕೆ, ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾಳೆ ಎಂದು ಆರ್‌.ಟಿ.ನಗರ ಠಾಣೆ ಪೊಲೀಸರು ಮಾಹಿತಿ ನೀಡಿದರು.

## ರೈಲಿನಲ್ಲಿ ಬೆಂಕಿ ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ (ರಾಮನಗರ):** ಮೈಸೂರು– ಉದಯಪುರ ನಡುವೆ ಸಂಚರಿಸುವ ಹಮ್‌ಸಫರ್ ಎಕ್ಸ್‌ಪ್ರೆಸ್ ರೈಲಿನ ಎಂಜಿನ್‌ನಲ್ಲಿ ಗುರುವಾರ ಬೆಳಿಗ್ಗೆ ತಾಲ್ಲೂಕಿನ ವಂದಾರಗುಪ್ಪೆ ಗೇಟ್ ಬಳಿ ಬೆಂಕಿ ಕಾಣಿಸಿಕೊಂಡಿತು.

ಬೆಂಕಿ ಗಮನಿಸಿದ ಗೇಟ್‌ಮ್ಯಾನ್ ಕೆಂಪು ಬಾವುಟ ಪ್ರದರ್ಶಿಸಿದ್ದರಿಂದ ಲೋಕೊ ಪೈಲಟ್ ತುರ್ತು ಬ್ರೇಕ್ ಹಾಕಿ ರೈಲು ನಿಲ್ಲಿಸಿದರು. ಕೂಗಳತೆ ದೂರದಲ್ಲಿದ್ದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು. ಘಟನೆಯಲ್ಲಿ ಯಾರಿಗೂ ತೊಂದರೆಯಾಗಿಲ್ಲ.

ಎಂಜಿನ್‌ನಲ್ಲಿ ಬೆಂಕಿ ಕಂಡ ಜನ ರೈಲು ನಿಲ್ಲಿಸುವಂತೆ ಜೋರಾಗಿ ಕೂಗಿಕೊಂಡರು. ಇದನ್ನು ಗಮನಿಸದ ಲೋಕೊಪೈಲಟ್ ಮುಂದೆ ಗೇಟ್‌ಮ್ಯಾನ್ ತೋರಿದ ಕೆಂಪು ಬಾವುಟ ಕಂಡು ರೈಲು ನಿಲ್ಲಿಸಿದ. ಎಂಜಿನ್‌ನಲ್ಲಿ ಡೀಸೆಲ್ ಸೋರಿಕೆಯಾಗಿ ಬೆಂಕಿ ಕಾಣಿಸಿಕೊಂಡಿರುವ ಸಾಧ್ಯತೆ ಇದೆ ಎಂದು ರೈಲ್ವೆ ಇಲಾಖೆ ಮೂಲಗಳು ತಿಳಿಸಿವೆ.

## ಈಶ್ವರಪ್ಪ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಆದಾಯ ಮೀರಿ ಅಕ್ರಮ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಅವರ ಪುತ್ರ ಕೆ.ಈ. ಕಾಂತೇಶ್ ಹಾಗೂ ಸೊಸೆ ಶಾಲಿನಿ ವಿರುದ್ಧ ಶಿವಮೊಗ್ಗದ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಶಿವಮೊಗ್ಗದ ವಕೀಲ ಬಿ.ವಿನೋದ್ ಸಲ್ಲಿಸಿದ್ದ ಖಾಸಗಿ ದೂರಿಗೆ ಸಂಬಂಧಿಸಿದಂತೆ, 'ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯ, ಕ್ರಿಮಿನಲ್ ಪ್ರಕರಣ ದಾಖಲಿಸಿ, ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಏಪ್ರಿಲ್ 24ರಂದು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿತ್ತು. ಲೋಕಾಯುಕ್ತ ಡಿವೈಎಸ್‌ಪಿ ಬಿ.ಪಿ. ಚಂದ್ರಶೇಖರ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿತ್ತು.



ಈಶ್ವರಪ್ಪ

ಕಾನೂನು ತಜ್ಞರ ಅಭಿಪ್ರಾಯ ಪಡೆದ ಲೋಕಾಯುಕ್ತ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿಕೊಂಡು ತನಿಖೆಗೆ ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

**ಪ್ರಕರಣವೇನು?:** 'ಈಶ್ವರಪ್ಪ ಅವರು ಜಲಸಂಪನ್ಮೂಲ ಸಚಿವರಾಗಿದ್ದ ಸಂದರ್ಭ ಆದಾಯ ಮೀರಿ ಅಕ್ರಮ ಆಸ್ತಿ ಗಳಿಸಿದ್ದಾರೆ' ಎಂಬುದು ಆರೋಪ. ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13(1)(ಡಿ) ಹಾಗೂ 13(1)(ಇ) ಮತ್ತು ಭಾರತೀಯ ದಂಡ ಸಂಹಿತೆ-1860ರ ಕಲಂ 420ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ದೂರುದಾರ ಬಿ.ವಿನೋದ್ ಅವರು 2016ರಲ್ಲಿ ಸಲ್ಲಿಸಿದ್ದ ಈ ಖಾಸಗಿ ದೂರನ್ನು ಲೋಕಾಯುಕ್ತ ಕೋರ್ಟ್ ವಜಾಗೊಳಿಸಿತ್ತು. ವಜಾ ಆದೇಶವನ್ನು ಪ್ರಶ್ನಿಸಿ ವಿನೋದ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ದೂರಿನ ಮರು ಪರಿಗಣನೆಗೆ ಆದೇಶಿಸಿತ್ತು.

## ಡ್ರಗ್ಸ್ ದಂಧೆಗಾಗಿ ಕಾಲ್ ಸೆಂಟರ್: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ



**ಉಡುಪಿ:** ಮಾದಕ ವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ) 'ಆಪರೇಷನ್ ಮೆಡ್ ಮ್ಯಾಕ್ಸ್' ಹೆಸರಿನಲ್ಲಿ ಈಚೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ಡ್ರಗ್ಸ್ ವ್ಯವಹಾರಕ್ಕಾಗಿ ಮಣಿಪಾಲದಲ್ಲಿ ಕಾಲ್ ಸೆಂಟರ್ ನಡೆಸುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ.

ಮಣಿಪಾಲದ ಹಯಗ್ರೀವ ನಗರದಲ್ಲಿ ಕಾಲ್‌ಸೆಂಟರ್ ನಡೆಸುತ್ತಿದ್ದ ಸುರೇಶ್ ಕುಮಾರ್ ಬಂಧಿತ ಆರೋಪಿ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಈ ಕಾಲ್ ಸೆಂಟರ್‌ನಲ್ಲಿ ಹತ್ತು ಮಂದಿ ಕೆಲಸ ಮಾಡುತ್ತಿದ್ದರು. ಇದು ದೆಹಲಿ ಕೇಂದ್ರಿತ ಡ್ರಗ್ಸ್ ಜಾಲವಾಗಿದ್ದು, ಇದರ ಗ್ರಾಹಕರು ವಿದೇಶಿಯರಾಗಿದ್ದರು. ಉಡುಪಿ ಜಿಲ್ಲೆಯಲ್ಲಿ ಡ್ರಗ್ಸ್ ಮಾರಾಟ ನಡೆದಿಲ್ಲ' ಎಂದು ಹೇಳಿವೆ.

ಮೇ 25ರಂದು ದೆಹಲಿಯಲ್ಲಿ ಇಬ್ಬರು ಬಿ ಫಾರ್ಮಾ ಪದವೀಧರರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಉಡುಪಿಯಲ್ಲಿನ ವ್ಯಕ್ತಿಯ ಮಾಹಿತಿ ಸಿಕ್ಕಿತ್ತು ಎಂದು ಹೇಳಿವೆ. ಅಮೆರಿಕ, ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳಿಗೆ ಇಲ್ಲಿಂದ ಡಗ್ಸ್ ಸಾಗಣೆಯಾದ ಮಾಹಿತಿ ಲಭಿಸಿದೆ ಎಂದೂ ಮೂಲಗಳು ಮಾಹಿತಿ ನೀಡಿದೆ.

# 'ದೆಹಲಿ ಮಾದರಿ ಚಳವಳಿ'

ಒಂದನೇ ಪುಟದಿಂದ..

ರೈತರು ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದಾಗ ಅವರ ಮೇಲೆ ದಬ್ಬಾಳಿಕೆ ನಡೆಸಿದ ಪೊಲೀಸರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರದ ಕರಾಳ ಕಾಯ್ದೆಗಳ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತನ್ನದೇ ಪಕ್ಷ ಅಧಿಕಾರ ಇರುವ ಕರ್ನಾಟಕದಲ್ಲಿ ರೈತರಿಗೆ ನ್ಯಾಯದ ಖಾತ್ರಿ ನೀಡಬೇಕು ಎಂದು ಸುನಿಲಮ್ ಆಗ್ರಹಿಸಿದರು.

ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದು ಪಡಿಸುವುದಾಗಿ ಭರವಸೆ ನೀಡಿ ರೈತರ ಮತ ಪಡೆದು ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಿದ್ದಾರೆ. ಚಳವಳಿಯಿಂದಲೇ ಬಂದಿರುವ ಸಿದ್ದರಾಮಯ್ಯ ಅವರು ಮಾತು ಉಳಿಸಿಕೊಳ್ಳಬೇಕು ಎಂದು ಯುಧ್‌ವೀರ್‌ಸಿಂಗ್ ಒತ್ತಾಯಿಸಿದರು.

ಕೇಂದ್ರದಲ್ಲಿ ರೈತ ಹೋರಾಟಗಾರರನ್ನು ಪ್ರಧಾನಿ ಕಡೆಗಣಿಸಿ 3 ಕರಾಳ ಕಾಯ್ದೆಗಳನ್ನು ಜಾರಿಗೆ ತಂದರು. ರೈತರು ಬಿಸಿಲು, ಮಳೆ, ಚಳಿ ಇದ್ದರೂ, ಪ್ರಾಣ ಕಳೆದುಕೊಂಡರೂ 380 ದಿನ ಹೋರಾಟ ಮಾಡಿ ಸರ್ಕಾರವನ್ನು ಮಣಿಸಿದ್ದರು. ದೇವನಹಳ್ಳಿಯಲ್ಲಿಯೂ ಅಂಥದ್ದೇ ಹೋರಾಟ ಮಾಡಲಾಗುವುದು ಎಂದು ವಿಜು ಕೃಷ್ಣನ್ ತಿಳಿಸಿದರು.

ಸಂಯುಕ್ತ ಹೋರಾಟ ಕರ್ನಾಟಕದ ಪ್ರತಿನಿಧಿಗಳಾದ ಎಚ್‌.ಎಂ. ಬಸವರಾಜಪ್ಪ, ಚುಕ್ಕಿ ನಂಜುಂಡಸ್ವಾಮಿ, ಟಿ. ಯಶವಂತ್, ಸಾಮಾಜಿಕ ಹೋರಾಟಗಾರ ಎಸ್‌.ಆರ್‌. ಹಿರೇಮಠ ಇದ್ದರು.

ರವಿಕುಮಾರ್ ಈಚಲಮರ ಬರೆದಿರುವ ದೇವನಹಳ್ಳಿಯ ರೈತ ಹೋರಾಟದ ಪರಿಚಯ ನೀಡುವ 'ಪ್ರಾಣ ಹೋದರೂ ಭೂಮಿ ಕೊಡೆವು' ಕಿರುಪುಸ್ತಕ ಬಿಡುಗಡೆ ಮಾಡಲಾಯಿತು.

### 'ರೈತರಿಗೆ ಸೂಕ್ತ ಪರಿಹಾರ ಸಿಗಬೇಕು'

'ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಹೈಟೆಕ್ ಡಿಫೆನ್ಸ್, ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ 10 ಗ್ರಾಮಗಳ ವ್ಯಾಪ್ತಿಗೆ ಸೇರಿರುವ 1,282 ಎಕರೆ ಭೂಮಿ ಅಗತ್ಯವಿದೆ. ಆದರೆ, ರೈತರು ಇದಕ್ಕೆ ವಿರೋಧ ವ್ಯಕ್ತಪಡಿಸಿ ಹೋರಾಡುತ್ತಿದ್ದಾರೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೈಗಾರಿಕೆಗಳಿಗೆ ಜಮೀನು ಬೇಕಾಗುತ್ತದೆ. ಭೂಮಿ ಕಳೆದುಕೊಳ್ಳಲಿರುವ ರೈತರಿಗೆ ಹೊಸ ಕಾಯ್ದೆಯನ್ವಯ ಸೂಕ್ತ ಪರಿಹಾರ ನೀಡಲಾಗುವುದು' ಎಂದರು.

'ಕೈಗಾರಿಕಾ ರಂಗದಲ್ಲಿ ತಮಿಳುನಾಡು, ಗುಜರಾತ್, ಒಡಿಶಾ, ಅಸ್ಸಾಂ ಮತ್ತಿತರ ರಾಜ್ಯಗಳಿಂದ ನಮಗೆ ತೀವ್ರ ಸ್ಪರ್ಧೆಯಿದೆ. ಅಲ್ಲೆಲ್ಲ ಉದ್ಯಮಿಗಳಿಗೆ ಏನು ಸೌಲಭ್ಯ ಕೊಡಲಾಗುತ್ತಿದೆ, ಕೈಗಾರಿಕಾ ನೀತಿಗಳು ಹೇಗಿವೆ ಎನ್ನುವುದರ ಅರಿವು ನನಗಿದೆ. ಕೈಗಾರಿಕೆ ಮತ್ತು ಕೃಷಿ ಎರಡೂ ಮುಖ್ಯವಾಗಿದ್ದು, ಸರಿದೂಗಿಸಿಕೊಂಡು ಹೋಗುವ ಕೆಲಸ ಅಗತ್ಯ' ಎಂದು ತಿಳಿಸಿದರು.

### ರಾಜ್ಯ ಸರ್ಕಾರಕ್ಕೆ ಮೇಧಾ ಪಾಟ್ಕರ್ ಪತ್ರ

ದೇವನಹಳ್ಳಿಯಲ್ಲಿ ಹಿಂದೆ 6,000 ಎಕರೆ ಭೂಮಿಯನ್ನು ಕಳೆದುಕೊಂಡವರು ಇಂದಿಗೂ ನರಕಯಾತನೆ ಅನುಭವಿಸುತ್ತಿದ್ದಾರೆ. ಅನೇಕರಿಗೆ ಪರಿಹಾರ ಅಥವಾ ಪುನರ್ವಸತಿ ಪಡೆಯಲು ಸಾಧ್ಯವಾಗಿಲ್ಲ. ಮತ್ತೆ ದೇವನಹಳ್ಳಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಹೊರಟಿರುವುದು ಸರಿಯಲ್ಲ ಎಂದು ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ನಿಮ್ಮ ನೇತೃತ್ವದ ಸರ್ಕಾರವು ಪ್ರಜಾಪ್ರಭುತ್ವ ಮಾದರಿಯನ್ನು ಬದಿಗೆ ಸರಿಸಿ ಈ ರೀತಿ ದಮನಕಾರಿ ನೀತಿ ಅಳವಡಿಸಿಕೊಳ್ಳುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ನಿಮ್ಮ ಸಂಪುಟದ ಸಚಿವರನ್ನು ಮನವೊಲಿಸಿ ರೈತರ ಪರ ನಿರ್ಧಾರ ಕೈಗೊಳ್ಳಿ ಎಂದು ಸುದೀರ್ಘ ಪತ್ರದಲ್ಲಿ ಅವರು ಆಗ್ರಹಿಸಿದ್ದಾರೆ.

## ವಿಜಯೇಂದ್ರ ಬದಲಾವಣೆಗೆ ಮತ್ತೆ ಒತ್ತಡ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಬದಲಾವಣೆ ಮಾಡಬೇಕು ಎಂದು ಪಕ್ಷದ ಸಮಾನ ಮನಸ್ಕರ ಗುಂಪು ವರಿಷ್ಠರ ಮೇಲೆ ಮತ್ತೆ ಒತ್ತಡ ಹೇರಿದೆ.

ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಹಗರಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಹೈಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ ನವದೆಹಲಿಗೆ ಧಾವಿಸಿದ ಸಮಾನ ಮನಸ್ಕರ ಗುಂಪಿನ ನಾಯಕ ಕುಮಾರ್ ಬಂಗಾರಪ್ಪ ಪಕ್ಷದ ಉನ್ನತ ನಾಯಕರ ಭೇಟಿಗೆ ಪ್ರಯತ್ನಿಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸಿಗಲಿಲ್ಲ. ಬಳಿಕ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಮ್ಮ ಅಭಿಪ್ರಾಯಗಳನ್ನು ವರಿಷ್ಠರಿಗೆ ತಲುಪಿಸಲಾಗಿದೆ. ಅವರು ವಸ್ತುಸ್ಥಿತಿ ಅರಿತಿದ್ದಾರೆ. ರಾಜ್ಯದಲ್ಲಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಆಗಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ' ಎಂದರು.

'ಕಾಂಗ್ರೆಸ್ ಸರ್ಕಾರ ಅನೇಕ ತಪ್ಪುಗಳನ್ನು ಮಾಡಿದೆ. ಆದರೆ, ಜನಾಭಿಪ್ರಾಯ, ಜನಾಂದೋಲನ ಮೂಡಿಸಲು ರಾಜ್ಯ ಘಟಕದಿಂದ ಸಹಕಾರ ಸಿಗಲಿಲ್ಲ. ಹಾಗಾಗಿ, ನಾವು ಕೋರ್ಟ್ ಮೊರೆ ಹೋದೆವು' ಎಂದರು.

# ರವಿಕುಮಾರ್ ವಿರುದ್ಧ ಎಫ್‌ಐಆರ್

## ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ಅವಹೇಳನಕಾರಿ ಮಾತು: ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂಬ ಆರೋಪದಡಿ ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.


ರವಿಕುಮಾರ್

ಜೆ.ಪಿ.ನಗರದ ನಿವಾಸಿ, ನಂದಾದೀಪಾ ಮಹಿಳಾ ಸಂಘದ ಅಧ್ಯಕ್ಷೆ ನಾಗರತ್ನ ಅವರು ನೀಡಿದ ದೂರಿನ ಮೇರೆಗೆ ಬಿಎನ್‌ಎಸ್ ಸೆಕ್ಷನ್‌ಗಳಾದ 351(1), 75(3) 79 ಅಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಈ ಸಂಬಂಧ ಎನ್.ರವಿಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.

'ಬಿಜೆಪಿಯಿಂದ ಜುಲೈ 1ರಂದು ವಿಧಾನಸೌಧ ಆವರಣದ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನೆ ವೇಳೆ ರವಿಕುಮಾರ್ ಅವರು ಶಾಲಿನಿ ರಜನೀಶ್ ಅವರ ಕುರಿತು ಅಸಂಸದೀಯ ಪದ ಬಳಸಿ ಮಾತನಾಡಿದ್ದಾರೆ. ಅವರ ಹೇಳಿಕೆಯು ಮುಖ್ಯ ಕಾರ್ಯದರ್ಶಿ ಹುದ್ದೆಗೆ ಅಗೌರವ ತಂದಿದೆ. ಶಾಲಿನಿ ಅವರ ಗೌರವಕ್ಕೆ ಕುಂದು ಉಂಟು ಮಾಡಿ, ಇಡೀ ಮಹಿಳಾ ಕುಲಕ್ಕೆ ಅಗೌರವ ತೋರಿದಂತೆ ಆಗಿದೆ. ರವಿಕುಮಾರ್ ಅವರ ಮಾತು ಲೈಂಗಿಕ ಅರ್ಥ ಕೊಡುವಂತಿದೆ. ಮುಖ್ಯ ಕಾರ್ಯದರ್ಶಿ ಖ್ಯಾತಿಗೆ ಹಾನಿ ಉಂಟು ಮಾಡಿದೆ' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್ ಅವರೂ ಎನ್.ರವಿಕುಮಾರ್ ಅವರ ವಿರುದ್ಧ ಬುಧವಾರ ದೂರು ನೀಡಿದ್ದರು.

### ಆರು ದಿನಗಳಲ್ಲಿ ವರದಿ ನೀಡುವಂತೆ ಪತ್ರ

'ಎನ್.ರವಿಕುಮಾರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು, ಆರು ದಿನಗಳಲ್ಲಿ ವರದಿ ನೀಡುವಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆಯಲಾಗಿದೆ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ರವಿಕುಮಾರ್ ಅವರು ಶಾಲಿನಿ ರಜನೀಶ್ ಕುರಿತು ಅಸಂಸದೀಯ ಹಾಗೂ ಅವಹೇಳನಕಾರಿ ಪದಗಳನ್ನು ಬಳಕೆ ಮಾಡಿರುವುದು ಖಂಡನೀಯ. ಅವರ ಹೇಳಿಕೆಗಳು ಸಮಸ್ತ ಮಹಿಳಾ ಕುಲಕ್ಕೆ ಕುಂದು ತರುವಂತೆ ಇವೆ' ಎಂದು ಹೇಳಿದರು.

'ಆಯೋಗವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ' ಎಂದು ತಿಳಿಸಿದರು.

# ಡಿಕೆಶಿಗೆ ಅವಕಾಶ ಸಿಗಲೆಂದು ಜನ ಬೆಂಬಲ: ಸುರೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಡಿ.ಕೆ. ಶಿವಕುಮಾರ್ ಅವರಿಗೆ ಒಂದು ಬಾರಿ ಅವಕಾಶ ಸಿಗಲಿ ಎಂದು ರಾಜ್ಯದ ಕೆಲವು ಭಾಗದ ಜನರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ. ಆದರೆ, ಈಗ ಮುಖ್ಯಮಂತ್ರಿ ಸೀಟು ಖಾಲಿ ಇಲ್ಲ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.


ಡಿ.ಕೆ. ಸುರೇಶ್

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸ್ಥಾನ ಸದ್ಯಕ್ಕೆ ಖಾಲಿ ಇಲ್ಲ. ಹೀಗಾಗಿ ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಸಿದ್ದರಾಮಯ್ಯ ಅವರು ಹೇಳಿರುವುದರಲ್ಲಿ ತಪ್ಪೇನಿದೆ? ಪಕ್ಷದ ಶಿಸ್ತಿನ ಸಿಪಾಯಿಯಾಗಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ಮಾತಿಗೆ ಬದ್ಧರಾಗಿದ್ದಾರೆ' ಎಂದರು.

'ನನ್ನ ಮುಂದೆ ಯಾವುದೇ ಆಯ್ಕೆ ಇಲ್ಲ' ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಸುರೇಶ್, 'ಅದು ಅಸಹಾಯಕತೆ ಅಲ್ಲ. ಅದು ಪಕ್ಷ ಹಾಗೂ ಅದರ ನಾಯಕತ್ವಕ್ಕೆ ನೀಡುವ ಗೌರವ. ಪಕ್ಷದ ಜವಾಬ್ದಾರಿಯುತ ಸ್ಥಾನದಲ್ಲಿರುವಾಗ ನಾವು ಪಕ್ಷಕ್ಕೆ ಗೌರವ ನೀಡಬೇಕು. ಪಕ್ಷದ ತೀರ್ಮಾನಕ್ಕೆ ಬದ್ಧ ಎಂದು ಶಿವಕುಮಾರ್ ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಹೈಕಮಾಂಡ್ ತೀರ್ಮಾನವನ್ನು ಪಾಲಿಸಿ, ಶಿಸ್ತು ಕಾಪಾಡುವುದು ಅವರ ಕರ್ತವ್ಯ. ಹೀಗಾಗಿ ಅವರು ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ' ಎಂದರು.

'ಡಿ.ಕೆ. ಶಿವಕುಮಾರ್ ಅವರು ಪಕ್ಷಕ್ಕೆ ಬಹಳ ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಅವರು ಮುಖ್ಯಮಂತ್ರಿ ಆಗುವ ಭರವಸೆ, ನಂಬಿಕೆ ಇದೆ. ಈ ವಿಚಾರವನ್ನು ವರಿಷ್ಠರು ತೀರ್ಮಾನಿಸಬೇಕು' ಎಂದೂ ಹೇಳಿದರು.

### 'ಯಾರೇ ಸಿ.ಎಂ ಆದರೂ ಕಾಂಗ್ರೆಸ್‌ನವರೇ'

**ಹನೂರು (ಚಾಮರಾಜನಗರ ಜಿಲ್ಲೆ):** 'ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ, ನಮ್ಮ ಸರ್ಕಾರ ಅವಧಿ ಪೂರೈಸಲಿದೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.


ಚಲುವರಾಯಸ್ವಾಮಿ

ತಾಲ್ಲೂಕಿನ ಚಂಚಳ್ಳಿಯಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಯಾರೇ ಮುಖ್ಯಮಂತ್ರಿಯಾದರೂ ಅವರು ಕಾಂಗ್ರೆಸ್‌ನವರೇ ಆಗಿರುತ್ತಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅನ್ಯೋನ್ಯವಾಗಿದ್ದಾರೆ. ಸಿದ್ದರಾಮಯ್ಯ ಮುಂದುವರಿದರೆ ಡಿಕೆಶಿ ಬೇಜಾರಾಗುವುದಿಲ್ಲ, ಹಾಗೆಯೇ ಶಿವಕುಮಾರ್ ಮುಖ್ಯಮಂತ್ರಿಯಾದರೆ ಸಿದ್ದರಾಮಯ್ಯ ಅವರೂ ಬೇಜಾರಾಗುವುದಿಲ್ಲ' ಎಂದರು.

> ಐದು ವರ್ಷ ತಾವೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ಮುಂದೇನಾಗಲಿದೆ ಎಂಬುದನ್ನು ಕಾದು ನೋಡಿ. ಆಮೇಲೆ ನೀವೇ ಹೇಳುವಿರಂತೆ
> **ಎಚ್.ಎ. ಇಕ್ಬಾಲ್ ಹುಸೇನ್**, ಶಾಸಕ

> ಶಾಸಕರ ಬೆಂಬಲ ಕಡಿಮೆ ಇರುವುದರಿಂದ 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಅವಧಿಯಲ್ಲಿ ಮುಖ್ಯಮಂತ್ರಿ ಆಗೋದು ಕಷ್ಟ. ಅವರು ಉಪ ಮುಖ್ಯಮಂತ್ರಿ ಆಗಿಯೇ ಉಳಿಯುವಂತಿದೆ
> **ಸಿ.ಎಂ. ಲಿಂಗಪ್ಪ**, ಮಾಜಿ ಶಾಸಕ

# ಸಿ.ಎಂ.ಗೆ ಐಎಎಸ್ ಅಧಿಕಾರಿಗಳ ಸಂಘದಿಂದ ಪತ್ರ

**ಬೆಂಗಳೂರು:** 'ರಾಜ್ಯ ಮುಖ್ಯ ಕಾರ್ಯದರ್ಶಿ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿರುವ ವಿಧಾನ ಪರಿಷತ್ತಿನ ಸದಸ್ಯ ಎನ್.ರವಿಕುಮಾರ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿ ಕರ್ನಾಟಕ ಐಎಎಸ್ ಅಧಿಕಾರಿಗಳ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ಗೌರವ್ ಗುಪ್ತ, ಪಂಕಜ್ ಕುಮಾರ್ ಪಾಂಡೆ, ಖುಷ್ಬೂ ಗೋಯಲ್ ಅವರಿದ್ದ ಐಎಎಸ್ ಅಧಿಕಾರಿಗಳ ನಿಯೋಗವು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ.

'ಮುಖ್ಯ ಕಾರ್ಯದರ್ಶಿಯ ವಿರುದ್ಧ ರವಿಕುಮಾರ್ ಸಾರ್ವಜನಿಕವಾಗಿ ತುಚ್ಛ, ಅವಹೇಳನಕಾರಿ ಮತ್ತು ಘನತೆಗೆ ಧಕ್ಕೆ ತರುವಂತಹ ಮಾತುಗಳನ್ನು ಆಡಿದ್ದಾರೆ. ಇದು ಸಾರ್ವಜನಿಕ ಸಂಸ್ಥೆಗಳನ್ನೂ ಅವಹೇಳನ ಮಾಡುವಂತಹ ನಡೆ' ಎಂದು ಸಂಘವು ಆಕ್ಷೇಪಿಸಿದೆ.

'ಇದೇ ರವಿಕುಮಾರ್ ಅವರು ಈ ಹಿಂದೆ ಕಲಬುರಗಿ ಜಿಲ್ಲಾಧಿಕಾರಿ ವಿರುದ್ಧ ಆಧಾರರಹಿತ ಮತ್ತು ಕೋಮುವಾದಿ ಹೇಳಿಕೆ ನೀಡಿದ್ದರು. ಆಗಲೇ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಪತ್ರ ಬರೆದಿದ್ದೆವು. ಆದರೆ ಅವರು ಸರ್ಕಾರಿ ಅಧಿಕಾರಿಗಳ ಸ್ಥೈರ್ಯ ಕುಗ್ಗಿಸುವಂತಹ ನಡೆಯನ್ನು ಮುಂದುವರಿಸಿದ್ದಾರೆ' ಎಂದಿದೆ.

'ರವಿಕುಮಾರ್ ಅವರು ಬೇಷರತ್ ಕ್ಷಮೆ ಕೇಳಬೇಕು. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಜತೆಗೆ ಈ ವಿಚಾರಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನಲ್ಲಿ ನಿರ್ಣಯ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದೆ.

# ಸಿಎಸ್ ಅವಹೇಳನ: ಸಭಾಪತಿಗೆ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಕುರಿತು ಅಸಂಸದೀಯ ಪದಗಳನ್ನು ಬಳಸಿದ್ದಾರೆ ಎಂದು ಆರೋಪಿಸಿ ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ವಿರುದ್ಧ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಗುರುವಾರ ದೂರು ನೀಡಿದರು.


ರವಿಕುಮಾರ್ ವಿರುದ್ಧ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಕಾಂಗ್ರೆಸ್ ಸದಸ್ಯರು ದೂರು ನೀಡಿದರು

ಆ ಬೆನ್ನಲ್ಲೆ, ರವಿಕುಮಾರ್‌ಗೆ ಪತ್ರ ಬರೆದ ಹೊರಟ್ಟಿ, ವಿವರಣೆ ಕೇಳಿದ್ದಾರೆ.

ಆಡಳಿತ ಪಕ್ಷದ ಮುಖ್ಯಸಚೇತಕ ಸಲೀಂ ಅಹಮದ್, ಪರಿಷತ್ ಕಾಂಗ್ರೆಸ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಮಂಜುನಾಥ ಭಂಡಾರಿ, ರಾಮೋಜಿರಾವ್, ಬಿಲ್ಕಿಶ್ ಭಾನು, ಕಾಂಗ್ರೆಸ್ ಮುಖಂಡರಾದ ಎಸ್. ಮನೋಹರ್, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಮತ್ತಿತರರು ಸಭಾಪತಿಯವರನ್ನು ಭೇಟಿ ಮಾಡಿ ದೂರು ಪತ್ರ ನೀಡಿದರು.

'ರವಿಕುಮಾರ್ ಪದೇ ಪದೇ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಲೇ ಇದ್ದಾರೆ. ಇಂತಹ ಹೇಳಿಕೆಗಳನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಅವರು ಈ ರೀತಿ ಮಾತನಾಡುವುದು ಮೊದಲ ಬಾರಿಯಲ್ಲ. ಆದ್ದರಿಂದ, ಅವರನ್ನು ಸದಸ್ಯತ್ವದಿಂದ ಉಚ್ಚಾಟನೆ ಮಾಡಬೇಕು' ಎಂದು ಸಲೀಂ ಅಹಮದ್ ಅವರು ಆಗ್ರಹಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಹೊರಟ್ಟಿ, 'ಈ ಕುರಿತು ಮಾಹಿತಿ ಪಡೆದು ಪರಿಶೀಲನೆ ನಡೆಸುತ್ತೇನೆ. ನನ್ನ ಇತಿಮಿತಿಯಲ್ಲಿ ಏನು ಮಾಡಬಹುದು ಎಂಬುದನ್ನು ನೋಡಿಕೊಂಡು ಬಳಿಕ ಕ್ರಮ ಕೈಗೊಳ್ಳುತ್ತೇನೆ. ತಕ್ಷಣವೇ ರವಿಕುಮಾರ್ ಅವರಿಂದ ಮಾಹಿತಿ ಕೇಳುತ್ತೇನೆ. ಏಕಾಏಕಿ ನಾವು ಯಾವುದೇ ಕ್ರಮ ತೆಗೆದುಕೊಳ್ಳಲು ಆಗುವುದಿಲ್ಲ' ಎಂದರು.

'ರವಿಕುಮಾರ್ ಅವರಿಂದ ಉತ್ತರ ಬಂದ ನಂತರ, ಮುಂದೆ ಏನು ಮಾಡಬೇಕು ಎನ್ನುವುದನ್ನು ನೋಡುತ್ತೇನೆ. ಅವರನ್ನು ಸದಸ್ಯತ್ವದಿಂದ ಕಿತ್ತು ಹಾಕುವ ಹಕ್ಕು ನನಗಿಲ್ಲ. ನಮಗೆ ನಮ್ಮದೇ ಆದ ನಿಯಮಗಳಿವೆ. ಆ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದರು.

### 'ಕ್ಷಮೆ ಕೇಳದಿದ್ದರೆ ಪ್ರತಿಭಟನೆ'

'ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಎನ್. ರವಿಕುಮಾರ್ ತಕ್ಷಣ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಜನರಿಂದ ಪ್ರತಿಭಟನೆ ಎದುರಿಸಬೇಕಾದೀತು' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿ, 'ರಾಜ್ಯ ಬಿಜೆಪಿ ನಾಯಕರಿಂದ ಮಹಿಳೆಯರ ನಿಂದನೆ ನಿರಂತರವಾಗಿ ನಡೆಯುತ್ತಿದೆ. ಹಿರಿಯ ಮಹಿಳಾ ಐಎಎಸ್ ಅಧಿಕಾರಿ ಬಗ್ಗೆ ಕೆಟ್ಟದಾಗಿ ಮಾತನಾಡಿರುವ ರವಿಕುಮಾರ್ ಅವರು ಇಡೀ ಮಹಿಳಾ ಕುಲಕ್ಕೆ ಅವಮಾನ ಮಾಡಿದ್ದಾರೆ' ಎಂದರು.

# ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ಆನ್‌ಲೈನ್ ಆ್ಯಪ್ ಜೂಜಿನಲ್ಲಿ ₹18 ಲಕ್ಷ ಕಳೆದುಕೊಂಡು ಮನನೊಂದಿದ್ದ, ಸರಸ್ವತಿ ನಗರದ ಶಶಿಕುಮಾರ್ ರಿತ್ತಿ (25) ನೇಣು ಹಾಕಿಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಒಂದು ವರ್ಷದಿಂದ ಆನ್‌ಲೈನ್ ಜೂಜು ಆಡುತ್ತಿದ್ದ. ಆರಂಭದಲ್ಲಿ ಹೂಡಿದ್ದ ₹500ಕ್ಕೆ ಕೆಲವೇ ದಿನಗಳಲ್ಲಿ ₹5 ಸಾವಿರ ಸಿಕ್ಕಿತ್ತು. ಸುಲಭವಾಗಿ ಹಣ ಗಳಿಸಲು ಅನೇಕರ ಬಳಿ ಸಾಲ ಮಾಡಿ ₹18 ಲಕ್ಷವನ್ನು ತೊಡಗಿಸಿದ್ದರು. ₹19 ಕೋಟಿ ವಾಪಸ್ ಬಂದಿದ್ದಾಗಿ ಆ್ಯಪ್‌ನಲ್ಲಿ ತೋರಿಸುತ್ತಿತ್ತು. ಆದರೆ, ಅದು ತನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗದಿರುವುದರಿಂದ ಮನನೊಂದಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

# ಕಾಂಗ್ರೆಸ್ ಸರ್ಕಾರದಿಂದ 'ಟ್ರ್ಯಾಪ್' ರಾಜಕಾರಣ: ನಿಖಿಲ್ ಆರೋಪ

ಪ್ರಜಾವಾಣಿ ವಾರ್ತೆ

**ಬೀದರ್:** 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ವಿರೋಧ ಪಕ್ಷದವರನ್ನು 'ಟ್ರ್ಯಾಪ್' ಮಾಡುತ್ತಿದೆ. 'ಮನಿ ಟ್ರ್ಯಾಪ್', 'ಹನಿ ಟ್ರ್ಯಾಪ್' ಹಾಗೂ 'ತೆರಿಗೆ ಟ್ರ್ಯಾಪ್'ನಲ್ಲೂ ತೊಡಗಿದೆ. ಟ್ರ್ಯಾಪ್ ರಾಜಕಾರಣ ಮಾಡುತ್ತಿದೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದರು.

ನಗರದಲ್ಲಿ ಗುರುವಾರ ಏರ್ಪಡಿಸಿದ್ದ ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನ ಮತ್ತು ಪಕ್ಷದ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿದ ಅವರು, 'ಇದಕ್ಕೆ ಯಾರಾದರೂ ಆಡಳಿತ ಅಂತಾರಾ? ರಾಜ್ಯದಲ್ಲಿ ಎಂದೂ ಈ ರೀತಿ ನಡೆದಿರಲಿಲ್ಲ' ಎಂದು ದೂರಿದರು.

'ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆರೋಗ್ಯ ಸರಿ ಇಲ್ಲ. ಜೆಡಿಎಸ್‌ಗೆ ಭವಿಷ್ಯ ಇಲ್ಲ ಎಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ. ಆದರೆ, ಅವರಿಗೆ ಕನ್ನಡಿಗರ ಆಶೀರ್ವಾದ ಇದೆ. ಅವರ ಆರೋಗ್ಯದ ಬಗ್ಗೆ ಕಾಂಗ್ರೆಸ್ಸಿಗರು ತಲೆಕೆಡಿಸಿಕೊಳ್ಳಬೇಕಿಲ್ಲ. ಜೆಡಿಎಸ್ ಪಕ್ಷವನ್ನು ಯಾವ ಕಾಂಗ್ರೆಸ್ಸಿಗರಿಂದ ಏನೂ ಮಾಡಲಿಕ್ಕೆ ಆಗುವುದಿಲ್ಲ' ಎಂದರು.

# ಸಿನಿಮಾ ರಂಜನೆ

# 'ನಾಯಕನಾಗಿ ಎಲ್ಲರಿಗೂ ಯಶಸ್ಸು ಸಿಗುವುದಿಲ್ಲ'


ಯಶ್ ಶೆಟ್ಟಿ

ಯಶ್ ಶೆಟ್ಟಿ ಅಭಿನಯದ 'ಜಂಗಲ್ ಮಂಗಲ್' ಇಂದು(ಜು.4) ತೆರೆ ಕಾಣುತ್ತಿದೆ. ಒಂದು ದಶಕದಿಂದ ಚಿತ್ರರಂಗದಲ್ಲಿ ಪೋಷಕ, ಖಳನಟನಾಗಿ ಗುರುತಿಸಿಕೊಂಡಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

● ವಿನಾಯಕ ಕೆ.ಎಸ್.

**● ಚಿತ್ರದಲ್ಲಿ ನಿಮ್ಮ ಪಾತ್ರವೇನು?**

'ಪ್ರವೀಣ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ದಕ್ಷಿಣ ಕನ್ನಡದ ಯುವಕ. ಬಿಸಿನೆಸ್ ನಡೆಸುತ್ತ ಇರುತ್ತಾನೆ. ಕೋವಿಡ್ ಸಮಯದಲ್ಲಿ ಉದ್ಯಮದಿಂದ ನಷ್ಟವಾಗುತ್ತದೆ. ಪ್ರೀತಿಯ ಬಲೆಯಲ್ಲಿ ಬಿದ್ದ ಆತ, ಸೋಲಿನ ಈ ಹತಾಶೆ ಮರೆಯಲು ತನ್ನ ಹುಡುಗಿಯನ್ನು ಕರೆದುಕೊಂಡು ಪ್ರವಾಸ ಹೋಗುತ್ತಾನೆ. ಆಗ ಏನಾಗುತ್ತದೆ ಎಂಬುದೇ ಚಿತ್ರದ ಕಥೆ.

**● ಮಂಗಳೂರಿಗೆ ಸೀಮಿತವಾಗಿರುವ ಸಿನಿಮಾವೇ?**

ಪ್ರೇಮಿಗಳಿಬ್ಬರು ಕಾಡಿನಲ್ಲಿ ಸಿಲುಕಿಕೊಳ್ಳುವ ಕಥೆ. ಕುಕ್ಕೆ ಸುಬ್ರಹ್ಮಣ್ಯದ ಬಳಿ ದಟ್ಟ ಕಾಡಿನಲ್ಲಿ ಚಿತ್ರೀಕರಣ ನಡೆದಿದೆ. ಹಾಗಂತ ಇದು ದಕ್ಷಿಣ ಕನ್ನಡಕ್ಕಷ್ಟೇ ಸೀಮಿತವಾದ ಕಥೆಯಲ್ಲ. ನಾವು ಆಗಾಗ ಮಲಯಾಳ ಸಿನಿಮಾಗಳನ್ನು ಹೊಗಳುತ್ತಿರುತ್ತೇವೆ. ಅಂಥದ್ದೆ ವಿಭಿನ್ನ ಜಾನರ್‌ನ ಕಥೆ. ಬಲ ರಾಜವಾಡಿ, ಉಗ್ರಂ ಮಂಜು, ಹರ್ಷಿತಾ ಚಂದ್ರಶೇಖರ್ ಹೊರತಾಗಿ ಉಳಿದವರು ಸ್ಥಳೀಯ ಕಲಾವಿದರು. ಪುತ್ತೂರು ಸುತ್ತಮುತ್ತಲಿನ ಪ್ರಾದೇಶಿಕ ಸೊಗಡನ್ನು ನಿರ್ದೇಶಕರು ತುಂಬ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಉತ್ತಮ ಸಿನಿಮಾಗಳು ಸೋಲುವುದಿಲ್ಲ. ಏನೋ ಒಂದು ಕೊರತೆ ಇರುತ್ತದೆ. ಈ ಚಿತ್ರದಲ್ಲಿ ಆ ರೀತಿ ಯಾವ ಕೊರತೆಯೂ ಇಲ್ಲದಂತೆ ಎಚ್ಚರವಹಿಸಿದ್ದೇವೆ. ಚಿತ್ರದ ಅವಧಿಯೇ 90 ನಿಮಿಷ. ಹೀಗಾಗಿ ಜನ ಕೈಹಿಡಿಯುತ್ತಾರೆ ಎಂಬ ಭರವಸೆಯಿದೆ.

**● ಈತನಕದ ಸಿನಿಪಯಣ ಹೇಗಿತ್ತು?**

ನಾನು ಮೂಲತಃ ರಂಗಭೂಮಿ ಕಲಾವಿದ. ಉಡುಪಿಯಲ್ಲಿ ರಂಗ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದೆ. ನಂತರ ನೀನಾಸಂನಲ್ಲಿ ಒಂದು ವರ್ಷ ತರಬೇತಿ ಪಡೆದೆ. ಅದಾದ ಬಳಿಕ ದೆಹಲಿಯ ಎನ್.ಎಸ್.ಡಿಯಲ್ಲಿ ಮೂರು ವರ್ಷ ನಟನೆಯನ್ನೇ ಕಲಿತೆ. ಅಲ್ಲಿಂದ ಬಂದು ಮುಂಬೈನಲ್ಲಿ ಅಭಿನಯ ಕಲಿಸಿಕೊಡುತ್ತಿದ್ದೆ. 2014ರಲ್ಲಿ 'ಜ್ವಲಂತಂ' ಚಿತ್ರದಿಂದ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟೆ. ಈತನಕ 80ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವೆ. ಪೋಷಕ ನಟನಾಗಿ, ಖಳನಾಯಕನಾಗಿ ನಟಿಸಿದ್ದೇ ಹೆಚ್ಚು. 'ಸಲಗ' ವೃತ್ತಿ ಜೀವನಕ್ಕೆ ಬ್ರೇಕ್ ನೀಡಿದ ಸಿನಿಮಾ. 'ಸೂಜಿದಾರ' ಚಿತ್ರದಿಂದ ನಾಯಕನಾದೆ. ಸಿನಿಮಾ ಹಿಟ್ ಆಗಲಿಲ್ಲ. ಆದರೆ ಉತ್ತಮ ಪ್ರತಿಕ್ರಿಯೆ ಬಂತು. ಹಿಂದಿಯ ವೆಬ್ ಸಿರೀಸ್‌ನಲ್ಲಿ ನಟಿಸಿದೆ.

**● ನಾಯಕನಾಗಿಯೇ ಮುಂದುವರಿಯುವ ಹಂಬಲವಿದೆಯಾ?**

ಎಲ್ಲರೂ ನಾಯಕನಾಗಿ ಯಶಸ್ಸು ಗಳಿಸಲು ಸಾಧ್ಯವಿಲ್ಲ. ರಂಗಭೂಮಿಯಿಂದ ಬಂದ ನನಗೆ ಈ ಸತ್ಯ ಚೆನ್ನಾಗಿ ಗೊತ್ತು. ಪ್ರಕಾಶ್ ರಾಜ್, ಅಚ್ಯುತ್ ಕುಮಾರ್, ಕೆ.ಕೆ.ಮೆನನ್, ರಂಗಾಯಣ ರಘು ಮುಂತಾದವರು ಪೋಷಕ ನಟರಾಗಿ ಚಿತ್ರಕ್ಕೆ ಶಕ್ತಿ ನೀಡುತ್ತಾರೆ. ಯಾವ ಪಾತ್ರವಾದರೂ ಅದಕ್ಕೆ ಜೀವ ತುಂಬುತ್ತಾರೆ. ನಾನು ಅದೇ ಹಾದಿಯಲ್ಲಿ ಯೋಚಿಸುತ್ತೇನೆ. 'ಸೂಜಿದಾರ'ದ ಬಳಿಕ ನಾಯಕನಾಗಿ ಒಂದಷ್ಟು ಕಥೆಗಳು ಬಂದವು. ಆದರೆ ಒಪ್ಪಿಕೊಳ್ಳಲಿಲ್ಲ. 'ಕೆಡಿ' ಚಿತ್ರದಲ್ಲಿ ಉತ್ತಮ ಪಾತ್ರ ಮಾಡುತ್ತಿದ್ದೇನೆ. ರೆಟ್ರೊ ಲುಕ್‌ನ ಪಾತ್ರ. ಸಾಕಷ್ಟು ದೊಡ್ಡ ಕಲಾವಿದರ ಜತೆ ನಟಿಸುವ ಅವಕಾಶ ಲಭಿಸಿದೆ. ಹೀಗಾಗಿ ವರ್ಷಪೂರ್ತಿ ಆ ಪಾತ್ರಕ್ಕೆ ನೀಡಿರುವೆ. 'ಜಂಗಲ್ ಮಂಗಲ್' ಕಥೆ ತುಂಬ ಚೆನ್ನಾಗಿದೆ. ನಿರ್ದೇಶಕ ರಕ್ಷಿತ್ ಚಿತ್ರಕಥೆ ಬಹಳ ಚೆನ್ನಾಗಿದೆ. ಇಲ್ಲಿ ಕಥೆಯೇ ನಾಯಕ. ಹೀಗಾಗಿ ಒಪ್ಪಿಕೊಂಡೆ.

**● ಇಷ್ಟು ವರ್ಷಗಳ ಪಯಣದಲ್ಲಿ ಸವಾಲು ಎನಿಸಿದ್ದೇನು?**

ಸರಿಯಾದ ಕೌಟಂಬಿಕ ಹಿನ್ನೆಲೆ ಇಲ್ಲದೆ ಪ್ರತಿಭೆಯೊಂದರಿಂದಲೇ ಯಶಸ್ಸು ಗಳಿಸುವುದು ಚಿತ್ರರಂಗದಲ್ಲಿ ಕಷ್ಟ. ಯಶಸ್ಸಿಗಾಗಿ ಸಾಕಷ್ಟು ಕಾಯಬೇಕು. ಜರ್ನಿ ಮಾಡಬೇಕು. ಆ ತಾಳ್ಮೆ ಬೇಕು. ಒಮ್ಮೆ ಹೆಸರು ಮಾಡುವುದೇ ಸವಾಲು. ಒಮ್ಮೆ ಹೆಸರು ಗಳಿಸಿದರೆ ಅವಕಾಶಗಳು ತಾನಾಗಿಯೇ ಬರುತ್ತವೆ. ಪ್ರತಿಭೆ ಇದ್ದರೆ ಸಾಲದು, ಜತೆಗೆ ನಮ್ಮ ವರ್ತನೆಯೂ ಮುಖ್ಯ. ನಾವು ತಂಡಕ್ಕೆ ವಿಧೇಯರಾಗಿದ್ದರೆ ಮಾತ್ರ ಆ ತಂಡದ ಮುಂದಿನ ಸಿನಿಮಾಗಳಲ್ಲಿಯೂ ಅವಕಾಶ ಸಿಗುತ್ತದೆ. 'ಸಲಗ' ಚಿತ್ರದವರೆಗೂ ಸಾಕಷ್ಟು ಸೈಕಲ್ ಹೊಡೆದೆ. ಅಲ್ಲಿಂದ ಬಳಿಕ ಅದೃಷ್ಟ ಬದಲಾಯಿತು.

**● ನಿಮ್ಮ ಮುಂದಿನ ಸಿನಿಮಾಗಳು?**

ಅಖಿಲ್ ಅಕ್ಕಿನೇನಿ ಜತೆ ತೆಲುಗಿನ 'ಲೆನಿನ್' ಚಿತ್ರದಲ್ಲಿ ನಟಿಸುತ್ತಿರುವೆ. 'ತಲ್ವಾರ್ ಪೇಟೆ', 'ಕರಿಕಾಡ', 'ವಿರಾಟ ಪರ್ವ' ಸೇರಿದಂತೆ ಕನ್ನಡದಲ್ಲಿ ಒಂದಷ್ಟು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ.

## 'ಉಸಿರಿ'ನ ಹಿಂದೆ ತಿಲಕ್


ತಿಲಕ್, ಪ್ರಿಯಾ ಹೆಗ್ಡೆ

**ನಟ ತಿಲಕ್**, ಪ್ರಿಯಾ ಹೆಗ್ಡೆ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ 'ಉಸಿರು' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರಕ್ಕೆ ಪ್ರಭಾಕರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

'ನಿರ್ದೇಶನ ನನ್ನ ಹನ್ನೆರಡು ವರ್ಷಗಳ ಕನಸು. ಒಂದೆರಡು ತಮಿಳು ಸಿನಿಮಾಗಳಿಗೆ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದು, ಇದು ನನ್ನ ನಿರ್ದೇಶನದ ಪ್ರಥಮ ಚಿತ್ರ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದು, ಪೋಸ್ಟ್ ಪ್ರೊಡಕ್ಷನ್ ಅಂತಿಮ ಹಂತದಲ್ಲಿದೆ. ಪೊಲೀಸ್ ಅಧಿಕಾರಿಯೊಬ್ಬ ತನ್ನ ಹೆಂಡತಿಯನ್ನು ಆತಂಕಕಾರಿ ವ್ಯಕ್ತಿಯಿಂದ ಹೇಗೆ ಕಾಪಾಡಿಕೊಳ್ಳುತ್ತಾನೆ ಎಂಬುದೇ ಚಿತ್ರಕಥೆ. ಯಾವ ಪಾತ್ರವೂ ಸುಮ್ಮನೆ ಬಂದು ಹೋಗುವುದಿಲ್ಲ. ಗಂಡನ ಪ್ರೀತಿ, ಸ್ನೇಹ, ಸಂಬಂಧ ಹೀಗೆ ಎಲ್ಲಾ ರೀತಿಯ ಕಂಟೆಂಟ್ ಚಿತ್ರದಲ್ಲಿದ್ದು, 07.08.09 ಎಂಬ ಟ್ಯಾಗ್‌ಲೈನ್ ಚಿತ್ರಕ್ಕಿದೆ. ತಿಲಕ್ ಪೊಲೀಸ್ ಅಧಿಕಾರಿಯಾಗಿದ್ದು, ಅವರ ಪತ್ನಿಯ ಪಾತ್ರದಲ್ಲಿ ಪ್ರಿಯಾ ಹೆಗ್ಡೆ ನಟಿಸಿದ್ದಾರೆ. ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಮೂಡಿಗೆರೆ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಲಾಗಿದೆ' ಎಂದರು ನಿರ್ದೇಶಕರು. ಆರ್.ಎಸ್.ಪಿ.ಪ್ರೊಡಕ್ಷನ್ಸ್ ಮೂಲಕ ಲಕ್ಷ್ಮಿ ಹರೀಶ್ ಬಂಡವಾಳ ಹೂಡಿದ್ದಾರೆ. ಆರ್.ಎಸ್.ಗಣೇಶ್ ನಾರಾಯಣನ್ ಸಂಗೀತವಿದೆ. ಸಂತೋಷ್, ಅಪೂರ್ವ, ಅರುಣ್ ಮುಂತಾದವರು ಚಿತ್ರದಲ್ಲಿದ್ದಾರೆ.

## ಸೆಟ್ಟೇರಿತು '...ದೆವ್ವದ ಕಥೆ'

**ಕೌರವ ವೆಂಕಟೇಶ್** ನಾಯಕನಾಗಿ ನಟಿಸುತ್ತಿರುವ 'ಒಂದು ಸುಂದರ ದೆವ್ವದ ಕಥೆ' ಚಿತ್ರ ಸೆಟ್ಟೇರಿದೆ. ಹಿರಿಯ ನಟಿ ಲೀಲಾವತಿ ಅವರ ಸ್ಮಾರಕದ ಮುಂದೆ ಮೊದಲ ದೃಶ್ಯಕ್ಕೆ ನಟ ವಿನೋದ್ ರಾಜ್ ಅವರು ಕ್ಲಾಪ್ ಮಾಡಿದರು. ಎಂ.ಆರ್. ಕಪಿಲ್ ಚಿತ್ರ ನಿರ್ದೇಶಿಸುತ್ತಿದ್ದಾರೆ.

'35 ವರ್ಷಗಳ ಹಿಂದೆ ನಾನು ಕೌರವ ವೆಂಕಟೇಶ್ ಅವರ ವಿದ್ಯಾರ್ಥಿ ಆಗಿದ್ದೆ. ಈಗ ಅವರ ಸಿನಿಮಾ ನಿರ್ದೇಶಿಸುವ ಅವಕಾಶ ದೊರೆತಿದೆ. ಇದೊಂದು ವಿಭಿನ್ನ ಶೀರ್ಷಿಕೆ, ಸಿನಿಮಾದಲ್ಲೂ ವಿಭಿನ್ನತೆಯಿದೆ. ಶಿಕ್ಷಣ ಕುರಿತು ಒಂದು ಗಟ್ಟಿಯಾದ ಕಥೆಯಿದೆ. ವಿದ್ಯಾರ್ಥಿಗಳಿಗೆ ಓದು ಮುಖ್ಯವೇ ಅಥವಾ ಅಧಿಕಾರಿಗಳಿಗೆ ಲಂಚ ಮುಖ್ಯವೇ ಎಂಬ ಕುರಿತು ಒಂದು ಸಂದೇಶವಿದೆ. ನಾಯಕ ಓರ್ವ ಸೆಕ್ಯೂರಿಟಿ ಗಾರ್ಡ್ ಆಗಿದ್ದು, ಆತನ ಸುತ್ತವೇ ಕಥೆ ಸಾಗುತ್ತದೆ. ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗುವುದು' ಎಂದರು ನಿರ್ದೇಶಕರು.

ಧರಣಿ ಚಿತ್ರದ ನಾಯಕಿ. ಆರ್ಯ ಫಿಲ್ಮ್ಸ್ ಲಾಂಛನದಲ್ಲಿ ಆರ್.ಲಕ್ಷ್ಮಿನಾರಾಯಣಗೌಡ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಕಪಿಲ್ ನಿರ್ದೇಶನದ ಹತ್ತನೇ ಚಿತ್ರವಿದು.

'ಇದುವರೆಗೆ ಸಾಕಷ್ಟು ಚಿತ್ರಗಳಿಗೆ ತಂತ್ರಜ್ಞನಾಗಿ ಕೆಲಸ ಮಾಡಿದ್ದೇನೆ. ಈಗ ನಾಯಕನಾಗುತ್ತಿದ್ದೇನೆ. ವಂಚನೆಗೊಳಗಾದ ಹೆಣ್ಣುಮಕ್ಕಳಿಗೆ ಹೇಗೆ ನ್ಯಾಯ ಕೊಡಿಸುತ್ತೇನೆ ಎನ್ನುವುದೇ ಮುಖ್ಯಕಥೆ' ಎಂದರು ಕೌರವ ವೆಂಕಟೇಶ್.

ಸಾಯಿಕೃಷ್ಣ ಹೆಬ್ಬಾಳ ಅವರ ಚಿತ್ರಕಥೆ, ಸಂಭಾಷಣೆ, ಹರ್ಷ ಕೊಗೋಡ್ ಸಂಗೀತ, ಶಂಕರ್ ಆರಾಧ್ಯ ಛಾಯಾಚಿತ್ರಗ್ರಹಣ, ವಿನಯ ಜಿ.ಆಲೂರು ಸಂಕಲನ ಚಿತ್ರಕ್ಕಿದೆ. ಸುರೇಶ್ ಮುರಳಿ, ವಿಕ್ಟರಿ ದಯಾಳನ್, ನಾರಾಯಣಸ್ವಾಮಿ, ವಿಕ್ಟರಿ ವಾಸು ಮುಂತಾದವರು ಚಿತ್ರದಲ್ಲಿದ್ದಾರೆ.


ಚಿತ್ರದ ಮುಹೂರ್ತ ಸಮಾರಂಭ

# ಆರು ಚಿತ್ರಗಳು ತೆರೆಗೆ

'ಜಂಗಲ್ ಮಂಗಲ್' ಸೇರಿದಂತೆ ಆರು ಚಿತ್ರಗಳು ಇಂದು(ಜು.4) ತೆರೆ ಕಾಣುತ್ತಿವೆ.

### ತಪಸ್ಸಿ

ಕ್ರೇಜಿಸ್ಟಾರ್ ರವಿಚಂದ್ರನ್ ವಿಶೇಷ ಪಾತ್ರದಲ್ಲಿ ನಟಿಸಿರುವ ಚಿತ್ರವಿದು. ಮಹಿಳಾ ಪ್ರಧಾನ ಈ ಚಿತ್ರಕ್ಕೆ ಸ್ಪೆನ್ಸರ್ ಮ್ಯಾಥ್ಯೂ ನಿರ್ದೇಶನವಿದೆ. ಬೆಂಗಳೂರು ಮೂವೀಸ್ ಲಾಂಛನದಲ್ಲಿ ನಿರ್ಮಾಣಗೊಂಡಿದೆ.

ಅಮೈರಾ ಗೋಸ್ವಾಮಿ ನಾಯಕಿಯಾಗಿ ನಟಿಸಿದ್ದಾರೆ. ಭಾಸ್ಕರ್, ಅನುಷಾ ಕಿಣಿ, ಅಥರ್ವ, ಸಚಿನ್, ಗುಬ್ಬಿ ನಟರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಿರ್ದೇಶಕ ಸ್ಪೆನ್ಸರ್ ಮ್ಯಾಥ್ಯೂ ಅವರೇ ಛಾಯಾಗ್ರಹಣ ಹಾಗೂ ಕಲಾ ನಿರ್ದೇಶನವನ್ನೂ ಮಾಡಿದ್ದು, ಅರುಣ್ ಪಿ ಥಾಮಸ್ ಸಂಕಲನವಿದೆ. ಆರವ್ ರಾಶಿಕ್ ಹಿನ್ನೆಲೆ ಸಂಗೀತ ನೀಡಿದ್ದಾರೆ.


ತಪಸ್ಸಿ ಚಿತ್ರದ ದೃಶ್ಯ

### ಕ್ಯಾಪಿಟಲ್ ಸಿಟಿ

ನಟ ರವಿಶಂಕರ್ ಪ್ರಮುಖ ಪಾತ್ರದಲ್ಲಿದ್ದಾರೆ. ಆರ್. ಅನಂತರಾಜು ನಿರ್ದೇಶನದಲ್ಲಿ ರಾಜೀವ್ ರೆಡ್ಡಿ ನಾಯಕನಾಗಿ ನಟಿಸಿದ್ದಾರೆ.

'ಇದು ನನ್ನ ನಿರ್ದೇಶನದ ಹನ್ನೊಂದನೇ ಚಿತ್ರ. ರವಿಶಂಕರ್ ಅವರು ಬಹಳ ವರ್ಷಗಳ ಪರಿಚಯ. ಆದರೆ ಅವರ ಜತೆಗೆ ಕೆಲಸ ಮಾಡಿರುವುದು ಇದೇ ಮೊದಲು. ಬೆಂಗಳೂರು ಭೂಗತ ಜಗತ್ತಿನ ಸುತ್ತ ನಡೆಯುವ ಕಥೆ. 90ರ ಕಾಲಘಟ್ಟದ ಕಥೆಯೂ ಹೌದು. ತೊಂದರೆಗೀಡಾದ ನಾಯಕ ಹೇಗೆ ತನ್ನ ಕಷ್ಟವನ್ನು ನಿಭಾಯಿಸಿಕೊಂಡು ಬರುತ್ತಾನೆ ಎನ್ನುವುದೇ ಪ್ರಮುಖ ಕಥಾಹಂದರ. ಆ್ಯಕ್ಷನ್ ಚಿತ್ರ ಎನಿಸಿದರೂ, ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿವೆ' ಎಂದಿದ್ದಾರೆ ನಿರ್ದೇಶಕರು.

ಪ್ರೇರಣಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಸುಮನ್, ಶರತ್ ಲೋಹಿತಾಶ್ವ, ಕೆ.ಎಸ್.ಶ್ರೀಧರ್ ಮುಂತಾದವರು ಚಿತ್ರದಲ್ಲಿದ್ದಾರೆ. ನಾಗ್ ಸಂಗೀತ, ಪ್ರದೀಪ್ ಛಾಯಾಚಿತ್ರಗ್ರಹಣವಿದೆ.


ಪ್ರೇರಣಾ

### ಕಪಟ ನಾಟಕ ಸೂತ್ರಧಾರಿ

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ಧೀರಜ್ ಎಂ.ವಿ ಈ ಚಿತ್ರದ ನಿರ್ದೇಶಕ.

'ಸಮಾಜಕ್ಕೆ ಕನ್ನಡಿ ಹಿಡಿಯುವ ಕಥೆ. ಇಲ್ಲಿ ಹಾಸುಹೊಕ್ಕಾಗಿರುವ ತಾರತಮ್ಯ, ಶೋಷಣೆಗಳ ಕುರಿತಾಗಿ ಚಿತ್ರ ಬೆಳಕು ಚೆಲ್ಲುತ್ತದೆ. ರಾಜಕೀಯ ವಿಡಂಬನೆಯಿದೆ. ಬಹುಪಾಲು ಚಿತ್ರೀಕರಣ ಒಂದು ಸಾವಿರ ವರ್ಷಗಳಷ್ಟು ಪುರಾತನ ಇತಿಹಾಸ ಹೊಂದಿರುವ ಉತ್ತರ ಕರ್ನಾಟಕದ ದೇವಸ್ಥಾನವೊಂದರ ಆವರಣದಲ್ಲಿ ನಡೆದಿದೆ. ದೇವಸ್ಥಾನದ ಹೆಸರನ್ನು ಉದ್ದೇಶಪೂರ್ವಕವಾಗಿ ಬಹಿರಂಗಪಡಿಸುತ್ತಿಲ್ಲ' ಎಂದು ಧೀರಜ್ ಎಂ.ವಿ ತಿಳಿಸಿದ್ದಾರೆ.

ವಿಎಸ್‌ಕೆ ಸಿನಿಮಾಸ್ ಚಿತ್ರವನ್ನು ನಿರ್ಮಿಸಿದೆ. ಧೀರಜ್, ಅಭಿರಾಮ ಅರ್ಜುನ ಪ್ರಮುಖ ಪಾತ್ರಗಳಲ್ಲಿದ್ದಾರೆ. ನೂರಕ್ಕೂ ಹೆಚ್ಚು ಮಂದಿ ಕಲಾವಿದರು ಈ ಚಿತ್ರದ ತಾರಾಗಣದಲ್ಲಿದ್ದಾರೆ. ವೀರೇಶ್ ಎನ್.ಟಿ.ಎ ಛಾಯಾಚಿತ್ರಗ್ರಹಣ, ಪ್ರಸನ್ನ ಕುಮಾರ್ ಎಂ.ಎಸ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.


ಕಿಶನ್, ತನಿಷಾ ಕುಪ್ಪಂಡ

### ಪೆನ್‌ಡ್ರೈವ್

ಮಾಲಾಶ್ರೀ ಪ್ರಮುಖ ಪಾತ್ರದಲ್ಲಿದ್ದು, ತನಿಷಾ ಕುಪ್ಪಂಡ ಹಾಗೂ ಕಿಶನ್ ನಟನೆಯ ಚಿತ್ರವಿದು. ಸೆಬಾಸ್ಟಿನ್ ಡೇವಿಡ್ ನಿರ್ದೇಶನವಿದೆ. ಎನ್.ಹನುಮಂತರಾಜು ಹಾಗೂ ಲಯನ್ ಎಸ್.ವೆಂಕಟೇಶ್ ಬಂಡವಾಳ ಹೂಡಿದ್ದಾರೆ.

'ಪೆನ್‌ಡ್ರೈವ್', ಕಳೆದ ವರ್ಷ ರಾಜ್ಯದಲ್ಲಿ ಸಾಕಷ್ಟು ಸದ್ದು ಮಾಡಿದ ಪದ. ನಮ್ಮ ಚಿತ್ರಕ್ಕೆ ಈ ಶೀರ್ಷಿಕೆಯಿಟ್ಟ ಮೇಲೆ ಅನೇಕ ಅನಾಮಧೇಯ ಕರೆಗಳನ್ನು ಸ್ವೀಕರಿಸಿದ್ದೇನೆ. ಈ ಶೀರ್ಷಿಕೆ ಇಟ್ಟಿದ್ದು ಏಕೆ? ಎಂಬ ಪ್ರಶ್ನೆಯನ್ನು ಸಾಕಷ್ಟು ಜನ ಕೇಳಿದ್ದಾರೆ. ಸಾಕಷ್ಟು ಅಡೆತಡೆಗಳನ್ನು ದಾಟಿ ಚಿತ್ರ ಬಿಡುಗಡೆಯಾಗುತ್ತಿದೆ' ಎಂದಿದ್ದಾರೆ ನಿರ್ದೇಶಕರು.

ತನಿಷಾ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ವಿ.ನಾಗೇಂದ್ರಪ್ರಸಾದ್ ಸಂಗೀತ, ಪಿ.ವಿ.ಆರ್. ಸ್ವಾಮಿ ಛಾಯಾಚಿತ್ರಗ್ರಹಣವಿದೆ.

### ಹೆಬ್ಬುಲಿ ಕಟ್

**ಉತ್ತರ ಕರ್ನಾಟಕದ** ಪ್ರತಿಭೆಗಳೇ ಸೇರಿ ನಿರ್ಮಿಸಿರುವ ಈ ಚಿತ್ರವನ್ನು ನೀನಾಸಂ ಸತೀಶ್ ಪ್ರೆಸೆಂಟ್ ಮಾಡುತ್ತಿದ್ದಾರೆ. ಭೀಮರಾವ್ ಪೈದೊಡ್ಡಿ ನಿರ್ದೇಶನವಿದೆ.

'ನನಗೆ ಸಿನಿಮಾ ಜಾಸ್ತಿ ಕನೆಕ್ಟ್ ಆಗುತ್ತದೆ. ನಾನು ಚಿತ್ರ ನೋಡಿದ್ದೇನೆ. ಮೊದಲ ಬಾರಿಗೆ ಪೂರ್ಣಚಂದ್ರ ತೇಜಸ್ವಿ ಫೋನ್ ಮಾಡಿ ಹೆಬ್ಬುಲಿ ಕಟ್ ಸಿನಿಮಾ ಇದೆ ನೋಡಬೇಕು. ಸಾಧ್ಯವಾದರೆ ಜೊತೆಯಲಿ ನಿಂತುಕೊಳ್ಳಿ ಎಂದರು. ಸಿನಿಮಾ ನೋಡ್ತಾ ನೋಡ್ತಾ ಸೆಳೆಯಿತು. ಮೊದಲ ಭಾಗ ಮುಗಿಸುವಷ್ಟರಲ್ಲಿ ಎದೆ ಭಾರವಾಯ್ತು. ಸೆಕೆಂಡ್ ಹಾಫ್ ಮುಗಿಸಿದಾಗ ಕಡೆ 20 ನಿಮಿಷ ಉಸಿರಾಡಲು ಕಷ್ಟವಾಯಿತು. ಸಿನಿಮಾ ಅಲ್ಲಿಗೆ ತೆಗೆದುಕೊಂಡು ಹೋಯಿತು. ಭಯ, ತಳಮಳ ಶುರುವಾಯ್ತು. ಜನ ಈ ರೀತಿ ಸಿನಿಮಾ ಹೇಗೆ ಸ್ವೀಕಾರ ಮಾಡುತ್ತಾರೆ ಎಂಬ ಪ್ರಶ್ನೆ ಹುಟ್ಟಿಕೊಂಡಿತು. ಇಂದಿನ ರೀಲ್ಸ್, ಗಲಾಟೆಗಳ ನಡುವೆ ಬ್ಯೂಟಿಫುಲ್ ಸಿನಿಮಾ ಬರುವುದು ಕಷ್ಟ. ಇಂಥ ಸಿನಿಮಾಗಳು ಬಂದಾಗ ಜತೆಗೆ ನಿಲ್ಲಬೇಕು' ಎಂದಿದ್ದಾರೆ ಸತೀಶ್.

'ಆಫ್ ಬೀಟ್ ಸಿನಿಮಾವಲ್ಲ. ನೋಡಿದ ಮೇಲೆ ಕಣ್ಣೀರು ಬರಬಹುದು. ಇದು ನೈಜ ಘಟನೆಯಾಧಾರಿತ ಸಿನಿಮಾ. 2017ರಲ್ಲಿ ಬಿಡುಗಡೆಯಾದ ಕಿಚ್ಚ ಸುದೀಪ್ ಅಭಿನಯದ 'ಹೆಬ್ಬುಲಿ' ಚಿತ್ರದಿಂದ ಸ್ಫೂರ್ತಿಗೊಂಡಿರುವ ಚಿತ್ರ. ಅದರ ಜನಪ್ರಿಯ 'ಹೆಬ್ಬುಲಿ ಕಟ್' ಕೇಶವಿನ್ಯಾಸದಿಂದ ಈ ಶೀರ್ಷಿಕೆ. ಕಿಚ್ಚ ಸುದೀಪ್ ಅವರ ಸ್ಟಾರ್‌ಡಮ್‌ನಿಂದ ಪ್ರೇರಿತವಾದ ಒಬ್ಬ ವ್ಯಕ್ತಿಯ ಜೀವನದ ಸವಾಲುಗಳನ್ನು ಈ ಚಿತ್ರ ಭಾವನಾತ್ಮಕವಾಗಿ ಚಿತ್ರಿಸುತ್ತದೆ' ಎಂದಿದ್ದಾರೆ ನಿರ್ದೇಶಕರು.

ಚಿತ್ರಕಥೆ ಮತ್ತು ಸಂಭಾಷಣೆಯನ್ನು ಅನಂತ ಶಾಂದ್ರೇಯ ಬರೆದಿದ್ದಾರೆ. ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ ಮತ್ತು ನವನೀತ್ ಶ್ಯಾಮ್ ಸಂಗೀತ ಚಿತ್ರಕ್ಕಿದೆ. ಮೌನೇಶ್ ನಟರಂಗ, ಅನನ್ಯ ನಿಹಾರಿಕ, ಮಹಾದೇವ ಹಡಪದ, ಉಮಾ ವೈ.ಜಿ., ವಿನಯ್ ಮಹಾದೇವನ್, ಮಹಾಂತೇಶ್ ಹಿರೇಮಠ, ಪುನೀತ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ.



## 'ಸಂಗೀತ ಬಾರ್ & ರೆಸ್ಟೋರೆಂಟ್'ನಲ್ಲಿ ಕೋಮಲ್

ಅನುಷಾ ರೈ, ಕೋಮಲ್, ಮೇಘನಾ ರಾಜ್



**ನಟ ಕೋಮಲ್** ಕುಮಾರ್ ಅಭಿನಯದ 'ಸಂಗೀತ ಬಾರ್ & ರೆಸ್ಟೋರೆಂಟ್' ಚಿತ್ರದ ಶೀರ್ಷಿಕೆ ಮತ್ತು ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಸಂದೇಶ್ ಶೆಟ್ಟಿ ಆಜ್ರಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಇವರು ಈ ಹಿಂದೆ 'ಕತ್ತಲೆ ಕೋಣೆ', 'ಇನಾಂದಾರ್', 'ಗುಂಮ್ಟಿ' ಚಿತ್ರಗಳನ್ನು ನಿರ್ದೇಶಿಸಿದ್ದರು.

'ಸಿನಿಮಾದ ಶೀರ್ಷಿಕೆಯೇ ಹೇಳುವಂತೆ, ಇದೊಂದು ವಿಭಿನ್ನ ಸಿನಿಮಾ. ಎರಡು ಕಾಲಘಟ್ಟಗಳಲ್ಲಿ ಈ ಸಿನಿಮಾದ ಕಥೆಯನ್ನು ನಿರ್ದೇಶಕರು ವಿಭಿನ್ನವಾಗಿ ಹೇಳುತ್ತಿದ್ದಾರೆ. ಕಾಮಿಡಿ, ಮನರಂಜನೆಯ ಜತೆ ಬೇರೆ ಒಂದಷ್ಟು ವಿಷಯಗಳು ಕೂಡ ಈ ಸಿನಿಮಾದಲ್ಲಿರಲಿವೆ. ಈ ಸಿನಿಮಾದಲ್ಲಿ ಒಂದು ಗೆಟಪ್‌ನಲ್ಲಿ ನಾನು ಸಿನಿಮಾ ನಿರ್ದೇಶಕನ ಪಾತ್ರ ಮಾಡಲಿದ್ದು, ಮತ್ತೊಂದು ಪಾತ್ರದ ಬಗ್ಗೆ ಈಗಲೇ ಹೇಳಲಾರೆ. ಒಟ್ಟಿನಲ್ಲಿ ಎರಡು ಶೇಡ್ ಇರುವಂಥ ಪಾತ್ರ' ಎಂದು ಮಾಹಿತಿ ನೀಡಿದರು ಕೋಮಲ್.

'ಜ್ಯೋತಿ ಪ್ರೊಡಕ್ಷನ್ಸ್' ಬ್ಯಾನರಿನಲ್ಲಿ ವಿಕಾಸ್ ಎಸ್.ಶೆಟ್ಟಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಅನುಷಾ ರೈ ನಾಯಕಿ. ಮೇಘನಾ ರಾಜ್ ಕೂಡ ಈ ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಎಂ.ಕೆ. ಮಠ, ಪ್ರಕಾಶ್ ತುಮ್ಮಿನಾಡು, ವರ್ಧನ್ ತೀರ್ಥಹಳ್ಳಿ, ಸಂದೇಶ್ ಶೆಟ್ಟಿ ಆಜ್ರಿ, ಸಿರಿಜಾ, ಪ್ರಶಾಂತ್ ಸಿದ್ಧಿ ಮುಂತಾದವರು ನಟಿಸಿದ್ದಾರೆ.

'ಕೋಮಲ್ ಅವರನ್ನು ಹಿಂದೆಂದೂ ನೋಡಿರದ ರೀತಿಯಲ್ಲಿ ಈ ಸಿನಿಮಾದಲ್ಲಿ ಕಾಣುತ್ತಾರೆ. ಇಡೀ ಸಿನಿಮಾದ ಮೊದಲಾರ್ಧ ಹಾಸ್ಯಭರಿತವಾಗಿ ಸಾಗಿದರೆ, ದ್ವಿತೀಯಾರ್ಧ ಸಸ್ಪೆನ್ಸ್-ಥ್ರಿಲ್ಲರ್ ಅಂಶಗಳ ಜೊತೆ ಸಾಗುತ್ತದೆ. ಹಿಸ್ಟಾರಿಕಲ್ ಕಾಮಿಡಿ ಶೈಲಿಯ ಈ ಸಿನಿಮಾದಲ್ಲಿ ಮನರಂಜನೆಯ ಜತೆಗೆ, ಇಂದಿನ ಕೆಲ ಸಾಮಾಜಿಕ ವಿಷಯಗಳನ್ನೂ ಹೇಳುತ್ತಿದ್ದೇವೆ. ಕುಂದಾಪುರ, ಕಾಸರಗೋಡು, ಕೇರಳ, ರಾಜಸ್ಥಾನ, ಹಂಪಿ ಮೊದಲಾದ ಕಡೆಗಳಲ್ಲಿ ಚಿತ್ರೀಕರಣಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಮುಂದಿನ ವರ್ಷದ ಆರಂಭದಲ್ಲಿಯೇ ಈ ಸಿನಿಮಾವನ್ನು ಪ್ರೇಕ್ಷಕರ ಮುಂದೆ ತರುವ ಯೋಚನೆಯಿದೆ' ಎಂದರು ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ.

ಪ್ರಾಂಶು ಜಾ ಸಂಗೀತ, ಸಜೀಶ್ ರಾಜ್ ಛಾಯಾಚಿತ್ರಗ್ರಹಣ, ಶಿವರಾಜ್ ಮೇಹು ಸಂಕಲನವಿದೆ.

# ಹುಲಿಕಲ್: 27 ಸೆಂ.ಮೀ ಮಳೆ ದಾಖಲು

## ಮಲೆನಾಡಿನಲ್ಲಿ ಮಳೆ ಬಿರುಸು; ಮೈದುಂಬಿದ ನದಿ, ಜಲಾಶಯ

• ಕೆಲವೆಡೆ ಶಾಲೆಗಳಿಗೆ ರಜೆ ಘೋಷಣೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಲೆನಾಡಿನಲ್ಲಿ ಬಿರುಸುಗೊಂಡಿರುವ ಮಳೆ ದಿನವಿಡೀ ಸುರಿದಿದೆ. ನದಿ, ಹಳ್ಳ, ಕೊಳ್ಳ, ಕೆರೆ, ಜಲಾಶಯಗಳು ಮೈದುಂಬಿವೆ. ಸದಾ ಮೋಡ ಮುಸುಕಿದ ವಾತಾವರಣ ಇದ್ದು, ಸೂರ್ಯನ ದರ್ಶನವೇ ಅಪರೂಪವಾಗಿದೆ. ಕಣಿವೆ, ಗುಡ್ಡ ಸಾಲುಗಳಲ್ಲಿ ಜಲಪಾತಗಳು ಜೀವ ಪಡೆದಿವೆ.

ಮುಂಜಾಗ್ರತಾ ಕ್ರಮವಾಗಿ ಗುರುವಾರ ಜಿಲ್ಲೆಯ ಹೊಸನಗರ, ತೀರ್ಥಹಳ್ಳಿ ಹಾಗೂ ಸಾಗರ ತಾಲ್ಲೂಕುಗಳ ಶಾಲೆ-ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಗುರುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸನಗರ ತಾಲ್ಲೂಕಿನ ವಾರಾಹಿ ಜಲಾನಯನ ಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗಿದೆ. ಹುಲಿಕಲ್‌ನಲ್ಲಿ 27 ಸೆಂ.ಮೀ, ಯಡೂರಿನಲ್ಲಿ 23.4, ಮಾಸ್ತಿಕಟ್ಟೆ 21.7, ಮಾಣಿ 20.7, ಸಾವೆಹಕ್ಲು 15.9 ಸೆಂ.ಮೀ ಮಳೆ ದಾಖಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ 16.64 ಸೆಂ.ಮೀ ಮಳೆ ಸುರಿದಿದೆ.

## ದ.ಕ, ಚಿಕ್ಕಮಗಳೂರು: ಧಾರಾಕಾರ ಮಳೆ

ಮಂಗಳೂರು/ಚಿಕ್ಕಮಗಳೂರು: ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಮುಂದುವರಿದಿದೆ. ಬುಧವಾರ ರಾತ್ರಿ ಇಡೀ ಹಾಗೂ ಗುರುವಾರ ಉತ್ತಮ ಮಳೆಯಾಗಿದೆ. ಭಾರಿ ಮಳೆಯ ಮುನ್ಸೂಚನೆ ಇದ್ದುದರಿಂದ ಕಡಬ ಮತ್ತು ಸುಳ್ಯ ತಾಲ್ಲೂಕುಗಳ ಅಂಗನವಾಡಿ ಕೇಂದ್ರ, ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಗುರುವಾರ ರಜೆ ನೀಡಲಾಗಿತ್ತು.

ಗುರುವಾರ ಬೆಳಿಗ್ಗೆ 8.30ರವರೆಗೆ ಪುತ್ತೂರು ತಾಲ್ಲೂಕಿನ ಬೆಳಂದೂರಿನಲ್ಲಿ 13 ಸೆಂ.ಮೀ, ಕೊಳ್ತಿಗೆ 11, ಅರಿಯಡ್ಕ 11, ಸುಳ್ಯ ತಾಲ್ಲೂಕಿನ ಗುತ್ತಿಗಾರಿನಲ್ಲಿ 12, ಬೆಳ್ತಂಗಡಿ ತಾಲ್ಲೂಕಿನ ಪಟ್ರಮೆ 11, ಬಾರ್ಯ 10, ಬಂಟ್ವಾಳ ತಾಲ್ಲೂಕಿನ ಕಾವಳಮುಡೂರಿನಲ್ಲಿ 10 ಸೆಂ.ಮೀ ಮಳೆಯಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಗುರುವಾರ ಮಧ್ಯಾಹ್ನದ ತನಕ ಧಾರಾಕಾರವಾಗಿ ಮಳೆ ಸುರಿಯಿತು. ನರಸಿಂಹರಾಜಪುರ, ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಶೃಂಗೇರಿ, ಕೊಪ್ಪ ತಾಲ್ಲೂಕಿನ ಹಲವೆಡೆ ಮಳೆ ಸುರಿಯಿತು. ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಉತ್ತಮವಾಗಿ ಮಳೆಯಾಗುತ್ತಿರುವುದರಿಂದ ಕಡೂರು ತಾಲ್ಲೂಕಿನ ಐತಿಹಾಸಿಕ ಮದಗದ ಕೆರೆಗೆ ನೀರಿನ ಹರಿವು ಹೆಚ್ಚಾಗಿದೆ.

ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳ ವ್ಯಾಪ್ತಿಯ ಎಲ್ಲಾ ಪ್ರಾಥಮಿಕ, ಪ್ರೌಢಶಾಲೆ, ಅಂಗನವಾಡಿ, ಶಿಶುಪಾಲನಾ ಕೇಂದ್ರಗಳಿಗೆ ಜು.4ರಂದು ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.



ಮಲೆನಾಡಿನಲ್ಲಿ ಮಳೆ ಹೆಚ್ಚಳದಿಂದ ಶಿವಮೊಗ್ಗದಲ್ಲಿ ಗುರುವಾರ ತುಂಗಾ ನದಿ ಮೈದುಂಬಿದ ನೋಟ
ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

## ಕೊಡಗಿನಲ್ಲಿ ಹೆಚ್ಚಿದ ಮಳೆ, 'ರೆಡ್ ಅಲರ್ಟ್'

ಮಡಿಕೇರಿ: ಕೊಡಗು ಜಿಲ್ಲೆಯ ಹಲವೆಡೆ ಬಿರುಸಿನ ಮಳೆ ಮುಂದುವರಿದಿದೆ. ಹವಾಮಾನ ಇಲಾಖೆಯು ಶುಕ್ರವಾರ (ಜುಲೈ 4) ಬೆಳಿಗ್ಗೆ 8.30ರವರೆಗೆ 'ರೆಡ್ ಅಲರ್ಟ್' ಘೋಷಿಸಿದೆ.

ಭಾರಿ ಮಳೆಯಿಂದ ಜಿಲ್ಲೆಯ ಎಲ್ಲ ಶಾಲೆಗಳು ಹಾಗೂ ಪಿಯು ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಮಡಿಕೇರಿ ನಗರದಲ್ಲಿ ಬುಧವಾರ ತಡರಾತ್ರಿಯಿಂದ ಗುರುವಾರ ಮಧ್ಯಾಹ್ನದವರೆಗೂ ಮಳೆ ಅಬ್ಬರಿಸಿತು. ಇದರಿಂದ ಹಾರಂಗಿ ಜಲಾಶಯದ ಒಳ ಹರಿವು ಹೆಚ್ಚಾಗಿದ್ದು, ನದಿಗೆ 10 ಸಾವಿರ ಕ್ಯೂಸೆಕ್ ನೀರನ್ನು ಹರಿಸಲಾಯಿತು. ನಾಪೋಕ್ಲು ಭಾಗದಲ್ಲಿ ನದಿ, ತೊರೆಗಳು ತುಂಬಿ ಹರಿಯುತ್ತಿವೆ. ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ.

ಶಾಂತಳ್ಳಿಯಲ್ಲಿ 14 ಸೆಂ.ಮೀ. ಮಳೆಯಾಗಿದೆ. ಭಾಗಮಂಡಲ, ಸೋಮವಾರಪೇಟೆ 8, ಶನಿವಾರಸಂತೆ 6, ಮಡಿಕೇರಿ, ನಾಪೋಕ್ಲು, ಸಂಪಾಜೆ, ವಿರಾಜಪೇಟೆ, ಹುದಿಕೇರಿಯಲ್ಲಿ ತಲಾ 5 ಸೆಂ.ಮೀ. ಮಳೆ ಸುರಿದಿದೆ.

## ಭಾರಿ ಮಳೆ: ಭೂಕುಸಿತ

ಪ್ರಜಾವಾಣಿ ವಾರ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಕಾಳಿ ಜಲಾನಯನ ಪ್ರದೇಶದಲ್ಲಿ ಸುರಿದ ವ್ಯಾಪಕ ಮಳೆಯಿಂದ ಭೂಕುಸಿತ ಉಂಟಾಗಿದೆ.

ಕಾರವಾರ ತಾಲ್ಲೂಕಿನ ಬಾಳೆಮನೆ ಸಮೀಪ ಕದ್ರಾ-ಕೊಡಸಳ್ಳಿ ರಸ್ತೆಯ ಪಕ್ಕ ಎತ್ತರದ ಗುಡ್ಡವು 50 ಮೀಟರ್ ಅಗಲದಷ್ಟು ಕುಸಿದಿದೆ. ಮಣ್ಣಿನ ರಾಶಿಯು ರಸ್ತೆ ಪೂರ್ತಿ ಆವರಿಸಿದ್ದು, ಪಕ್ಕದ ಕದ್ರಾ ಅಣೆಕಟ್ಟೆಯ ಹಿನ್ನೀರಿಗೂ ಬಿದ್ದಿದೆ. ಕುಸಿತವಾದ ಸ್ಥಳವು ಕದ್ರಾ ಅಣೆಕಟ್ಟೆಯಿಂದ 12 ಕಿ.ಮೀ, ಕೊಡಸಳ್ಳಿ ಅಣೆಕಟ್ಟೆಯಿಂದ 22 ಕಿ.ಮೀ ಅಂತರದಲ್ಲಿದೆ.

'ಮಣ್ಣಿನ ರಾಶಿ ತೆರವುಗೊಳಿಸದೆ, ಪುನಃ ಕುಸಿತ ಸಂಭವಿಸುವ ಸಾಧ್ಯತೆಯಿರುವ ಕಾರಣ ತೆರವು ಕಾರ್ಯ ನಡೆದಿಲ್ಲ. ಕೊಡಸಳ್ಳಿ ಅಣೆಕಟ್ಟೆ ಮತ್ತು ವಿದ್ಯುದಾಗಾರ ನಿರ್ವಹಣೆಗೆ ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಸಿಬ್ಬಂದಿ ತೆರಳಲು ಇದ್ದ ಏಕೈಕ ಮಾರ್ಗ ಇದಾಗಿದ್ದು, ಸದ್ಯ ಅವರಿಗೆ ದೋಣಿ ಮೂಲಕ ಹಿನ್ನೀರಿನಲ್ಲಿ ಸಾಗಲು ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಕೆಪಿಸಿ ಮುಖ್ಯ ಎಂಜಿನಿಯರ್ ಶ್ರೀಧರ ಕೋರಿ ತಿಳಿಸಿದ್ದಾರೆ.

ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳಲ್ಲಿ ಮಳೆ ವ್ಯಾಪಕವಾಗಿದ್ದು ಹಳ್ಳ ಕೊಳ್ಳಗಳು ಭರ್ತಿಯಾಗಿ ಹರಿಯುತ್ತಿವೆ. ಕಾರವಾರದಲ್ಲಿ ಕದ್ರಾ, ಗೋಟೆಗಾಳಿಯಲ್ಲಿ 18 ಸೆಂ.ಮೀ ಮಳೆ ಸುರಿದಿದೆ. ಶಿರಸಿ ನಗರದ ಸುರಿದ ಮಳೆಯಿಂದ ಮೂರು ಮನೆಗಳ ಪಕ್ಕ ಭೂಕುಸಿತವಾಗಿದ್ದು, ಅಪಾಯದ ಸ್ಥಿತಿ ಸೃಷ್ಟಿಯಾಗಿದೆ.

ಕಾರವಾರ ತಾಲ್ಲೂಕಿನ ಕದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಿದ ಹಿನ್ನೆಲೆಯಲ್ಲಿ 4 ಕ್ರಸ್ಟ್ ಗೇಟುಗಳ ಮುಖಾಂತರ 12 ಸಾವಿರ ಕ್ಯೂಸೆಕ್ ನೀರು ಹರಿಬಿಡಲಾಗುತ್ತಿದೆ.



ಕಾರವಾರ ತಾಲ್ಲೂಕಿನ ಬಾಳೆಮನೆ ಸಮೀಪ ಕದ್ರಾ–ಕೊಡಸಳ್ಳಿ ರಸ್ತೆಯಲ್ಲಿ ಉಂಟಾದ ಭೂಕುಸಿತದಿಂದ ಭಾರಿ ಪ್ರಮಾಣದಲ್ಲಿ ಮಣ್ಣಿನ ರಾಶಿಯೊಂದಿಗೆ ಮರಗಳು ಬಿದ್ದಿವೆ



ತುಂಗಭದ್ರಾ ಅಣೆಕಟ್ಟೆಯಿಂದ 62 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ನದಿಗೆ ಹರಿಯುತ್ತಿರುವುದರಿಂದ ಹಂಪಿಯಲ್ಲಿ ಪುರಂದರ ಮಂಟಪ ಬಹುತೇಕ ಮುಳುಗಿತು –ಪ್ರಜಾವಾಣಿ ಚಿತ್ರ

## 20 ಕ್ರಸ್ಟ್‌ಗೇಟ್‌ನಿಂದ ನೀರು ಹೊರಕ್ಕೆ: ಪುರಂದರ ಮಂಟಪ ಮುಳುಗಡೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹ 78.23 ಟಿಎಂಸಿ ಅಡಿ ತಲುಪಿದ್ದು, ಗುರುವಾರ 20 ಕ್ರಸ್ಟ್‌ಗೇಟ್‌ಗಳನ್ನು ತೆರೆದು, 62,766 ಕ್ಯೂಸೆಕ್‌ನಷ್ಟು ನೀರನ್ನು ನದಿ ಮತ್ತು ಕಾಲುವೆಗಳಿಗೆ ಹರಿಸಲಾಯಿತು. ಇದರಿಂದ ಹಂಪಿಯಲ್ಲಿ ಪುರಂದರ ಮಂಟಪ ಬಹುತೇಕ ಮುಳುಗಡೆಯಾಗಿದೆ.

105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ ಈ ಬಾರಿ 80 ಟಿಎಂಸಿ ಅಡಿಯಷ್ಟು ನೀರನ್ನು ಮಾತ್ರ ಸಂಗ್ರಹಿಸಿ ಇಡಲು ತುಂಗಭದ್ರಾ ಮಂಡಳಿ ನಿರ್ಧರಿಸಿದೆ. ಇನ್ನಷ್ಟು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರು ಹೊರಬಿಡುವ ಸಾಧ್ಯತೆ ಇದೆ. ನದಿ ದಂಡೆಯ ಜನರು ಎಚ್ಚರದಿಂದ ಇರಬೇಕು ಎಂದು ಮಂಡಳಿ ಎಚ್ಚರಿಕೆ ನೀಡಿದೆ.

ಕಳೆದ ವರ್ಷ ಜುಲೈ 3ನೇ ವಾರ ಜಲಾಶಯ ಬಹುತೇಕ ಭರ್ತಿಯಾಗಿತ್ತು. ಆಗ ಕ್ರಸ್ಟ್‌ಗೇಟ್‌ಗಳನ್ನು ಹಂತ ಹಂತವಾಗಿ ತೆರೆದು ಹೆಚ್ಚುವರಿ ನೀರನ್ನು ಹೊರಗೆ ಬಿಡಲಾಗಿತ್ತು. ಆದರೆ, ಕ್ರಸ್ಟ್‌ಗೇಟ್‌ಗಳು ಶಿಥಿಲಗೊಂಡಿವೆ. ಅವುಗಳನ್ನು ಬದಲಿಸುವಂತೆ ತಜ್ಞರು ವರದಿ ನೀಡಿದ ಕಾರಣ ಈ ಬಾರಿ ಗರಿಷ್ಠ ಮಟ್ಟದಲ್ಲಿ ನೀರು ಸಂಗ್ರಹಿಸದಿರಲು ನಿರ್ಧರಿಸಲಾಗಿದೆ. ಹೀಗಾಗಿ 20 ಕ್ರಸ್ಟ್‌ಗೇಟ್‌ಗಳನ್ನು ತಲಾ 2.5 ಅಡಿಯಷ್ಟು ಎತ್ತಿ ನೀರು ಹೊರಬಿಡಲಾಗುತ್ತಿದೆ.



ಹುಬ್ಬಳ್ಳಿ ತಾಲ್ಲೂಕಿನ ಹಳ್ಯಾಳ ಗ್ರಾಮದ ಹೊಲದಲ್ಲಿ ಹೆಸರು ಬೆಳೆಯ ಕಳೆಯನ್ನು ರೈತ ಮಹಿಳೆಯರು ತೆಗೆದರು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

## ಪ್ರೊ.ವಿಜಯಾ ನೂತನ ಕುಲಪತಿ



ಪ್ರೊ.ವಿಜಯಾ ಕೋರಿಶೆಟ್ಟಿ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 6ನೇ ಕುಲಪತಿಯಾಗಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ.ವಿಜಯಾ ಕೋರಿಶೆಟ್ಟಿ ನೇಮಕಗೊಂಡಿದ್ದಾರೆ. ಅವರು ಮುಂದಿನ ನಾಲ್ಕು ವರ್ಷದ ಅವಧಿಗೆ ಕಾರ್ಯ ನಿರ್ವಹಿಸುವರು. ಇದೇ ಮೊದಲ ಬಾರಿಗೆ ಇದೇ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಕುಲಪತಿ ಹುದ್ದೆ ಒಲಿದಿದೆ.

'ವಿಶ್ವವಿದ್ಯಾಲಯವನ್ನು ಮತ್ತಷ್ಟು ಮಹಿಳಾ ಸ್ನೇಹಿಯಾಗಿಸಲು ಆದ್ಯತೆ ನೀಡುವೆ. ಶೈಕ್ಷಣಿಕ ಸಂಶೋಧನೆ, ವಿಸ್ತರಣೆಗೆ ಒತ್ತು ನೀಡುವೆ' ಎಂದು ಪ್ರೊ. ವಿಜಯಾ ಕೋರಿಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

## ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯೂಸೆಕ್‌ಗಳಲ್ಲಿ) | ಹೊರಹರಿವು (ಕ್ಯೂಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್ * | 124.80 | 124.57 | 28,354 | 38,709 |
| ಹಾರಂಗಿ | 2,859 | 2,852.22 | 5,674 | 10,000 |
| ಕಬಿನಿ | 2,284.00 | 2,278.12 | 9,333 | 5,000 |
| ಹೇಮಾವತಿ | 2,922 | 2,917.92 | 14,198 | 9,500 |
| ಲಿಂಗನಮಕ್ಕಿ | 1,819 | 1,787.80 | 45,070 | 5,563 |
| ಸೂಪಾ (ಮೀ) | 564 | 539.12 | 36,874 | 5,584.79 |
| ಮಾಣಿ | 595 | 584.10 | 9,807 | - |
| ತುಂಗಭದ್ರಾ | 1,633 | 1,625.53 | 26,718 | 39,611 |
| ಮಲಪ್ರಭಾ | 2,079.5 | 2,063.10 | 4,732 | 194 |
| ಘಟಪ್ರಭಾ | 2175 | 2,150.58 | 16,215 | 1,454 |
| ಭದ್ರಾ * | 186 | 165.6 | 20,684 | 3,392 |
| ಆಲಮಟ್ಟಿ (ಮೀ) | 519.6 | 517.29 | 93,963 | 89,530 |
| ನಾರಾಯಣಪುರ (ಮೀ) | 492.25 | 490.73 | 1,00,000 | 95,265 |

* ನೆಲಮಟ್ಟದಿಂದ

## ಕೋರ್ಟ್‌ನಲ್ಲಿ ಹೇಳಿಕೆ ದಾಖಲಿಸಿದ ಮುರುಘಾ ಶರಣರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪೋಕ್ಸೊ ಪ್ರಕರಣಗಳ ಪ್ರಮುಖ ಆರೋಪಿ, ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಶರಣರು ಗುರುವಾರ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಲಯದ ಎದುರು ಖುದ್ದು ಹಾಜರಾಗಿ ಸಂತ್ರಸ್ತೆಯರ ಆರೋಪ ಹಾಗೂ ಸಾಕ್ಷ್ಯಗಳ ವಿಚಾರಣೆ ಸಂಬಂಧ ತಮ್ಮ ಹೇಳಿಕೆ ದಾಖಲಿಸಿದರು.

ದಾವಣಗೆರೆಯ ವಿರಕ್ತ ಮಠದಿಂದ ಬಂದ ಅವರು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಚನ್ನಬಸಪ್ಪ ಹಡಪದ ಅವರ ಎದುರು ಹಾಜರಾದರು. ಪ್ರಕರಣಗಳ ಪಟ್ಟಿ ಮಾಡಿದ ನ್ಯಾಯಾಧೀಶರು ಮಧ್ಯಾಹ್ನಕ್ಕೆ ಸಮಯ ನಿಗದಿಗೊಳಿಸಿದರು. ಅಲ್ಲಿಯವರೆಗೂ ಅವರು ಕೋರ್ಟ್ ಮೊಗಸಾಲೆಯಲ್ಲಿ ಕುಳಿತಿದ್ದರು. ಮಧ್ಯಾಹ್ನ 12.30ರಿಂದ ಸಂಜೆ 5.15ರವರೆಗೂ ಸಂತ್ರಸ್ತೆಯರ ಎಲ್ಲ ಆರೋಪಗಳಿಗೂ ಹೇಳಿಕೆ ದಾಖಲಿಸಿದರು.

ಶರಣರ ವಿರುದ್ಧ ದಾಖಲಾಗಿರುವ 2 ಪೋಕ್ಸೊ ಪ್ರಕರಣಗಳ ಪೈಕಿ ಮೊದಲ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ಪಡೆಯಲಾಯಿತು. ಈ ಪ್ರಕರಣ ಕುರಿತು 2 ಭಾಗಗಳಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದ್ದು, ಜುಲೈ 10ಕ್ಕೆ ಇನ್ನೊಂದು ಭಾಗದ ಹೇಳಿಕೆ ಪಡೆಯಲು ನಿರ್ಧರಿಸಲಾಯಿತು.

ಪೋಕ್ಸೊ ಪ್ರಕರಣಗಳ ಸಂಬಂಧ ಬಂಧನದಲ್ಲಿದ್ದ ಮುರುಘಾ ಶರಣರಿಗೆ ಚಿತ್ರದುರ್ಗ ಜಿಲ್ಲೆ ಪ್ರವೇಶಿಸದಂತೆ ಷರತ್ತು ವಿಧಿಸಿ ಜಾಮೀನು ನೀಡಲಾಗಿದೆ. ವಿಚಾರಣೆ ಅಂತಿಮ ಹಂತಕ್ಕೆ ಬಂದಿರುವ ಕಾರಣ ಕೋರ್ಟ್‌ಗೆ ಖುದ್ದು ಹಾಜರಾಗಿ ಹೇಳಿಕೆ ದಾಖಲಿಸುವಂತೆ ನ್ಯಾಯಾಧೀಶರು ಆದೇಶಿಸಿದ್ದರು.

## ಮರಿಯಾನೆ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಜೀವಿ ವಲಯದಲ್ಲಿ ಮರಿಯಾನೆಯ ಕಳೇಬರ ಪತ್ತೆಯಾಗಿದೆ. ರಾಮಾಪುರ ವನ್ಯಜೀವಿ ವಲಯ ಹಾಗೂ ಬೀಟ್‌ನ ಹುಣಸೆಬೈಲು ಅರಣ್ಯ ಪ್ರದೇಶದಲ್ಲಿ ಸಿಬ್ಬಂದಿ ಗಸ್ತಿನಲ್ಲಿದ್ದಾಗ ಮರಿಯಾನೆಯ ಕಳೇಬರ ಕಂಡುಬಂದಿದೆ.

'ಮರಿಯಾನೆ ಮೃತಪಟ್ಟು ಒಂದು ವಾರವಾಗಿರಬಹುದು ಎಂದು ಶಂಕಿಸಿರುವ ಅರಣ್ಯ ಇಲಾಖೆ ಅಧಿಖಾರಿಗಳು, ಮರಣೋತ್ತರ ಪರೀಕ್ಷೆಯ ನಂತರ ಸಾವಿಗೆ ನಿಖರ ಕಾರಣ ತಿಳಿದುಬರಲಿದೆ' ಎಂದು ಮಾಹಿತಿ ನೀಡಿದ್ದಾರೆ.





# 'ವೀರಶೈವ ಜಂಗಮರು ಬೇಡ ಜಂಗಮರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಸಮುದಾಯದ ಜಂಗಮರೇ ಬೇರೆ, ಬುಡ್ಗ ಅಥವಾ ಬೇಡ ಜಂಗಮರೇ ಬೇರೆ' ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, 'ವೀರಶೈವ ಜಂಗಮರು ಬೇಡ ಅಥವಾ ಬುಡ್ಗ ಜಂಗಮರಲ್ಲ' ಎಂದು ಮಹತ್ವದ ತೀರ್ಪು ನೀಡಿದೆ.

ಈ ಸಂಬಂಧ ರಾಜ್ಯ ಸಮಾಜ ಕಲ್ಯಾಣ ಇಲಾಖೆ, ಬೀದರ್‌ನ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾರುತಿ ಬೌದ್ಧೆ ಹಾಗೂ ಬೀದರ್‌ನ ರಾಘವೇಂದ್ರ ಕಾಲೋನಿಯ ರವೀಂದ್ರ ಸ್ವಾಮಿ ಸಲ್ಲಿಸಿದ್ದ ರಿಟ್ ಮೇಲ್ಮನವಿಗಳಲ್ಲಿ ಈ ಕುರಿತಂತೆ ಆದೇಶ ಹೊರಡಿಸಿದೆ.

ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ, 'ವೀರಶೈವ ಸಮುದಾಯದ ಜಂಗಮರು ಪುರೋಹಿತ ವರ್ಗಕ್ಕೆ ಸೇರಿದವರು ಮತ್ತು ಇವರೆಲ್ಲಾ ಸಸ್ಯಾಹಾರಿಗಳು. ಆದರೆ, ಬೇಡ ಜಂಗಮರು ಸಮಾಜದ ಕೆಳ ಜಾತಿಗೆ ಸೇರಿದವರು ಮತ್ತು ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗುತ್ತದೆ' ಎಂಬ ಅಂಶವನ್ನು ಸ್ಪಷ್ಟ ನುಡಿಗಳಲ್ಲಿ ದಾಖಲಿಸಿದೆ.

'ಜಾತಿ ಹೆಸರು ಒಂದೇ ರೀತಿ ಇದೆ ಎನ್ನುವ ಕಾರಣಕ್ಕಾಗಿ ಆ ಜಾತಿಗಳಿಗೆ ಪರಿಶಿಷ್ಟ ಜಾತಿಗಳ ಸ್ಥಾನಮಾನ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಪ್ರಭುದೇವ ಮಲ್ಲಿಕಾರ್ಜುನಯ್ಯ ವರ್ಸಸ್ ರಾಮಚಂದ್ರ ವೀರಪ್ಪ ಪ್ರಕರಣದಲ್ಲಿ ತೀರ್ಮಾನಿಸಿದೆ' ಎಂಬ ಅಂಶವನ್ನು ನ್ಯಾಯಪೀಠ ಉಲ್ಲೇಖಿಸಿದೆ.

'ಲಿಂಗಾಯತ ವರ್ಗಕ್ಕೆ ಸೇರಿರುವ ಅರ್ಜಿದಾರ ರವೀಂದ್ರ ಸ್ವಾಮಿ, ಬೇಡ ಜಂಗಮ ಪ್ರಯೋಜನ ಪಡೆಯಲು ಹಕ್ಕು ಮಂಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರ ಕುಟುಂಬದ ಒಬ್ಬರಿಗೆ ಬೇಡ ಜಂಗಮ ಪ್ರಮಾಣ ಪತ್ರ ದೊರೆತಿದೆ ಎಂದ ಮಾತ್ರಕ್ಕೆ ಇತರೆಯವರಿಗೂ ಆ ಪ್ರಮಾಣ ಪತ್ರ ನೀಡಬೇಕೆಂಬ ಅನುಮತಿಯನ್ನು ಒಪ್ಪಲಾಗದು. ಏಕೆಂದರೆ, ಅವರು ವೀರಶೈವ ಸಮುದಾಯಕ್ಕೆ ಸೇರಿದವರಾಗಿದ್ದಾರೆ' ಎಂದು ನ್ಯಾಯಪೀಠ ವಿವರಿಸಿದೆ.

ಸಮಾಜ ಕಲ್ಯಾಣ ಇಲಾಖೆ ಪರ ಹೈಕೋರ್ಟ್‌ನ ಹಿರಿಯ ವಕೀಲ ಸಿ.ಜಗದೀಶ್ ಮತ್ತು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾರುತಿ ಬೌದ್ಧೆ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ ವಾದ ಮಂಡಿಸಿದ್ದರು.

## 'ಮಾದಿಗ ಸಮುದಾಯಕ್ಕೆ ಒತ್ತಾಯ ಸಲ್ಲ'



'ಯಾದಗಿರಿ ಜಿಲ್ಲೆ ವಡಗೇರಾ ತಾಲ್ಲೂಕಿನ ತುಮಕೂರು ಗ್ರಾಮದಲ್ಲಿ ಮೊಹರಂ ವೇಳೆ ಉರುಸ್ ಆಚರಿಸುವಾಗ, ಹಿಂದೂ ದೇವತೆ ಕಾಶಿಮಲ್ಲಿ ಆರಾಧನೆ ನಿಮಿತ್ತ ಜಾನಪದ ನೃತ್ಯ ಅಲಾಯಿ ಭೋಸಾಯಿ ಕುಣಿತಕ್ಕೆ ಹಲಗೆ ಬಾರಿಸಿ ಎಂದು ಮಾದಿಗ ಸಮುದಾಯಕ್ಕೆ ತಾಕೀತು ಮಾಡತಕ್ಕದ್ದಲ್ಲ' ಎಂದು ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ಮಾಡಿದೆ.

ವಡಗೇರಾ ತಾಲ್ಲೂಕು ತುಮಕೂರಿನ, 'ಮಾದಿಗ ಮೀಸಲಾತಿ ಹೋರಾಟ ಸಮಿತಿ' ಗ್ರಾಮೀಣ ಘಟಕದ ಅಧ್ಯಕ್ಷ ಶಾಂತಪ್ಪ ಬಿನ್ ರಾಮಪ್ಪ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ವೈ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಒಂದು ವೇಳೆ ಇಂತಹ ಸಂದರ್ಭ ಎದುರಾದರೆ ಮಾದಿಗ ಸಮುದಾಯಕ್ಕೆ ಸೂಕ್ತ ರಕ್ಷಣೆ ಒದಗಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದೆ ಎಂಬ ಕಾರಣಕ್ಕೆ ತಾನು ಮಾಡಲಿಚ್ಛಿಸದ ಕೆಲಸವನ್ನು ಮುಂದುವರಿಸುವಂತೆ ಒಂದು ಸಮುದಾಯವು ಮತ್ತೊಂದು ಸಮುದಾಯಕ್ಕೆ ಒತ್ತಾಯಿಸಲಾಗದು' ಎಂದು ನ್ಯಾಯಪೀಠ ಹೇಳಿದೆ.

**ಪ್ರಕರಣವೇನು?:** ಹಿಂದೂ-ಮುಸ್ಲಿಂ ಸಮುದಾಯದ ಜನರು ಮೊಹರಂ ಹಬ್ಬದ ಅಂಗವಾಗಿ ಕಾಶಿಮಲ್ಲಿ ದೇವಸ್ಥಾನದ ಮುಂದೆ ಅಲಾಯಿ ಭೋಸಾಯಿ ಜಾನಪದ ಕುಣಿತ ಆಚರಿಸುತ್ತಾರೆ. ಈ ವೇಳೆ ದಲಿತ ಸಮುದಾಯದವರು ಹಲಗೆ ಬಾರಿಸುತ್ತಿದ್ದರು.

'ನಾವು ಹಲಗೆ ಬಾರಿಸುವುದಿಲ್ಲ' ಎಂಬ ನಿರ್ಧಾರ ಪ್ರಕಟಿಸಿದ್ದ ಮಾದಿಗ ಸಮುದಾಯದವರು ಹಬ್ಬದಲ್ಲಿ ಭಾಗವಹಿಸಿದ್ದರು. ಇದು ಸಂಘರ್ಷಕ್ಕೆ ನಾಂದಿ ಹಾಡಿತ್ತು. ಈ ಹಿನ್ನೆಲೆಯಲ್ಲಿ ಕುಣಿತಕ್ಕೆ ನಿಷೇಧ ಹೇರುವಂತೆ ಮಾದಿಗ ದಂಡೋರ ಸಮಿತಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿತ್ತು. ಆದರೆ, 'ಈ ಸಂಬಂಧ ಯಾವುದೇ ಕ್ರಮ ಜರುಗಿಲ್ಲ' ಎಂದು ಆಕ್ಷೇಪಿಸಿ ಸಮಿತಿ ಹೈಕೋರ್ಟ್ ಮೆಟ್ಟಿಲೇರಿತ್ತು.





## ಕನಿಷ್ಠ ವೇತನ: ಹೈಕೋರ್ಟ್‌ಗೆ ಸರ್ಕಾರದ ಮುಚ್ಚಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಮ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸದ ಹೊರತು ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಹೊರಡಿಸಲಾಗಿರುವ ಉದ್ದೇಶಿತ ಕರಡು ಅಧಿಸೂಚನೆ ಅನ್ವಯ ಭವಿಷ್ಯದಲ್ಲಿ ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮುಚ್ಚಳಿಕೆ ನೀಡಿದೆ.

ಅಧಿಸೂಚನೆಗಳನ್ನು ಪ್ರಶ್ನಿಸಿ ಶಿವಮೊಗ್ಗ- ದಾವಣಗೆರೆಯ ನಂಜಪ್ಪ ಆಸ್ಪತ್ರೆಗಳ ಆಡಳಿತಾಧಿಕಾರಿ ಎಸ್.ಸವಿತಾ ಮತ್ತು ನಂಜಪ್ಪ ಟ್ರಸ್ಟ್‌ನ ಆಡಳಿತಾಧಿಕಾರಿ ಪಿ.ನಳಿನಾ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು, 'ಏಕರೂಪದ ವೇತನ ನಿಗದಿಪಡಿಸುವ ಪ್ರಸ್ತಾವ, ಕನಿಷ್ಠ ವೇತನ ಕಾಯ್ದೆ–1948ರ ಉದ್ದೇಶಕ್ಕೆ ವಿರುದ್ಧವಾಗಿದೆ. ಕಾರ್ಮಿಕ ಇಲಾಖೆ 2025ರ ಏಪ್ರಿಲ್ 11 ಮತ್ತು 19ರಂದು ಹೊರಡಿಸಿರುವ ಉದ್ದೇಶಿತ ಕರಡು ಅಧಿಸೂಚನೆಗೆ ಪರಿಷ್ಕರಣೆಗೆ ಅರ್ಜಿದಾರರು ಈಗಾಗಲೇ ಆಕ್ಷೇಪಣೆ ಸಲ್ಲಿಸಿದ್ದಾರೆ. ಆದರೆ, ಪ್ರಸ್ತಾವನೆ ಕುರಿತಂತೆ ಚರ್ಚಿಸಲು ಸರ್ಕಾರ ಕೈಗಾರಿಕೆಗಳ ಜೊತೆ ಇನ್ನೂ ಸಭೆ ಕರೆದಿಲ್ಲ' ಎಂದು ಆಕ್ಷೇಪಿಸಿದರು.

ಸರ್ಕಾರಿ ವಕೀಲರು, 'ನಿರ್ದಿಷ್ಟವಾದ 80 ಉದ್ಯೋಗಗಳಲ್ಲಿ ಕನಿಷ್ಠ ವೇತನ ಪರಿಷ್ಕರಣೆ ಪ್ರಸ್ತಾವನೆ ಹೊಂದಿದ ಕರಡು ಅಧಿಸೂಚನೆಗಳ ಕುರಿತು ಸಂಬಂಧಿಸಿದ ಉದ್ಯಮ ಪ್ರತಿನಿಧಿಗಳ ಜೊತೆ ಸಮಗ್ರ ಚರ್ಚೆ ನಡೆಸಲಾಗುವುದು. ಅಲ್ಲಿಯವರೆಗೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ' ಎಂದು ಭರವಸೆ ನೀಡಿದರು. ನ್ಯಾಯಪೀಠ ಇದನ್ನು ದಾಖಲಿಸಿಕೊಂಡಿತು.

ಪ್ರಕರಣದ ಪ್ರತಿವಾದಿಗಳಾದ ಕಾರ್ಮಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.



## ಸುಭಾಷಿತ


ಸತ್ಯಕ್ಕಾಗಿ ಏನನ್ನಾದರೂ ತ್ಯಾಗ ಮಾಡಿ. ಆದರೆ, ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.

-ಸ್ವಾಮಿ ವಿವೇಕಾನಂದ

ಸಂಪಾದಕೀಯ

# ಕಸಾಪ ಸುತ್ತ ವಿವಾದಗಳ ಹುತ್ತ ವಿಶ್ವಾಸಾರ್ಹತೆ ಸಾಬೀತಾಗಲಿ

**ಸಾಹಿತ್ಯ** ಚಟುವಟಿಕೆಗಳ ಮೂಲಕ ಜನರ ಗಮನ ಸೆಳೆಯಬೇಕಾದ 'ಕನ್ನಡ ಸಾಹಿತ್ಯ ಪರಿಷತ್ತು' (ಕಸಾಪ) ಸಾಹಿತ್ಯೇತರ ಕಾರಣಗಳಿಂದಾಗಿ ಸುದ್ದಿಯಲ್ಲಿದೆ. ಸಾಹಿತ್ಯ ಪರಿಷತ್ತಿನಲ್ಲಿ ಹಣದ ದುರುಪಯೋಗ ಹಾಗೂ ಅಧಿಕಾರದ ದುರ್ಬಳಕೆ ಆಗಿರುವ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಸಹಕಾರ ಇಲಾಖೆ ಆದೇಶಿಸಿದೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಜನಪದ, ಸಂಸ್ಕೃತಿಯ ಸಂವರ್ಧನೆ ಹಾಗೂ ರಕ್ಷಣೆಯ ಮಹದಾಶಯದೊಂದಿಗೆ ಸ್ಥಾಪನೆಯಾದ ಸಂಸ್ಥೆ, ತನ್ನ ಆಶಯಗಳಿಗೆ ವಿರುದ್ಧವಾದ ಕಾರಣಗಳಿಂದಾಗಿ ವಿಚಾರಣೆ ಎದುರಿಸಬೇಕಾಗಿರುವುದು ದುರದೃಷ್ಟಕರ. ಪರಿಷತ್ತಿನ ಅಧ್ಯಕ್ಷರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿರುವ ಕೆಲವು ಲೇಖಕರು, ಪರಿಷತ್ತಿನಲ್ಲಿ ನಡೆದಿರುವ ಅವ್ಯವಹಾರಗಳ ವಿರುದ್ಧ ತನಿಖೆ ನಡೆಸುವಂತೆ ಸರ್ಕಾರವನ್ನು ಆಗ್ರಹಿಸಿದ್ದರು. ಕಸಾಪ ಅಧ್ಯಕ್ಷರನ್ನು ವಜಾಗೊಳಿಸಿ, ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಿಸಬೇಕೆನ್ನುವ ಒತ್ತಾಯಗಳೂ ವ್ಯಕ್ತವಾಗಿದ್ದವು. ಪರಿಷತ್ತಿನ ಅಧ್ಯಕ್ಷರ ಮೇಲಿನ ಟೀಕೆ ಟಿಪ್ಪಣಿಗಳು ಹೆಚ್ಚಾಗುತ್ತಿದ್ದಂತೆಯೇ, ಕಸಾಪ ಅಧ್ಯಕ್ಷರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನಮಾನ ಮತ್ತು ಸವಲತ್ತುಗಳನ್ನು ಸರ್ಕಾರ ಹಿಂಪಡೆದಿತ್ತು. ಪ್ರಸ್ತುತ, ಹಣ ದುರುಪಯೋಗದ ದೂರುಗಳ ಹಿನ್ನೆಲೆಯಲ್ಲಿ, 'ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960'ರ ಕಲಂ 25ರ ಅಡಿ, ಸಾಹಿತ್ಯ ಪರಿಷತ್ತಿನ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾ ಅಧಿಕಾರಿಯನ್ನು ಸಹಕಾರ ಇಲಾಖೆ ನೇಮಿಸಿದೆ. ಸರ್ಕಾರ ಮತ್ತು ಇತರೆ ಮೂಲಗಳಿಂದ ಪರಿಷತ್ತಿಗೆ ಬಂದಿರುವ ಅನುದಾನವನ್ನು ಪಾರದರ್ಶಕವಾಗಿ ನಿರ್ವಹಿಸದೆ, ಹಣದ ದುರುಪಯೋಗ ನಡೆದಿದೆ ಹಾಗೂ ಪರಿಷತ್ತಿನ ಹಣವನ್ನು ಕಸಾಪ ಅಧ್ಯಕ್ಷರ ಕುಟುಂಬದ ಸದಸ್ಯರ ಕಾರ್ಯಕ್ರಮಗಳಿಗೆ ನಿಯಮಬಾಹಿರವಾಗಿ ಬಳಕೆ ಮಾಡಿಕೊಳ್ಳಲಾಗಿದೆ ಎನ್ನುವ ಗುರುತರ ಆರೋಪಗಳಿವೆ. ಕಂಪ್ಯೂಟರ್ ಖರೀದಿ, ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ, ಅಗ್ನಿಶಾಮಕ ಉಪಕರಣದ ಅಳವಡಿಕೆ ಹಾಗೂ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆಯೂ ಹಣದ ದುರುಪಯೋಗ ಆಗಿದೆ ಎನ್ನಲಾಗಿದೆ. ಪರಿಷತ್ತಿನ ಆಡಳಿತ ಮಂಡಳಿಯ ನಿರ್ಣಯಗಳನ್ನು ಸಹಕಾರ ಸಂಘದ ನಿಯಮ ನಿಬಂಧನೆಗೆ ವಿರುದ್ಧವಾಗಿ ದಾಖಲಿಸಿರುವುದರ ಬಗ್ಗೆಯೂ ವಿಚಾರಣೆ ನಡೆಯಲಿದೆ. ವಿಚಾರಣಾಧಿಕಾರಿಯು ನಲವತ್ತೈದು ದಿನಗಳೊಳಗೆ ವಿಚಾರಣೆ ನಡೆಸಿ, ವರದಿ ಸಲ್ಲಿಸಬೇಕೆಂದು ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.



ಸಾಹಿತ್ಯ ಪರಿಷತ್ತಿನ ವಿಶ್ವಾಸಾರ್ಹತೆ ಕುರಿತು ಎದುರಾಗಿರುವ ಪ್ರಶ್ನೆಗಳಿಗೆ ಉತ್ತರ ದೊರೆಯಬೇಕಾಗಿದೆ. ಯಾರದೋ ವ್ಯಕ್ತಿ ಪ್ರತಿಷ್ಠೆಗೆ ಶತಮಾನೋತ್ಸವ ಆಚರಿಸಿಕೊಂಡಿರುವ ಸಂಸ್ಥೆಯ ಘನತೆ ಮುಕ್ಕಾಗಬಾರದು.

ಮಹೇಶ ಜೋಶಿ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಿನಿಂದ ಒಂದಲ್ಲಾ ಒಂದು ವಿವಾದವನ್ನು ನಿರಂತರವಾಗಿ ಸೃಷ್ಟಿಸಿಕೊಳ್ಳುತ್ತಿದ್ದಾರೆ. ಆ ವಿವಾದಗಳು, ಪರಿಷತ್ತಿನ ಘನತೆ ಮತ್ತು ವರ್ಚಸ್ಸಿಗೆ ಧಕ್ಕೆ ತಂದಿವೆ ಹಾಗೂ ಪರಿಷತ್ತಿನ ಹಿತಚಿಂತಕರಿಗೆ ಮುಜುಗರ ಉಂಟು ಮಾಡಿವೆ. 2024ರ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ, ಮಂಡ್ಯ ಜಿಲ್ಲೆಯ ಬರಹಗಾರರು ಕಸಾಪ ಅಧ್ಯಕ್ಷರ ನಡವಳಿಕೆಗೆ ಪ್ರಬಲ ವಿರೋಧ ದಾಖಲಿಸಿದ್ದರು. ಬೆಂಗಳೂರು, ಹಾಸನ ಸೇರಿದಂತೆ ನಾಡಿನ ವಿವಿಧೆಡೆಗಳಲ್ಲಿ ಮಹೇಶ ಜೋಶಿ ಅವರ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಹೊರಗಿನವರಿಂದ ಮಾತ್ರವಲ್ಲದೆ, ಪರಿಷತ್ತಿನ ಒಳಗಿನವರಿಂದಲೂ ಅಧ್ಯಕ್ಷರ ನಡವಳಿಕೆಯ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ. ಇತ್ತೀಚೆಗಷ್ಟೇ ಪರಿಷತ್ತಿನಿಂದ ಹೊರಗೆ ಬಂದಿರುವ ಕಸಾಪದ ಇಬ್ಬರು ಗೌರವ ಕಾರ್ಯದರ್ಶಿಗಳು ತಮ್ಮ ರಾಜೀನಾಮೆಗೆ ಅಧ್ಯಕ್ಷರ ನಡವಳಿಕೆಯನ್ನೇ ಕಾರಣವನ್ನಾಗಿ ನೀಡಿದ್ದಾರೆ. ಬಳ್ಳಾರಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನಕ್ಕೆ ದಿನಾಂಕ ಹಾಗೂ ಸ್ಥಳ ನಿಗದಿಯಾಗುವ ಮುನ್ನವೇ ಅಧ್ಯಕ್ಷರ ಆಯ್ಕೆಯನ್ನು ನಡೆಸಿರುವ ಹೊಸ ಸಂಪ್ರದಾಯದ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ಸದಾಶಯದೊಂದಿಗೆ ಆರಂಭಗೊಂಡ ಪರಿಷತ್ತು, ನೂರಾ ಹತ್ತು ವರ್ಷಗಳನ್ನು ದಾಟಿ ಮುನ್ನಡೆದಿದೆ. ಅನೇಕ ಹಿರಿಯರ ಶ್ರಮ ಹಾಗೂ ತ್ಯಾಗ ಪರಿಷತ್ತಿನ ಬೆಳವಣಿಗೆಯ ಹಿಂದಿದೆ. ಈ ಹಿಂದೆಯೂ ಕಸಾಪ ವಿವಾದಗಳಿಗೆ ಗುರಿಯಾಗಿದ್ದರೂ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನ್ನುವ ಅದರ ಹಿರಿಮೆಗೆ ಕುಂದುಂಟಾಗಿಲ್ಲ. ಸಾಹಿತ್ಯ ಪರಿಷತ್ತು ತನ್ನ ವಿಶ್ವಾಸಾರ್ಹತೆ ಮತ್ತು ಘನತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಎದುರಾಗಿರುವ ಬಿಕ್ಕಟ್ಟಿನಿಂದ ಹೊರಬರುವುದು ಅಗತ್ಯವಾಗಿದೆ. ಸಹಕಾರ ಇಲಾಖೆಯ ವಿಚಾರಣೆ ಸಮರ್ಪಕವಾಗಿ ನಡೆಯುವ ಮೂಲಕ, ಸಾಹಿತ್ಯ ಪರಿಷತ್ತಿನ ವಿಶ್ವಾಸಾರ್ಹತೆ ಕುರಿತು ಉಂಟಾಗಿರುವ ಪ್ರಶ್ನೆಗಳಿಗೆ ಉತ್ತರ ದೊರೆಯಬೇಕಾಗಿದೆ. ಯಾರದೋ ವ್ಯಕ್ತಿ ಪ್ರತಿಷ್ಠೆಗೆ, ಶತಮಾನೋತ್ಸವ ಆಚರಿಸಿಕೊಂಡಿರುವ ಸಂಸ್ಥೆಯ ಘನತೆ ಮುಕ್ಕಾಗಬಾರದು.


## ಭಕ್ತಿಯ ಸೋಜಿಗ



ಹೊಸಪೇಟೆಯ ಮಾರುಕಟ್ಟೆಯಲ್ಲಿ ಲೋಹದ ಪೂಜಾ ಸಾಮಗ್ರಿಗಳ ಮಾರಾಟ ನಡೆಯುತ್ತದೆ. ಬೆಳ್ಳಿಯ ಲೇಪನದ ಛತ್ರಿ, ಚಾಮರ, ಕುದುರೆ, ನಂದಿಯನ್ನು ಜನರು ಕೊಂಡು, ದೇವಸ್ಥಾನಗಳಿಗೆ ನೀಡಿ ಹರಕೆ ಒಪ್ಪಿಸುತ್ತಾರೆ. ಬದುಕು, ಧರ್ಮ, ನೋವು, ಪರಿಹಾರ, ಬಡತನ, ಭಕ್ತಿ ಎಲ್ಲವೂ ಒಂದಕ್ಕೊಂದು ತಳಕು ಹಾಕಿಕೊಳ್ಳುವ ಈ ರಿವಾಜು ನನಗೆ ಯಾವಾಗಲೂ ಸೋಜಿಗ ಉಂಟು ಮಾಡುತ್ತದೆ.

**ವಸುಧೇಂದ್ರ**, ಸಾಹಿತಿ, ಫೇಸ್‌ಬುಕ್‌ನಿಂದ

## ಕಿಡಿನುಡಿ



ಕರ್ನಾಟಕ ಸಂಪದ್ಭರಿತ ರಾಜ್ಯ. ಆದರೆ, ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ರಾಜ್ಯ ಹಾಳಾಗಿದೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ. ಸರ್ಕಾರದ ಬಳಿ ಹಣವೇ ಇಲ್ಲ; ದಿವಾಳಿ ಆಗಿದೆ. ಜನರ ಉಸಿರಾಟ ಹೊರತುಪಡಿಸಿದರೆ ಪ್ರತಿಯೊಂದರ ಮೇಲೂ ತೆರಿಗೆ ಹಾಕಿದ್ದಾರೆ. ಏನನ್ನೂ ಬಿಟ್ಟಿಲ್ಲ.

**ನಿಖಿಲ್ ಕುಮಾರಸ್ವಾಮಿ**, ಜೆಡಿಎಸ್ ಯುವ ಘಟಕದ ಅಧ್ಯಕ್ಷ

## 25 ವರ್ಷಗಳ ಹಿಂದೆ

ಮಂಗಳವಾರ, 4-7-2000

**• ಕಾರಿಡಾರ್ ಯೋಜನೆ ಸಭೆ: ಗಲಭೆ, ಲಾಠಿ**

ಮಂಡ್ಯ, ಜುಲೈ 3– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ (ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್) ಯೋಜನೆಗೆ ಸಂಬಂಧಿಸಿ ಸಾರ್ವಜನಿಕರ ಅಭಿಪ್ರಾಯ ಪಡೆಯಲು ಜಿಲ್ಲಾಡಳಿತದಿಂದ ಇಂದು ಇಲ್ಲಿನ ರೈತ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿ, ಬಿಗುವಿನ ವಾತಾವರಣದಲ್ಲಿ ಘೋಷಣೆ, ಧಿಕ್ಕಾರ, ಗಲಭೆ, ಘರ್ಷಣೆ, ಲಘು ಲಾಠಿ ಪ್ರಹಾರ, ಬ್ಯಾನರ್ ಹರಿತ, ಸಭಾತ್ಯಾಗ ಮುಂತಾದ ಘಟನೆಗಳು ನಡೆದವು.

**• ಕೆಎಟಿಗೆ ಮರುಜೀವ ತುಂಬಲು ಸರ್ಕಾರದ ಕ್ರಮ**

ಬೆಂಗಳೂರು, ಜುಲೈ 3– ರಾಜ್ಯದ ಸಿಬ್ಬಂದಿಯ ಸೇವಾ ವಿಷಯದ ವಿವಾದಗಳನ್ನು ಬಗೆಹರಿಸುವುದಕ್ಕೆ ಸಂಬಂಧಿಸಿದ ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಮತ್ತೆ ಜೀವ ತುಂಬಿ ಅದು ಪೂರ್ಣ ಮಟ್ಟದಲ್ಲಿ ಕಾರ್ಯ ನಿರ್ವಹಿಸುವಂತಾಗುವ ಕಾಲ ಸನ್ನಿಹಿತವಾಗಿದೆ. ನ್ಯಾಯಮಂಡಳಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಹೈಕೋರ್ಟಿನ ಇಬ್ಬರು ನ್ಯಾಯಮೂರ್ತಿಗಳ ನೇಮಕಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

## 75 ವರ್ಷಗಳ ಹಿಂದೆ

ಮಂಗಳವಾರ, 4-7-1950

**• ನಾಲ್ಕು ಕಣ್ಣಿನ ಜೀವಂತ ಮಗು**

ರಾವಲ್ಪಿಂಡಿ, ಜುಲೈ 3– ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರು ನಾಲ್ಕು ಕಣ್ಣುಗಳುಳ್ಳ ಶಿಶುವೊಂದನ್ನು ಹೆತ್ತಿದ್ದಾರೆ. ಎರಡು ಕಣ್ಣುಗಳು ಅವು ಇರಬೇಕಾದ ಸ್ಥಳದಲ್ಲೇ ಇವೆ. ಇನ್ನುಳಿದ ಎರಡು ಕಣ್ಣುಗಳು ಅವುಗಳಿಗೆ ಸ್ವಲ್ಪ ಮೇಲುಭಾಗದಲ್ಲಿ ಹಣೆಯ ಮೇಲಿವೆ.

ಮಗು ಬದುಕಿದೆ. ಇದೊಂದು ಅಂಶ ಬಿಟ್ಟು ಮಿಕ್ಕೆಲ್ಲ ಅಂಶಗಳಲ್ಲೂ ಎಲ್ಲ ಮಕ್ಕಳಂತೆಯೇ ಮಗು ಇದೆ. ಮಗುವನ್ನು ನೋಡಲು ಜನ ಜಾತ್ರೆಯೇ ಸೇರುತ್ತಿದೆ.

# ಬೌದ್ಧಿಕ ಸ್ವಾತಂತ್ರ್ಯ: ಅಸಹನೆ ಏಕೆ?



ವಿಶ್ಲೇಷಣೆ

**ಕಿರಣ್ ಎಂ. ಗಾಜನೂರು**

'ಮಾನ್ಯ ನ್ಯಾಯಾಧೀಶರೇ, ಅಗೋ ಅಲ್ಲಿ ಕಟಕಟೆಯಲ್ಲಿ ಇದ್ದಾನಲ್ಲ, ಆತನ ಹೆಸರು ಆಂಟೋನಿಯೊ ಗ್ರಾಮ್ಸಿ. ಅವನು ಬಹಳ ಅಪಾಯಕಾರಿ. ಏಕೆಂದರೆ, ಅವನು ಪ್ರಭುತ್ವದ ಇಚ್ಛೆಗೆ ವಿರುದ್ಧವಾಗಿ 'ಯೋಚಿಸುತ್ತಾನೆ' ಮತ್ತು ತನ್ನ ಯೋಚನೆಗಳ ಮೂಲಕ ಪ್ರಭುತ್ವದ ಕಾರ್ಯಸೂಚಿಯನ್ನು ವಿಮರ್ಶಿಸುತ್ತಾನೆ. ಆ ಕಾರಣದಿಂದಾಗಿ, ಕನಿಷ್ಠ ಮುಂದಿನ ಇಪ್ಪತ್ತು ವರ್ಷಗಳ ಕಾಲ ಆತನ ಮೆದುಳು ಕಾರ್ಯ ನಿರ್ವಹಿಸುವುದನ್ನು ನಾವು ನಿಲ್ಲಿಸಬೇಕಿದೆ. ಮಹನೀಯರಾದ ತಾವು ಆತನಿಗೆ ಅಂತಹ ಶಿಕ್ಷೆಯನ್ನು ವಿಧಿಸಬೇಕು. ಇದು ನನ್ನ ವಿನಂತಿ'.

ಮೇಲಿನ ಚಾರಿತ್ರಿಕ ಸಂಭಾಷಣೆ, ಇಟಲಿಯ ಚಿಂತಕ ಆಂಟೋನಿಯೊ ಗ್ರಾಮ್ಸಿಯನ್ನು ಅಲ್ಲಿನ ಸರ್ವಾಧಿಕಾರಿ ಮುಸಲೊನಿಯು ನ್ಯಾಯಾಲಯ ವಿಚಾರಣೆಗೆ ಒಳಪಡಿಸಿದ ಸಂದರ್ಭದ್ದು; ಸರ್ವಾಧಿಕಾರಿಗಳ ಚರಿತ್ರೆಯ ಭಾಗವಾಗಿ ಗಮನಿಸಬಹುದಾದುದು. ಸಾಂಪ್ರದಾಯಿಕ ಮಾರ್ಕ್ಸ್‌ವಾದಿ ಚಿಂತನೆಗಳನ್ನು ವಿಮರ್ಶಿಸುವ ಮೂಲಕ ಜನಪರ ಚಿಂತನೆಗಳನ್ನು ಹೊಸ ಮಾದರಿಯಲ್ಲಿ ಮಂಡಿಸಿದ ಗ್ರಾಮ್ಸಿ, ಸರ್ವಾಧಿಕಾರದ ಮನಃಸ್ಥಿತಿಗೆ ವಿರೋಧಿಯಾಗಿ ಕಾಣಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ವಿಚಾರಣೆಯ ಕೊನೆಯಲ್ಲಿ ನ್ಯಾಯಾಧೀಶರು ಗ್ರಾಮ್ಸಿಗೆ 20 ವರ್ಷಕ್ಕೂ ಹೆಚ್ಚಿನ ಅವಧಿಯ ಜೈಲು ಶಿಕ್ಷೆ ವಿಧಿಸಿದರು. ಆದರೆ, ಅಷ್ಟು ವರ್ಷಗಳ ಶಿಕ್ಷೆ ಅನುಭವಿಸಲು ಗ್ರಾಮ್ಸಿ ಜೀವಂತವಾಗಿರಲಿಲ್ಲ. ಏಳೆಂಟು ವರ್ಷಗಳ ಶಿಕ್ಷೆ ಮುಗಿಯುವಷ್ಟರಲ್ಲಿ, ಅನಾರೋಗ್ಯದಿಂದಾಗಿ ಜೈಲಿನಲ್ಲಿಯೇ ಮರಣ ಹೊಂದಿದ. ಆದರೆ, ನ್ಯಾಯವಾದಿ ಬಯಸಿದಂತೆ ಜೈಲಿನಲ್ಲಿದ್ದ ಅವಧಿಯಲ್ಲಿ ಆತನ ಮೆದುಳು ನಿಷ್ಕ್ರಿಯವಾಗಿರಲಿಲ್ಲ. ಆ ಸೃಜನಶೀಲ ಮನಸ್ಸು, ಸುಮಾರು ಮೂರು ಸಾವಿರ ಪುಟಗಳಷ್ಟು ಸಾಹಿತ್ಯವನ್ನು ಜೈಲಿನಲ್ಲಿದ್ದಾಗ ಸೃಷ್ಟಿಸಿತು. ಆ ಸಾಹಿತ್ಯವೇ 'ಪ್ರಿಸನ್ ನೋಟ್‌ಬುಕ್' ಎಂಬ ಹೆಸರಿನಲ್ಲಿ ಪ್ರಕಟಗೊಂಡು ಪ್ರಖ್ಯಾತಗೊಂಡಿದೆ. ಗ್ರಾಮ್ಸಿ ತನ್ನ ಪುಸ್ತಕದಲ್ಲಿ ಮಂಡಿಸಿದ 'ಸಾಂಸ್ಕೃತಿಕ ಯಾಜಮಾನ್ಯ ಸಿದ್ಧಾಂತ' ಜಗತ್ತಿನ ಬೌದ್ಧಿಕ ಚಿಂತನೆಯ ದಿಕ್ಕನ್ನೇ ಪ್ರಭಾವಿಸಿತು; ಮುಂದೆ, ಎಡ್ವರ್ಡ್ ಸೈದ್ ಬರೆದ 'ಓರಿಯಂಟಲಿಸಂ' ಎನ್ನುವ ಮಹತ್ವದ ಕೃತಿಗೆ ಪ್ರೇರಣೆಯಾಯಿತು.

ಈ ಚಾರಿತ್ರಿಕ ಘಟನೆಯ ಉದಾಹರಣೆಯನ್ನು ವಿಶ್ವದ ವಿವಿಧ ಭಾಗಗಳಲ್ಲಿ ಪ್ರಸ್ತುತ ನಡೆಯುತ್ತಿರುವ ಬೌದ್ಧಿಕ ಸ್ವಾತಂತ್ರ್ಯದ ಮೇಲಿನ ಪ್ರಭುತ್ವದ ದಾಳಿಗಳ ಭಾಗವಾಗಿ ನೋಡಬೇಕಿದೆ. ಜಗತ್ತಿನ ಚರಿತ್ರೆಯಲ್ಲಿ ಬೌದ್ಧಿಕ ಸ್ವಾತಂತ್ರ್ಯದ ಮೇಲಿನ ಪ್ರಭುತ್ವದ ದಾಳಿಗೆ ಸಾಕಷ್ಟು ಉದಾಹರಣೆಗಳೂ ಇವೆ ಮತ್ತು ಈ ವಿದ್ಯಮಾನ ಭಾರತಕ್ಕೆ ಸೀಮಿತವಾದ ಸಂಗತಿಯಲ್ಲ ಎನ್ನುವುದನ್ನೂ ನಾವು ಗಮನಿಸಬೇಕಿದೆ.

ಬೌದ್ಧಿಕ ಸ್ವಾತಂತ್ರ್ಯದ ಮೇಲಿನ ಅಸಹನೆ ಹಾಗೂ ದಾಳಿ ಜಾಗತಿಕವಾಗಿ ಹೆಚ್ಚುತ್ತಿರುವ ದಿನಗಳಿವು. ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾದ ನಂತರ ಅಲ್ಲಿನ ವಿಶ್ವ ಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ಮುಕ್ತ ಪ್ರತಿಭಟನೆಗೆ ಇದ್ದ ಎಲ್ಲ ಅವಕಾಶಗಳೂ ಮೊಟಕುಗೊಂಡಿವೆ. ಹೊಸ ನಿಯಮಗಳ ಮೂಲಕ ವಿದ್ಯಾರ್ಥಿಗಳ ಬೌದ್ಧಿಕ ಅಭಿಪ್ರಾಯಗಳ ಮೇಲೆ ಸರ್ಕಾರ ನಿರ್ಬಂಧ ಹೇರುತ್ತಿರುವುದು ವಿಶ್ವವಿದ್ಯಾಲಯಗಳ ಚೈತನ್ಯವನ್ನು ಗಾಸಿಗೊಳಿಸುವ ಪ್ರಯತ್ನವಾಗಿದೆ.

ಸೆಂಟ್ರಲ್ ಯೂರೋಪಿಯನ್ ಯೂನಿವರ್ಸಿಟಿಯು ಯೂರೋಪ್‌ನ ಪ್ರಮುಖ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಅಂತರಶಿಸ್ತೀಯ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಇಡೀ ಯೂರೋಪ್‌ನಲ್ಲಿಯೇ ಪ್ರಸಿದ್ಧಿ ಪಡೆದಿತ್ತು. ಈ ಮೊದಲು ಇದರ ಮುಖ್ಯ ಕ್ಯಾಂಪಸ್ ಹಂಗೇರಿಯ ರಾಜಧಾನಿ ಬುಡಾಪೆಸ್ಟ್‌ನಲ್ಲಿತ್ತು. ಆದರೆ, ಅಮೆರಿಕದ ಮಾನ್ಯತೆಪಡೆದ ಕಾರ್ಯಕ್ರಮಗಳನ್ನು ಮುಂದುವರಿಸುವುದಕ್ಕೆ ಹಂಗೇರಿ ಸರ್ಕಾರ ಅವಕಾಶ ನಿರಾಕರಿಸಿತು. ಹಾಗಾಗಿ, ವಿಶ್ವವಿದ್ಯಾಲಯವು ತನ್ನ ಬಹುತೇಕ ಕಾರ್ಯಾಚರಣೆಗಳನ್ನು ಆಸ್ಟ್ರಿಯಾ ರಾಜಧಾನಿ ವಿಯೆನ್ನಾಕ್ಕೆ ಸ್ಥಳಾಂತರಿಸಿದೆ. ಈ ಘಟನೆಯೂ ಶೈಕ್ಷಣಿಕ ಕ್ಷೇತ್ರದ ಸ್ವಾಯತ್ತತೆಯನ್ನು ಪ್ರಭುತ್ವ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನವೇ ಆಗಿದೆ. ಶೈಕ್ಷಣಿಕ ಕ್ಷೇತ್ರದ ಬಗೆಗಿನ ದಮನಕಾರಿ ನಡವಳಿಕೆಯು ಟರ್ಕಿಯಲ್ಲೂ ಕಾಣಿಸಿಕೊಂಡಿದೆ. 2016ರ ದಂಗೆ ಪ್ರಯತ್ನದ ನಂತರ ಶೈಕ್ಷಣಿಕ ಕ್ಷೇತ್ರದ ಮೇಲೆ ವ್ಯಾಪಕವಾದ ದಮನ ನೀತಿಯನ್ನು ಟರ್ಕಿಯಲ್ಲಿ ಅನುಸರಿಸಲಾಗುತ್ತಿದೆ. ಟರ್ಕಿಶ್ ಇಸ್ಲಾಮಿಕ್ ಚಳವಳಿಯಾದ 'ಗುಲೆನ್ ಚಳವಳಿ'ಯನ್ನು ಬೆಂಬಲಿಸುತ್ತಿವೆ ಎಂದು ಆರೋಪಿಸಿ ಹಲವು ವಿಶ್ವ ವಿದ್ಯಾಲಯಗಳನ್ನು ಮುಚ್ಚಲಾಗಿದೆ.

ಜಾಗತಿಕವಾಗಿ ನಡೆಯುತ್ತಿರುವ ಈ ಎಲ್ಲಾ ವಿದ್ಯಮಾನಗಳು ಶೈಕ್ಷಣಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿಗಳಾಗಿವೆ. ಆರೋಗ್ಯಕರ ಸಮಾಜಕ್ಕೆ ಶಿಕ್ಷಣ ಕ್ಷೇತ್ರದ ಸ್ವಾಯತ್ತತೆ ಅಗತ್ಯ ಎಂದು ನಂಬಿದವರ ಕಳವಳಕ್ಕೆ ಆ ದಾಳಿಗಳು ಕಾರಣವಾಗಿವೆ. ಶೈಕ್ಷಣಿಕ ಕ್ಷೇತ್ರದ ಮೇಲಿನ ದಮನಕಾರಿ ನೀತಿ, ಶಿಕ್ಷಣ ಸಂಸ್ಥೆಗಳ ಮೇಲೆ ಆಳುವ ವರ್ಗ ತನ್ನ ಪ್ರಾಬಲ್ಯ ಸ್ಥಾಪಿಸುವ ನವ ಉದಾರವಾದಿ ರಾಜಕೀಯ ನೀತಿಗಳ ಹುನ್ನಾರದ ಭಾಗ ಎನ್ನುವ ವಿಶ್ಲೇಷಣೆಗಳನ್ನು ಜಗತ್ತಿನ ಹಲವು ಶೈಕ್ಷಣಿಕ ತಜ್ಞರು ಮುಂದಿಡುತ್ತಿದ್ದಾರೆ.

ಭಾರತದಲ್ಲಿನ ಬೌದ್ಧಿಕ ಸ್ವಾತಂತ್ರ್ಯದ ಮೇಲಿನ ದಾಳಿಗೆ ಸುದೀರ್ಘ ಇತಿಹಾಸವೇ ಇದೆ.

> ಬೌದ್ಧಿಕ ಸ್ವಾತಂತ್ರ್ಯದ ಮೇಲೆ ವಿಶ್ವದ ಅನೇಕ ಭಾಗಗಳಲ್ಲಿ ಹಲ್ಲೆ ನಡೆಯುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿನ ಸ್ವಾಯತ್ತತೆಯನ್ನು ಹತ್ತಿಕ್ಕಲಾಗುತ್ತಿದೆ. ವಿಶ್ವಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರತಿಭಟನೆಯ ಅವಕಾಶಗಳನ್ನು ಮೊಟಕುಗೊಳಿಸುವ ಪ್ರಯತ್ನಗಳು ನಡೆದಿವೆ. ಇದರಿಂದಾಗಿ ವಿವಿಗಳು ಬೌದ್ಧಿಕ ದಾರಿದ್ರ್ಯದೊಂದಿಗೆ ಭ್ರಷ್ಟಾಚಾರವನ್ನೂ ಮೈಗೂಡಿಸಿಕೊಂಡಿವೆ.

ಮುಖ್ಯವಾಗಿ, 1960ರ ದಶಕದ ನಂತರ, ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸುವ ಪ್ರಕ್ರಿಯೆಗಳನ್ನು ಪ್ರಭುತ್ವ ಆರಂಭಿಸಿತು. ಈ ವಿದ್ಯಮಾನ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇನ್ನೂ ತೀವ್ರವಾದ ಸ್ಥಿತಿಗೆ ತಲುಪಿತು.

ವಿಶ್ವವಿದ್ಯಾಲಯಗಳ ಆಡಳಿತವನ್ನು ಸರಿದಾರಿಗೆ ತರುವ ಹೆಸರಿನಲ್ಲಿ ಕುಲಪತಿಗಳ ಆಯ್ಕೆಯನ್ನು ಸರ್ಕಾರಿ ವ್ಯವಸ್ಥೆಯ ತೆಕ್ಕೆಗೆ ತೆಗೆದುಕೊಳ್ಳಲಾಯಿತು. ವಿಶ್ವವಿದ್ಯಾಲಯಗಳ ಸಿಬ್ಬಂದಿ ನೇಮಕಾತಿಯಲ್ಲಿ ಸರ್ಕಾರದ ಹಸ್ತಕ್ಷೇಪಗಳು ವ್ಯಾಪಕವಾಗಿ ನಡೆದವು. ಬಹಳ ಮುಖ್ಯವಾಗಿ, ವಿಶ್ವವಿದ್ಯಾಲಯದ ಬೌದ್ಧಿಕ ಸ್ವಾತಂತ್ರ್ಯದ ಜೀವಾಳವಾಗಿದ್ದ ವಿದ್ಯಾರ್ಥಿ ಚುನಾವಣೆಗಳನ್ನೇ ರದ್ದುಗೊಳಿಸುವ ಮೂಲಕ ಬೌದ್ಧಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದೊಡ್ಡ ದಾಳಿಯನ್ನೇ ನಡೆಸಲಾಯಿತು.

ಈಗ ಪರಿಸ್ಥಿತಿ ಇನ್ನೂ ವಿಪರೀತಕ್ಕೆ ಹೋಗಿದೆ. ವಿಚಾರ ಸಂಕಿರಣಗಳನ್ನು ಮೇಲ್ವಿಚಾರಣೆ ಮಾಡುವ, ಶೈಕ್ಷಣಿಕ ಸಂಶೋಧನೆಗಳನ್ನು ಪರಿಶೀಲಿಸುವ ಅಥವಾ ಶಿಕ್ಷಣ ತಜ್ಞರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗಾಗಿ ಅವರನ್ನು ಶಿಕ್ಷಿಸುವ ಮತ್ತು ಅಮಾನತುಗೊಳಿಸುವ, ಬಂಧಿಸುವ ಪ್ರಕರಣಗಳು ಪ್ರಸ್ತುತ ವ್ಯಾಪಕವಾಗಿ ನಡೆಯುತ್ತಿವೆ. ತುರ್ತು ಪರಿಸ್ಥಿತಿ ಕಾಲದಲ್ಲಿಯೂ ಬೌದ್ಧಿಕ ಸ್ವಾತಂತ್ರ್ಯದ ಮೇಲೆ ಇಷ್ಟು ತೀವ್ರ ಹಾಗೂ ವ್ಯಾಪಕ ದಾಳಿ ನಡೆದಿರಲಿಲ್ಲ ಎನ್ನುವ ಅಂಶವನ್ನು ನಮ್ಮ ನಡುವಿನ ರಾಜಕೀಯ ಶಾಸ್ತ್ರಜ್ಞೆ ಜೊಯಾ ಹಸನ್ ಗುರ್ತಿಸಿದ್ದಾರೆ. ವಿಶ್ವವಿದ್ಯಾಲಯಗಳ ಆವರಣಗಳಲ್ಲಿ ವಾಕ್ ಸ್ವಾತಂತ್ರ್ಯ ಹಾಗೂ ಡಿಜಿಟಲ್ ಹಕ್ಕುಗಳನ್ನು ವಿರೋಧಿಸಿ ಬೆದರಿಕೆಗಳು ಹೆಚ್ಚಾಗುತ್ತಿರುವ ದಿನಗಳಿವು. ಇಂಥ ಬೆದರಿಕೆಗಳ ಜೊತೆ ಜೊತೆಗೆ, ಸ್ವತಂತ್ರವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಚಿಂತಕರನ್ನು ಗುರಿಯಾಗಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸುವ ಬೆಳವಣಿಗೆ ವಿಪರೀತವಾಗಿದ್ದು, ಅದು ಬೌದ್ಧಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡುತ್ತಿದೆ. ಜನಪರ ರಾಜಕೀಯ ಚಿಂತನೆಗಳ ಉಗಮ ಸ್ಥಾನ ಹಾಗೂ ಸಂವಾದಗಳ ಗಂಗೋತ್ರಿ ಆಗಬೇಕಾಗಿದ್ದ ವಿಶ್ವವಿದ್ಯಾಲಯಗಳು ಬೌದ್ಧಿಕ ದಾರಿದ್ರ್ಯದಿಂದ ಬಳಲುವುದರ ಜೊತೆಗೆ ಭ್ರಷ್ಟಾಚಾರದ ಪ್ರಯೋಗಶಾಲೆಗಳೂ ಆಗಿವೆ.

ಸಮಾಜದಲ್ಲಿನ ವೈಚಾರಿಕತೆಯ ಮಟ್ಟ ಕ್ಷೀಣಿಸುತ್ತಿರುವುದಕ್ಕೂ ವಿಶ್ವವಿದ್ಯಾಲಯಗಳ ಜಡತೆಗೂ ಸಂಬಂಧವಿದೆ. ಕೆಲವು ವಿಶ್ವವಿದ್ಯಾಲಯಗಳು ರಾಜಕೀಯ ಸಂಘಟನೆಗಳ ಹಿಡಿತಕ್ಕೆ ಸಿಕ್ಕಿದ್ದು, ಸುಧಾರಿಸಲು ಅಸಾಧ್ಯ ಎನ್ನುವ ಮಟ್ಟಿಗೆ ಕೊಳೆತು ನಾರುತ್ತಿವೆ. ಹಿಂದೆ ಪ್ರಭುತ್ವವು ಶಿಕ್ಷಕರಿಗೆ ನೀವು 'ಏನನ್ನು ಕಲಿಸಬೇಕು' ಎನ್ನುವುದನ್ನು ನಿರ್ದೇಶಿಸುತ್ತಿತ್ತು. ಆದರೆ, ಇಂದು 'ಏನನ್ನು ಕಲಿಸಬೇಕು' ಎಂದು ಮಾತ್ರ ನಿರ್ದೇಶಿಸುತ್ತಿಲ್ಲ, 'ಹೇಗೆ ಕಲಿಸಬೇಕು' ಎನ್ನುವುದನ್ನು ನಿರ್ದೇಶಿಸುವ ಸ್ಥಿತಿಗೆ ಬದಲಾಗಿದೆ ಹಾಗೂ ಪಠ್ಯಗಳಲ್ಲಿ ಸಂಕುಚಿತ ಮನೋಭಾವ ತುಂಬುತ್ತಿದೆ.

ಉದಾಹರಣೆಗೆ, 'ಪ್ರಜಾಪ್ರಭುತ್ವವನ್ನು ಕಲಿಸುವುದೇ ಆದರೆ ಪ್ರಾಚೀನ ಭಾರತದಲ್ಲಿನ ಪ್ರಜಾಪ್ರಭುತ್ವವನ್ನು ಕಲಿಸಿ' ಎಂಬ ಕೇಂದ್ರೀಕೃತ ಮಾದರಿ ಪಠ್ಯಗಳನ್ನು ಸೂಚಿಸಲಾಗುತ್ತಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎನ್ನುವ ಪ್ರತಿರೋಧದ ಧ್ವನಿಗಳು ಕ್ಷೀಣವಾಗಿವೆ. ಇಂದಿನ ಪ್ರಭುತ್ವಗಳು ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ನಿರ್ದಿಷ್ಟವಾಗಿ ಕಲಿಸುವುದನ್ನು ನಿರ್ಬಂಧಿಸುತ್ತಿವೆ ಎನ್ನುವ ಅಭಿಪ್ರಾಯಗಳಿವೆ. ಹಾಗೆಂದು ಖಾಸಗಿ ವಿಶ್ವ-ವಿದ್ಯಾಲಯಗಳಲ್ಲಿ ಆರೋಗ್ಯಕರ ವಾತಾವರಣವಿದೆ ಎಂದು ಹೇಳಲಾಗದು. ಪ್ರಭುತ್ವದೊಂದಿಗೆ ತೊಂದರೆಗೆ ಸಿಲುಕುವುದನ್ನು ಬಯಸದ ಖಾಸಗಿ ವಿಶ್ವವಿದ್ಯಾಲಯಗಳು ಸ್ವಯಂ ಸೆನ್ಸಾರ್ ನೀತಿಗಳನ್ನು ಸ್ವಯಂ ಪ್ರೇರಣೆಯಿಂದಲೇ ಅಳವಡಿಸಿಕೊಳ್ಳುತ್ತಿವೆ.

ಬೌದ್ಧಿಕ ಸ್ವಾತಂತ್ರ್ಯದ ಚರಿತ್ರೆ ನೋಡುವುದಾದರೆ, ಜೀವಪರವಾಗಿ ಯೋಚಿಸುವ ಚಿಂತಕರಿಗೆ ಎಲ್ಲ ಕಾಲದಲ್ಲೂ ವಿರೋಧ ಇದ್ದೇ ಇತ್ತು. ಉದಾಹರಣೆಗೆ, ಬುದ್ಧನ ಕಾಲದಲ್ಲೂ ಆತನ ತತ್ವಗಳನ್ನು ವಿರೋಧಿಸುವವರು ಸಾಕಷ್ಟು ಮಂದಿಯಿದ್ದರು. ಬಸವಣ್ಣನ ಸಮಯದಲ್ಲೂ ಅವರ ವಿಚಾರಗಳನ್ನು ಒಪ್ಪದವರಿದ್ದರು. ಅಂಬೇಡ್ಕರ್ ಅವರ ಚಿಂತನೆಗಳಿಗೂ ಪ್ರಬಲ ಪ್ರತಿರೋಧವಿತ್ತು; ಈಗಿನ ಸಂವಿಧಾನ ಕಾಲದಲ್ಲಿಯೂ ಸಂವಿಧಾನ ತತ್ವಗಳನ್ನು ವಿರೋಧಿಸುವವರು ಸಾಕಷ್ಟು ಮಂದಿಯಿದ್ದಾರೆ.

ಆದರೆ, ಚರಿತ್ರೆಯಲ್ಲಿ ಕೊನೆಗೂ ಗೆಲುವು ಸಾಧಿಸಿರುವುದು, ಉಳಿದಿರುವುದು ಮತ್ತು ಮುಂದುವರಿಯುತ್ತಿರುವುದು ಬುದ್ಧ, ಬಸವ, ಅಂಬೇಡ್ಕರ್ ಮತ್ತು ಸಂವಿಧಾನದ ತತ್ವಗಳು ಮಾತ್ರ. ಈ ಜೀವಪರ ತತ್ವಗಳ ವಿರೋಧಿಗಳು ಕಣ್ಮರೆಯಾಗಿ ಹೋಗಿದ್ದಾರೆ.

ಬೌದ್ಧಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ವರ್ತಮಾನದಲ್ಲಿ ಕಾಣಿಸುತ್ತಿರುವ ಅಸಹನೆ ಹಾಗೂ ವೈಚಾರಿಕತೆಯನ್ನು ಹತ್ತಿಕ್ಕಲು ನಡೆಯುತ್ತಿರುವ ದಾಳಿಗಿಂತಲೂ ತೀವ್ರವಾದ ಬೆದರಿಕೆಗಳನ್ನು ಎದುರಿಸಿದ, ಬೆದರಿಕೆಗಳ ನಡುವೆಯೂ ಸತ್ಯ ಹೇಳಲಿಕ್ಕೆ ಹಿಂಜರಿಯದ ಸಾಕ್ರೆಟೀಸ್, ಗೆಲಿಲಿಯೊ, ಆಂಟೋನಿಯೊ ಗ್ರಾಮ್ಸಿ, ಅಂಬೇಡ್ಕರ್ ಹಾಗೂ ಸಾವಿತ್ರಿಬಾಯಿ ಫುಲೆ ಅವರ ಪರಂಪರೆಯ ಜೊತೆ ಜೊತೆಗೆ ಪ್ರಸ್ತುತ ಬಂಧನದಲ್ಲಿರುವ ಅಶೋಕ ವಿಶ್ವವಿದ್ಯಾಲಯದ ಪ್ರೊ. ಅಲಿ ಖಾನ್ ಮಹಮೂದಾಬಾದ್ ಅವರನ್ನೂ ನಾವು ನೆನಪಿಸಿಕೊಳ್ಳಬೇಕು. ಈ ನೆನಪು, ಬೌದ್ಧಿಕ ಹಾಗೂ ಶೈಕ್ಷಣಿಕ ಸ್ವಾಯತ್ತತೆಯ ಮಹತ್ವವನ್ನು ತಿಳಿಸುವುದರ ಜೊತೆಗೆ, ಅದನ್ನು ರಕ್ಷಿಸಿಕೊಳ್ಳಬೇಕಾದ ಜರೂರನ್ನು ನಮಗೆ ಮನವರಿಕೆ ಮಾಡಿಕೊಡುವಂತಹದ್ದು.

## ವಾಚಕರ ವಾಣಿ

### ಎಚ್. ನರಸಿಂಹಯ್ಯ ನೆನಪಾಗಲಿಲ್ಲವೇ?

**ಬೆಂಗಳೂರು** ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ದಿವಂಗತ ಡಾ.ಮನಮೋಹನ್ ಸಿಂಗ್ ಅವರ ಹೆಸರಿಡಲು ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ (ಪ್ರ.ವಾ., ಜುಲೈ 3). ಈ ವಿಶ್ವವಿದ್ಯಾಲಯಕ್ಕೂ ಮನಮೋಹನ್ ಸಿಂಗ್ ಅವರಿಗೂ ಎತ್ತಣಿಂದೆತ್ತ ಸಂಬಂಧ? ವಿಚಾರವಾದಿ ಎಚ್. ನರಸಿಂಹಯ್ಯ ಅವರ ದೂರದೃಷ್ಟಿಯ ಫಲವಾಗಿ ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯವು ಬಹು ವಿಸ್ತಾರವಾಗಿ ಬೆಳೆದು ನಿಂತಿದೆ.

ಅಂದು ಬೆಂಗಳೂರಿನ ಹೃದಯ ಭಾಗದಲ್ಲಿದ್ದ ವಿಶ್ವವಿದ್ಯಾಲಯವನ್ನು ಹೊರವಲಯಕ್ಕೆ ಸ್ಥಳಾಂತರಿಸದಿದ್ದರೆ ಈ ಮಟ್ಟಿಗೆ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ. ವಿಶ್ವವಿದ್ಯಾಲಯಕ್ಕೆ ನರಸಿಂಹಯ್ಯ ಅವರ ಹೆಸರಿಟ್ಟರೆ ಚೆನ್ನಾಗಿರುತ್ತದೆ. ವಿಶ್ವವಿದ್ಯಾಲಯದ ಬೆಳವಣಿಗೆಯಲ್ಲಿ ಅವರಿಗಿದ್ದ ದೂರದೃಷ್ಟಿಯು ಸರ್ಕಾರಕ್ಕೆ ಅರ್ಥವಾಗದಿರುವುದು ಅಚ್ಚರಿ ತಂದಿದೆ.

**ಅ.ನಾ. ರಾವ್ ಜಾದವ್**, ಬೆಂಗಳೂರು

### ವನ್ಯಜೀವಿಗಳ ಹತ್ಯೆ ತಡೆಯಿರಿ

**ಚಾಮರಾಜನಗರ** ಜಿಲ್ಲೆಯ ಬಂಡೀಪುರದ ಬಫರ್ ವಲಯದಲ್ಲಿ 18 ಕೋತಿಗಳು ವಿಷಪ್ರಾಶನದಿಂದ ಮೃತಪಟ್ಟಿವೆ (ಪ್ರ.ವಾ., ಜುಲೈ 3). ಮಲೆಮಹದೇಶ್ವರ ವನ್ಯಜೀವಿಧಾಮದಲ್ಲಿ ವಿಷಪ್ರಾಶನದಿಂದ ಐದು ಹುಲಿಗಳು ಮೃತಪಟ್ಟ ಘಟನೆ ಜನರ ಮನಸ್ಸಿನಿಂದ ಮಾಸುವ ಮುನ್ನವೇ ಕೋತಿಗಳು ಬಲಿಯಾಗಿರುವುದು ಅತ್ಯಂತ ದುಃಖಕರ.

ಮನುಷ್ಯನ ದುರಾಸೆಗೆ ವನ್ಯಜೀವಿಗಳು ಜೀವ ಕಳೆದುಕೊಳ್ಳುತ್ತಿವೆ. ಅರಣ್ಯ ಇಲಾಖೆ ಅಧಿಕಾರಿಗಳು ಅರಣ್ಯದ ಅಂಚಿನ ಗ್ರಾಮಗಳಲ್ಲೂ ಗಸ್ತು ಹೆಚ್ಚಿಸಬೇಕು. ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ತೆಗೆದುಕೊಳ್ಳಬೇಕಿದೆ.

**ವಿಜಯಕುಮಾರ್ ಎಚ್.ಕೆ.**, ರಾಯಚೂರು

### ಕಾಟಾಚಾರದ ಸಮೀಕ್ಷೆ

**ರಾಜ್ಯ** ಸರ್ಕಾರವು ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ಸಮೀಕ್ಷೆ ನಡೆಸುತ್ತಿದೆ. ಆದರೆ, ಇದರ ಮಾನದಂಡವೇನು ಎಂಬುದು ತಿಳಿಯುತ್ತಿಲ್ಲ. ನಾವಿರುವ ಹನುಮಗಿರಿನಗರ, ಚಿಕ್ಕಲ್ಲಸಂದ್ರದಲ್ಲಿ ವಸತಿ ಸಮುಚ್ಚಯಕ್ಕೆ ಸಮೀಕ್ಷೆ ನಡೆಸಲು ಮಹಾನಗರ ಪಾಲಿಕೆಯ ಸಿಬ್ಬಂದಿ ಬಂದಿದ್ದರು. 'ಇಲ್ಲಿ ಎಷ್ಟು ಮನೆಗಳಿವೆ, ಯಾವ ಜಾತಿಯವರಿದ್ದಾರೆ, ಪರಿಶಿಷ್ಟರು ಇದ್ದಾರೆಯೇ' ಎಂದಷ್ಟೇ ಕೇಳಿ ಎಲ್ಲರ ಮನೆಗಳ ಮುಂದೆ ಸಮೀಕ್ಷೆ ಆಗಿದೆ ಎಂಬ ಚೀಟಿ ಅಂಟಿಸಿ ಹೋಗಿದ್ದಾರೆ. ಇಂತಹ ಕಾಟಾಚಾರದ ಸಮೀಕ್ಷೆಯಿಂದ ಜನರ ತೆರಿಗೆ ಹಣ ವ್ಯರ್ಥವಾಗುವುದಿಲ್ಲವೇ. ಸರ್ಕಾರ ಈ ಬಗ್ಗೆ ಪರಿಶೀಲಿಸಬೇಕಿದೆ.

**ಎಸ್.ವಿ. ಗೋಪಾಲ್ ರಾವ್**, ಬೆಂಗಳೂರು

### ಹಿಂದಿ ಎಂಬ ಗಟ್ಟಿ ಭಾಷೆ ಇದೆಯೇ?

**ಲೇಖಕ** ಪುರುಷೋತ್ತಮ ಬಿಳಿಮಲೆ ಅವರ 'ಇದು ದ್ವಿಭಾಷಾ ಸೂತ್ರದ ಸಮಯ' ಲೇಖನವು (ಪ್ರ.ವಾ., ಜುಲೈ 3) ಹಿಂದಿ ಎಂಬುದರ ಬೇರಿಲ್ಲದ ಜಾಳುತನವನ್ನು ಸ್ಪಷ್ಟವಾಗಿ ವಿಷದೀಕರಿಸುತ್ತದೆ. 'ಖಡಿಬೋಲಿ' ಎಂಬುದು ಅಂದಂದಿನ, ಅಲ್ಲಲ್ಲಿನ ಆಡುಭಾಷೆ ಆಗಿತ್ತು. ಅದಕ್ಕೆ ತೇಪೆ ಹಾಕಿ 'ಹಿಂದಿ' ಎಂಬ ತಾತ್ಪೂರ್ತಿಕ ಸಂಕವನ್ನು ರಚಿಸಲಾಗಿತ್ತು. ಗಾಂಧೀಜಿ ಮಾತನಾಡಿದ್ದಾರೆ ಎನ್ನಲಾದ ಧ್ವನಿಮುದ್ರಣಗಳನ್ನು ಕೇಳಿದಾಗ ಈ 'ಅಸ್ಪಷ್ಟತೆ' ಅರ್ಥವಾಗುತ್ತದೆ.

ರಾಜಕೀಯ ಧುರೀಣರು, ಉತ್ತರ ಪ್ರದೇಶ, ಬಿಹಾರದಿಂದ ವಲಸೆ ಬಂದ ಕಸುಬುದಾರರು ಹಿಂದಿ ಎಂಬ ಭಾಷೆಯನ್ನು ಮಾತನಾಡುತ್ತಾರಾದರೂ, ಅದು ನಮಗೆ ಅರ್ಥವಾಗುವುದು ಭಾಷೆಗಿಂತಲೂ ಹೆಚ್ಚಾಗಿ ಸಂದರ್ಭ ಮತ್ತು ತಕ್ಕ ಹಾವಭಾವದಿಂದಷ್ಟೇ. ಆ 'ಹಿಂದಿ' ಕಸುಬುದಾರಿಕೆಗೆ ಸೀಮಿತವಾಗಿರಲಿ. ನಮ್ಮ ದೈನಂದಿನ ವ್ಯವಹಾರಕ್ಕೆ ಕನ್ನಡ ಬೇಕು; ವ್ಯವಹಾರಕ್ಕೆ ಇಂಗ್ಲಿಷ್.

**ಆರ್.ಕೆ. ದಿವಾಕರ**, ಬೆಂಗಳೂರು

### ಜೀವಜಾಲದ ಅರಿವು ಇರಲಿ

**ಚಿಕ್ಕಬಳ್ಳಾಪುರ** ಜಿಲ್ಲೆಯ ಈಗಿನ ಸ್ಥಿತಿಗತಿ ಕುರಿತ ಅ.ನ. ಯಲ್ಲಪ್ಪ ರೆಡ್ಡಿ ಅವರ ಲೇಖನ ಓದಿದಾಗ (ಪ್ರ.ವಾ., ಜುಲೈ 3) ಸುಮಾರು 40 ವರ್ಷಗಳ ಹಿಂದೆ ಬಾಗೇಪಲ್ಲಿಯ ಜೂಲಪಾಳ್ಯ ಎಂಬ ಗ್ರಾಮದಲ್ಲಿ ನಾನು ನೆಲಸಿದ್ದ ದಿನಗಳು ನೆನಪಾದವು. ರಾಷ್ಟ್ರೀಯ ಹೆದ್ದಾರಿಗೆ ಹತ್ತಿರವಿರುವುದರಿಂದ ಈಗ ಬಾಗೇಪಲ್ಲಿ ಪಟ್ಟಣ ಸುಧಾರಿಸಿರಬಹುದು. ಆದರೆ, ಭಾಗ್ಯನಗರ ಎನ್ನುವಂತಿಲ್ಲ.

ಸೇತುವೆ, ರಸ್ತೆ, ಕಟ್ಟಡ ನಿರ್ಮಾಣವಾದರೆ ಅಭಿವೃದ್ಧಿಯಾದಂತೆ ಎಂಬ ಮನಃಸ್ಥಿತಿ ಬದಲಾಗಬೇಕಾಗಿದೆ. ನಂದಿಬೆಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಅಲ್ಲಿನ ಜೀವಜಾಲದ ಬಗ್ಗೆಯೂ ಅರಿವು ಇರಬೇಕಿದೆ.

**ಎಚ್.ಎಸ್. ಮಂಜುನಾಥ**, ಗೌರಿಬಿದನೂರು


### ವ್ಯಾಪಾರಸ್ಥರ ಗೋಳು ಕೇಳೋರ್ಯಾರು?

**ಮಂಡ್ಯ** ನಗರದ ವ್ಯಾಪಾರಸ್ಥರ ಸ್ಥಿತಿ ಶೋಚನೀಯವಾಗಿದೆ. ನಗರದ ಹೃದಯ ಭಾಗ ಎನಿಸಿದ ಜೈನರ ಬೀದಿ ಹಾಗೂ ಪೇಟೆ ಬೀದಿಯು ಸದಾ ಜನರಿಂದ ತುಂಬಿ ಒಳ್ಳೆಯ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಆದರೆ, ಜಿಲ್ಲೆಯ ರೈತರ ಜೀವನಾಡಿಯಾದ ಮೈಸೂರು ಸಕ್ಕರೆ ಕಾರ್ಖಾನೆಯು ಯಾರೋ ಮಾಡಿದ ತಪ್ಪಿಗೆ ತನ್ನ ಹಳೆಯ ವೈಭವವನ್ನೇ ಕಳೆದುಕೊಂಡು ಕುಂಟುತ್ತಾ ಸಾಗುತ್ತಿದೆ.

ಮತ್ತೊಂದೆಡೆ ನಗರದ ರೈಲ್ವೆ ಹಳಿಯ ಪಕ್ಕದಲ್ಲೇ ಇದ್ದ ತರಕಾರಿ ಮಾರುಕಟ್ಟೆಯನ್ನು ಹೊಸದಾಗಿ ಕಟ್ಟಡ ಕಟ್ಟಿ ಕೊಡುತ್ತೇವೆ ಎಂದು ಬೇರೆಡೆ ಸ್ಥಳಾಂತರ ಮಾಡಿದರು.ಹೊಸ ಕಟ್ಟಡ ಕಟ್ಟಿ ವರ್ಷಗಳೇ ಕಳೆದರೂ ಮರು ಸ್ಥಳಾಂತರ ಮಾಡಿಲ್ಲ. ದೈತ್ಯ ವ್ಯಾಪಾರಿ ತಿಮಿಂಗಿಲಗಳ ನಡುವೆಯೇ ಬದುಕು ಕಟ್ಟಿಕೊಂಡಿದ್ದ ಸಣ್ಣ ವ್ಯಾಪಾರಸ್ಥರ ಗೋಳು ಕೇಳುವವರು ಯಾರು?

**ಮಂಜುನಾಥ್ ಜೈನ್ ಎಂ.ಪಿ.**, ಮಂಡ್ಯ

ಚುರುಮುರಿ



## ಒಳಾರ್ಥ–ಗೂಢಾರ್ಥ!

• ಬಿ.ಎನ್. ಮಲ್ಲೇಶ್

**'ಲೇ ತೆಪರ,** ಐದು ವರ್ಷ ನಾನೇ ಸಿಎಂ ಅಂದ್ರೆ ಏನರ್ಥಲೆ?' ಹರಟೆಕಟ್ಟೆಯಲ್ಲಿ ಗುಡ್ಡೆ ಕೇಳಿದ.

'ನಿನ್ತಲಿ, ಅದ್ರಲ್ಲಿ ಬೇರೆ ಅರ್ಥ ಏನೈತಲೆ? ಅದೇ ಅರ್ಥ...' ಎಂದ ತೆಪರೇಸಿ.

'ನಂಗೇನೋ ಅನುಮಾನ, ಅದ್ರಲ್ಲಿ ಒಳಾರ್ಥ, ಗೂಢಾರ್ಥ ಏನರೆ ಇರಬೋದೇನೋ ಅಂತ...'

'ಕರೆಕ್ಟ್, ನಮ್ ಸರ್ಕಾರ ಐದು ವರ್ಷ ಬಂಡೆ ತರ ಸುಭದ್ರ ಅಂದ್ರಲ್ಲ, ಈ 'ಬಂಡೆ' ಅಂತ ಅಂದಿದ್ರಲ್ಲಿ ಏನಾದ್ರು ಒಳಾರ್ಥ ಇರಬೋದಾ?'

'ಏನೋಪ್ಪ, ಈ ರಾಜಕಾರಣಿಗಳ ಮಾತಿನ ಒಳಾರ್ಥ ಹುಡುಕೋದು ಬಾಳ ಕಷ್ಟ... ಏನೋ ಹೇಳಿರ್ತಾರೆ, ಆಮೇಲೆ ನಾನು ಆ ಅರ್ಥದಲ್ಲಿ ಹೇಳಿಲ್ಲ ಅಂದುಬಿಡ್ತಾರೆ...' ದುಬ್ಬೀರ ತಲೆ ಕೊಡವಿದ.

'ಗೂಗಲ್‌ನಲ್ಲಿ ಅವರ ಮಾತಿನ ಅರ್ಥ ಹುಡುಕಿದ್ರೆ ಹೆಂಗೆ?'

'ಅದೂ ಎಷ್ಟೋ ಸಲ ದಾರಿ ತಪ್ಪಿದೆ ಬಿಡಲೆ...'

'ನಮ್ ವಿಮಾನದ ಭವಿಷ್ಯ ಹೇಳಿದ್ರಲ್ಲ, ಆ ಸ್ವಾಮಿಗೋಳ್ನ ಕೇಳಿದ್ರೆ ಹೆಂಗೆ?'

'ಅವ್ರು ಭವಿಷ್ಯ ಹೇಳೋರು, ಅರ್ಥ ಗಿರ್ಥ ಹೇಳೋರಲ್ಲ...'

'ನಮ್ ಕಮಲ ಪಕ್ಷದೋರೂ ಭವಿಷ್ಯ ಹೇಳಾಕೆ ಶುರು ಮಾಡಿದಾರಂತೆ? ದಸರಾ ಒಳಗೆ ಸಿಎಂ ಚೇಂಜ್ ಆಗ್ತಾರಂತೆ?' ಮಂಜಮ್ಮ ಕೇಳಿದಳು.

'ಹೌದು, ಆದ್ರೆ ಯಾವ ದಸರಾ ಅಂತ ಹೇಳಿದಾರಾ? ಎರಡು ವರ್ಷ ಮುಂದಿನ ದಸರಾ ಇರಬೋದು...' ಕೊಟ್ರೇಶಿ ಕೊಕ್ಕೆ.

'ಕರೆಕ್ಟ್, ನಮ್ ಕೈ ಪಕ್ಷದ ರಾಜಣ್ಣ ಸೆಪ್ಟೆಂಬರ್ ಕ್ರಾಂತಿ ಅಂದ್ರು. ಆಮೇಲೆ ನಾನೇಳಿದ್ದು ಕುರ್ಚಿ ಕ್ರಾಂತಿ ಅಲ್ಲ, ಕೃಷಿ ಕ್ರಾಂತಿ ಅಂದ್ರು...' ಗುಡ್ಡೆ ನಕ್ಕ.

'ಒಟ್ಟಾರೆ ಕುರ್ಚಿ ಅಲುಗಾಡ್ತಾ ಐತೆ...' ತೆಪರೇಸಿ ತಲೆದೂಗುತ್ತ ಹೇಳಿದ.

'ನಾನು ಹಂಗೇಳಿದ್ನಾ? ಈ ಮಂಜಮ್ಮನ ಹೋಟ್ಲು ಕುರ್ಚಿ ಅಲ್ಲಾಡ್ತಾ ಐತೆ ಅಂದೆ...'

ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

# ಭೂಸ್ವಾಧೀನ ಎಂಬ ಕರಿನೆರಳು

**ರೈತರ ಭೂಮಿ ವಶಕ್ಕೆ ಪಡೆಯುವ ನೀತಿಯಲ್ಲಿ ಪರಿಷ್ಕಾರ ಆಗಬೇಕಿದೆ. ವಿವೇಚನೆ ಇಲ್ಲದ ಭೂಸ್ವಾಧೀನದಿಂದ ಸಮಾಜದ ನೆಮ್ಮದಿ ಹಾಳು.**

• ಈ. ಬಸವರಾಜು

**ಬೆಂಗಳೂರು** ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ–ಚನ್ನರಾಯಪಟ್ಟಣದ ರೈತರು ಸರ್ಕಾರದ ಬಲವಂತದ ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ನಡೆಸುತ್ತಿರುವ ಹೋರಾಟ ಐತಿಹಾಸಿಕವಾದುದು. ಈ ಹೋರಾಟ ನಾಲ್ಕನೇ ವರ್ಷಕ್ಕೆ ಕಾಲಿಟ್ಟಿದೆ. ರೈತರ ಈ ಸುದೀರ್ಘ ಹೋರಾಟಕ್ಕೆ ಭೂಮಿಯ ಮೇಲೆ ಅವರಿಗಿರುವ ಸಂಬಂಧ, ಅವಲಂಬನೆ ಮತ್ತು ಪ್ರೀತಿಯೇ ಕಾರಣವಾಗಿದೆ.

ಒಮ್ಮೆ ಭೂಮಿ ಕಳೆದುಕೊಂಡವನು ಜೀವನಪೂರ್ತಿ ಅತಂತ್ರನಾಗುತ್ತಾನೆ ಮಾತ್ರವಲ್ಲ, ತಲೆಮಾರುಗಳಿಂದ ಬಂದಿರುವ ಸಂಪತ್ತನ್ನೂ ಕಳೆದುಕೊಳ್ಳುತ್ತಾನೆ. ಆ ಕಾರಣದಿಂದಲೇ, ಯಾವುದೇ ವ್ಯಕ್ತಿ ಭೂಮಿಯನ್ನು ಮಾರುವ, ಕಳೆದುಕೊಳ್ಳುವ ಮುನ್ನ ನೂರು ಸಲ ಯೋಚಿಸುತ್ತಾನೆ. ಇದೇ ಮನಃಸ್ಥಿತಿಯಲ್ಲಿ ಚನ್ನರಾಯಪಟ್ಟಣದ ರೈತರು ತೊಳಲಾಟ ಅನುಭವಿಸುತ್ತಿದ್ದಾರೆ.

ಒಂದು ತುಂಡು ಭೂಮಿ ಇದೆ ಎಂದರೆ ರೈತನಿಗೆ ದೊಡ್ಡ ಶಕ್ತಿ ಇದ್ದಂತೆ. ಕೃಷಿಕ ತನಗೆ ಬೇಕಾದ್ದನ್ನು ಬೆಳೆದುಕೊಂಡು, ಹೆಚ್ಚಾದ್ದನ್ನು ಮಾರಾಟ ಮಾಡಿ, ಅಗತ್ಯ ವಸ್ತುಗಳನ್ನು ಕೊಳ್ಳುತ್ತಾನೆ. ವ್ಯವಸಾಯದ ಜೊತೆಗೆ ಕುರಿ, ಕೋಳಿ ಸಾಕುತ್ತಾನೆ; ಹಾಲು, ಮೊಸರು, ಬೆಣ್ಣೆ, ಹಣ್ಣು–ಹಂಪಲು, ತರಕಾರಿ ಬೆಳೆದು ನಗರ ಪ್ರದೇಶದ ಜನರಿಗೆ ನೀಡುತ್ತಾನೆ. ಯಾವುದೇ ರೀತಿಯ ಶಿಕ್ಷಣ, ತರಬೇತಿ ಇಲ್ಲದೆಯೂ ವ್ಯವಸಾಯದ ಕೆಲಸಕ್ಕೆ ಕೂಲಿಗೆ ಬರುವವರಿಗೂ ದಿನಕ್ಕೆ ಕನಿಷ್ಠ ₹500 ದೊರಕುತ್ತದೆ.



ಉದ್ಯೋಗ ಸೃಷ್ಟಿಯಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಸರಿಸಾಟಿಯಿಲ್ಲ. ಎಷ್ಟೆಲ್ಲಾ ಕೊಡುಗೆ ನೀಡುತ್ತಿರುವ ಅನ್ನದಾತರನ್ನು ಭೂಸ್ವಾಧೀನದ ಹೆಸರಿನಲ್ಲಿ ಅತಂತ್ರರನ್ನಾಗಿ ಮಾಡುವ ಪ್ರಕ್ರಿಯೆಯನ್ನು ಸರ್ಕಾರ ಪ್ರಾರಂಭಿಸಿದೆ. ಇಲ್ಲಿ ಚನ್ನರಾಯಪಟ್ಟಣ ಸಾಂಕೇತಿಕವಷ್ಟೇ. ರಾಜ್ಯದಲ್ಲಿ ಅನೇಕ ಚನ್ನರಾಯಪಟ್ಟಣಗಳಿವೆ. ಅಲ್ಲಿನವರೆಲ್ಲರೂ ಭೂಮಿಯನ್ನು ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಆ ಭೂಮಿಯಲ್ಲಿ ರೈತರ ಪೂರ್ವಜರ ಅಂತ್ಯಕ್ರಿಯೆಯ ಸ್ಮೃತಿಗಳೂ ಇವೆ. ಕೃಷಿಯ ಜೊತೆಗೆ ಪೂರ್ವಸೂರಿಗಳ ಸ್ಮೃತಿಗಳ ಭಾವನಾತ್ಮಕ ಸಂಬಂಧದಿಂದಲೂ ರೈತರನ್ನು ದೂರ ಮಾಡುವ ಪ್ರಕ್ರಿಯೆ ಸಮಾಜದ ಮಾನಸಿಕ ಆರೋಗ್ಯವನ್ನೂ ಹಾಳುಗೆಡವಲಿದೆ.

ವ್ಯವಸಾಯ ಕ್ಷೇತ್ರದ ಮತ್ತೊಂದು ಕೊಡುಗೆ, ಅದು ಪರಿಸರ ಸ್ನೇಹಿಯಾಗಿರುವುದು. ಆದರೆ, ಕೃಷಿ ಭೂಮಿಯಲ್ಲಿ ಆರಂಭಗೊಳ್ಳುವ ಕಾರ್ಖಾನೆಗಳು ಪರಿಸರವನ್ನು ಕಲುಷಿತಗೊಳಿಸುತ್ತವೆ. ತಿಪ್ಪಗೊಂಡನಹಳ್ಳಿ ಜಲಾಶಯದ ನೀರು ಇಂದು ಕಲುಷಿತವಾಗಿರಲು ಕಾರಣ ಅದರ ಸುತ್ತಮುತ್ತಲಿನ ಕಾರ್ಖಾನೆಗಳು.

ಅವಳಿ ನಗರಗಳ ಸ್ಥಾಪನೆಗೆ, ವಿದೇಶಿ ವಿಶ್ವವಿದ್ಯಾಲಯ ಸ್ಥಾಪನೆಗೆ, ಕಾರ್ಖಾನೆಗಳು, ವಿಮಾನ ನಿಲ್ದಾಣ, ಮೆಟ್ರೊ ರೈಲು ಯೋಜನೆ ಮುಂತಾದವುಗಳಿಗಾಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಕೆಲವು ವಿಚಿತ್ರಗಳಿವೆ. ಬೆಂಗಳೂರಿನಿಂದ ತುಮಕೂರಿಗೆ ಮೆಟ್ರೊ ಮಾರ್ಗ ನಿರ್ಮಿಸುವ ಪ್ರಸ್ತಾವವಿದೆ. ಮೆಟ್ರೊ ರೈಲು ನಗರ ಪ್ರದೇಶಗಳಿಗೆ ಮಾತ್ರ ಅನುಕೂಲ. ಬೆಂಗಳೂರಿನಿಂದ ತುಮಕೂರಿಗೆ ಈಗಾಗಲೇ ಜೋಡಿ ರೈಲು ಮಾರ್ಗವಿದ್ದು, ಮೆಟ್ರೊಗಿಂತ ಕಡಿಮೆ ಸಮಯದಲ್ಲಿ ಮತ್ತು ಕಡಿಮೆ ದರದಲ್ಲಿ ಪ್ರಯಾಣಿಸಬಹುದು.

ಮೆಟ್ರೊ ಯೋಜನೆ ಕೈಬಿಟ್ಟರೆ, ನೂರಾರು ಎಕರೆ ಭೂಸ್ವಾಧೀನದ ಅಗತ್ಯವೂ ಇಲ್ಲವಾಗುತ್ತದೆ. ಭೂಮಿ ಕೊಟ್ಟವರು ಪರಿಹಾರ ಪಡೆಯುವುದೂ ಸುಲಭವಲ್ಲ. ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಊರು– ಜಮೀನುಗಳನ್ನು ಕಳೆದುಕೊಂಡವರಿಗೆ ತೃಪ್ತಿಕರ ಪುನರ್ವಸತಿ ಸೌಲಭ್ಯ ಕಲ್ಪಿಸಿರುವ ನಿದರ್ಶನಗಳು ವಿರಳ. ಮುಳುಗಡೆ ಆದವರು ಚಪ್ಪಲಿ ಸವೆಸಿ ಪರಿಹಾರ ಪಡೆದುಕೊಂಡಿದ್ದಾರೆ. ಹೊಸ ಪ್ರದೇಶದಲ್ಲಿ ಹೊಂದಿಕೊಂಡವರು ಕೆಲವರು, ಹೊಂದಿಕೊಳ್ಳಲು ಆಗದವರು ಹಲವರು!

ಕಾರ್ಖಾನೆಗಳು ಸೇರಿದಂತೆ ವಿವಿಧ ಯೋಜನೆಗಳಿಗಾಗಿ ಪಡೆದ ಜಮೀನು ನಿಗದಿತ ಉದ್ದೇಶಗಳಿಗೆ ಬಳಕೆಯಾಗದೆ ಉಳಿದಿರುವುದೂ ಇದೆ. ಅಂಥ ಭೂಮಿಯು ರಿಯಲ್ ಎಸ್ಟೇಟ್‌ನವರ ಪಾಲಾಗುತ್ತದೆ. ಪ್ರವಾಸೋದ್ಯಮ ಇಲಾಖೆ ತನ್ನ ವಶದಲ್ಲಿರುವ ಭೂಮಿಯನ್ನು ಮಾರಾಟ ಮಾಡುತ್ತದೆಂದು ಇತ್ತೀಚೆಗೆ ಸುದ್ದಿಯಾಗಿತ್ತು. ಜಿಲ್ಲೆಗೊಂದು ವಿಶ್ವವಿದ್ಯಾಲಯ ತಲೆಯೆತ್ತಿರುವ ದಿನಗಳಿವು. ಜಿಲ್ಲೆಗೊಂದು ವಿಜ್ಞಾನ ಕೇಂದ್ರ ಬರುತ್ತಿದೆ. ಜಿಲ್ಲೆಗೊಂದು ಗಾಂಧಿ ಭವನ ಬರುತ್ತಿದೆ. ಇವೆಲ್ಲವುಗಳಿಗೂ ಭೂಮಿ ಬೇಕೇ ಬೇಕು. ಆದರೆ, ಅದನ್ನು ಬಡ ರೈತರಿಂದಲೇ ಸ್ವಾಧೀನಪಡಿಸಿಕೊಳ್ಳಬೇಕೇ? ಶ್ರೀಮಂತರು, ರಾಜಕಾರಣಿಗಳು ತಮ್ಮ ವಶದಲ್ಲಿ ನೂರಾರು, ಸಾವಿರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಅಭಿವೃದ್ಧಿಗೆ ಬಡವರ ಭೂಮಿಯೇ ಬೇಕೆಂದೇನಿಲ್ಲ!

ಈ ಹಿಂದೆ ಎಚ್.ಎ.ಎಲ್. ವಿಮಾನ ನಿಲ್ದಾಣವಿತ್ತು. ಪ್ರಸ್ತುತ ದೇವನಹಳ್ಳಿ ವಿಮಾನ ನಿಲ್ದಾಣ ಬಂದಿದೆ. ಮೈಸೂರು, ಶಿವಮೊಗ್ಗ, ಬೆಳಗಾವಿ, ಬೀದರ್, ಕಲಬುರಗಿ ಮುಂತಾದ ಕಡೆಗಳಲ್ಲಿ ವಿಮಾನ ನಿಲ್ದಾಣಗಳು ಬಂದಿವೆ. ಆದರೂ, ಹೊಸ ವಿಮಾನ ನಿಲ್ದಾಣಕ್ಕೆ 6 ಸಾವಿರ ಎಕರೆ ಭೂಮಿ ಬೇಕೆನ್ನುತ್ತಾರೆ! ಇನ್ನೆಷ್ಟು ವಿಮಾನ ನಿಲ್ದಾಣಗಳು ಬೇಕು? ನಾವು ಭೂಮಿ ಕೊಡುವುದಾಗಿ ಒಪ್ಪಿಕೊಂಡು ಬಂದಿದ್ದೇವೆ, ನೀವು ತಕರಾರು ಮಾಡದೇ ಭೂಮಿಯನ್ನು ಕೊಡಿ ಎಂದು ಕೈಗಾರಿಕಾ ಸಚಿವರು ಹೇಳುತ್ತಾರೆ. ಯಾರನ್ನು ಕೇಳಿ ಅವರು ಒಪ್ಪಿಗೆ ನೀಡಿದ್ದಾರೆ? ಇನ್ನು ಹತ್ತು ಎಕರೆ ಬೇಕಾದ ಕಡೆಯಲ್ಲಿ ಐವತ್ತು ಎಕರೆ, ಐವತ್ತು ಎಕರೆ ಬೇಕಾದ ಕಡೆ ಐನೂರು ಎಕರೆ ಸ್ವಾಧೀನಪಡಿಸಿಕೊಳ್ಳುವುದೂ ಇದೆ!

ಸರ್ಕಾರಗಳು ತಮ್ಮ ಭೂಸ್ವಾಧೀನ ನೀತಿಯನ್ನು ಪರಿಷ್ಕರಿಸಲೇಬೇಕಾಗಿದೆ. ಅನಿವಾರ್ಯ ಸಂದರ್ಭದಲ್ಲಿ, ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಪಡೆದುಕೊಳ್ಳಬಹುದೇ ಹೊರತು ಕೃಷಿಯೋಗ್ಯ ಭೂಮಿಯನ್ನಲ್ಲ. ರೈತರ ಒಪ್ಪಿಗೆ ಇಲ್ಲದೆ ಅವರ ಭೂಮಿಯನ್ನು ಪಡೆಯಲು ಪ್ರಯತ್ನಿಸುವುದಂತೂ ಅಮಾನವೀಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

# ದಲೈ ಲಾಮಾ ಉತ್ತರಾಧಿಕಾರಿ ಸಂಘರ್ಷ

ತಾಯ್ನಾಡು ಉಳಿಸಿಕೊಳ್ಳಲು ಟಿಬೆಟಿಯನ್ನರ ಪ್ರಯತ್ನ, ಟಿಬೆಟ್ ಮೇಲೆ ಹಿಡಿತ ಬಲಗೊಳಿಸಲು ಚೀನಾ ತಂತ್ರ



## ಆಯ್ಕೆ ಹೇಗೆ ನಡೆಯುತ್ತದೆ?

ಟಿಬೆಟ್‌ನ ಬೌದ್ಧ ಧರ್ಮದ ಸಂಸ್ಕೃತಿ, ಶಿಷ್ಟಾಚಾರದ ಅನುಸಾರ ಹೊಸ ದಲೈ ಲಾಮಾ ಆಯ್ಕೆ ನಡೆಯುತ್ತದೆ. ಆದರೆ, ಆ ಪ್ರಕ್ರಿಯೆ ಆರಂಭವಾಗುವುದು ಹಾಲಿ ದಲೈ ಲಾಮಾ ನಿಧನದ ನಂತರ. ದಲೈ ಲಾಮಾ ಅವರೇ ಮರುಜನ್ಮ ಪಡೆದು ಆ ಹುದ್ದೆಯಲ್ಲಿ ಮುಂದುವರಿಯುತ್ತಾರೆ ಎಂಬ ನಂಬಿಕೆ ಟಿಬೆಟಿಯನ್ನರದು. ಹೊಸ ದಲೈ ಲಾಮಾ ಅವರನ್ನು ಗುರುತಿಸುವುದಕ್ಕಾಗಿ ಹಿರಿಯ ಧಾರ್ಮಿಕ ಮುಖಂಡರು ಹಳೆಯ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸುತ್ತಾರೆ. ಹಿಂದಿನ ದಲೈ ಲಾಮಾ ಅವರು ಬಿಟ್ಟು ಹೋಗಿರುವ ಸುಳಿವುಗಳು, ಜ್ಯೋತಿಷ್ಯದಿಂದ ಕಂಡುಕೊಂಡ ಮಾಹಿತಿಗಳು, ಆಧ್ಯಾತ್ಮಿಕ ಜ್ಞಾನವನ್ನು ವಿಶ್ಲೇಷಿಸಲಾಗುತ್ತದೆ. ಇದಲ್ಲದೇ, ಹುಟ್ಟಿದ ಕೆಲವೇ ವರ್ಷಗಳಲ್ಲಿ ಯಾರಾದರೂ ಹಿಂದಿನ ದಲೈ ಲಾಮಾ ಅವರು ಬಳಸಿದ ವಸ್ತುಗಳನ್ನು, ಅವರ ಅಭ್ಯಾಸ ಮತ್ತು ಹೆಚ್ಚು ಒಡನಾಟ ಹೊಂದಿರುವವರನ್ನು ಗುರುತಿಸಿದರೆ ಅವರು ಮರುಜನ್ಮ ಪಡೆದವರು ಎಂದು ತಿಳಿಯಲಾಗುತ್ತದೆ.

ಟಿಬೆಟ್‌ನ ಬೌದ್ಧರ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆ ವಿಚಾರವು ವಿವಾದದ ಸ್ವರೂಪ ಪಡೆದಿದೆ. ಜುಲೈ 6ರಂದು 90ನೇ ಜನ್ಮದಿನವನ್ನು ಆಚರಿಸಲಿರುವ ಈಗಿನ 14ನೇ ದಲೈ ಲಾಮಾ ಅವರು, ತಮ್ಮ ನಿಧನದ ನಂತರ ಗಾಡೆನ್ ಫೋಡ್ರಾಂಗ್ ಟ್ರಸ್ಟ್ ಸಾಂಪ್ರದಾಯಿಕ ಪ್ರಕ್ರಿಯೆ ಅನುಸರಿಸಿ ತಮ್ಮ ಉತ್ತರಾಧಿಕಾರಿಯನ್ನು ನೇಮಿಸಲಿದೆ ಎಂದು ಘೋಷಿಸಿದ್ದಾರೆ. ಆದರೆ, ಚೀನಾ ಈ ವಿಚಾರದಲ್ಲಿ ಮಧ್ಯಪ್ರವೇಶಿಸಿದ್ದು, ಉತ್ತರಾಧಿಕಾರಿ ಆಯ್ಕೆಗೆ ತನ್ನ ಸಮ್ಮತಿ ಅಗತ್ಯ ಎಂದಿದೆ. 1959ರಲ್ಲಿ ಟಿಬೆಟಿಯನ್ನರು ಚೀನಾದ ವಿರುದ್ಧ ದಂಗೆ ಎದ್ದು ವೈಫಲ್ಯ ಅನುಭವಿಸಿದ ನಂತರ ದಲೈ ಲಾಮಾ ಅವರು ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಭಾರತಕ್ಕೆ ಬಂದು ಧರ್ಮಶಾಲಾದಲ್ಲಿ ನೆಲಸಿದ್ದಾರೆ. ಉತ್ತರಾಧಿಕಾರಿ ಆಯ್ಕೆ ವಿಚಾರದಲ್ಲಿ ದಲೈ ಲಾಮಾ ಮತ್ತು ಚೀನಾ ನಡುವೆ ಸಂಘರ್ಷ ಏರ್ಪಟ್ಟಿದೆ. ದಲೈ ಲಾಮಾಗೆ ಆಶ್ರಯ ನೀಡಿರುವ ಭಾರತವು ಈ ವಿಚಾರದಲ್ಲಿ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ

ಪ್ರಜಾವಾಣಿ ವಾರ್ತೆ

ಟಿಬೆಟಿಯನ್ನರ ಪರಮೋಚ್ಚ ಧರ್ಮಗುರು ದಲೈ ಲಾಮಾ ಅವರ ಇತ್ತೀಚಿನ ಹೇಳಿಕೆಯೊಂದು ಟಿಬೆಟ್ ಬೌದ್ಧಧರ್ಮದ ಅನುಯಾಯಿಗಳಲ್ಲಿ ಏಕಕಾಲಕ್ಕೆ ಅಪಾರ ಸಂತೋಷ ಮತ್ತು ಆತಂಕ ಉಂಟು ಮಾಡಿದೆ. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಜೂನ್ 30ರಂದು ನಡೆದ ತಮ್ಮ 90ನೇ ಹುಟ್ಟುಹಬ್ಬಕ್ಕೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆಯು ಟಿಬೆಟಿಯನ್ ಬೌದ್ಧಧರ್ಮದ ಸಂಪ್ರದಾಯಕ್ಕೆ ಅನುಗುಣವಾಗಿಯೇ ನಡೆಯಲಿದ್ದು, ಗಾಡೆನ್ ಫೋಡ್ರಾಂಗ್ ಟ್ರಸ್ಟ್ (ದಲೈ ಲಾಮಾ ನೇತೃತ್ವದ ಎನ್‌ಜಿಒ) ಉಸ್ತುವಾರಿಯಲ್ಲಿ ನಡೆಯಲಿದೆ ಎಂದಿದ್ದಾರೆ. ತಾವು ಪುನರ್ಜನ್ಮ ಹೊಂದುವುದಾಗಿಯೂ ಪುನರ್ಜನ್ಮದ ಆಧಾರದಲ್ಲಿಯೇ ಮುಂದಿನ ದಲೈ ಲಾಮಾ ಆಯ್ಕೆ ನಡೆಯಲಿದೆ ಎಂದೂ ಅವರು ಸೂಚನೆ ನೀಡಿದ್ದಾರೆ.

ಟಿಬೆಟ್‌ನಿಂದ ಬಹುದೂರ, ಭಾರತದ ಧರ್ಮಶಾಲಾದಿಂದ ತಮ್ಮ ಉತ್ತರಾಧಿಕಾರಿಯ ಆಯ್ಕೆ ಪ್ರಕ್ರಿಯೆ ಬಗ್ಗೆ ದಲೈ ಲಾಮಾ ಅವರು ನೀಡಿರುವ ಹೇಳಿಕೆಯು ಟಿಬೆಟಿಯನ್ ಬೌದ್ಧರ ಧಾರ್ಮಿಕ ಸಂಸ್ಥೆ ಮತ್ತು ಟಿಬೆಟ್‌ನ ಸ್ವಾತಂತ್ರ್ಯ ಹೋರಾಟದ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಇದು ಟಿಬೆಟ್ ಮೇಲೆ ಹಿಡಿತ ಹೊಂದಿರುವ ಚೀನಾಕ್ಕೆ ಅವರು ನೀಡಿರುವ ಪರೋಕ್ಷ ಸಂದೇಶ ಎಂದೇ ವಿಶ್ಲೇಷಿಸಲಾಗುತ್ತಿದೆ. 'ಪುನರ್ಜನ್ಮ' ಪದ್ಧತಿಯ ಮೂಲಕವೇ 14ನೇ ದಲೈ ಲಾಮಾ ಆಗಿದ್ದವರು ಅವರು. ಜತೆಗೆ, ಟಿಬೆಟ್‌ನ ಸ್ವಾತಂತ್ರ್ಯಕ್ಕಾಗಿ ಚೀನಾದ ಕಮ್ಯುನಿಸ್ಟ್ ನಾಯಕ ಮಾವೋ ಜತೆ ವಿಫಲ ಹೋರಾಟ ನಡೆಸಿ, 1959ರಲ್ಲಿ ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಭಾರತಕ್ಕೆ ಪಲಾಯನ ಮಾಡಿದ್ದರು. ಅಂದಿನಿಂದ ಧರ್ಮಶಾಲಾವೇ ಅವರ ನೆಲೆಯಾಗಿದೆ. ಪ್ರಸ್ತುತ 1.40 ಲಕ್ಷದಷ್ಟು ಟಿಬೆಟಿಯನ್ ಬೌದ್ಧರು ಭಾರತದಾದ್ಯಂತ ಹರಡಿರುವ 45 ವಸತಿ ಪ್ರದೇಶಗಳಲ್ಲಿ (ಕಾಲೊನಿ) ವಾಸವಾಗಿದ್ದಾರೆ; ಕರ್ನಾಟಕದಲ್ಲಿಯೂ ಅವರ ಮೂರು ವಸತಿ ಪ್ರದೇಶಗಳಿವೆ.

ದಲೈ ಲಾಮಾ, ಜಗತ್ತಿನಲ್ಲಿ ಪ್ರಸ್ತುತ ಜೀವಂತ ಇರುವ ಪ್ರಭಾವಶಾಲಿ ಧರ್ಮಗುರುಗಳಲ್ಲಿ ಒಬ್ಬರು. ಅವರಿಗೆ ಟಿಬೆಟ್‌ನ ಹೊರಗೂ ಅನುಯಾಯಿಗಳಿದ್ದು, ಜಾಗತಿಕ ಮಟ್ಟದಲ್ಲಿ ಅವರ ಮಾತಿಗೆ ವಿಶೇಷ ಮನ್ನಣೆಯಿದೆ. ಟಿಬೆಟ್‌ನಲ್ಲಿ ಪ್ರಜಾಪ್ರಭುತ್ವವನ್ನು ಅಸ್ತಿತ್ವಕ್ಕೆ ತರುವುದು ಅವರ ಬಯಕೆ. ಅದಕ್ಕಾಗಿ ದಶಕಗಳಿಂದಲೂ ಜಗತ್ತಿನಾದ್ಯಂತ ಪ್ರವಾಸ ಮಾಡುತ್ತಾ, ಟಿಬೆಟ್‌ನ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಪ್ರಯತ್ನ ನಡೆಸುತ್ತಲೇ ಇದ್ದಾರೆ.

### ದಲೈ ಲಾಮಾ ಜೀವನ ಹಾದಿ

- **1935 ಜುಲೈ 6** ಟಿಬೆಟ್‌ನ ಉತ್ತರ ಭಾಗದ ಟಕ್‌ಟ್ಸೆರ್ ಎಂಬ ಗ್ರಾಮದ ರೈತ ಕುಟುಂಬದಲ್ಲಿ ಜನನ. ಹೆಸರು ಲ್ಹಾಮೊ ಥೊಂಡುಪ್
- **1937** ಲ್ಹಾಮೊ ಥೊಂಡುಪ್, ಹಿಂದಿನ (13ನೇ) ದಲೈ ಲಾಮಾ ಅವರ ಮರುಜನ್ಮ ಎಂದು ಗುರುತು
- **1940 ಫೆ. 2** 13ನೇ ದಲೈಲಾಮಾ ಅವರ ಉತ್ತರಾಧಿಕಾರಿ ಎಂದು ಅಧಿಕೃತ ಘೋಷಣೆ. ಪಟ್ಟಾಭಿಷೇಕ. ಆಗ ಅವರ ವಯಸ್ಸು 5 ವರ್ಷ. ಟೆಂಜಿನ್ ಗ್ಯಾಟ್ಸೊ ಎಂದು ನಾಮಕರಣ
- **1950** ಟಿಬೆಟ್ ಮೇಲೆ ಚೀನಾವು ಅತಿಕ್ರಮಣ ನಡೆಸಿದ ನಂತರ, 15ನೇ ವರ್ಷದಲ್ಲಿ ಟಿಬೆಟ್‌ನ ಸಂಪೂರ್ಣ ರಾಜಕೀಯ ನಿಯಂತ್ರಣವನ್ನು ಪಡೆದ ಧರ್ಮಗುರು
- **1954** ಬೀಜಿಂಗ್‌ನಲ್ಲಿ ಚೀನಾದ ಪರಮೋಚ್ಚ ನಾಯಕ ಮಾವೋ ಝೆಡಾಂಗ್ ಮತ್ತು ನಾಯಕರೊಂದಿಗೆ ಶಾಂತಿ ಮಾತುಕತೆ
- **1959** ಚೀನಾದ ವಿರುದ್ಧ ಟಿಬೆಟ್‌ನಲ್ಲಿ ನಡೆದ ದಂಗೆ ವಿಫಲವಾದ ನಂತರ ಭಾರತಕ್ಕೆ ಪಲಾಯನ. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ನೆಲೆ
- **1989** ಅಹಿಂಸೆ ಮತ್ತು ಶಾಂತಿಯ ಪ್ರತಿಪಾದನೆಗಾಗಿ ನೊಬೆಲ್ ಶಾಂತಿ ಪುರಸ್ಕಾರದ ಗೌರವ
- **2011** ರಾಜಕೀಯ ಸ್ಥಾನಮಾನ ಪದತ್ಯಾಗ, ಟಿಬೆಟನ್ನರ ಧರ್ಮಗುರುವಾಗಿ ಮುಂದುವರಿಕೆ
- **2024** ಅಮೆರಿಕಕ್ಕೆ ಭೇಟಿ. ಮಂಡಿ ಶಸ್ತ್ರಚಿಕಿತ್ಸೆ. ಮೊದಲ ಬಾರಿಗೆ ಉತ್ತರಾಧಿಕಾರಿ ಬಗ್ಗೆ ಪ್ರಸ್ತಾಪ



1940ರ ಫೆ.2ರಂದು ಟಿಬೆಟ್‌ನಲ್ಲಿ ಈಗಿನ ದಲೈ ಲಾಮಾ ಅವರ ಪಟ್ಟಾಭಿಷೇಕ ಸಂದರ್ಭದ ಚಿತ್ರ. ಆಗ ಅವರಿಗೆ ಐದು ವರ್ಷ ಚಿತ್ರ ಕೃಪೆ: ದಲೈಲಾಮಾ.ಕಾಂ

### ಟಿಬೆಟ್‌ನಲ್ಲಿ ಜನಿಸಿದವರೇ ಹೆಚ್ಚು

ಈವರೆಗೆ 14 ಮಂದಿ ದಲೈ ಲಾಮಾ ಹುದ್ದೆಗೆ ಏರಿದ್ದಾರೆ. ಈ ಪೈಕಿ ಇಬ್ಬರನ್ನು ಬಿಟ್ಟ ಉಳಿದವರೆಲ್ಲರೂ ಟಿಬೆಟ್‌ನಲ್ಲಿ ಜನಿಸಿದವರು. ನಾಲ್ಕನೇ ಮತ್ತು ಆರನೇ ದಲೈ ಲಾಮಾ ಆಗಿ, ಟಿಬೆಟ್ ಹೊರತಾದ ಪ್ರದೇಶದಲ್ಲಿ ಜನಿಸಿದವರನ್ನು ಆಯ್ಕೆ ಮಾಡಲಾಗಿದೆ. ನಾಲ್ಕನೇ ದಲೈ ಲಾಮಾ (ಹೆಸರು: ಯೊಂಟೆನ್ ಗ್ಯಾಟ್ಸೊ) 1589ರಲ್ಲಿ ಮಂಗೋಲಿಯಾದಲ್ಲಿ ಜನಿಸಿದ್ದರು. ಆರನೇ ದಲೈ ಲಾಮಾ (ತ್ಸಾಂಗ್ಯಾಂಗ್ ಗ್ಯಾಟ್ಸೊ) ಈಗಿನ ಅರುಣಾಚಲ ಪ್ರದೇಶದಲ್ಲಿ ಹುಟ್ಟಿದ್ದರು.

ಚೀನಾ ಮಾತ್ರ ಅವರನ್ನು ಪ್ರತ್ಯೇಕತಾವಾದಿ ಎಂದು ನೋಡುತ್ತಿದೆ. ಟಿಬೆಟ್‌ನ ಮೇಲಿನ ಹಿಡಿತ ಬಿಟ್ಟುಕೊಡಲು ಸಿದ್ಧವಿಲ್ಲದ ಚೀನಾ, ಉತ್ತರಾಧಿಕಾರಿ ಆಯ್ಕೆಗೆ ಸಂಬಂಧಿಸಿದ ದಲೈ ಲಾಮಾ ಮಾತಿಗೆ ವಿರೋಧ ವ್ಯಕ್ತಪಡಿಸಿದೆ. ಜತೆಗೆ, ದಲೈ ಲಾಮಾ ಒಬ್ಬರೇ ಉತ್ತರಾಧಿಕಾರಿ ಆಯ್ಕೆ ಮಾಡುವಂತಿಲ್ಲ; ಅದರಲ್ಲಿ ತನ್ನ ಪಾತ್ರವೇ ನಿರ್ಣಾಯಕವಾಗಿರಬೇಕು ಎಂದು ಹಟ ಹಿಡಿದಿದೆ. ಆದರೆ, ಚೀನಾಕ್ಕೆ ತಕ್ಕ ಉತ್ತರ ನೀಡಿರುವ ದಲೈ ಲಾಮಾ ಅವರು, 'ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಲು ಯಾರಿಗೂ ಅವಕಾಶ ನೀಡುವುದಿಲ್ಲ. ತಮ್ಮ ಸಂಸ್ಥೆಯ ತೀರ್ಮಾನವೇ ಅಂತಿಮ' ಎಂದಿದ್ದಾರೆ.

ಉತ್ತರಾಧಿಕಾರಿ ಆಯ್ಕೆ ಮತ್ತು ಅವರನ್ನು ತರಬೇತಿಗೊಳಿಸುವ ಪ್ರಕ್ರಿಯೆಗೆ ಹಲವು ವರ್ಷಗಳೇ ಬೇಕಾಗುತ್ತವೆ. ಈ ನಡುವಿನ ಅವಧಿಯಲ್ಲಿ ಚೀನಾ ಷಡ್ಯಂತ್ರ ಹೂಡಬಹುದು ಎನ್ನುವ ಮುನ್ನೆಚ್ಚರಿಕೆಯೂ ದಲೈ ಲಾಮಾ ಅವರಲ್ಲಿದೆ. ಟಿಬೆಟ್‌ನ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಅವರ ದೇಶದ ಹೊರಗಿದ್ದು, ವಿವಿಧ ದೇಶಗಳಲ್ಲಿ ಆಶ್ರಯ ಪಡೆದಿರುವ ಟಿಬೆಟಿಯನ್ನರನ್ನು ಒಳಗೊಂಡ ದೇಶಾಂತರ ಸರ್ಕಾರ ರಚಿಸಿದ್ದು, ಅದು ದಲೈ ಲಾಮಾ ಅವರ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹೊಂದಿದೆ.

ಉತ್ತರಾಧಿಕಾರಿ ಆಯ್ಕೆಯ ಮೂಲಕ ಟಿಬೆಟ್‌ನ ಧಾರ್ಮಿಕ ಪರಂಪರೆ ಮತ್ತು ಅದರ ಸ್ವಾಯತ್ತೆಯ ಹೋರಾಟವನ್ನು ತಮ್ಮ ನಂತರವೂ ಮುಂದುವರಿಸಲು ದಲೈ ಲಾಮಾ ಪ್ರಯತ್ನಿಸುತ್ತಿದ್ದರೆ, ಇದೇ ಅವಕಾಶ ಬಳಸಿಕೊಂಡು ಟಿಬೆಟ್ ಮೇಲಿನ ತನ್ನ ಹಿಡಿತ ಬಲಗೊಳಿಸಲು ಚೀನಾ ಮುಂದಾಗಿದೆ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ದಿ ನ್ಯೂಯಾರ್ಕ್ ಟೈಮ್ಸ್, ಸಿಬಿಸಿ, ದಲೈಲಾಮಾ.ಕಾಮ್

### ಭಾರತದ ಎಚ್ಚರಿಕೆಯ ಹೆಜ್ಜೆ

1959ರಿಂದ ದಲೈ ಲಾಮಾಗೆ ಆಶ್ರಯ ನೀಡಿರುವ ಭಾರತವು ಉತ್ತರಾಧಿಕಾರಿ ಆಯ್ಕೆಗೆ ಸಂಬಂಧಿಸಿದ ಸಂಘರ್ಷದ ವಿಚಾರದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದೆ. ದಲೈ ಲಾಮಾ ಮತ್ತು ಅವರ ಬೆಂಬಲಿಗರಿಗೆ ಆಶ್ರಯ ನೀಡಿರುವುದರಿಂದ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಉತ್ತಮ ಹೆಸರು ಪ್ರಾಪ್ತವಾಗಿದ್ದರೂ ಚೀನಾದೊಂದಿಗಿನ ಗಡಿ ಸಂಘರ್ಷದ ಕಾರಣಕ್ಕೆ ಸೂಕ್ಷ್ಮವಾಗಿ ವರ್ತಿಸುತ್ತಿದೆ.

ಚೀನಾದೊಂದಿಗಿನ ರಾಜತಾಂತ್ರಿಕ ಸಂಬಂಧ ಕಾಪಾಡಿಕೊಳ್ಳುವ ದೃಷ್ಟಿಯಿಂದ ಭಾರತವು ಟಿಬೆಟ್ ಸ್ವಾಯತ್ತ ಹೋರಾಟದಿಂದಲೂ ಅಂತರ ಕಾಯ್ದುಕೊಂಡಿದೆ. ಆದರೆ, ಭಾರತದಲ್ಲಿದ್ದು, ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ನಡೆಸುವ ದಲೈ ಲಾಮಾ ಅವರ ಧಾರ್ಮಿಕ ಹಕ್ಕನ್ನು ಭಾರತವು ಬಹಿರಂಗವಾಗಿ ಸಮರ್ಥಿಸಿದೆ. 2025ರ ಮಾರ್ಚ್‌ನಲ್ಲಿ ದೇಶದ 46 ಸಂಸದರು ದಲೈ ಲಾಮಾ ಅವರಿಗೆ ಇರುವ ಉತ್ತರಾಧಿಕಾರಿ ಆಯ್ಕೆಯ ವಿಶೇಷ ಹಕ್ಕನ್ನು ಬೆಂಬಲಿಸಿ, ಘೋಷಣಾ ಪತ್ರಕ್ಕೆ ಸಹಿ ಹಾಕಿದ್ದರು. ಈ ವಿಚಾರದಲ್ಲಿ ಚೀನಾದ ಹಸ್ತಕ್ಷೇಪ ಸಲ್ಲದು ಎಂದಿದ್ದರು.

### ಅಮೆರಿಕದ ನಿಲುವೇನು?

ಈ ಬೆಳವಣಿಗೆಯನ್ನು ಅಮೆರಿಕ ಕೂಡ ಗಮನಿಸುತ್ತಿದೆ. ಅಮೆರಿಕ ಈವರೆಗೂ ಟಿಬೆಟಿಯನ್ನರು, ದಲೈ ಲಾಮಾ ಹಾಗೂ ಅವರ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುತ್ತಿತ್ತು. ಆದರೆ, ಈಗಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿಲುವು ಏನು ಎಂಬುದು ಸ್ಪಷ್ಟವಾಗಿಲ್ಲ. ಟ್ರಂಪ್ ಅವರು ಚೀನಾದೊಂದಿಗೆ ಸುಂಕ ಸಮರದಲ್ಲಿ ತೊಡಗಿರುವುದರ ಜೊತೆಗೆ ಸ್ನೇಹದ ಹಸ್ತವನ್ನೂ ಚಾಚುತ್ತಿದ್ದಾರೆ. ಹೀಗಾಗಿ, ಅವರು ಯಾರಿಗೆ ಬೆಂಬಲ ನೀಡಬಹುದು ಎಂಬ ಕುತೂಹಲ ಮೂಡಿದೆ.

### ಚೀನಾ ಬಿಗಿ ನಿಲುವು, ಒತ್ತಡ ತಂತ್ರ

ದಲೈ ಲಾಮಾ ಅವರು 1959ರಲ್ಲಿ ಭಾರತಕ್ಕೆ ಪಲಾಯನ ಮಾಡಿದ ನಂತರ, ಚೀನಾವು ಅವರನ್ನು ಸ್ವತಂತ್ರ ಟಿಬೆಟ್‌ಗಾಗಿ ಹೋರಾಟ ಮಾಡುವ ಪ್ರತ್ಯೇಕತಾವಾದಿ ಎಂದು ಗುರುತಿಸಿದೆ. ಟಿಬೆಟಿಯನ್ನರಿಗೆ ಭಾರತ ಆಶ್ರಯ ನೀಡಿರುವ ಬಗ್ಗೆ ಚೀನಾಕ್ಕೆ ಈಗಲೂ ಅಸಮಾಧಾನವಿದೆ. ಟಿಬೆಟ್‌ನಲ್ಲಿರುವ ಬೌದ್ಧ ಧರ್ಮದ ಅನುಯಾಯಿಗಳು, ಅವರ ಧರ್ಮಗುರುಗಳು, ಅವರ ಸಂಸ್ಕೃತಿ, ಆಚಾರ ವಿಚಾರಗಳ ಮೇಲೆ ಸಂಪೂರ್ಣ ನಿಯಂತ್ರಣ ಹೇರಲು ಚೀನಾ ಬಯಸುತ್ತದೆ. ದಲೈ ಲಾಮಾ ಅವರ ಯಾವ ನಿರ್ಧಾರವನ್ನೂ ಅದು ಒಪ್ಪುವುದಿಲ್ಲ.

ಟಿಬೆಟ್‌ನ ಬೌದ್ಧಧರ್ಮದಲ್ಲಿ ದಲೈ ಲಾಮಾ ಅವರ ನಂತರದ ಉನ್ನತ ಧಾರ್ಮಿಕ ಹುದ್ದೆ ಎಂದರೆ ಪಂಚೆನ್ ಲಾಮಾ. 1995ರಲ್ಲಿ ದಲೈ ಲಾಮಾ ಅವರು ಆರು ವರ್ಷದ ಬಾಲಕನೊಬ್ಬನನ್ನು ಟಿಬೆಟ್‌ನ 11ನೇ ಪಂಚೆನ್ ಲಾಮಾ ಆಗಿ ಆಯ್ಕೆ ಮಾಡಿದ್ದರು. ಅದಾಗಿ ಕೆಲವೇ ದಿನಗಳಲ್ಲಿ ಆ ಬಾಲಕ ಮತ್ತು ಅವರ ಕುಟುಂಬ ನಾಪತ್ತೆಯಾಗಿತ್ತು. ಚೀನಾ ಆಡಳಿತ ಅವರನ್ನು ವಶಕ್ಕೆ ಪಡೆದಿದೆ ಎಂದು ಹೇಳಲಾಗಿದೆ. ಇಲ್ಲಿಯವರೆಗೂ ಅವರು ಎಲ್ಲಿದ್ದಾರೆ ಎಂಬುದು ತಿಳಿದಿಲ್ಲ. 11ನೇ ಪಂಚೆನ್ ಲಾಮಾ ಹುದ್ದೆಗೆ ಚೀನಾ ಮತ್ತೊಬ್ಬ ಬಾಲಕನನ್ನು ನೇಮಕ ಮಾಡಿತ್ತು.

14ನೇ ದಲೈ ಲಾಮಾ ಅವರ ನಂತರ 15ನೇ ದಲೈ ಲಾಮಾ ಆಯ್ಕೆಯಲ್ಲಿ ತನ್ನ ಪಾತ್ರವೂ ಇರುತ್ತದೆ ಎಂದು ಈಗಲೇ ಅದು ಪ್ರತಿಪಾದಿಸಲು ಆರಂಭಿಸಿದೆ. ಜೂನ್ 30ರಂದು ದಲೈ ಲಾಮಾ ಅವರು ಉತ್ತರಾಧಿಕಾರಿ ಬಗ್ಗೆ ಮಾತನಾಡಿದ ಕೆಲ ಹೊತ್ತಿನಲ್ಲಿ ಈ ಬೆಳವಣಿಗೆ ಬಗ್ಗೆ ಅದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಹೊಸ ದಲೈ ಲಾಮಾ ಆಯ್ಕೆಯು 'ಗೋಲ್ಡನ್ ಅರ್ನ್' ವ್ಯವಸ್ಥೆಯಲ್ಲಿ ನಡೆಯಬೇಕು. ಮತ್ತು ಆಯ್ಕೆಗೆ ತನ್ನ ಅನುಮತಿಯೂ ಬೇಕು ಎಂದು ಹೇಳಿದೆ (ಗೋಲ್ಡನ್ ಅರ್ನ್ ಎಂದರೆ, ಚಿನ್ನದ ಕರಂಡಿಕೆಯಿಂದ ಚೀಟಿ ಎತ್ತಿ ಆಯ್ಕೆ ಮಾಡುವುದು). ಹಾಗಾಗಿ, ಭಾರತದಲ್ಲಿರುವ ದಲೈ ಲಾಮಾ ಅವರ ಟ್ರಸ್ಟ್ ಹಾಗೂ ಬೌದ್ಧ ಭಿಕ್ಕುಗಳು ಆಯ್ಕೆ ಮಾಡುವ ಹೊಸ ಧರ್ಮಗುರುವನ್ನು ಚೀನಾ ಒಪ್ಪದು. ತನ್ನದೇ ವಿಧಾನದಲ್ಲಿ ಇನ್ನೊಬ್ಬರನ್ನು ಆಯ್ಕೆ ಮಾಡಬಹುದು. ಹಾಗಾದ ಪಕ್ಷದಲ್ಲಿ ಟಿಬೆಟಿಯನ್ನರು ಇಬ್ಬರು ಧರ್ಮಗುರುಗಳನ್ನು ಕಾಣಲಿದ್ದಾರೆ ಎಂದು ಹೇಳಲಾಗುತ್ತಿದೆ.





ತಮ್ಮ ಜೀವನದುದ್ದಕ್ಕೂ ಚೀನಾವನ್ನು ವಿರೋಧಿಸುತ್ತಲೇ ಬಂದಿರುವ ಹಾಲಿ ದಲೈ ಲಾಮಾ ಅವರು, ಹೊಸ ದಲೈ ಲಾಮಾ ಆಯ್ಕೆ ಪ್ರಕ್ರಿಯೆಯಲ್ಲಿ ಚೀನಾದ ಪಾಲ್ಗೊಳ್ಳುವಿಕೆಯನ್ನು ಯಾವುದೇ ಕಾರಣಕ್ಕೂ ಒಪ್ಪಬಾರದು ಎಂದು ತಮ್ಮ ಅನುಯಾಯಿಗಳಿಗೆ ಕರೆ ನೀಡಿದ್ದಾರೆ. ಅಲ್ಲದೇ, ಹೊಸ ದಲೈ ಲಾಮಾ ಆಗುವ ವ್ಯಕ್ತಿ ಚೀನಾ ಹೊರತಾದ ಪ್ರದೇಶದಲ್ಲಿ ಜನಿಸಬಹುದು. ಆತ ಪುರುಷನೇ ಆಗಬೇಕಿಲ್ಲ, ಮಹಿಳೆಯೂ ಆಗಬಹುದು ಎಂದೂ ಈ ಹಿಂದೆ ಹೇಳಿದ್ದರು.

ರಾಷ್ಟ್ರೀಯ

## ದಲೈ ಲಾಮಾ ಆಯ್ಕೆ ಟಿಬೆಟಿಯನ್ನರ ಹಕ್ಕು: ರಿಜಿಜು



ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಮುಂದಿನ ದಲೈ ಲಾಮಾ ಯಾರೆಂಬ ನಿರ್ಧಾರವನ್ನು ಸ್ಥಾಪಿತ ಸಂಸ್ಥೆ ಮತ್ತು ಟಿಬೆಟಿಯನ್ ಬೌದ್ಧ ನಾಯಕರು ತೆಗೆದುಕೊಳ್ಳುತ್ತಾರೆಯೇ ಹೊರತು, ಬೇರೆ ಯಾರೂ ಅಲ್ಲ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಗುರುವಾರ ಪ್ರತಿಪಾದಿಸಿದರು.

ಚೀನಾಕ್ಕೆ ತಿರುಗೇಟು ನೀಡಿರುವ ಈ ಹೇಳಿಕೆಯು, ದಲೈ ಲಾಮಾರ ಉತ್ತರಾಧಿಕಾರಿ ಬಗ್ಗೆ ಕೇಂದ್ರ ಸರ್ಕಾರ ನೀಡುತ್ತಿರುವ ಮೊದಲ ಪ್ರತಿಕ್ರಿಯೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಿಜಿಜು, 'ದಲೈ ಲಾಮಾ ಬೌದ್ಧರ ಅತ್ಯಂತ ಪ್ರಮುಖ ಮತ್ತು ನಿರ್ಣಾಯಕ ಸಂಸ್ಥೆ. ದಲೈ ಲಾಮಾ ಅವರನ್ನು ಅನುಸರಿಸುವವರೆಲ್ಲರೂ, ಅವರ ಅವತಾರವನ್ನು ಸ್ಥಾಪಿತ ಆಚಾರದಂತೆ ಮತ್ತು ಅವರ ಇಚ್ಛೆಯ ಪ್ರಕಾರ ನಿರ್ಧರಿಸಬೇಕು ಎಂದು ಭಾವಿಸುತ್ತಾರೆ. ಅವರನ್ನು ಮತ್ತು ಜಾರಿಯಲ್ಲಿರುವ ಆಚಾರಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಅದನ್ನು ನಿರ್ಧರಿಸುವ ಹಕ್ಕಿಲ್ಲ' ಎಂದು ಹೇಳಿದರು.

## 'ನಾಸ್ತಿಕ ಚೀನಾದಿಂದ ಧರ್ಮಗುರು ದಲೈ ಲಾಮಾಗೆ ಅವಮಾನ'

ಶಿಮ್ಲಾ (ಪಿಟಿಐ): ಆರಂಭದಿಂದಲೂ ಟಿಬೆಟ್ ಬೌದ್ಧ ಧರ್ಮಗುರು ದಲೈಲಾಮಾ ಅವರ ಮಾನಹಾನಿ ಮಾಡುತ್ತಿರುವ ಚೀನಾ ಒಂದು 'ನಾಸ್ತಿಕ ದೇಶ' ಎಂದು ಟಿಬೆಟ್ ದೇಶಾಂತರ ಸರ್ಕಾರದ ಸಂಸದ ತೇನ್‌ಜಿಂಗ್ ಜಿಗ್ಡಾಲ್ ಅವರು ಗುರುವಾರ ಕುಟುಕಿದ್ದಾರೆ.

ಉತ್ತರಾಧಿಕಾರಿ ಆಯ್ಕೆ ಮಾಡುವ ನಿರ್ಧಾರವನ್ನು ಅಧಿಕೃತ ಸಂಸ್ಥೆ ಮತ್ತು ಟಿಬೆಟ್ ಬೌದ್ಧ ಧರ್ಮಗುರು ಕೈಗೊಳ್ಳಲಿದ್ದಾರೆ ಎಂದು ಜಿಗ್ಡಾಲ್ ತಿಳಿಸಿದ್ದಾರೆ.

'ಗಾಡೆನ್ ಫೋಡ್ರಾಂಗ್ ಟ್ರಸ್ಟ್ ನನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿದೆ. ಬೇರೆ ಯಾರೂ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ' ಎಂದು ಬುಧವಾರ ದಲೈ ಲಾಮಾ ಹೇಳಿದ್ದರು. ಗಾಡೆನ್ ಫೋಡ್ರಾಂಗ್ ಟ್ರಸ್ಟ್ ಅನ್ನು 2015ರಲ್ಲಿ ದಲೈ ಲಾಮಾ ಸ್ಥಾಪಿಸಿದ್ದರು.

ಉತ್ತರಾಧಿಕಾರಿ ಆಯ್ಕೆ ಮಾಡುವಾಗ ತನ್ನ ಸಮ್ಮತಿ ಪಡೆಯಬೇಕು ಎಂದು ಚೀನಾ ತಾಕೀತು ಮಾಡಿತ್ತು. ಇದಕ್ಕೆ ಜಿಗ್ಡಾಲ್ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿ, 'ಚೀನಾ ಬೂಟಾಟಿಕೆಯ ನಾಸ್ತಿಕ ದೇಶ. ಉತ್ತರಾಧಿಕಾರಿಗೆ ಇಂಥದ್ದೇ ಗಡಿಯಿಲ್ಲ. ಎಲ್ಲಿ ಬೇಕಾದರೂ ಜನ್ಮತಾಳಿರಬಹುದು' ಎಂದು ಹೇಳಿದ್ದಾರೆ.

## ಶುಭಾಂಶು ಜೊತೆ ಸಂವಾದಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಮೈಸೂರು: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಜೊತೆ ನೇರ ಸಂವಾದ ನಡೆಸಲು ಇಲ್ಲಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಶುಕ್ರವಾರ ಮಧ್ಯಾಹ್ನ 3.47ಕ್ಕೆ ಸರಿಯಾಗಿ ಇಂಥದ್ದೊಂದು ಅಪರೂಪದ ಕ್ಷಣಕ್ಕೆ ಬೆಂಗಳೂರಿನ ಯು.ಆರ್. ರಾವ್ ಬಾಹ್ಯಾಕಾಶ ಕೇಂದ್ರವು ಸಾಕ್ಷಿಯಾಗಲಿದೆ. ಅಲ್ಲಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಹವ್ಯಾಸಿ ರೇಡಿಯೊ (ಎಆರ್‌ಐಎಸ್‌ಎಸ್) ಮೂಲಕ ಸಂವಾದ ಆಯೋಜಿಸಲಾಗಿದೆ.

## ಕೇರಳದ ವಿದ್ಯಾರ್ಥಿಗಳ ಸಂವಾದ



ಶುಭಾಂಶು

ತಿರುವನಂತಪುರ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ (ಐಎಸ್‌ಎಸ್) ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರ ಜತೆಗೆ ಕೇರಳದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗುರುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದರು.

ಇಲ್ಲಿನ ವಿಕ್ರಮ್ ಸಾರಾಬಾಯಿ ಬಾಹ್ಯಾಕಾಶ ಕೇಂದ್ರದಲ್ಲಿ ಸಂವಾದಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಂವಾದಕ್ಕಾಗಿ 10 ನಿಮಿಷಗಳವರೆಗೆ ಕಾಲಾವಕಾಶ ನೀಡಲಾಗಿತ್ತು. ವಿದ್ಯಾರ್ಥಿಗಳು ಶುಭಾಂಶು ಅವರಿಗೆ ಬಾಹ್ಯಾಕಾಶ ಪ್ರಯಾಣ, ಶೂನ್ಯ ಗುರುತ್ವ ಸೇರಿದಂತೆ ಹಲವು ಪ್ರಶ್ನೆಗಳನ್ನು ಕೇಳಿದರು.

ಇದಕ್ಕೆ ಉತ್ತರಿಸಿದ ಶುಭಾಂಶು, ತಮ್ಮ ಪ್ರಯಾಣ, ಆಹಾರ, ಬಾಹ್ಯಾ ಕಾಶ ನಿಲ್ದಾಣದಲ್ಲಿ ಬಿಡುವಿನ ವೇಳೆಯನ್ನು ಹೇಗೆ ಕಳೆಯಲಾಗುತ್ತದೆ, ಅಲ್ಲಿ ನಡೆಸಲಾಗುವ ಪ್ರಯೋಗಗಳ ಬಗ್ಗೆ ಮಾಹಿತಿ ನೀಡಿದರು. ಅಲ್ಲದೆ ಅವರು, ಐಎಸ್‌ಎಸ್ ಒಳಗೆ ಹೇಗೆ ತೇಲುತ್ತೇವೆ ಎಂಬುದನ್ನೂ ತೋರಿಸಿದರು. ಶೂನ್ಯ ಗುರುತ್ವದಲ್ಲಿ ಚೆಂಡಿನೊಂದಿಗೆ ಹೇಗೆ ಆಟವಾಡಬಹುದು ಎಂಬುದನ್ನೂ ಪ್ರಸ್ತುತಪಡಿಸಿದರು.

## ಯಾರ ಮಾತಿಗೆ ಎಷ್ಟು ಬೆಲೆ?





**ಬೆಳಗಿನ** ನಾಲ್ಕು ಗಂಟೆಗೇ ಬಾಡಿಗೆದಾರ ಬಂದು ದಡದಡ ಬಾಗಿಲು ಬಡಿದಾಗ ಸಿಟ್ಟಿನಿಂದಲೇ ಬಾಗಿಲು ತೆಗೆದ ಮಾಲೀಕ, 'ಏನು ವಿಷಯ' ಅಂದ. 'ನಾನು ಈ ತಿಂಗಳ ಬಾಡಿಗೆ ಕೊಡುವುದು ಸಾಧ್ಯವಿಲ್ಲ' ಎಂದ ಅವನು. ಈತ ಮತ್ತಷ್ಟು ಕೋಪಗೊಂಡು 'ಇದನ್ನು ಹೇಳಲು ಬೆಳಿಗ್ಗೆಯೇ ಬಂದು ನಿದ್ರೆಯಿಂದ ಎಬ್ಬಿಸಬೇಕಿತ್ತಾ, ನಿಧಾನಕ್ಕೆ ಹೇಳಿದ್ದರಾಗುತ್ತಿರಲಿಲ್ವಾ' ಎಂದ. 'ಈ ಮನೆಯ ವಿಷಯ ಇಬ್ಬರಿಗೂ ಸಂಬಂಧಿಸಿದ ಕಾರಣ ಒತ್ತಡವನ್ನು ನಾನೊಬ್ಬನೇ ಏಕೆ ಅನುಭವಿಸಲಿ, ನಿಮಗೂ ಹಂಚೋಣ ಅಂತ ಹೇಳಿದೆ' ಅಂದ ಇವನು ತಣ್ಣಗೆ.


ನಮ್ಮ ಜೀವಿತಾವಧಿಯಲ್ಲಿ ಬಹಳಷ್ಟು ಜನ ಇಂಥವರು ಸಿಗುತ್ತಾರೆ. ಸುಮ್ಮನೆ ತಮ್ಮ ಪಾಡಿಗೆ ತಾವು ನೆಮ್ಮದಿಯಾಗಿ ಬದುಕುವವರನ್ನು ಕಂಡರೆ ಇವರಿಗೆ ಸಮಾಧಾನವಿರುವುದಿಲ್ಲ. ತಮ್ಮ ಮನಸ್ಸಿನಲ್ಲಿ ಇರುವ ಆತಂಕ, ದುಃಖ, ದುಮ್ಮಾನ, ಮತ್ತು ಇಲ್ಲ ಸಲ್ಲದ ಬೇಡದ ವಿಚಾರಗಳನ್ನೆಲ್ಲಾ ಇನ್ನೊಬ್ಬರ ತಲೆಗೆ ತುಂಬುವುದರ ಮೂಲಕ ವಿಕೃತ ಖುಷಿಯನ್ನು ಅನುಭವಿಸುತ್ತಿರುತ್ತಾರೆ. ಯಾರೋ ಮಾಡಿದ ಚಂದದ ಪೇಂಟಿಂಗ್ ಒಂದಕ್ಕೆ ಏನೋ ಕೊರತೆಯನ್ನು ಎತ್ತಿ ಹೇಳಿಬಿಡುವುದು. ಮಾಡಿದ ಅಡುಗೆಯಲ್ಲಿ ತಪ್ಪು ಕಂಡು ಹಿಡಿಯುವುದು. ದೈಹಿಕ ನ್ಯೂನತೆಗಳನ್ನು ಎತ್ತಿ ಹಿಡಿದು ಹೀಯಾಳಿಸಿದಂತೆ ಮಾತನಾಡಿಬಿಡುವುದು. ಇಲ್ಲವೇ ಕಟ್ಟಿದ ಮನೆ ವಾಸ್ತು ಪ್ರಕಾರ ಇಲ್ಲ ಅಂತಲೋ, ಸೊಸೆ ನಿಮಗೆ ತಕ್ಕವಳಲ್ಲ ಅಂತಲೋ, ನಿಮ್ಮ ಹುಡುಗನ ಸಹವಾಸ ಸರಿಯಾದವರ ಜೊತೆ ಇಲ್ಲ ಅಂತಲೋ... ಹೀಗೆ ಹಲವಾರು ಸಣ್ಣ ಸಣ್ಣ ವಿಷಯಗಳನ್ನು ದೊಡ್ಡದು ಮಾಡಿ ಮನಸ್ಸಿಗೆ ಕಹಿ ಸುರಿಯುವ ಜನ ಇವರು. ಇವರ ಈ ನಡವಳಿಕೆಗೆ ಸರಿಯಾದ ಮದ್ದೆಂದರೆ ಇಂಥವರ ಮಾತುಗಳನ್ನು ಕಡಗಣಿಸುವುದು.

ಸಲಹೆ ನೀಡುವವರು ಎಷ್ಟು ಅರ್ಹರು ಎನ್ನುವುದರ ಮೇಲೆ ಸಲಹೆಯ ತೂಕವನ್ನು ಅಳೆಯಿರಿ. ಹೀಗೆ ಕಿರಿಕಿರಿ ಉಂಟುಮಾಡುವ ಜನರನ್ನು ನಿರ್ಲಕ್ಷಿಸುವುದು ಸವಾಲಿನ ಸಂಗತಿ. ಆದಷ್ಟೂ ಜನರೊಂದಿಗೆ ನೀವು ಸಂವಹನ ನಡೆಸಬೇಕಾದ ಸಂದರ್ಭಗಳನ್ನು ತಪ್ಪಿಸಲು ಪ್ರಯತ್ನಿಸಿ. ನಾವು ಮಾಡುವ ಎಲ್ಲಾ ಕೆಲಸಗಳು ಎಲ್ಲರಿಗೂ ಇಷ್ಟವಾಗುವುದಿಲ್ಲ. ಕೆಲವರಿಗೆ ಇಷ್ಟವಾಗಬಹುದು, ಇನ್ನೂ ಕೆಲವರು ಇಷ್ಟಪಡದಿರಬಹುದು. ಇಷ್ಟವಿಲ್ಲದವರು ಕೆಲಸದಲ್ಲಿನ ದೋಷಗಳನ್ನು ಕಂಡು ಟೀಕಿಸುತ್ತಾರೆ. ಇದು ನಮ್ಮಲ್ಲಿ ಖಿನ್ನತೆ ಉಂಟುಮಾಡುತ್ತದೆ. ನಮ್ಮ ಪ್ರತಿಭೆ, ವ್ಯಕ್ತಿತ್ವ ಗೊತ್ತೇ ಇಲ್ಲದವರ ಮಾತೂ ನಮಗೆ ಗೊತ್ತಾಗುವುದು ಬೇಡ. ಎಲ್ಲ ಟೀಕೆಗಳಿಗೆ ಉತ್ತರವನ್ನೂ ನೀಡಬೇಕಿಲ್ಲ.

ನಾವೂ ಇತರರನ್ನು ಟೀಕಿಸುವಾಗ ಬಹಳ ಯೋಚಿಸಬೇಕು. ಇತರರನ್ನು ಕಡಿಮೆ ಅಂದಾಜು ಮಾಡುವುದು, ಅವರ ಭಾವನೆಗಳನ್ನು ನೋಯಿಸುವುದು ಭವಿಷ್ಯದಲ್ಲಿ ಅವರಿಗೆ ದೊಡ್ಡ ನಷ್ಟವನ್ನು ಉಂಟು ಮಾಡಬಹುದು. ನೀವು ಯಾರನ್ನಾದರೂ ಹಂಗಿಸಿದರೆ ಆ ಮಾತು ನಿಮಗೆ ಸಾಮಾನ್ಯ ಎನಿಸಬಹುದು. ಆದರೆ ಹಂಗಿಸಿಕೊಂಡವರಿಗೆ ಆ ನೋವು ಏನೆಂದು ಗೊತ್ತು. ಆದಷ್ಟೂ ಬಿಟ್ಟಿ ಸಲಹೆಗಳನ್ನು ದೇಶಾವರಿಯಾಗಿ ನೀಡುವುದನ್ನು ನಿಲ್ಲಿಸಿ. ಮೇಲ್ನೋಟಕ್ಕೆ ವ್ಯಕ್ತಿಯೊಬ್ಬರಲ್ಲಿ ನಾವು ಕಾಣುವುದಕ್ಕೂ ಅವರು ಮನದೊಳಗೆ ಅನುಭವಿಸುತ್ತಿರುವುದಕ್ಕೂ ಅಜಗಜಾಂತರ ಇದ್ದೀತು. ಯಾರಿಗೆ ಗೊತ್ತು ನಿಮ್ಮ ಅಂದಾಜಿಗೂ ಸಿಗದ ಯುದ್ಧದಲ್ಲಿ ಸಿಕ್ಕಿ ಅವರು ಹೈರಾಣಾಗಿರಬಹುದು. ಆದ್ದರಿಂದ ನಾವು ಎಲ್ಲರಿಗೂ ಬಾಯಾಗಬೇಕಿಲ್ಲ. ಎಲ್ಲರ ಮಾತಿಗೂ ಕಿವಿಕೊಡಬೇಕಾಗಿಯೂ ಇಲ್ಲ. ❖

### ಪದಬಂಧ 6093

ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

2. ಗೆಲುವು ದೊರೆತಾಗ ಆಚರಿಸುವ ಹಬ್ಬ (5)
4. ಪಾಕದಲ್ಲೇ ದೋಷವಿದೆಯಲ್ಲಾ? (3)
5. ನಡು ದಾರಿಯಲ್ಲಿಯೇ ಪ್ರಾರಂಭವಾದ ಕಂಪನ (3)
7. ಈತ ಸೀತೆಯ ತಂದೆ (3)
9. ನಾಯಿ ಜಾತಿಯ ಒಂದು ಕಾಡುಮೃಗ (2)
10. ನಗಾರಿ ಹತ್ತಿರವಿರುವ ಜಂಬೂಕ (2)
11. ಸಂಕುಲದ ಹತ್ತಿರ ಮುಂಗುಸಿ ಕಾಣುತ್ತಿದೆಯಲ್ಲಾ? (3)
13. ಕರದೊಳಗಿರುವ ದೇವರು (3)
15. ಸರಾಗವಾಗಿ ಒಳನುಗ್ಗಿರುವ ಗಂಡಾನೆ (3)
16. ಇದು ಅತ್ಯಂತ ಚಲುವಾದುದು (5)

**ಮೇಲಿಂದ ಕೆಳಕ್ಕೆ**

1. ಕೊನೆಗೆ ಜನವಿದ್ದರೆ ಮಾತ್ರ ಇದು ಉಪಯೋಗ (4)
2. ಬರಹಗಾರ ಉಲ್ಟಾ ನಿಂತಿದ್ದಾನಲ್ಲಾ? (2)
3. ಯೌವ್ವನದಲ್ಲಿ ಪ್ರವೇಶಿರುವ ಕಾಡು (2)
4. ಪಾಕಕ್ಕೆ ದೊರೆತ ಬಹುಮಾನ (5)
6. ಸುಗಂಧದ್ರವ್ಯವನ್ನು ನೀಡುವ ಒಂದು ಜಾತಿಯ ಜಿಂಕೆ (5)
7. ಜನರ ಮಧ್ಯೆ ನುಸುಳಿರುವ ಆಳು (3)
8. ಕೆಸರಿನಲ್ಲೂ ಅರಳುವ ಹೂ (3)
12. ಕಣ್ಣಿನ ಕೊನೆಯ ನೋಟವಿದು (4)
14. ತಿರುಗಿದ್ದಾಗ ಪ್ರತ್ಯಕ್ಷವಾದ ದೇವತೆ (2)
15. ಸರಕ್ಕನೆ ಧರಿಸಿರುವ ಮಾಲೆ (2)

### 6092ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಸಭಾಸದ 3.ನಶ್ವರ
4.ಶಸ್ತ್ರಾಗಾರ 6.ದಿನಪ
8.ಜಲಪಾತ 9.ಜಡಿಮಳೆ
10.ಪಾಯಸ 12.ಮಿತವ್ಯಯ
14.ಬಡವ 15.ಮದಜಲ

**ಮೇಲಿಂದ ಕೆಳಕ್ಕೆ:**
1.ಸರದಿ 2.ದಶ
3.ನದೀಮುಖಜಭೂಮಿ
5.ರಜತಮಹೋತ್ಸವ
7.ನವಿರೆಳೆ 8.ಜಲಾಶಯ
11.ಸಬಲ 13.ಯಮ

### ಸುಡೊಕು 6477

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 7 | | | | 5 | | | 9 | |
| | 2 | | 1 | | 9 | 6 | | 5 |
| | | 5 | | 3 | | | 1 | |
| | | | | | 4 | 1 | | 9 |
| 9 | | 1 | 5 | 8 | | | 4 | |
| 4 | | | | 1 | | 3 | | 7 |
| | | | 3 | | 7 | | | 1 |
| | 6 | | | | | 7 | 3 | |
| | | | | 2 | | | 6 | 4 |

6476 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 9 | 6 | 2 | 1 | 3 | 4 | 5 |
| 3 | 2 | 6 | 5 | 4 | 8 | 9 | 1 | 7 |
| 1 | 4 | 5 | 9 | 7 | 3 | 2 | 8 | 6 |
| 2 | 6 | 8 | 1 | 3 | 5 | 4 | 7 | 9 |
| 9 | 3 | 1 | 7 | 8 | 4 | 5 | 6 | 2 |
| 4 | 5 | 7 | 2 | 9 | 6 | 1 | 3 | 8 |
| 6 | 9 | 2 | 3 | 1 | 7 | 8 | 5 | 4 |
| 7 | 1 | 4 | 8 | 5 | 9 | 6 | 2 | 3 |
| 5 | 8 | 3 | 4 | 6 | 2 | 7 | 9 | 1 |

### ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**04 ಜುಲೈ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಆಷಾಢ ಶುಕ್ಲ ನವಮಿ ಗಂ. 16-32 **ನಕ್ಷತ್ರ:** ಚಿತ್ರಾ ಗಂ. 16-50 **ಯೋಗ:** ಶಿವ ಗಂ. 19-36 **ಕರಣ:** ಕೌಲವ ಗಂ. 16-32, ಮಿಥುನ ಮಾಸದ 20 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 – 12-00. **ಸೂರ್ಯೋದಯ:** 06-12 **ಸೂರ್ಯಾಸ್ತ:** 06-58 **ಮುಸ್ಲಿಂ ದಿನಾಂಕ:** 08 ಮೊಹರಮ್, **ದಿನ ವಿಶೇಷ:** ಆಷಾಢ ಶುಕ್ರವಾರ. ಅದೃಷ್ಟ ಸಂಖ್ಯೆ: 5, 6

**ಮೇಷ:** ನಿಕಟ ಸಂಬಂಧಗಳೊಂದಿಗೆ ಬದುಕಿನ ದುರ್ಘಟನೆಯ ವಿಷಯಗಳನ್ನು ಹಂಚಿಕೊಳ್ಳುವುದರಿಂದ ಸಹಾಯ ಹೊಂದುವಿರಿ. ಪ್ರಮುಖ ಹುದ್ದೆಗಳಲ್ಲಿರುವವರಿಗೆ ಒಳ್ಳೆಯ ಸ್ಥಾನ ಮತ್ತು ಪ್ರಶಂಸೆ ದೊರಕುವುದು.

**ವೃಷಭ:** ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ. ಪರಿಣತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಪರಿಸ್ಥಿತಿಯು ಆತ್ಮಾವಲೋಕನ ನಡೆಸುವಂತಾಗಲಿದೆ.

**ಮಿಥುನ:** ಕೆಲಸಗಳನ್ನು ಸಾಧಿಸಿಕೊಳ್ಳಬೇಕಿದ್ದರೆ ಅವಿರತ ಶ್ರಮ ಅಗತ್ಯವಾಗುವುದು. ಗುತ್ತಿಗೆಯನ್ನು ನೀಡುವ ಮೊದಲು ಎಲ್ಲಾ ನಿಯಮಗಳಿಗೆ ಒಪ್ಪಿದ ದಾಖಲೆಪತ್ರಗಳಲ್ಲಿ ಸೂಕ್ತ ಸಹಿ ಪಡೆದುಕೊಳ್ಳಲು ಮರೆಯದಿರಿ.

**ಕರ್ಕಾಟಕ:** ಕಾಲು ನೋವು ಅಥವಾ ಬೆನ್ನುನೋವು ಕಾಣಿಸಿದವರಿಗೆ ವೈದ್ಯರ ದರ್ಶನ ಅಗತ್ಯವೆನಿಸಲಿದೆ. ವೃತ್ತಿ ಜೀವನದಲ್ಲಿ ಗೊಂದಲದಿಂದ ಹೊರಬರಬೇಕಾದರೆ ಧೈರ್ಯದಿಂದ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

**ಸಿಂಹ:** ಕೆಲಸದ ಒತ್ತಡದಿಂದ ದೇಹಾಯಾಸ ತೋರಿಬಂದು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಆಹಾರ ಪದಾರ್ಥಗಳನ್ನು ದಾನ ಮಾಡಿ. ಸ್ಟೇಷನರಿ ಮತ್ತು ಫ್ಯಾನ್ಸಿ ವಸ್ತುಗಳ ಮಾರಾಟವಿರುವುದು.

**ಕನ್ಯಾ:** ಕೆಲಸದಲ್ಲಿ ಆತುರದ ಸ್ವಭಾವ ಬೇಡ. ಮಕ್ಕಳಿಗೆ ಓದಿನಲ್ಲಿ ಹೆಚ್ಚು ಆಸಕ್ತಿ ಹುಟ್ಟುವಂತೆ ಮನೆಯ ಪರಿಸರವನ್ನು ನಿರ್ಮಿಸಿ. ಮನೆಯವರ ಆರ್ಥಿಕ ಪರಿಸ್ಥಿತಿ ಕ್ರಮೇಣ ಸುಧಾರಿಸಲಿದೆ. ವ್ಯವಹಾರಗಳು ಜಯಪ್ರದವಾಗುತ್ತವೆ.

**ತುಲಾ:** ರಾಜಕಾರಣಿಗಳಿಗೆ ಶುಭ ಸುದ್ದಿ ದೊರೆಯಲಿದೆ. ಸಾಧ್ಯತೆ ಅರಿತು ವ್ಯವಹಾರದಲ್ಲಿ ಮುಂದುವರಿಯಿರಿ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ. ಕೆಲಸಕ್ಕೆ ನಿಯಮಿತ ಸಮಯವಿರುವುದಿಲ್ಲ.

**ವೃಶ್ಚಿಕ:** ಕುಟುಂಬದಲ್ಲಿ ಊಹೆಗೂ ನಿಲುಕದಂಥ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ಸಹವರ್ತಿಗಳ ಜತೆ ಉತ್ತಮ ಸಂಪರ್ಕ ಬೆಳೆಸಿಕೊಳ್ಳುವುದು ಸಾಧ್ಯವಾಗುವುದು. ಹಣಕಾಸಿನ ವಿವಾದಗಳನ್ನು ಬಗೆಹರಿಸಿಕೊಳ್ಳುವಿರಿ.


**ಧನು:** ಸೃಜನಶೀಲತೆ, ಚಿಂತನಾ ಲಹರಿಗಳು ಇತರರಿಗೆ ವಿಭಿನ್ನವೆನಿಸಿದರೂ ಸರಿಯಾಗಿಯೇ ಇರುತ್ತವೆ. ಅದರಲ್ಲಿ ಅನುಮಾನ ಬೇಡ. ಪದವಿ ವಿದ್ಯಾರ್ಥಿಗಳಿಗೆ ಉತ್ತಮ ನೆನಪಿನಶಕ್ತಿ, ಜ್ಞಾನ ದೊರೆತು ಆನಂದವಾಗಲಿದೆ.

**ಮಕರ:** ದಾಂಪತ್ಯದಲ್ಲಿ ಸಣ್ಣಪುಟ್ಟ ವಿಚಾರಗಳಿಂದ ಮಾನಸಿಕ ಅಸಮಾಧಾನ ಕಾಡಲಿದೆ. ಸಹನಾಶೀಲರಾಗಿ ವರ್ತಿಸಿದಲ್ಲಿ ಯಶಸ್ಸು ಸಿಗುತ್ತದೆ. ಊರಿನ ರಾಜಕಾರಣದ ವಿಷಯಗಳಲ್ಲಿ ಹೆಚ್ಚು ಸಮಯ ಕಳೆಯುವಂತಾಗುವುದು.

**ಕುಂಭ:** ದೈವಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿ ಪಡೆಯುತ್ತೀರಿ. ಕೌಟುಂಬಿಕ ಸಮಸ್ಯೆಯು ನೂತನ ಆಯಾಮ ಪಡೆಯಲಿದೆ. ಅತಿ ವಿಶ್ವಾಸದಿಂದ ಮುಂದುವರಿದ ಮುಖಭಂಗವಾಗಬಹುದು.


**ಮೀನ:** ಧಾರ್ಮಿಕ ಕೆಲಸದಲ್ಲಿ ಆಸಕ್ತಿ ಹೆಚ್ಚಲಿದೆ. ವೈಯಕ್ತಿಕ ಅಭಿವೃದ್ಧಿಗೂ ಸಾಮಾಜಿಕ ಏಳಿಗೆಗೂ ಅನುಕೂಲ ಆಗಲಿದೆ. ಕುಟುಂಬದವರೊಡನೆ ಸಂತೋಷದಿಂದ ಕಳೆಯುವಂತಾಗಲಿದೆ.

### ಗುಂಡಣ್ಣ



ವಿನಿಮಯ ದರ: ಡಾಲರ್ 85.55 | ಪೌಂಡ್ 116.50 | ಯುರೊ 100.50 | ಯೆನ್ (100ಕ್ಕೆ) 59

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,453
ಇಂದಿನ ಅಂತ್ಯ: 25,405
ದಿನದ ಕನಿಷ್ಠ: 25,384
48

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹620; 12 ಕ್ಕೆ ₹80
ಮೈಸೂರು: 100 ಕ್ಕೆ ₹625

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹311-536
ದ್ವಿತಳಿ (ಬಿ.ವಿ) ₹362-714

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹198
ಆರ್‌ಎಸ್‌ಎಸ್-5 ₹192
ಗುಡ್ ಲಾಟ್ ₹181

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹25,500
ಎಸಿ ₹14,140
ಆರ್‌ಪಿ ₹17,250
ಆರ್‌ಸಿ ₹9,400

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1405 (1380)
ಸೋಯಾ (ರಿಫೈನ್ಡ್) ₹1210 (1200)
ಸೂರ್ಯಕಾಂತಿ (ರಿಫೈನ್ಡ್) ₹1335 (1350)
ಪಾಮೋಲಿನ್ ₹1170 (1165)

# ಅವಧಿಪೂರ್ವ ಮರುಪಾವತಿಗೆ ಶುಲ್ಕ ಬೇಡ

## ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿಗಳಿಗೆ ಆರ್‌ಬಿಐ ಸೂಚನೆ
## ವಾಣಿಜ್ಯ ಉದ್ದೇಶದ ಸಾಲ ಪಡೆದವರಿಗೆ ಅನುಕೂಲ

ಮುಂಬೈ (ಪಿಟಿಐ): ಅತಿಸಣ್ಣ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳು (ಎಂಎಸ್‌ಇ) ಹಾಗೂ ವ್ಯಕ್ತಿಗಳು ತಾವು ಪಡೆದಿರುವ ಫ್ಲೋಟಿಂಗ್ ರೇಟ್ ಸಾಲವನ್ನು ಅವಧಿಗೆ ಮೊದಲೇ ಮರುಪಾವತಿ ಮಾಡಿದರೆ ಅದಕ್ಕೆ ಶುಲ್ಕ ವಿಧಿಸಬಾರದು ಎಂದು ಬ್ಯಾಂಕ್‌ಗಳಿಗೆ ಮತ್ತು ಇತರ ಹಣಕಾಸು ಸಂಸ್ಥೆಗಳಿಗೆ ಆರ್‌ಬಿಐ ಸೂಚನೆ ನೀಡಿದೆ. ವ್ಯಕ್ತಿಗಳು ಮತ್ತು ಎಂಎಸ್‌ಇ ವಲಯದ ಉದ್ದಿಮೆಗಳು ವಾಣಿಜ್ಯ ಉದ್ದೇಶಕ್ಕೆ ಈ ಬಗೆಯ ಸಾಲ ಪಡೆದಿದ್ದರೂ ಈ ಸೂಚನೆ ಅನ್ವಯವಾಗಲಿದೆ.

ಇದು 2026ರ ಜನವರಿ 1ರಿಂದ ಪಡೆಯುವ ಅಥವಾ ನವೀಕರಿಸಿಕೊಳ್ಳುವ ಇಂತಹ ಸಾಲಗಳಿಗೆ ಅನ್ವಯ ಆಗಲಿದೆ. ಈಗ ಚಾಲ್ತಿಯಲ್ಲಿ ಇರುವ ಮಾರ್ಗಸೂಚಿ ಪ್ರಕಾರ, ವ್ಯಕ್ತಿಗಳು ವಾಣಿಜ್ಯ ಉದ್ದೇಶ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಪಡೆದಿರುವ ಫ್ಲೋಟಿಂಗ್ ರೇಟ್ ಅವಧಿ ಸಾಲಗಳಿಗೆ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಅವಧಿಪೂರ್ವ ಮರುಪಾವತಿ ಶುಲ್ಕ ಪಡೆಯುವಂತೆ ಇಲ್ಲ.

ಎಂಎಸ್‌ಇ ವಲಯದ ಉದ್ಯಮಗಳಿಗೆ ಸಾಲವು ಸುಲಭವಾಗಿ ಹಾಗೂ ಕೈಗೆಟಕುವ ದರದಲ್ಲಿ ಲಭ್ಯವಾಗಬೇಕಿರುವುದು ಬಹಳ ಮುಖ್ಯ ಎಂದು ಆರ್‌ಬಿಐ ಸುತ್ತೋಲೆಯಲ್ಲಿ ಹೇಳಿದೆ.

ಆದರೆ, ಕೆಲವು ಸಾಲದಾತರು ಎಂಎಸ್‌ಇ ಉದ್ಯಮಗಳಿಗೆ ನೀಡಿರುವ ಸಾಲದ ವಿಚಾರದಲ್ಲಿ ಭಿನ್ನ ಮಾರ್ಗ ತುಳಿದಿರುವುದು ಪರಿಶೀಲನೆಯ ಸಂದರ್ಭದಲ್ಲಿ ಗೊತ್ತಾಗಿದೆ. ಇದರಿಂದಾಗಿ ವ್ಯಾಜ್ಯಗಳು ಉಂಟಾಗಿವೆ ಎಂದು ಅದು ಹೇಳಿದೆ.

ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದ ಅಂಶಗಳನ್ನು ಪರಾಮರ್ಶೆಗೆ ಒಳಪಡಿಸಿ, ಕರಡು ಸುತ್ತೋಲೆಗೆ ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸಿ ಆರ್‌ಬಿಐ ಈ ನಿರ್ದೇಶನಗಳನ್ನು ನೀಡಿದೆ.

ವ್ಯಕ್ತಿಗಳಿಗೆ ಹಾಗೂ ಎಂಎಸ್‌ಇಗಳಿಗೆ ವಾಣಿಜ್ಯ ಉದ್ದೇಶಗಳಿಗೆ ನೀಡಿರುವ ಸಾಲಗಳಿಗೆ ವಾಣಿಜ್ಯ ಬ್ಯಾಂಕ್‌ಗಳು (ಕಿರು ಹಣಕಾಸು ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸ್ಥಳೀಯ ಪ್ರದೇಶ ಬ್ಯಾಂಕ್‌ಗಳನ್ನು ಹೊರತುಪಡಿಸಿ), ನಾಲ್ಕನೆಯ ಹಂತದ ಪ್ರಾಥಮಿಕ (ನಗರ) ಸಹಕಾರ ಬ್ಯಾಂಕ್‌ಗಳು, ಎನ್‌ಬಿಎಫ್‌ಸಿ (ಯುಎಲ್) ಮತ್ತು ಅಖಿಲ ಭಾರತ ಹಣಕಾಸು ಸಂಸ್ಥೆಗಳು ಅವಧಿಪೂರ್ವ ಮರುಪಾವತಿಗೆ ಶುಲ್ಕ ವಿಧಿಸಲು ಅವಕಾಶ ಇಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಹಾಗೆಯೇ, ವ್ಯಕ್ತಿಗಳಿಗೆ ವಾಣಿಜ್ಯ ಉದ್ದೇಶ ಹೊರತುಪಡಿಸಿ ನೀಡಿರುವ ಸಾಲಗಳಿಗೆ ಕೂಡ ಅವಧಿಪೂರ್ವ ಮರುಪಾವತಿ ಶುಲ್ಕ ವಿಧಿಸಲು ಅವಕಾಶ ಇಲ್ಲ ಎಂದು ಹೇಳಿದೆ.

ಕಿರು ಹಣಕಾಸು ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಮೂರನೆಯ ಹಂತದ ಪ್ರಾಥಮಿಕ (ನಗರ) ಸಹಕಾರ ಬ್ಯಾಂಕ್‌ಗಳು, ರಾಜ್ಯ ಸಹಕಾರ ಬ್ಯಾಂಕ್‌ಗಳು, ಕೇಂದ್ರ ಸಹಕಾರ ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳು (ಎಂಎಲ್) ₹50 ಲಕ್ಷದವರೆಗೆ ಅನುಮೋದನೆ ನೀಡಿರುವ ಸಾಲಕ್ಕೆ ಅವಧಿಪೂರ್ವ ಮರುಪಾವತಿ ಶುಲ್ಕ ವಿಧಿಸಲು ಅವಕಾಶ ಇಲ್ಲ.

**ಮುಖ್ಯಾಂಶಗಳು**
- 2026ರ ಜನವರಿ 1ರಿಂದ ಅನ್ವಯವಾಗಲಿರುವ ನಿಯಮ
- ಹಾಲಿ ನಿಯಮದ ಪಾಲನೆ ಆಗದಿರುವುದನ್ನು ಗಮನಿಸಿದ ಆರ್‌ಬಿಐ

**ಚಿಟಿಕೆ ಸುದ್ದಿ**

### ಆರ್ಥಿಕ ಪ್ರಗತಿ ಶೇ 6.7 ಸಿಐಐ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಆರ್ಥಿಕ ಬೆಳವಣಿಗೆ ಶೇ 6.4ರಿಂದ ಶೇ 6.7ರಷ್ಟು ಇರುವ ನಿರೀಕ್ಷೆ ಇದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಕ್ಷ ರಾಜೀವ್ ಮೆಮಾನಿ ಗುರುವಾರ ಹೇಳಿದ್ದಾರೆ.

ಸಿಐಐ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತಮ ಮುಂಗಾರು ನಿರೀಕ್ಷೆ, ಆರ್‌ಬಿಐನಿಂದ ನಗದು ಮೀಸಲು ಅನುಪಾತ (ಸಿಆರ್‌ಆರ್) ಕಡಿತದಿಂದ ಹೆಚ್ಚುವ ನಗದು ಪ್ರಮಾಣದ ಲಭ್ಯತೆ ಮತ್ತು ಬಡ್ಡಿ ದರ ಕಡಿತದಂತಹ ಅಂಶಗಳು ದೇಶದ ಆರ್ಥಿಕ ಪ್ರಗತಿಗೆ ಬೆಂಬಲ ನೀಡಲಿವೆ ಎಂದು ಹೇಳಿದ್ದಾರೆ.

ಜಾಗತಿಕ ರಾಜಕೀಯ ಅನಿಶ್ಚಿತತೆ ಸ್ಥಿತಿಯ ನಡುವೆಯೂ ದೇಶದ ಬೇಡಿಕೆಗಳು ಉತ್ತಮವಾಗಿವೆ ಎಂದು ಹೇಳಿದ್ದಾರೆ.

| ಮುಂಬೈ ಧಾರಣೆ (ಶೇಂಗಾ) | |
|---|---|
| 03-07-2025 | |
| ಜಾವಾ 70/80(ಹೊಸ) | 9600-9700 |
| ಜಾವಾ 80/90(ಹೊಸ) | 9100-9200 |
| ದಪ್ಪ ಮಧ್ಯಪ್ರದೇಶ (ಹೊಸ) | 7600-7700 |
| ದಪ್ಪ ಗುಜರಾತ್ (ಹೊಸ) | 7900-8000 |
| ಶೇಂಗಾ ಎಣ್ಣೆ (10 ಕೆಜಿಗೆ) | |
| ಕಚ್ಚಾ (ತೆರಿಗೆ ಬಿಟ್ಟು) | 1415 (1390) |
| ಒಂದು ವಾರದ ಡೆಲಿವರಿ | 1410 (1385) |
| ಪಾಮ್ ವಾರದ ಡೆಲಿವರಿ | 1168 (1163) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1260 (1255) |
| ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ) | |
| ಅಪರಂಜಿ ಚಿನ್ನ 10 ಗ್ರಾಂ | 97,250 (96,950) |
| ಬೆಳ್ಳಿ ಕೆ.ಜಿಗೆ | 1,08,000 (1,06,600) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹20000-20000
ಬೆಂಗಳೂರು ₹20000-24000
ತಿಪಟೂರು ₹24000-28000
ತುಮಕೂರು ₹26500-32000

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು
ದೊಡ್ಡ ₹1400-1800
ಮಧ್ಯಮ ₹1000-1400
ಸಣ್ಣ ₹500-1000

**ಅಡಿಕೆ ಧಾರಣೆ**

| ಕುಮಟಾ | | ಶಿವಮೊಗ್ಗ | | ಶಿರಸಿ | |
|---|---|---|---|---|---|
| ಚಾಲಿ | 35269-42700 | ಬೆಟ್ಟೆ | 56282-60140 | ಬೆಟ್ಟೆ | 34399-40999 |
| ಚಿಪ್ಪು | 17699-29699 | ಗೊರಬಲು | 17020-30699 | ಬಿಳೆಗೋಟು | 18199-32299 |
| ಕೋಕ | 6079-20589 | ರಾಶಿ | 48009-56599 | ಚಾಲಿ | 35599-42699 |
| ಹೊಸಚಾಲಿ | 34010-41599 | ಸರಕು | 50800-97999 | ಕೆಂಪುಗೋಟು | 17799-23819 |
| ಸಾಗರ | | ಸಿದ್ದಾಪುರ | | ರಾಶಿ | 41711-47399 |
| ಬಿಳಿಗೋಟು | 7099-24470 | ಬಿಳಿಗೋಟು | 24109-30099 | ಯಲ್ಲಾಪುರ | |
| ಚಾಲಿ | 19999-36529 | ಚಾಲಿ | 33699-41099 | ಬಿಳಿಗೋಟು | 16899-32900 |
| ಕೋಕ | 8099-22800 | ಕೋಕ | 18899-22699 | ಚಾಲಿ | 33000-42001 |
| ಕೆಂಪುಗೋಟು | 12099-29019 | ಕೆಂಪುಗೋಟು | 19900-22700 | ಕೋಕ | 6899-17299 |
| ರಾಶಿ | 22399-56019 | ರಾಶಿ | 41499-46399 | ಕೆಂಪುಗೋಟು | 18016-30109 |
| ಸಿಪ್ಪೆಗೋಟು | 7399-18889 | ತಟ್ಟಿಬೆಟ್ಟೆ | 30600-37199 | ರಾಶಿ | 40109-54999 |
| | | | | ತಟ್ಟಿಬೆಟ್ಟೆ | 32009-38899 |

## ₹28 ಸಾವಿರಕ್ಕೆ ಕುಸಿದ ಉಂಡೆ ಕೊಬ್ಬರಿ ಧಾರಣೆ

ಪ್ರಜಾವಾಣಿ ವಾರ್ತೆ



ತುಮಕೂರು: ಕೆಲವು ದಿನಗಳಿಂದ ಏರುಗತಿಯಲ್ಲಿ ಸಾಗಿದ್ದ ಉಂಡೆ ಕೊಬ್ಬರಿ ಧಾರಣೆ ಮೂರು ದಿನಗಳ ಅಂತರದಲ್ಲಿ ಕ್ವಿಂಟಲ್‌ಗೆ ₹3,606ರಷ್ಟು ಕುಸಿದಿದ್ದು, ₹28,000ಕ್ಕೆ ಇಳಿದಿದೆ.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ (ಜೂನ್ 30) ನಡೆದ ಹರಾಜಿನಲ್ಲಿ ಉಂಡೆ ಕೊಬ್ಬರಿ ₹31,606ಕ್ಕೆ ಮಾರಾಟವಾಗಿ ಸಾರ್ವಕಾಲಿಕ ದಾಖಲೆ ನಿರ್ಮಿಸಿತ್ತು. ಸದ್ಯ ಮಾದರಿ ಬೆಲೆ ₹25,500 ಹಾಗೂ ಕನಿಷ್ಠ ಬೆಲೆ ₹24 ಸಾವಿರ ಇದೆ. ಗುರುವಾರ ಮಾರುಕಟ್ಟೆಗೆ 4,463 ಕ್ವಿಂಟಲ್(10,381 ಚೀಲ) ಕೊಬ್ಬರಿ ಆವಕವಾಗಿತ್ತು.

ಕೊಬ್ಬರಿ ಆವಕ ಹೆಚ್ಚುತ್ತಿರುವುದು ಬೆಲೆ ಇಳಿಕೆಗೆ ಮುಖ್ಯ ಕಾರಣ ಎಂದು ವರ್ತಕರು ಹೇಳಿದ್ದಾರೆ.

## ಸೇವಾ ವಲಯದ ಪ್ರಗತಿ 10 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆಯು ಜೂನ್ ತಿಂಗಳಲ್ಲಿ ಹತ್ತು ತಿಂಗಳ ಗರಿಷ್ಠ ಮಟ್ಟ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಚೇತರಿಸಿಕೊಂಡಿರುವುದು ಬೆಳವಣಿಗೆಗೆ ಪೂರಕವಾಗಿ ಒದಗಿಬಂದಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಮೇ ತಿಂಗಳಲ್ಲಿ 58.8ರಷ್ಟು ಇದ್ದಿದ್ದು ಜೂನ್‌ನಲ್ಲಿ 60.4ಕ್ಕೆ ಹೆಚ್ಚಳ ಕಂಡಿದೆ. ಪಿಎಂಐ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

'ದೇಶಿ ಮಾರುಕಟ್ಟೆಯಲ್ಲಿ ಹೊಸ ಕಾರ್ಯಾದೇಶಗಳು ಬಂದಿರುವುದು ಕೂಡ ಸೂಚ್ಯಂಕದ ಏರಿಕೆಗೆ ಕಾರಣವಾಗಿದೆ. ಹೊಸ ರಫ್ತು ಕಾರ್ಯಾದೇಶಗಳು ಹೆಚ್ಚಳ ಕಂಡಿವೆ. ಲಾಭದ ಪ್ರಮಾಣವು ಹೆಚ್ಚಳ ಆಗಿದೆ' ಎಂದು ಎಚ್‌ಎಸ್‌ಬಿಸಿ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಳ್ ಭಂಡಾರಿ ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಗಳು, ಪಶ್ಚಿಮ ಏಷ್ಯಾದ ಮಾರುಕಟ್ಟೆಗಳು, ಅಮೆರಿಕದ ಮಾರುಕಟ್ಟೆಯಲ್ಲಿ ಬೇಡಿಕೆಯು ಸುಧಾರಣೆ ಕಂಡುಬಂದಿದೆ. ಸೇವಾ ವಲಯ ಹಾಗೂ ತಯಾರಿಕಾ ವಲಯದ ಬೆಳವಣಿಗೆಯನ್ನು ಸೂಚಿಸುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಮೇ ತಿಂಗಳಲ್ಲಿ 59.3 ಇದ್ದಿದ್ದು ಜೂನ್‌ನಲ್ಲಿ 61ಕ್ಕೆ ಏರಿಕೆ ಆಗಿದೆ.

### 25 ಡಿಸಿಸಿಗೆ ಹೊಸ ಅಧ್ಯಕ್ಷರ ನೇಮಕ ಪ್ರಕ್ರಿಯೆ
## ಹೆಸರು ಶಿಫಾರಸಿಗೆ ವೀಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಅಥವಾ ಒಂದಕ್ಕಿಂತ ಹೆಚ್ಚು ಅವಧಿಯಿಂದ ಜಿಲ್ಲಾ ಕಾಂಗ್ರೆಸ್ ಘಟಕದ (ಡಿಸಿಸಿ) ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು ಬದಲಿಸುವಂತೆ ಎಐಸಿಸಿ ನೀಡಿದ್ದ ಸೂಚನೆ ಪಾಲಿಸಲು ಕೆಪಿಸಿಸಿ ಮುಂದಾಗಿದೆ.

ಒಟ್ಟು 25 ಡಿಸಿಸಿ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ನೇಮಿಸಲು ತಲಾ ಎರಡು ಅಥವಾ ಮೂರು ಹೆಸರುಗಳನ್ನು ಶಿಫಾರಸು ಮಾಡಲು ಪಕ್ಷದ ತಲಾ ಮೂವರು ಹಿರಿಯ ನಾಯಕರನ್ನು ಒಳಗೊಂಡ ವೀಕ್ಷಕರ ತಂಡವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ರಚಿಸಿದ್ದಾರೆ.

ನೇಮಕಗೊಂಡಿರುವ ವೀಕ್ಷಕರಿಗೆ ಈ ಕುರಿತಂತೆ ಪತ್ರ ಬರೆದಿರುವ ಡಿ.ಕೆ. ಶಿವಕುಮಾರ್, 'ಸಂಬಂಧಪಟ್ಟ ಉಸ್ತುವಾರಿ ಕೆಪಿಸಿಸಿ ಕಾರ್ಯಾಧ್ಯಕ್ಷರು, ಎಐಸಿಸಿ ಕಾರ್ಯದರ್ಶಿಗಳು (ಉಸ್ತುವಾರಿ ಹಾಗೂ ಸ್ಥಳೀಯರು), ಡಿಸಿಸಿ ಅಧ್ಯಕ್ಷರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು ಹೀಗೆ ಸ್ಥಳೀಯ ಪ್ರಮುಖರ ಸಭೆ ಕರೆದು ಜಿಲ್ಲೆಯಲ್ಲಿರುವ ಪಕ್ಷ ಸಂಘಟನೆಯ ಸ್ಥಿತಿಗತಿಯನ್ನು ಪರಿಶೀಲಿಸಿ ಜಿಲ್ಲಾ ಘಟಕದ ಅಧ್ಯಕ್ಷರ ನೇಮಕಕ್ಕೆ ಒಮ್ಮತದ ವ್ಯಕ್ತಿಯ ಹೆಸರು ಶಿಫಾರಸು ಮಾಡಲು ಚರ್ಚೆ ನಡೆಸಬೇಕು' ಎಂದು ಸೂಚನೆ ನೀಡಿದ್ದಾರೆ.

'ಅಧ್ಯಕ್ಷ ಸ್ಥಾನಕ್ಕೆ ಶಿಫಾರಸು ಮಾಡುವ ವ್ಯಕ್ತಿಯು ಜಿಲ್ಲಾಮಟ್ಟದಲ್ಲಿ ಪಕ್ಷದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿರಬೇಕು. ಅಲ್ಲದೆ, ಸಂಘಟನಾ ಸಾಮರ್ಥ್ಯ ಹೊಂದಿರಬೇಕು. ಪಕ್ಷದಲ್ಲಿ ಹಿರಿತನ, ಪ್ರಾಮಾಣಿಕತೆ, ಪಕ್ಷ ನಿಷ್ಠೆ ಇವುಗಳನ್ನು ಮಾನದಂಡವಾಗಿ ಪರಿಗಣಿಸಿ, ಅಂತಹ ವ್ಯಕ್ತಿಗಳ ಹೆಸರನ್ನು ಮಾತ್ರ ಆದ್ಯತೆಯ ಮೇರೆಗೆ ಪಟ್ಟಿ ಮಾಡಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು' ಎಂದೂ ಶಿವಕುಮಾರ್ ತಿಳಿಸಿದ್ದಾರೆ.

ಹಾಲಿ– ಮಾಜಿ ಸಂಸದರು, ಹಾಲಿ– ಮಾಜಿ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಎಐಸಿಸಿ ಕಾರ್ಯದರ್ಶಿಗಳು, ಕೆಪಿಸಿಸಿ ಪದಾಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ.

**ಸುದ್ದಿ 2 ನಿಮಿಷ**

### ಆರೋಗ್ಯ ಸೇವೆಗೆ ₹48 ಕೋಟಿ ಇನ್ಫೊಸಿಸ್ ಫೌಂಡೇಷನ್

ನವದೆಹಲಿ (ಪಿಟಿಐ): ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿನ ತಾಯಂದಿರು ಹಾಗೂ ಮಕ್ಕಳ ಆರೋಗ್ಯ ರಕ್ಷಣೆಗಾಗಿ ವೈದ್ಯಕೀಯ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಬಲಪಡಿಸಲು ₹48 ಕೋಟಿಗೂ ಹೆಚ್ಚಿನ ಅನುದಾನವನ್ನು ಇನ್ಫೊಸಿಸ್ ಫೌಂಡೇಷನ್ ಒದಗಿಸಲಿದೆ.

ಇದಕ್ಕಾಗಿ, ವಿಶ್ವಸಂಸ್ಥೆಯಿಂದ ಮಾನ್ಯತೆ ಪಡೆದ ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದೆ. ಇದು ದುರ್ಬಲ ವರ್ಗಗಳ ಮಹಿಳೆಯರಿಗೆ, ಶಿಶುಗಳಿಗೆ ಮತ್ತು ಮಕ್ಕಳಿಗೆ ಉಚಿತವಾಗಿ ಆರೋಗ್ಯ ಸೇವೆಗಳನ್ನು ಒದಗಿಸಲು ಶ್ರೀ ಸತ್ಯಸಾಯಿ ಸರಳಾ ಸ್ಮರಣಾರ್ಥ ಆಸ್ಪತ್ರೆಗೆ ನೆರವು ನೀಡಲಿದೆ.

ಕರ್ನಾಟಕದ ಗ್ರಾಮೀಣ ಪ್ರದೇಶಗಳ ತಾಯಂದಿರು ಮತ್ತು ಮಕ್ಕಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡುವ ಗುರಿ ಹೊಂದಲಾಗಿದೆ ಎಂದು ಇನ್ಫೊಸಿಸ್ ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಚಟುವಟಿಕೆಗಳನ್ನು ಇನ್ಫೊಸಿಸ್ ಫೌಂಡೇಷನ್ ನಿರ್ವಹಿಸುತ್ತದೆ.

ಅನುದಾನದಲ್ಲಿನ ಒಂದು ಭಾಗವು ಶಸ್ತ್ರ ಚಿಕಿತ್ಸಾ ವೆಚ್ಚಗಳನ್ನು ಒಳಗೊಂಡಿದೆ. ವಾರ್ಷಿಕ 8 ಸಾವಿರಕ್ಕೂ ಹೆಚ್ಚು ಜನ ಇದರ ಲಾಭ ಪಡೆದುಕೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

### ಜೋಯಾಲುಕ್ಕಾಸ್ ಕೊಡುಗೆ

ಬೆಂಗಳೂರು: ಜೋಯಾಲುಕ್ಕಾಸ್‌ನಿಂದ ವರ್ಷದ ಅತಿದೊಡ್ಡ ಆಭರಣ ಮಾರಾಟದ ಅಂಗವಾಗಿ ಗ್ರಾಹಕರಿಗೆ ವಿಶೇಷ ಕೊಡುಗೆ ಪ್ರಕಟಿಸಲಾಗಿದೆ. ಈ ಕೊಡುಗೆ ಜುಲೈ 13ಕ್ಕೆ ಅಂತ್ಯಗೊಳ್ಳಲಿದೆ.

ಮಾರಾಟದ ಅಂಗವಾಗಿ ಆಭರಣಗಳ ಮಜೂರಿ ಮೇಲೆ ಶೇಕಡ 50ರಷ್ಟು ರಿಯಾಯಿತಿ ಇರಲಿದೆ. ಚಿನ್ನ, ಕತ್ತರಿಸಿದ ಮತ್ತು ಕತ್ತರಿಸದ ವಜ್ರ, ಪ್ಲಾಟಿನಂ, ಬೆಳ್ಳಿ ಮತ್ತು ಅಮೂಲ್ಯ ಹರಳುಗಳ ಶ್ರೇಣಿಯ ವಿನ್ಯಾಸಗಳಿಗೆ ರಿಯಾಯಿತಿ ಅನ್ವಯವಾಗಲಿದೆ ಎಂದು ಜೋಯಾಲುಕ್ಕಾಸ್ ಪ್ರಕಟಣೆ ತಿಳಿಸಿದೆ.

'ಸೀಮಿತ ಅವಧಿಯ ರಿಯಾಯಿತಿಯ ಜೊತೆಗೆ, ಆಭರಣಗಳಿಗೆ ಉಚಿತ ಆಜೀವ ಪರ್ಯಂತ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಮತ್ತು ಪ್ರತಿ ಖರೀದಿಯ ಮೇಲೆ ಶೇಕಡ 100ರಷ್ಟು ಮರುಖರೀದಿ ಗ್ಯಾರಂಟಿ ಪ್ರಯೋಜನವನ್ನು ಗ್ರಾಹಕರು ಪಡೆಯುತ್ತಾರೆ' ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್ ಹೇಳಿದ್ದಾರೆ.

## ರಷ್ಯಾ ಸೇನಾಧಿಕಾರಿ ಸಾವು

ಮಾಸ್ಕೊ (ಪಿಟಿಐ): ಉಕ್ರೇನ್ ಗಡಿಯ ಸಮೀಪ ಪ್ರದೇಶದ ಕರ್ಸ್ಕ್‌ನಲ್ಲಿ ರಷ್ಯಾ ನೌಕಾಪಡೆಯ ಉಪ ಮುಖ್ಯಸ್ಥ ಮೇಜರ್ ಜನರಲ್ ಮಿಖಾಯಿಲ್ ಗುಡಕೋವ್ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಕರ್ಸ್ಕ್‌ನಲ್ಲಿ ಕಾರ್ಯಾಚರಣೆ ನಡೆಯುತ್ತಿತ್ತು ಎಂದು ರಷ್ಯಾ ರಕ್ಷಣಾ ಇಲಾಖೆ ದೃಢಪಡಿಸಿದೆ. ರಷ್ಯನ್ ಫೆಡರೇಷನ್‌ನ ಹೀರೋ ಎಂದೇ ಕರೆಸಿಕೊಳ್ಳುತ್ತಿದ್ದ ಗುಡಕೋವ್, 155ನೇ ಸಾಗರ ಬ್ರಿಗೇಡ್‌ನ ಮಾಜಿ ಕಮಾಂಡರ್ ಆಗಿದ್ದರು.

ಗಡಿಯಲ್ಲಿದ್ದ ಮುಂಚೂಣಿ ಪಡೆಗಳನ್ನು ಭೇಟಿ ಮಾಡಿದ ವೇಳೆ ಗುಡಕೋವ್ ಮೃತಪಟ್ಟಿದ್ದಾರೆ ಎಂದು ಕರ್ಸ್ಕ್ ಪ್ರಾಂತ್ಯದ ಆಕ್ಟಿಂಗ್ ಗವರ್ನರ್ ಅಲೆಕ್ಸಾಂಡರ್ ಖಿನ್‌ಸ್ಟೈನ್ 'ಟೆಲಿಗ್ರಾಮ್ ಪೋಸ್ಟ್'ಗೆ ತಿಳಿಸಿದ್ದಾರೆ. ಆದರೆ ಸಾವು ಹೇಗೆ ಸಂಭವಿಸಿದೆ ಎಂಬ ಬಗ್ಗೆ ಹೆಚ್ಚಿನ ಮಾಹಿತಿ ನೀಡಿಲ್ಲ.

ಮೂರೂವರೆ ವರ್ಷದಿಂದ ರಷ್ಯಾ ಸೇನೆಯು ಉಕ್ರೇನ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಈವರೆಗೆ 10 ಸೇನಾ ಜನರಲ್‌ಗಳು ಸಾವನ್ನಪ್ಪಿರುವುದನ್ನು ಮಾಸ್ಕೋ ಖಚಿತಪಡಿಸಿದೆ.

## 'ಆಪರೇಷನ್ ಸಿಂಧೂರ'ವೇ ಸ್ಪಷ್ಟ ಸಂದೇಶ


ಎಸ್.ಜೈಶಂಕರ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಭಾರತವು ಭಯೋತ್ಪಾದನೆ ವಿರುದ್ಧ ಕಠಿಣವಾದ ಕ್ರಮ ಕೈಗೊಳ್ಳಲಿದೆ ಎಂಬುದನ್ನು 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಇಡೀ ಜಗತ್ತಿಗೆ ಸ್ಪಷ್ಟ ರೀತಿಯಲ್ಲಿ ಖಾತರಿಪಡಿಸಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಬುಧವಾರ ವಾಷಿಂಗ್ಟನ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, 'ಭಯೋತ್ಪಾದನೆ ಪೋಷಣೆ ಮಾಡುವವರನ್ನು ಮಟ್ಟಹಾಕಲೇಬೇಕು ಎಂದು ಕ್ವಾಡ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಪಹಲ್ಗಾಮ್ ದಾಳಿಯ ಹೊಣೆಗಾರರನ್ನು ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕೆನ್ನುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಹೇಳಿಕೆಯನ್ನು ಕ್ವಾಡ್ ಪುನರುಚ್ಚರಿಸಿದೆ' ಎಂದರು. ಇದೇ ವೇಳೆ, 'ಆಪರೇಷನ್ ಸಿಂಧೂರ'ದ ಉದ್ದೇಶಗಳನ್ನೂ ಸಚಿವರು ಸ್ಪಷ್ಟಪಡಿಸಿದರು.

'ಭಯೋತ್ಪಾದನೆ ಕೃತ್ಯ ಎಸಗುವವರು, ಬೆಂಬಲಿಸುವವರು, ಹಣಕಾಸು ನೆರವು ನೀಡುವವರನ್ನು ಸುಮ್ಮನೆ ಬಿಡುವುದಿಲ್ಲ ಎನ್ನುವ ಸಂದೇಶವನ್ನು ಮೇ 7ರಂದೇ ನಾವು ರವಾನೆ ಮಾಡಿದ್ದೇವೆ. ಇದು ವಿಶ್ವಕ್ಕೂ ಮನವರಿಕೆಯಾಗಿದೆ' ಎಂದರು.

ಎಸ್.ಜೈಶಂಕರ್, ಅಮೆರಿಕದ ರಾಜ್ಯ ಕಾರ್ಯದರ್ಶಿ ಮಾರ್ಕೋ ರುಬಿಯೋ ಸೇರಿದಂತೆ ಕ್ವಾಡ್ ಒಕ್ಕೂಟದ ವಿದೇಶಾಂಗ ಸಚಿವರು ಎಲ್ಲ ರೀತಿಯ ಭಯೋತ್ಪಾದನೆ ಚಟುವಟಿಕೆ ಮತ್ತು ಹಿಂಸಾರೂಪದ ಉಗ್ರವಾದವನ್ನು ಸರ್ವಾನುಮತದಿಂದ ಖಂಡಿಸಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದರು.

'ಯಾವುದೇ ವಿಳಂಬವಿಲ್ಲದೇ ಭಯೋತ್ಪಾದಕರನ್ನು ಶಿಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳನ್ನೂ ಒತ್ತಾಯಿಸಲಾಗುವುದು. ಭದ್ರತಾ ಮಂಡಳಿಯ ನಿರ್ಣಯಗಳಂತೆ ಎಲ್ಲರೂ ಇದಕ್ಕೆ ಸಹಕಾರ ನೀಡಬೇಕು' ಎಂದು ಜಂಟಿ ಹೇಳಿಕೆಯಲ್ಲಿ ಮನವಿ ಮಾಡಲಾಗಿದೆ ಎಂದರು.

'ಹಲವು ದಶಕಗಳಿಂದ ಭಾರತಕ್ಕೆ ಸವಾಲಾಗಿರುವ ಭಯೋತ್ಪಾದನೆಯು ಕ್ವಾಡ್ ಅಲ್ಲದೇ ಇಡೀ ಜಗತ್ತನ್ನು ಕಾಡುತ್ತಿದೆ. ನಾವು ಭಯೋತ್ಪಾದನೆಗೆ ತೀಕ್ಷ್ಣವಾಗಿ ಉತ್ತರ ನೀಡಿದ್ದೇವೆ. ನಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕು ನಮಗಿದೆ' ಎಂದು ಹೇಳಿದರು.

**'ಶೇ 500ರಷ್ಟು ತೆರಿಗೆ: ಲಿಂಡ್ಸೆ ಮನವರಿಕೆಗೆ ಯತ್ನ'**

ರಷ್ಯಾದಿಂದ ತೈಲ ಖರೀದಿ ಮಾಡುವ ದೇಶಗಳ ಮೇಲೆ ಶೇ 500ರಷ್ಟು ತೆರಿಗೆ ವಿಧಿಸುವ ಅಮೆರಿಕದ ಯೋಜನೆ, ಸೆನೆಟರ್ ಲಿಂಡ್ಸೆ ಗ್ರಹಾಮ್ ಮಂಡಿಸಿರುವ ಮಸೂದೆ ಬಗ್ಗೆ ಪ್ರತಿಕ್ರಿಯಿಸಿದ ಜೈಶಂಕರ್, 'ಅಮೆರಿಕ ಸಂಸತ್ತಿನಲ್ಲಿ (ಕಾಂಗ್ರೆಸ್) ನಡೆಯುವ ಬೆಳವಣಿಗೆಗಳ ಬಗ್ಗೆ ಭಾರತ ಆಸಕ್ತಿ ಹೊಂದಿದೆ' ಎಂದರು.

ಲಿಂಡ್ಸೆ ಅವರಿಗೆ ಭಾರತೀಯರ ಆತಂಕ ಏನೆಂಬುದನ್ನು ತಿಳಿಸಲಾಗಿದೆ ಎಂದೂ ಹೇಳಿದರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಭಾರತೀಯ ರಾಯಭಾರ ಕಚೇರಿ ಮತ್ತು ಅಧಿಕಾರಿಗಳು ಲಿಂಡ್ಸೆ ಅವರ ಸಂಪರ್ಕದಲ್ಲಿದ್ದಾರೆ. ಇಂಧನ ಭದ್ರತೆಯಲ್ಲಿ ಭಾರತದ ಕಾಳಜಿ ಮತ್ತು ಆಸಕ್ತಿ ಏನೆಂದು ಅವರಿಗೆ ಮನವರಿಕೆ ಮಾಡಲಾಗುವುದು ಎಂದರು.

## ಪರ್ಯಾಯ ಇಂಧನದ ವಾಹನಗಳಿಗೆ ಪರ್ಮಿಟ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇವರೆಗೆ ಬ್ಯಾಟರಿ ಚಾಲಿತ, ಮಿಥೆನಾಲ್ ಮತ್ತು ಎಥೆನಾಲ್ ಇಂಧನ ಬಳಸಿ ಸಂಚರಿಸುವ ವಾಹನಗಳಿಗೆ ರಹದಾರಿಯ (ಪರ್ಮಿಟ್) ಅಗತ್ಯವಿರಲಿಲ್ಲ. ಇನ್ನು ಮುಂದೆ ರಹದಾರಿ ಪಡೆದೇ ಸಂಚರಿಸಬೇಕು ಎಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಪರ್ಯಾಯ ಇಂಧನಗಳನ್ನು ಬಳಸುವ ವಾಹನಗಳಿಗೆ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 66 (1)ರ ಅಡಿ ಪರ್ಮಿಟ್ ಪಡೆಯುವುದಕ್ಕೆ ವಿನಾಯತಿ ನೀಡಲಾಗಿತ್ತು. 2022ರಿಂದ ಈ ವಿನಾಯಿತಿ ಜಾರಿಯಲ್ಲಿತ್ತು. ಈ ವಿನಾಯಿತಿಯನ್ನು ರದ್ದುಪಡಿಸಿದೆ.

ಈಗಾಗಲೇ ನೋಂದಣಿಯಾಗಿರುವ ಬ್ಯಾಟರಿ ಚಾಲಿತ, ಮಿಥೆನಾಲ್ ಮತ್ತು ಎಥೆನಾಲ್ ಇಂಧನ ಬಳಸುವ, ಪರ್ಮಿಟ್ ಪಡೆಯದೇ ಸಂಚರಿಸುತ್ತಿರುವ ವಾಹನಗಳು ಹಾಗೂ ಹೊಸದಾಗಿ ನೋಂದಣಿಯಾಗುವ ವಾಹನಗಳಿಗೆ ಸಂಬಂಧಿಸಿದಂತೆ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡಬೇಕು ಎಂದು ಸಾರಿಗೆ ಇಲಾಖೆ ಅಧಿಸೂಚನೆಯಲ್ಲಿ ತಿಳಿಸಿದೆ.

### ವಿಶ್ವದ ದಕ್ಷಿಣ ಭಾಗಕ್ಕೆ ಧ್ವನಿ ನೀಡದೆ ಅಭಿವೃದ್ಧಿ ಸಾಧ್ಯವಿಲ್ಲ: ಪ್ರಧಾನಿ ಮೋದಿ
## 'ಘಾನಾ ಪ್ರಗತಿಯಲ್ಲಿ ಭಾರತ ಸಹಯಾತ್ರಿ'

ಅಕ್ರಾ, ಘಾನಾ (ಪಿಟಿಐ): 'ಭಾರತ ಹಾಗೂ ಘಾನಾ ಪರಸ್ಪರ ಸಂಬಂಧವನ್ನು ಸಮಗ್ರ ಪಾಲುದಾರಿಕೆಯ ಮಟ್ಟಕ್ಕೆ ಏರಿಸಿಕೊಂಡಿದ್ದು, ಆಫ್ರಿಕಾ ದೇಶದ ಅಭಿವೃದ್ಧಿ ವಿಷಯದಲ್ಲಿ ಭಾರತವೂ ಸಹ-ಪ್ರಯಾಣಿಕನಂತೆ ಇದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು.

ಇಲ್ಲಿನ ರಾಜಧಾನಿಯಲ್ಲಿ ಘಾನಾದ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮಾ ಜೊತೆ ಬುಧವಾರ ವಿವಿಧ ಕ್ಷೇತ್ರಗಳ ಕುರಿತು ಮಾತುಕತೆ ನಡೆಸಿದ ನಂತರ ಈ ಹೇಳಿಕೆ ನೀಡಿದರು.

'ಮುಂದಿನ ಐದು ವರ್ಷಗಳಲ್ಲಿ ಎರಡೂ ರಾಷ್ಟ್ರಗಳ ನಡುವಿನ ವಹಿವಾಟನ್ನು ದ್ವಿಗುಣಗೊಳಿಸಲು ಗುರಿ ನಿಗದಿಪಡಿಸಲಾಗಿದೆ' ಎಂದು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಐದು ದೇಶಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ಮೋದಿ ಮೊದಲಿಗೆ ಘಾನಾಕ್ಕೆ ಬಂದಿಳಿದರು. ಇದಾದ ಕೆಲವು ಗಂಟೆಗಳಲ್ಲಿ ಉಭಯ ರಾಷ್ಟ್ರಗಳ ನಿಯೋಗವು ಮಾತುಕತೆ ನಡೆಸಿತು. ಘಾನಾ ಅಧ್ಯಕ್ಷ ಜಾನ್ ಡ್ರಾಮಾನಿ ಅವರೇ ವಿಮಾನ ನಿಲ್ದಾಣದಲ್ಲಿ ಮೋದಿ ಅವರನ್ನು ಬರಮಾಡಿಕೊಂಡು, ಸ್ವಾಗತಿಸಿದರು. ಕಳೆದ ಮೂರು ದಶಕಗಳಲ್ಲಿ ಇಲ್ಲಿಗೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಇವರಾಗಿದ್ದಾರೆ.

ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ವೈದ್ಯಕೀಯ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಭಾಗಿತ್ವಕ್ಕೆ ಸಂಬಂಧಿಸಿದ ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಲಾಯಿತು.

'ಘಾನಾದ ಸುಮಾರು 900 ಯೋಜನೆಗಳಲ್ಲಿ ಭಾರತದ ಕಂಪನಿಗಳು ಸುಮಾರು 200 ಕೋಟಿ ಡಾಲರ್ (ಸುಮಾರು ₹17,083 ಕೋಟಿ) ಹೂಡಿಕೆ ಮಾಡಿವೆ' ಎಂದು ಮೋದಿ ತಿಳಿಸಿದರು.

'ಅತ್ಯಂತ ಅಪರೂಪದ ಖನಿಜಗಳ ಪರಿಶೋಧನೆಯಲ್ಲಿ ಭಾರತದ ಕಂಪನಿಗಳು ಘಾನಾ ಜೊತೆ ಕೈಜೋಡಿಸಲಿವೆ' ಎಂದು ಹೇಳಿದರು.


ಘಾನಾದ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮಾ ಅವರು ಬುಧವಾರ ಪ್ರಧಾನಿ ಮೋದಿ ಅವರಿಗೆ 'ದಿ ಆಫೀಸರ್ ಆಫ್ ದ ಆರ್ಡರ್ ಸ್ಟಾರ್ ಆಫ್ ಘಾನಾ' ಪ್ರಶಸ್ತಿ ನೀಡಿ ಗೌರವಿಸಿದರು ಪಿಟಿಐ ಚಿತ್ರ

**ಮಾನವೀಯತೆಗೆ ಭಯೋತ್ಪಾದನೆಯು ಶತ್ರುವಾಗಿದ್ದು, ಇದನ್ನು ಮಟ್ಟಹಾಕುವ ನಿಟ್ಟಿನಲ್ಲಿ ಪರಸ್ಪರ ಸಹಕಾರ ಬಲಪಡಿಸಲು ಉಭಯ ರಾಷ್ಟ್ರಗಳು ಒಪ್ಪಿಗೆ ಸೂಚಿಸಿವೆ**
**ನರೇಂದ್ರ ಮೋದಿ,** ಪ್ರಧಾನಿ

**ಸ್ಥಿರ-ಸಮೃದ್ಧ ಜಗತ್ತಿಗೆ ಭಾರತದ ಕೊಡುಗೆ:** ಸ್ಥಿರ ಹಾಗೂ ಸಮೃದ್ಧ ಜಗತ್ತಿಗೆ ಭಾರತವು ಬಹುದೊಡ್ಡ ಕೊಡುಗೆ ನೀಡಲಿದೆ ಎಂದ ಪ್ರಧಾನಿ ನರೇಂದ್ರ ಮೋದಿ, 'ಬದಲಾದ ಕಾಲಮಾನಕ್ಕೆ ತಕ್ಕಂತೆ ವಿಶ್ವಾಸಾರ್ಹ ಹಾಗೂ ಪರಿಣಾಮಕಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಇಲ್ಲಿನ ಸಂಸತ್ ಉದ್ದೇಶಿಸಿ ಮಾತನಾಡಿದ ಅವರು, 'ವಿಶ್ವದ ದಕ್ಷಿಣ ಭಾಗಕ್ಕೆ ಧ್ವನಿ ನೀಡದೆ ಅಭಿವೃದ್ಧಿ ಸಾಧ್ಯವಿಲ್ಲ. ಜಾಗತಿಕ ಅಸ್ಥಿರತೆಯ ಕಾಲಘಟ್ಟದಲ್ಲಿ ಭಾರತದ ಸದೃಢ ಪ್ರಜಾಪ್ರಭುತ್ವವು ಆಶಾಕಿರಣವಾಗಿದೆ' ಎಂದು ಹೇಳಿದರು. ಎರಡು ದಿನಗಳ ಘಾನಾ ಪ್ರವಾಸ ಮುಗಿಸಿದ ಮೋದಿ ಅವರು ಗುರುವಾರ ರಾತ್ರಿ ಟ್ರಿನಿಡಾಡ್, ಟೊಬಾಗೊ ಪ್ರವಾಸಕ್ಕೆ ತೆರಳಿದರು.

**ಮೋದಿಗೆ ಘಾನಾದ 'ಅತ್ಯುನ್ನತ ನಾಗರಿಕ ಪ್ರಶಸ್ತಿ'**

'ವಿಶಿಷ್ಟ ರಾಜನೀತಿ ಹಾಗೂ ಜಾಗತಿಕ ಪ್ರಭಾವಿ ನಾಯಕತ್ವ'ವನ್ನು ಗುರುತಿಸಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ದಿ ಆಫೀಸರ್ ಆಫ್ ದ ಆರ್ಡರ್ ಸ್ಟಾರ್ ಆಫ್ ಘಾನಾ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಘಾನಾದ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮಾ ಅವರು ಬುಧವಾರ ಪ್ರಧಾನಿ ಮೋದಿ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದರು.

ಚಿಟಿಕೆ ಸುದ್ದಿ

## ಶಬರಿಮಲೆ ಸಮನ್ವಯಕಾರರ ನೇಮಕ

ತಿರುವನಂತಪುರ (ಪಿಟಿಐ): ಶಬರಿಮಲೆ ಹೆಸರಿನಲ್ಲಿ ಭಕ್ತರಿಂದ ಅಕ್ರಮವಾಗಿ ಹಣ ಸಂಗ್ರಹಿಸುತ್ತಿರುವುದನ್ನು ತಡೆಯುವುದಕ್ಕಾಗಿ ತಿರುವಾಂಕೂರು ದೇವಸ್ವಂ ಮಂಡಳಿ (ಟಿಬಿಡಿ) ಅಧಿಕೃತವಾಗಿ ಪ್ರಾಯೋಜಕತ್ವ ಸಮನ್ವಯಕಾರರನ್ನು ನೇಮಕಗೊಳಿಸಿದೆ.

ಈ ಕುರಿತು ಗುರುವಾರ ಪ್ರಕಟಣೆ ಹೊರಡಿಸಿರುವ ಟಿಬಿಡಿ, 'ವಿವಿಧ ರಾಜ್ಯಗಳಲ್ಲಿ ಕೆಲವು ಮಂದಿ ದೇಗುಲದ ಆಡಳಿತ ಮಂಡಳಿಯ ಸದಸ್ಯರ ಸೋಗಿನಲ್ಲಿ ಹಣ ಸಂಗ್ರಹಿಸುತ್ತಿರುವುದು ಕಂಡುಬಂದಿತ್ತು. ಈ ಕಾರಣದಿಂದ ದೇಗುಲದ ಸಾರ್ವಜನಿಕ ವ್ಯವಹಾರ ಅಧಿಕಾರಿ ಜಿ.ಎಸ್ ಅರುಣ್ ಅವರನ್ನು ಪ್ರಾಯೋಜಕತ್ವ ಸಮನ್ವಯಕಾರರನ್ನಾಗಿ, ಛಾಯಾಗ್ರಾಹಕರಾದ ಪಿ.ವಿಜಯ್ ಕುಮಾರ್ ಅವರನ್ನು ಸಹಾಯಕ ಪ್ರಾಯೋಜಕತ್ವ ಸಮನ್ವಯಕಾರರನ್ನಾಗಿ ನೇಮಿಸಲಾಗಿದೆ' ಎಂದು ಹೇಳಿದೆ.

## ಮಣಿಪುರ: ಶಸ್ತ್ರಾಸ್ತ್ರ ಸಮೇತ 3 ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಕಣಿವೆ ಜಿಲ್ಲೆ ಇಂಫಾಲ್‌ನಲ್ಲಿ ನಿಷೇಧಿತ ಸಂಘಟನೆಗಳಿಗೆ ಸೇರಿದ ಮೂವರು ಬಂಡುಕೋರರನ್ನು ಭದ್ರತಾ ಪಡೆಗಳು ಬಂಧಿಸಿವೆ.

ಬಿಷ್ಣುಪುರ ಜಿಲ್ಲೆಯ ಪಿಡಬ್ಲ್ಯುಜಿ ಸಂಘಟನೆಗೆ ಸೇರಿದ ಓಯಿನಮ್ ಹಿಮನ್‌ಜಿತ್ ಸಿಂಗ್, ಕಂಗ್ಲೀಪಾಕ್ ಕಮ್ಯುನಿಸ್ಟ್ ಪಾರ್ಟಿಯ ಟೊಂಬಾ ಸಿಂಗ್, ಲಾರೆಂಬಮ್ ಸುರೇಶ್ ಎಂಬುವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂರ್ವ ಇಂಫಾಲ್‌ನ ಬಾರುನಿ ಬೆಟ್ಟ ಪ್ರದೇಶದಲ್ಲಿ ಬಂಧಿತರಿಂದ 303 ರೈಫಲ್, ಎರಡು ಪಿಸ್ತೂಲು, ಸಿಂಗಲ್ ಬ್ಯಾರಲ್ ಗನ್, ನಾಲ್ಕು ಕಚ್ಚಾಬಾಂಬ್, ವೈರ್‌ಲೆಸ್, ಎರಡು ಸಿಡಿತಲೆ ಸೇರಿ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಬುಧವಾರ ವಶಪಡಿಸಿಕೊಳ್ಳಲಾಗಿದೆ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

## ರೇಬಿಸ್: ಕಬಡ್ಡಿ ಆಟಗಾರ ಸಾವು

ಬುಲಂದ್‌ಶಹರ್ (ಉತ್ತರಪ್ರದೇಶ), (ಪಿಟಿಐ): ಇಲ್ಲಿನ ರಾಜ್ಯ ಮಟ್ಟದ ಕಬಡ್ಡಿ ಆಟಗಾರ, 22 ವರ್ಷ ವಯಸ್ಸಿನ ಬ್ರಿಜೇಶ್ ಸೋಲಂಕಿ ಅವರು ನಾಯಿ ಕಚ್ಚಿದ್ದ ಪರಿಣಾಮ ರೇಬಿಸ್‌ನಿಂದ ಸೋಮವಾರ ಮೃತಪಟ್ಟಿದ್ದಾರೆ.

ಮಾರ್ಚ್‌ನಲ್ಲಿ ಅವರು ಇಲ್ಲಿನ ಫರಾನಾ ಗ್ರಾಮದ ಚರಂಡಿಯಲ್ಲಿ ಬಿದ್ದಿದ್ದ ಬೀದಿ ನಾಯಿ ಮರಿಯನ್ನು ರಕ್ಷಿಸಲು ಹೋದ ವೇಳೆ ಅದು ಅವರ ಕೈಗೆ ಕಚ್ಚಿತ್ತು. ಆದರೆ ಇದನ್ನು ಸಣ್ಣ ಗಾಯವೆಂದು ನಿರ್ಲಕ್ಷಿಸಿ ಅವರು ರೇಬಿಸ್ ಲಸಿಕೆ ತೆಗೆದುಕೊಂಡಿರಲಿಲ್ಲ ಎಂದು ಅವರ ಕುಟುಂಬ ಸದಸ್ಯರು ತಿಳಿಸಿದ್ದಾರೆ.

'ಕೈನೋವು ಕಾಣಿಸಿಕೊಂಡರೂ ಅದು ಕಬಡ್ಡಿ ಆಟದಿಂದ ಆಗಿರಬಹುದು ಎಂದು ಅವರು ಭಾವಿಸಿದ್ದರು' ಎಂದು ಅವರ ಕೋಚ್ ಪ್ರವೀಣ್ ಕುಮಾರ್ ತಿಳಿಸಿದ್ದಾಗಿ ಮಾಧ್ಯಮವೊಂದು ವರದಿ ಮಾಡಿದೆ.

## ಕಲಾಪಕ್ಕೆ ಅಡ್ಡಿಪಡಿಸದಂತೆ ಸ್ಪೀಕರ್ ಮನವಿ

ಗುರುಗ್ರಾಮ (ಪಿಟಿಐ): ಸಂಸತ್ತಿನ ಮುಂಗಾರು ಅಧಿವೇಶನದ ವೇಳೆ ಕಲಾಪಕ್ಕೆ ಅಡ್ಡಿಪಡಿಸುವುದನ್ನು ಕಡಿಮೆ ಮಾಡಬೇಕು ಎಂದು ಎಲ್ಲ ರಾಜಕೀಯ ಪಕ್ಷಗಳಿಗೆ ಲೋಕಸಭೆಯ ಅಧ್ಯಕ್ಷ ಓಂ ಬಿರ್ಲಾ ಮನವಿ ಮಾಡಿದ್ದಾರೆ.



ಇಲ್ಲಿ ನಡೆದ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು,'ಕಲಾಪಕ್ಕೆ ಅಡ್ಡಿಪಡಿಸುವ ರಾಜಕೀಯ ಪಕ್ಷಗಳಿಗೆ ಜನರೇ ಸರಿಯಾದ ಪಾಠ ಕಲಿಸಬೇಕು. 18ನೇ ಲೋಕಸಭೆಯ ಚೊಚ್ಚಲ ಅಧಿವೇಶನದಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ ಸಂದರ್ಭಗಳು ತೀರಾ ಕಡಿಮೆ ಇದ್ದವು ' ಎಂದು ಅವರು ನೆನಪಿಸಿದರು.

'ಹಿಂದಿನ ಅಭ್ಯಾಸಗಳನ್ನು ಬದಲಾಯಿಸುವ ಸಮಯ ಬಂದಿದೆ. ಪ್ರಜಾಪ್ರಭುತ್ವ ಬಲಪಡಿಸಬೇಕಿದ್ದರೆ, ಪ್ರಜಾತಂತ್ರ ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ಸದನವು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಕೊಳ್ಳಬೇಕು' ಎಂದರು.

## ಪತಂಜಲಿ ಜಾಹೀರಾತಿಗೆ ತಡೆ

ನವದೆಹಲಿ (ಪಿಟಿಐ): ಡಾಬರ್ ಚ್ಯವನಪ್ರಾಶ್ ವಿರುದ್ಧ ಅವಹೇಳನಕಾರಿ ಜಾಹೀರಾತು ಪ್ರಕಟಿಸದಂತೆ ಪತಂಜಲಿ ಸಂಸ್ಥೆಗೆ ದೆಹಲಿ ಹೈಕೋರ್ಟ್ ಗುರುವಾರ ತಡೆ ನೀಡಿದೆ.

ಮಧ್ಯಂತರ ತಡೆ ನೀಡುವಂತೆ ಕೋರಿ ಡಾಬರ್ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಮಿನಿ ಪುಷ್ಕರಣ ನೇತೃತ್ವದ ಪೀಠವು ಪುರಸ್ಕರಿಸಿತು. 'ಅರ್ಜಿಯನ್ನು ಸ್ವೀಕರಿಸಲಾಗಿದೆ' ಎಂದ ಕೋರ್ಟ್, ಮುಂದಿನ ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿತು.

# ಯಾತ್ರೆ: ಕಾಶ್ಮೀರಿ ಮುಸ್ಲಿಮರಿಂದ ಸ್ವಾಗತ

### ಅಮರನಾಥ: ಧಾರ್ಮಿಕ ಸಾಮರಸ್ಯ ಸಾಂಪ್ರದಾಯಿಕ ಸ್ವಾಗತಕ್ಕೆ ಸಾಕ್ಷಿ

• ಝುಲ್ಫೀಕರ್ ಮಜಿದ್

**ಮುಖ್ಯಾಂಶಗಳು**
- ಜುಲೈ 3ರಿಂದ ಆ.9ರವರೆಗೆ ನಡೆಯಲಿರುವ ಯಾತ್ರೆ
- ಆನ್‌ಲೈನ್ ಮೂಲಕ 3.5 ಲಕ್ಷ ಮಂದಿ ನೋಂದಣಿ
- ಸಂಭಾವ್ಯ ದಾಳಿ ಹಿನ್ನಲೆ: ಗರಿಷ್ಠ ಭದ್ರತೆ

ಶ್ರೀನಗರ: ಅಮರನಾಥ ವಾರ್ಷಿಕ ಯಾತ್ರೆಯು ಗುರುವಾರದಿಂದ ಆರಂಭಗೊಂಡಿದ್ದು, ಗರಿಷ್ಠ ಪ್ರಮಾಣದಲ್ಲಿ ಭದ್ರತೆ ಕೈಗೊಳ್ಳಲಾಗಿದೆ. ಕಾಶ್ಮೀರದ ನಿವಾಸಿಗಳು ಯಾತ್ರಾರ್ಥಿಗಳಿಗೆ ಮನೆ–ಮನಗಳನ್ನು ತೆರೆಯುವ ಮೂಲಕ ಹಲವು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಧಾರ್ಮಿಕ ಸಾಮರಸ್ಯ ಹಾಗೂ ಸಾಂಪ್ರದಾಯಿಕ ಸ್ವಾಗತವನ್ನು ಮುಂದುವರಿಸಿದರು.

38 ದಿನಗಳ ಯಾತ್ರೆಯು ಪಹಲ್ಗಾಮ್‌ನ ನುನ್ವಾನ್ ಹಾಗೂ ಸೋನ್‌ಮಾರ್ಗ್‌ನ ಬಾಲ್ತಾಲ್ ಬೇಸ್‌ಕ್ಯಾಂಪ್‌ಗಳಿಂದ ಏಕಕಾಲಕ್ಕೆ ಆರಂಭಗೊಂಡಿತು. ಯಾತ್ರೆಯ ಮಾರ್ಗದುದ್ದಕ್ಕೂ ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಯಾತ್ರಾರ್ಥಿಗಳನ್ನು ಸ್ವಾಗತಿಸಿದರು. ಶ್ರೀನಗರ– ಜಮ್ಮು ರಾಷ್ಟ್ರೀಯ ಹೆದ್ದಾರಿಯ ಕ್ವಾಜಿಗುಂಡ್‌ನ ಸುರಂಗ ಮಾರ್ಗ ಶುರುವಾಗುವ ಜಾಗದಲ್ಲಿ ಬೆಳಿಗ್ಗೆಯೇ ಸೇರಿದ್ದ ಯುವ ಸ್ವಯಂಸೇವಕರು, ವಿದ್ಯಾರ್ಥಿಗಳು ಯಾತ್ರಾರ್ಥಿಗಳಿಗೆ ಕುಡಿಯುವ ನೀರು, ಉಪಹಾರ ವಿತರಿಸಿದರು.

ಕೊರೆಯುವ ಚಳಿಯಲ್ಲಿ 'ಬಂ ಬಂ ಬೋಲೆ' ಘೋಷಣೆ ಕೂಗುತ್ತಾ ಸಾಗುತ್ತಿದ್ದ ಯಾತ್ರಾರ್ಥಿಗಳ ಮೇಲೆ ಸ್ಥಳೀಯ ಮುಸ್ಲಿಮರು ಹೂವಿನ ಪಕಳೆಗಳನ್ನು ಎಸೆದು ಸ್ವಾಗತಿಸಿದರು. ಮುಸ್ಲಿಂ ಮಹಿಳೆಯರು ಒಣ ಹಣ್ಣು, ಕಾಶ್ಮೀರಿ ಕೇಸರಿ ಬೆರೆಸಿದ ಚಹಾ ವಿತರಿಸಿದರು.

'ಇದು ನಮ್ಮ ಸಂಪ್ರದಾಯ. ನಾವು ಅವರನ್ನು ಹೊರಗಿನವರು ಎಂದು ಭಾವಿಸುವುದಿಲ್ಲ. ನಮ್ಮ ಅತಿಥಿಗಳು. ನಮ್ಮ ಮೇಲೆ ನಂಬಿಕೆಯಿಟ್ಟು ಇಲ್ಲಿಗೆ ಬಂದಿದ್ದು, ಅವರಿಗೆ ಸುರಕ್ಷತೆಯ ಭಾವನೆ ಮೂಡಿಸುವುದು ನಮ್ಮ ಕರ್ತವ್ಯವಾಗಿದೆ' ಎಂದು ಅನಂತನಾಗ್ ಜಿಲ್ಲೆಯ 62 ವರ್ಷದ ಗುಲಾಂ ಅಹಮ್ಮದ್ ತಿಳಿಸಿದರು.

ಅದೇ ರೀತಿ, ಶ್ರೀನಗರದಿಂದ ಬಂದಿದ್ದ ಇಮ್ತಿಯಾಜ್ ಕೂಡ ಸಣ್ಣ ಮಕ್ಕಳ ಜೊತೆಗೆ ಬಂದು ಯಾತ್ರಾರ್ಥಿಗಳಿಗೆ ಶುಭ ಕೋರಿದರು. 'ಇದು ಏಕತೆಯ ಸುಂದರ ಕ್ಷಣವಾಗಿದೆ. ಯಾತ್ರಾರ್ಥಿಗಳಿಗೆ ಸುರಕ್ಷಿತ ಭಾವನೆ ಮೂಡಿಸುವುದು ನಮ್ಮ ಕರ್ತವ್ಯವಾಗಿದೆ' ಎಂದು ತಿಳಿಸಿದರು.

ಸಂಭಾವ್ಯ ದಾಳಿಯ ಭೀತಿಯ ಕಾರಣದಿಂದ ಯಾತ್ರೆಯ ಮಾರ್ಗದುದ್ದಕ್ಕೂ ಪೊಲೀಸರು ಹಾಗೂ ಸೇನಾ ಪಡೆಗಳು ಗರಿಷ್ಠ ಭದ್ರತೆ ಕೈಗೊಂಡಿವೆ. ಇದರ ಮಧ್ಯದಲ್ಲೇ ಸ್ಥಳೀಯರ ಸ್ವಾಗತವು ಯಾತ್ರಾರ್ಥಿಗಳಿಗೆ ಧನ್ಯತಾ ಭಾವ ಮೂಡಿಸಿದೆ.

'ಕಾಶ್ಮೀರದ ಸೌಂದರ್ಯದ ಕುರಿತು ಕೇಳಿದ್ದೆನು. ಇಲ್ಲಿನ ಜನರ ಪ್ರೀತಿಯು ನಿಜಕ್ಕೂ ಖುಷಿ ತಂದಿದೆ. ಅವರ ಸ್ವಾಗತ ಹಾಗೂ ಕಾಳಜಿಯನ್ನು ಯಾವತ್ತೂ ಮರೆಯುವಂತಿಲ್ಲ' ಎಂದು ದೆಹಲಿಯಿಂದ ಮೊದಲ ಸಲ ಯಾತ್ರೆಗೆ ಬಂದಿದ್ದ ನೀಲಮ್ ಶರ್ಮಾ ಸಂತಸ ವ್ಯಕ್ತಪಡಿಸಿದರು.



ಅಮರನಾಥ ಯಾತ್ರೆಗೆ ತೆರಳಲು ಜಮ್ಮುವಿನ ನೋಂದಣಿ ಕೇಂದ್ರದಲ್ಲಿ ಗುರುವಾರ ಕಾದು ಕೂತಿದ್ದ ಮಹಿಳೆಯರನ್ನು ಗಸ್ತು ಕಾಯುತ್ತಿದ್ದ ಮಹಿಳಾ ಯೋಧರು
–ಪಿಟಿಐ ಚಿತ್ರ

### ಜಮ್ಮುವಿನಿಂದ ಹೊರಟ 2ನೇ ತಂಡ

ಜಮ್ಮು (ಪಿಟಿಐ): 5,200 ಯಾತ್ರಾರ್ಥಿಗಳನ್ನು ಒಳಗೊಂಡ ಎರಡನೇ ತಂಡವು ಗುರುವಾರ ಇಲ್ಲಿನ ಬೇಸ್‌ಕ್ಯಾಂಪ್‌ನಿಂದ ಅಮರನಾಥ ಯಾತ್ರೆಗೆ ಹೊರಟಿತು.

'ಪೊಲೀಸರು ಹಾಗೂ ಅರೆಸೇನಾ ಪಡೆಯ ಯೋಧರ ಭದ್ರತೆಯಲ್ಲಿ ಭಗವತಿ ನಗರ ಬೇಸ್‌ಕ್ಯಾಂಪ್‌ನಿಂದ 168 ವಾಹನಗಳಲ್ಲಿ ಯಾತ್ರಾರ್ಥಿಗಳು ಹೊರಟರು. ಆ ಮೂಲಕ ಇಲ್ಲಿನ ಕ್ಯಾಂಪ್‌ನಿಂದ 11,138 ಮಂದಿ ತೆರಳಿದಂತಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.
ಎರಡನೇ ತಂಡದಲ್ಲಿ 4,074 ಪುರುಷರು, 786 ಮಹಿಳೆಯರು, 19 ಮಕ್ಕಳು ಇದ್ದರು. ಈ ಸಲ ಯಾತ್ರೆಯಲ್ಲಿ ಭಾಗವಹಿಸಲು 3.5 ಲಕ್ಷ ಮಂದಿ ಈಗಾಗಲೇ ಆನ್‌ಲೈನ್ ಮೂಲಕ ನೋಂದಾಯಿಸಿದ್ದಾರೆ..

### ಯಾತ್ರೆಯಲ್ಲಿ ಶೋಭಾ ಭಾಗಿ



ಸೋನ್‌ಮಾರ್ಗ್ ಸುರಂಗದ ಮುಂದೆ ಸಚಿವೆ ಶೋಭಾ

ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆ ರಾಜ್ಯ ಸಚಿವೆಯಾಗಿರುವ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ ಅವರು ಬುಧವಾರ ಬಾಲ್ತಾಲ್ ಬೇಸ್‌ಕ್ಯಾಂಪ್‌ನಿಂದ ಯಾತ್ರೆ ಆರಂಭಿಸಿದರು.

ಇದಕ್ಕೂ ಮುನ್ನ ಯಾತ್ರಾರ್ಥಿಗಳ ಜೊತೆ ಸೌಕರ್ಯದ ಕುರಿತು ಸಮಾಲೋಚನೆ ನಡೆಸಿದರು. ಪ್ರಶಾಂತವಾದ ಪರಿಸರ, ಯಾತ್ರಾರ್ಥಿಗಳ ಧೈರ್ಯ ಹಾಗೂ ಈ ಭಾಗದಲ್ಲಿ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕೆಲಸಗಳ ಕುರಿತು ಸಂತಸ ವ್ಯಕ್ತಪಡಿಸಿದರು.

'ನಾವೆಲ್ಲರೂ ಬೋಲೆನಾಥನ ದರ್ಶನ ಪಡೆಯಲು ತೆರಳುತ್ತಿದ್ದೇವೆ. ನಿಜಕ್ಕೂ ಇದೊಂದು ಅದ್ಭುತ ಅನುಭವ. ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ' ಎಂದರು.

# ನಿರಂತರ ಮಳೆ, ಭೂಕುಸಿತ ಚಾರ್‌ಧಾಮ್ ಯಾತ್ರೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಲಖನೌ: ನಿರಂತರ ಮಳೆಯಿಂದ ಹಲವೆಡೆ ಭೂಕುಸಿತ ಸಂಭವಿಸಿದ್ದರಿಂದ ಉತ್ತರಾಖಂಡದ ಚಾರ್‌ಧಾಮ್ ಯಾತ್ರೆಯನ್ನು ಗುರುವಾರ ಸ್ಥಗಿತಗೊಳಿಸಲಾಗಿದೆ. ಮಾರ್ಗ ಮಧ್ಯದಲ್ಲಿ ಸಿಲುಕಿದ ಯಾತ್ರಾರ್ಥಿಗಳನ್ನು ಕೇಂದ್ರ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) ಸಿಬ್ಬಂದಿ ಹಾಗೂ ಪೊಲೀಸರು ರಕ್ಷಿಸಿದ್ದಾರೆ.

ಕೇದರನಾಥಕ್ಕೆ ತೆರಳುವ ಹೆದ್ದಾರಿಯ ಸೋನ್‌ಪ್ರಯಾಗ್ ಹಾಗೂ ಗೌರಿಕುಂಡದ ಮಧ್ಯೆ ಭೂಕುಸಿತ ಸಂಭವಿಸಿ ರಸ್ತೆಗೆ ಮಣ್ಣು, ಬಂಡೆಗಳು ಬಂದು ಬಿದ್ದಿವೆ.

'ರಸ್ತೆಯು ಸಂಪೂರ್ಣವಾಗಿ ಮುಚ್ಚಿದ್ದು, ಎಸ್‌ಡಿಆರ್‌ಎಫ್ ಸಿಬ್ಬಂದಿ ಯಾತ್ರಾರ್ಥಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದರು. ಬಂಡೆಗಳನ್ನು ತೆರವುಗೊಳಿಸಿದ ಬಳಿಕವೇ ಯಾತ್ರೆಯು ಮತ್ತೆ ಆರಂಭವಾಗಲಿದೆ' ಎಂದು ರುದ್ರಪ್ರಯಾಗ್ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇದಾರನಾಥದಿಂದ ಹಿಂತಿರುಗುತ್ತಿದ್ದ 40 ಯಾತ್ರಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದು, ಅವರೆಲ್ಲರನ್ನೂ ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದ್ದಾರೆ.

ಭೂಕುಸಿತದಿಂದ ಯುಮನೋತ್ರಿಗೆ ತೆರಳುವ ಹೆದ್ದಾರಿಯನ್ನು ಬಂದ್ ಮಾಡಲಾಗಿದೆ. ಸೆಲಾಯಿ ಬಂದ್ ಹಾಗೂ ಒಜ್ರಿ ನಡುವೆ ಹೆದ್ದಾರಿಯು ಮಳೆಯಿಂದ ಕೊಚ್ಚಿಹೋಗಿದ್ದು, ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

'ಯಾತ್ರಾರ್ಥಿಗಳ ಸುರಕ್ಷತೆಯೇ ಸರ್ಕಾರದ ಮೊದಲ ಆದ್ಯತೆ' ಎಂದು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

## ಕಾರ್ಖಾನೆ ಸ್ಫೋಟ: 9 ಮಂದಿ ನಾಪತ್ತೆ

ಸಂಗಾರೆಡ್ಡಿ (ತೆಲಂಗಾಣ) (ಪಿಟಿಐ): ಇಲ್ಲಿನ ಸಿಗಾಚಿ ಔಷಧ ಕಾರ್ಖಾನೆಯಲ್ಲಿ ಸಂಭವಿಸಿದ್ದ ಸ್ಫೋಟದಲ್ಲಿ ಇನ್ನೂ ಒಂಬತ್ತು ನಾಪತ್ತೆಯಾಗಿದ್ದಾರೆ ಎಂದು ಸಂಗಾರೆಡ್ಡಿ ಜಿಲ್ಲೆಯ ಎಸ್‌ಪಿ ಪಾರಿತೋಷ್ ಪಂಕಜ್ ಗುರುವಾರ ಹೇಳಿದ್ದಾರೆ.

'ದುರಂತದಲ್ಲಿ 38 ಮಂದಿ ಮೃತಪಟ್ಟಿದ್ದು, ಒಂಬತ್ತು ಮಂದಿ ನಾಪತ್ತೆಯಾಗಿದ್ದಾರೆ. ಮೂಳೆಗಳು ಒಳಗೊಂಡಂತೆ ಮಾನವ ದೇಹದ ಅಂಗಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಅಲ್ಲಿನ ವರದಿ ಲಭಿಸಿದ ಬಳಿಕ ಮೃತರ ನಿಖರ ಸಂಖ್ಯೆ ತಿಳಿಯಲಿದೆ' ಎಂದು ತಿಳಿಸಿದ್ದಾರೆ.

'ಅವಶೇಷಗಳ ತೆರವು ಕಾರ್ಯಾಚರಣೆ ಶೇಕಡ 90ರಷ್ಟು ಪೂರ್ಣಗೊಂಡಿದ್ದು, ಇನ್ನಷ್ಟು ಮೃತದೇಹಗಳು ದೊರೆಯುವ ಸಾಧ್ಯತೆ ಕಡಿಮೆ. ಆದರೆ ಮಾನವ ದೇಹದ ಅಂಗಗಳು ದೊರೆಯುವ ಸಾಧ್ಯತೆಯಿದ್ದು, ಅವುಗಳನ್ನು ಪರೀಕ್ಷೆಗೆ ಕಳುಹಿಸಿಕೊಡಲಾಗುವುದು' ಎಂದರು.

ದುರಂತದಲ್ಲಿ 40 ಸಿಬ್ಬಂದಿಯನ್ನು ಕಳೆದುಕೊಂಡಿದ್ದೇವೆ ಎಂದು ಕಂಪನಿಯ ಆಡಳಿತ ಮಂಡಳಿ ಹೇಳಿದ್ದು, ಮೃತರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡುವುದಾಗಿ ಬುಧವಾರ ಘೋಷಿಸಿತ್ತು.

### ನ್ಯಾ. ಯಶವಂತ್ ವರ್ಮಾ ಪದಚ್ಯುತಗೊಳಿಸುವ ನಿರ್ಣಯ

# ಸಹಿ ಸಂಗ್ರಹ ಶೀಘ್ರ: ರಿಜಿಜು

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಬೆಂಬಲಿಸಲು ವಿರೋಧ ಪಕ್ಷಗಳು ತಾತ್ವಿಕ ಒಪ್ಪಿಗೆ ನೀಡಿದ್ದು, ಸಂಸದರ ಸಹಿ ಸಂಗ್ರಹ ಪ್ರಕ್ರಿಯೆಯನ್ನು ಶೀಘ್ರ ಆರಂಭಿಸಲಾಗುವುದು ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.



ಯಶವಂತ್ ವರ್ಮಾ

ಪದಚ್ಯುತಗೊಳಿಸುವ ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸಬೇಕೆ ಅಥವಾ ರಾಜ್ಯಸಭೆಯಲ್ಲಿ ಮಂಡಿಸಬೇಕೆ ಎಂಬುದನ್ನು ಸರ್ಕಾರ ಇನ್ನೂ ನಿರ್ಧರಿಸಿಲ್ಲ ಎಂದು ಗುರುವಾರ ತಿಳಿಸಿದ್ದಾರೆ.

'ಲೋಕಸಭೆಯಲ್ಲಿ ಮಂಡಿಸಲು ಕನಿಷ್ಠ 100 ಸಂಸದರ ಸಹಿ ಹಾಗೂ ರಾಜ್ಯಸಭೆಯಲ್ಲಿ ಮಂಡಿಸಲು ಕನಿಷ್ಠ 50 ಸಂಸದರ ಸಹಿ ಅಗತ್ಯವಿದೆ. ನಿರ್ಣಯವನ್ನು ಎಲ್ಲಿ ಮಂಡಿಸಬೇಕು ಎಂದು ಸರ್ಕಾರ ನಿರ್ಧರಿಸಿದ ನಂತರ ಸಹಿ ಸಂಗ್ರಹ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ತಿಳಿಸಿದರು.

ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 21ರಂದು ಪ್ರಾರಂಭವಾಗಿ ಆಗಸ್ಟ್ 21ಕ್ಕೆ ಕೊನೆಗೊಳ್ಳಲಿದೆ.

ನ್ಯಾಯಮೂರ್ತಿಯೊಬ್ಬರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಸಂಸತ್ತಿನ ಯಾವುದೇ ಸದನದಲ್ಲಿ ಅಂಗೀಕರಿಸಿದ ನಂತರ, ಸ್ಪೀಕರ್ ಅಥವಾ ಸಭಾಪತಿ ಅವರು ಯಾವ ಅಧಾರದಲ್ಲಿ ಪದಚ್ಯುತಗೊಳಿಸಲು ಕೋರಲಾಗಿದೆ ಎಂಬುದರ ತನಿಖೆಗೆ ಮೂವರು ಸದಸ್ಯರ ಸಮಿತಿಯನ್ನು ರಚಿಸುವರು.


ಸುಪ್ರಿಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅಥವಾ ಒಬ್ಬರು ನ್ಯಾಯಮೂರ್ತಿ, 25 ಹೈಕೋರ್ಟ್‌ಗಳ ಪೈಕಿ ಒಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ಒಬ್ಬರು ನ್ಯಾಯಶಾಸ್ತ್ರಜ್ಞರು ಸಮಿತಿಯಲ್ಲಿ ಇರುವರು.

ನ್ಯಾಯಮೂರ್ತಿ ವರ್ಮಾ ಅವರು ದೆಹಲಿ ಹೈಕೋರ್ಟ್ ನ್ಯಾಯಾಮೂರ್ತಿಯಾಗಿದ್ದ ಸಂದರ್ಭದಲ್ಲಿ ಅವರ ಅಧಿಕೃತ ನಿವಾಸದಲ್ಲಿ ನಗದು ಪತ್ತೆಯಾದ ಆರೋಪ ಕೇಳಿಬಂದಿತ್ತು. ಅವರ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಚಾರಣಾ ಸಮಿತಿ ತಿಳಿಸಿದೆ. ಅವರನ್ನು ಸೇವೆಯಿಂದ ತೆಗೆದುಹಾಕುವಂತೆಯೂ ಶಿಫಾರಸು ಮಾಡಿದೆ.

# 10 ವರ್ಷಗಳ ರಕ್ಷಣಾ ಯೋಜನೆಗೆ ಒಪ್ಪಿಗೆ

### ಭಾರತ– ಅಮೆರಿಕ ಕಾರ್ಯತಂತ್ರದ ಪಾಲುದಾರಿಕೆ ಇನ್ನಷ್ಟು ವಿಸ್ತರಿಸಲು ಕ್ರಮ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ರಕ್ಷಣಾ ಹಾಗೂ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ 10 ವರ್ಷಗಳ ಯೋಜನೆ ಹಾಕಿಕೊಳ್ಳಲು ಉಭಯ ದೇಶಗಳು ಒಪ್ಪಿಕೊಂಡಿವೆ.



ರಾಜನಾಥ ಸಿಂಗ್

ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರು ಬುಧವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಅದರ ಮರುದಿನ ಪೆಂಟಗನ್ ಹೊರಡಿಸಿದ ಹೇಳಿಕೆಯಲ್ಲಿ ಈ ಬಗ್ಗೆ ಉಲ್ಲೇಖಿಸಲಾಗಿದೆ.

'ರಕ್ಷಣಾ ಕಾರ್ಯದರ್ಶಿ ಹೆಗ್ಸೆತ್ ಮತ್ತು ಸಚಿವ ಸಿಂಗ್ ಅವರು ತಮ್ಮ ಮುಂದಿನ ಭೇಟಿಯ ಸಂದರ್ಭದಲ್ಲಿ ಭಾರತ–ಅಮೆರಿಕ ನಡುವಣ 10 ವರ್ಷಗಳ ರಕ್ಷಣಾ ಯೋಜನೆಗೆ ಸಹಿ ಹಾಕಲು ಒಪ್ಪಿಕೊಂಡಿದ್ದಾರೆ' ಎಂದು ಪ್ರಕಟಣೆ ಹೇಳಿದೆ.

ಅಮೆರಿಕವು ಭಾರತಕ್ಕೆ ಹಸ್ತಾಂತರಿಸಲು ಬಾಕಿಯಿರುವ ರಕ್ಷಣಾ ಪರಿಕರಗಳು ಮತ್ತು ರಕ್ಷಣಾ ಕೈಗಾರಿಕಾ ಸಹಕಾರದ ಬಗ್ಗೆ ಇಬ್ಬರೂ ಚರ್ಚಿಸಿದ್ದಾರೆ ಎಂದು ತಿಳಿಸಿದೆ.

ಭಾರತಕ್ಕೆ ಪೂರೈಸಲು ಬಾಕಿಯಿರುವ ಪ್ರಮುಖ ರಕ್ಷಣಾ ಸಾಮಗ್ರಿಗಳು ಮತ್ತು ಎರಡೂ ದೇಶಗಳ ನಡುವೆ ನಿಕಟ ರಕ್ಷಣಾ ಕೈಗಾರಿಕಾ ಸಹಕಾರದ ಬಗ್ಗೆ ಎರಡೂ ಕಡೆಯವರು ಚರ್ಚಿಸಿದ್ದಾರೆ ಎಂದು ಹೇಳಿದೆ. ಆದರೆ ಮಾತುಕತೆಯ ಹೆಚ್ಚಿನ ವಿವರಗಳನ್ನು ಪೆಂಟಗನ್ ಬಹಿರಂಗಪಡಿಸಿಲ್ಲ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು 2025ರ ಫೆಬ್ರುವರಿಯಲ್ಲಿ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಎರಡೂ ದೇಶಗಳು ಸಾಧಿಸಿರುವ ಪ್ರಗತಿಯನ್ನು ಉಭಯ ನಾಯಕರು ಪರಿಶೀಲಿಸಿದರು ಎಂದು ಹೇಳಿದೆ.

### ತೇಜಸ್‌ಗೆ ಎಂಜಿನ್ ಪೂರೈಕೆ ತ್ವರಿತಗೊಳಿಸಲು ಒತ್ತಾಯ

ತೇಜಸ್ ಯುದ್ಧ ವಿಮಾನಗಳ ತಯಾರಿಕೆಗೆ ಅಗತ್ಯವಿರುವ ಜಿಇ ಎಫ್–404 ಎಂಜಿನ್‌ಗಳ ಪೂರೈಕೆಯನ್ನು ತ್ವರಿತಗೊಳಿಸುವಂತೆ ರಾಜನಾಥ ಸಿಂಗ್ ಅವರು ಪೀಟ್ ಹಗ್ಸೆತ್ ಅವರನ್ನು ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಮೂಲದ ಜಿಇ ಏರೋಸ್ಪೇಸ್ ಕಂಪನಿಯು ನಿಗದಿತ ಸಮಯಕ್ಕೆ ಎಂಜಿನ್ ಪೂರೈಸದಿರುವ ಕಾರಣ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ (ಎಚ್‌ಎಎಲ್) ಗಡುವಿನ ಒಳಗಾಗಿ ಭಾರತೀಯ ವಾಯುಪಡೆಗೆ ತೇಜಸ್ ಯುದ್ಧವಿಮಾನಗಳನ್ನು ಪೂರೈಸಲು ಸಾಧ್ಯವಾಗಿಲ್ಲ.

ಭಾರತದಲ್ಲಿ ಎಫ್–414 ಜೆಟ್ ಎಂಜಿನ್‌ಗಳ ಜಂಟಿ ಉತ್ಪಾದನೆಗಾಗಿ ಎಚ್‌ಎಎಲ್ ಮತ್ತು ಜಿಇ ಏರೋಸ್ಪೇಸ್ ನಡುವಿನ ಪ್ರಸ್ತಾವಿತ ಒಪ್ಪಂದವನ್ನು ಶೀಘ್ರವಾಗಿ ಅಂತಿಮಗೊಳಿಸುವಂತೆಯೂ ರಕ್ಷಣಾ ಸಚಿವರು ಒತ್ತಾಯಿಸಿದ್ದಾರೆ.

## ದಿಶಾ ಅವರದು ಆತ್ಮಹತ್ಯೆ ಹೈಕೋರ್ಟ್‌ಗೆ ವರದಿ ಸಲ್ಲಿಕೆ

ಮುಂಬೈ (ಪಿಟಿಐ): 'ಸೆಲೆಬ್ರಿಟಿಗಳ ಮಾಜಿ ವ್ಯವಸ್ಥಾಪಕಿಯಾಗಿದ್ದ ದಿಶಾ ಸಾಲಿಯಾನ್ ಸಾವು ಆತ್ಮಹತ್ಯೆಯಿಂದ ಸಂಭವಿಸಿದೆ. ಅವರ ಸಾವಿನಲ್ಲಿ ಯಾವುದೇ ದುಷ್ಕೃತ್ಯ ನಡೆದಿಲ್ಲ' ಎಂದು ಮುಂಬೈ ಪೊಲೀಸರು ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದಾರೆ.

ಮಗಳು ಸಾಮೂಹಿಕ ಅತ್ಯಾಚಾರಕ್ಕೊಳಗಾಗಿ ಮೃತಪಟ್ಟಿದ್ದಾರೆ ಎಂದು ದಿಶಾ ಸಾಲಿಯಾನ್ ಅವರ ತಂದೆ ಸತೀಶ್ ಸಾಲಿಯಾನ್ ಪುನರುಚ್ಚರಿಸಿದ್ದಾರೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಸ್. ಗಡ್ಕರಿ ನೇತೃತ್ವದ ಪೀಠವು ವಿಚಾರಣೆಯನ್ನು ಜುಲೈ 16ಕ್ಕೆ ಮುಂದೂಡಿತು.

'ದಿಶಾ ಸಾಲಿಯಾನ್ 2020ರ ಜೂನ್ 8ರಂದು ಮುಂಬೈನ ಮಾಲಾಡ್ ಪ್ರದೇಶದಲ್ಲಿರುವ ತಮ್ಮ ಫ್ಲ್ಯಾಟ್‌ನ 14ನೇ ಮಹಡಿಯ ಕಿಟಕಿಯಿಂದ ಜಿಗಿದು ಆತ್ಮಹತ್ಯೆ ಮಾಡಿ ಕೊಂಡಿದ್ದರು. ಅವರ ದೇಹದ ಮೇಲೆ ದೈಹಿಕ ಹಲ್ಲೆ ನಡೆದಿರುವ ಗುರುತುಗಳು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆಯಾಗಿಲ್ಲ. ತಮ್ಮ ಕುಟುಂಬದೊಂದಿಗಿನ ವ್ಯಾಜ್ಯದಿಂದಾಗಿ ಅವರು ವಿಪರೀತ ಮಾನಸಿಕ ಒತ್ತಡಕ್ಕೆ ಸಿಲುಕಿದ್ದರು' ಎಂಬ ಅಂಶವೂ ಮುಂಬೈ ಪೊಲೀಸರು ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿದೆ.



ದಿಶಾ

ಮಗಳ ಸಾವಿನ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ಶಿವಸೇನಾ ಶಾಸಕ ಆದಿತ್ಯ ಠಾಕ್ರೆ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಸತೀಶ್ ಒತ್ತಾಯಿಸಿದ್ದರು.

### ಕ್ಷಮೆಯಾಚನೆಗೆ ಆಗ್ರಹ

ಈ ಪ್ರಕರಣದಲ್ಲಿ ಶಾಸಕ ಆದಿತ್ಯ ಠಾಕ್ರೆಯವರ ಹೆಸರು ತಳಕು ಹಾಕಿ ಅವರ ತೇಜೋವಧೆಗೆ ಯತ್ನಿಸುತ್ತಾ ಬಂದಿದ್ದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಸಚಿವ ನಿತೇಶ್ ರಾಣೆ ಅವರು ಕ್ಷಮೆ ಯಾಚಿಸಬೇಕು ಎಂದು ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್ ಆಗ್ರಹಿಸಿದ್ದಾರೆ.

## ಕಾಗದ ರಹಿತ ಗ್ರಾಮಾಡಳಿತ...

ಒಂದನೇ ಪುಟದಿಂದ...

ಅವುಗಳಿಗೆ ಅಗತ್ಯವಿರುವ ಆ್ಯಪ್‌ಗಳನ್ನೂ ಅಳವಡಿಸಲಾಗಿದೆ. ಎಲ್ಲ ಕಡತಗಳೂ ತ್ವರಿತಗತಿಯಲ್ಲಿ ವಿಲೇವಾರಿ ಆಗಬೇಕು. ಇದರಿಂದ ಗ್ರಾಮ ಆಡಳಿತಾಧಿಕಾರಿಗಳಿಗೆ ಕೆಲಸದ ಹೊರೆಯೂ ಕಡಿಮೆ ಆಗುತ್ತದೆ. ಟಪಾಲ್ ವ್ಯವಸ್ಥೆ ಕೊನೆಗೊಳ್ಳುತ್ತದೆ ಎಂದು ಅವರು ಹೇಳಿದರು.

ಈಗಾಗಲೇ ಆನ್‌ಲೈನ್ ಮೂಲಕ ಕಾರ್ಯ ನಿರ್ವಹಿಸುವ ಮತ್ತು ಡಿಜಿಟಲ್ ರೂಪದಲ್ಲಿ ಕಡತಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಸುಮಾರು 300ರಿಂದ 400 ಗ್ರಾಮ ಆಡಳಿತಾಧಿಕಾರಿಗಳು ಪ್ರತಿದಿನ ಲ್ಯಾಪ್‌ಟಾಪ್ ಮೂಲಕ ಕಡತಗಳನ್ನು ಕಳುಹಿಸುತ್ತಿದ್ದಾರೆ. ಎಲ್ಲ ಗ್ರಾಮ ಆಡಳಿತಾಧಿಕಾರಿಗಳನ್ನೂ ಇ–ಆಫೀಸ್ ಜಾಲದ ವ್ಯಾಪ್ತಿಗೆ ಸೇರಿಸಲಾಗುವುದು ಎಂದು ಕೃಷ್ಣಬೈರೇಗೌಡ ವಿವರಿಸಿದರು.

ಗ್ರಾಮ ಆಡಳಿತಾಧಿಕಾರಿಗಳಿಗೆ ಕಚೇರಿ ವ್ಯವಸ್ಥೆ ಮಾಡಿಕೊಡುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ರಾಜ್ಯದಲ್ಲಿ ಕಳೆದ ಒಂದು ತಿಂಗಳಲ್ಲಿ 2,600 ಕಡೆಗಳಲ್ಲಿ ಗ್ರಾಮ ಆಡಳಿತಾಧಿಕಾರಿಗಳಿಗೆ ಕಚೇರಿ ವ್ಯವಸ್ಥೆ ಮಾಡಲಾಗಿದೆ. ಉಳಿದ 3,500 ಅಧಿಕಾರಿಗಳಿಗೂ ಶೀಘ್ರದಲ್ಲೇ ಕಚೇರಿ ವ್ಯವಸ್ಥೆ ಆಗಲಿದೆ ಎಂದು ತಿಳಿಸಿದರು.

'ನನ್ನ ಭೂಮಿ ಗ್ಯಾರಂಟಿ' ಅಭಿಯಾನಕ್ಕೆ ವೇಗ ನೀಡಲಾಗಿದೆ. ಕೇವಲ 7 ತಿಂಗಳಲ್ಲಿ 1,04,222 ಜಮೀನುಗಳ ಅಳತೆ ಮಾಡುವ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಶೇ 20ರಷ್ಟು ಭೂಮಿಯ ಅಳತೆ ಕೆಲಸವೂ ಮುಗಿದಿದೆ. ಉಳಿದ ಪ್ರಕರಣಗಳನ್ನು ಮುಂದಿನ ಆರು ತಿಂಗಳಲ್ಲಿ ಪೋಡಿ ಮಾಡಿಕೊಡಲು ಸೂಚಿಸಲಾಗಿದೆ. ಅಲ್ಲದೆ, ಇನ್ನೂ 50 ಸಾವಿರದಿಂದ 70 ಸಾವಿರ ಪೋಡಿ ಪ್ರಕರಣಗಳು ದಾಖಲಾಗುವ ನಿರೀಕ್ಷೆ ಇದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಮೂರು ವರ್ಷಗಳಲ್ಲಿ 5,801 ಪ್ರಕರಣಗಳಲ್ಲಿ ಮಾತ್ರ ರೈತರಿಗೆ ಪೋಡಿ ದುರಸ್ತಿ ಮಾಡಿಕೊಡಲಾಗಿತ್ತು ಎಂದರು.

**29.8 ಕೋಟಿ ಪುಟಗಳ ಡಿಜಿಟಲೀಕರಣ:** 'ಭೂ ಸುರಕ್ಷಾ' ಯೋಜನೆಯಡಿ 'ಎ' ಮತ್ತು 'ಬಿ' ಕೆಟಗರಿಯ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಸುಮಾರು 100 ಕೋಟಿ ಪುಟಗಳಷ್ಟು ಸ್ಕ್ಯಾನ್ ಮಾಡಬೇಕಾಗಿದ್ದು, ಈವರೆಗೆ 29.8 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. ಈ ವರ್ಷದ ಕೊನೆಯ ಒಳಗೆ ತಹಶೀಲ್ದಾರ್ ಕಚೇರಿಗಳಲ್ಲಿರುವ ಎಲ್ಲಾ ಮೂಲ ಕಡತಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಲಾಗುವುದು ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಭೂಸುರಕ್ಷಾ ಯೋಜನೆಯಿಂದಾಗಿ ಭೂದಾಖಲೆಗಳ ಅಕ್ರಮ ನಡೆಯುವುದನ್ನು ತಡೆಯಬಹುದು. ಮನೆಯಲ್ಲೇ ಕುಳಿತು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ, ಪ್ರಮಾಣೀಕೃತ ಡಿಜಿಟಲ್ ಸಹಿ ಹೊಂದಿರುವ ದಾಖಲೆಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

### ಜುಲೈ 15ರ ಬಳಿಕ ಹೆಚ್ಚು ಮಳೆ

ಜುಲೈ 15ರ ಬಳಿಕ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದ್ದು, ಆದ್ದರಿಂದ ಮಲೆನಾಡು, ಕರಾವಳಿ ಮತ್ತು ಕೃಷ್ಣಾ ಕಣಿವೆ ಭಾಗದ ಪ್ರದೇಶಗಳಿಗೆ ಕಟ್ಟೆಚ್ಚರ ನೀಡಲಾಗಿದೆ ಎಂದು ಕೃಷ್ಣಬೈರೇಗೌಡ ತಿಳಿದರು.

ಜುಲೈ ಮತ್ತು ಆಗಸ್ಟ್‌ನಲ್ಲಿ ಮಳೆಯಿಂದ ಯಾವುದೇ ಪರಿಸ್ಥಿತಿ ಉದ್ಭವಿಸಿದರೂ ಅದನ್ನು ನಿಭಾಯಿಸಲು ಸಜ್ಜಾಗಿರುವಂತೆ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳಿಗೆ ಸೂಚನೆ ನೀಡಲಾಗಿದೆ. ಜೂನ್‌ನಲ್ಲಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ವಾಡಿಕೆಗಿಂತ ಶೇ 40ರಿಂದ ಶೇ 50ರಷ್ಟು ಹೆಚ್ಚು ಮಳೆಯಾಗಿದೆ. ಬಯಲುಸೀಮೆ ಪ್ರದೇಶದಲ್ಲಿ ಕೆಲವು ಕಡೆಗಳಲ್ಲಿ ವಾಡಿಕೆಗಿಂತ ಶೇ 2ರಿಂದ ಶೇ 3ರಷ್ಟು ಹೆಚ್ಚು, ಇನ್ನೂ ಕೆಲವುಗಳಲ್ಲಿ ಕಡಿಮೆ ಮಳೆಯಾಗಿದೆ. ಹಾನಿ ಆದ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲಾಗಿದೆ ಎಂದರು.

## ಕುಟುಂಬಕ್ಕೆ ಪರಿಹಾರ ನೀಡಬೇಕಿಲ್ಲ...

ಒಂದನೇ ಪುಟದಿಂದ...

'ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ನಾವು ಹಸ್ತಕ್ಷೇಪ ಮಾಡಲು ಒಲವು ಹೊಂದಿಲ್ಲ. ಅರ್ಜಿ ವಜಾಗೊಳಿಸಲಾಗಿದೆ' ಎಂದು ನ್ಯಾಯಪೀಠವು ಆದೇಶದಲ್ಲಿ ತಿಳಿಸಿದೆ.

2014ರ ಜೂನ್‌ನಲ್ಲಿ ಮಲ್ಲಸಂದ್ರ ಗ್ರಾಮದಿಂದ ಅರಸೀಕೆರೆ ಪಟ್ಟಣಕ್ಕೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತ ಸಂಭವಿಸಿ ಎನ್.ಎಸ್.ರವೀಶ ಎಂಬವರು ಮೃತಪಟ್ಟಿದ್ದರು.

ರವೀಶ ತಂದೆ, ಸಹೋದರಿ ಹಾಗೂ ಅವರ ಮಕ್ಕಳು ಕಾರಿನಲ್ಲಿ ಇದ್ದರು.

'ರವೀಶ ಕಾರನ್ನು ನಿರ್ಲಕ್ಷ್ಯದಿಂದ ಚಲಾಯಿಸಿದ್ದಾರೆ. ಅವರು ವಾಹನದ ಮೇಲೆ ನಿಯಂತ್ರಣ ಕಳೆದುಕೊಂಡಿದ್ದರಿಂದ ರಸ್ತೆಗೆ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಮೃತರ ಅತಿವೇಗ ಮತ್ತು ನಿರ್ಲಕ್ಷ್ಯದ ಚಾಲನೆಯಿಂದಾಗಿ ಅಪಘಾತ ಸಂಭವಿಸಿದೆ. ಹೀಗಾಗಿ, ಅವರ ಕುಟುಂಬದವರಿಗೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

### ಶೋಧ...

ಪಿಟಿಐ ಚಿತ್ರ



ಹಿಮಾಚಲ ಪ್ರದೇಶದ ಮಂಡಿಯ ಗೋಹರ್‌ನಲ್ಲಿ ಮೇಘಸ್ಫೋಟ ಮತ್ತು ದಿಢೀರ್ ಪ್ರವಾಹದಿಂದ ನಾಪತ್ತೆಯಾದವರಿಗೆ ಎನ್‌ಡಿಆರ್‌ಎಫ್ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸಿದರು

### ಬಿಹಾರ ವಿಧಾನಸಭಾ ಚುನಾವಣೆ: ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ಆರೋಪ

# 'ಶೇ20 ಮತದಾರರ ಹಕ್ಕು ಕಸಿಯಲು ಪಿತೂರಿ'

ನವದೆಹಲಿ (ಪಿಟಿಐ): 'ಚುನಾವಣಾ ಆಯೋಗವು ಬಿಹಾರದಲ್ಲಿ ಮತದಾರರ ಪಟ್ಟಿಯನ್ನು ವಿಶೇಷ ಪರಿಶೀಲನೆಗೆ (ಎಸ್‌ಐಆರ್) ಒಳಪಡಿಸುವ ಮೂಲಕ ಶೇಕಡ 20ರಷ್ಟು ಮತದಾರರ ಹಕ್ಕನ್ನು ಕಸಿಯಲು ಪಿತೂರಿ ನಡೆಸಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.



ಪವನ್ ಖೇರಾ

ಕಾಂಗ್ರೆಸ್ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥರಾದ ಪವನ್ ಖೇರಾ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಆರೋಪ ಮಾಡಿದ್ದಾರೆ. ಅಲ್ಲದೇ, ಚುನಾವಣಾ ಅಧಿಕಾರಿಗಳು ಸಂವಿಧಾನಕ್ಕೆ ಮತ್ತು ಮತದಾರರಿಗೆ ಸೇವಕರಾಗಿರಬೇಕೇ ವಿನಃ ಬಿಜೆಪಿಗೆ ಅಲ್ಲ ಎಂದೂ ಕಿಡಿಕಾರಿದ್ದಾರೆ.

ವಿಧಾನಸಭೆ ಚುನಾವಣೆ ಹೊಸ್ತಿಲಿನಲ್ಲಿರುವಂತೆಯೇ ಬಿಹಾರದಲ್ಲಿ ಮತದಾರರ ಪಟ್ಟಿ ಪರಿಶೀಲನೆಗೆ ಆಯೋಗ ಮುಂದಾಗಿರುವ ಬಗ್ಗೆ ಇಂಡಿಯಾ ಒಕ್ಕೂಟದ ಹಲವು ನಾಯಕರು ಆಕ್ಷೇಪ ವ್ಯಕ್ತಪಡಿಸಿ, ಆಯೋಗದ ಅಧಿಕಾರಿಗಳನ್ನು ಬುಧವಾರ ಭೇಟಿಮಾಡಿದ್ದರು. ಬೆನ್ನಲ್ಲೇ ಕಾಂಗ್ರೆಸ್ ಪತ್ರಿಕಾಗೋಷ್ಠಿ ನಡೆಸಿ, ಆಯೋಗದ ವಿರುದ್ಧ ಹರಿಹಾಯ್ದಿದೆ.

ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಆಯೋಗ ಕೂಡಲೇ ಕೈ ಬಿಡಬೇಕು ಎಂದು ಖೇರಾ ಒತ್ತಾಯಿಸಿದ್ದಾರೆ.

'ಆಯೋಗದ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದ ಬಳಿಕ ನಾವು ತಪ್ಪಾದ ಸ್ಥಳಕ್ಕೆ ದೂರನ್ನು ಕೊಂಡೊಯ್ದಿದ್ದೇವೆ ಎಂದು ಭಾಸವಾಗುತ್ತಿದೆ. ಚುನಾವಣಾ ಆಯೋಗಕ್ಕೆ ಅದರದ್ದೇ ಆದ ಪ್ರತ್ಯೇಕ ಕಟ್ಟಡವೇ ಬೇಕಿಲ್ಲ. ಬಿಜೆಪಿ ಅತ್ಯಂತ ದೊಡ್ಡ ಕಟ್ಟಡವನ್ನು ಹೊಂದಿದೆ ಆಯೋಗದ ಅಧಿಕಾರಿಗಳು ಕೂಡ ಅಲ್ಲಿಯೇ ಕೂರಬಹುದು' ಎಂದು ಖೇರಾ ಲೇವಡಿ ಮಾಡಿದ್ದಾರೆ.

### 'ಕಾಂಗ್ರೆಸ್ ಜೊತೆಗೆ ಮೈತ್ರಿಯಿಲ್ಲ'

**ಅಹಮದಾಬಾದ್ (ಪಿಟಿಐ):** 'ಕಳೆದ ವರ್ಷ ನಡೆದ ಲೋಕಸಭೆ ಚುನಾವಣೆಗಾಗಿ ಮಾತ್ರವೇ 'ಇಂಡಿಯಾ' ಮೈತ್ರಿಕೂಟವನ್ನು ರಚಿಸಲಾಗಿತ್ತು. ಕಾಂಗ್ರೆಸ್‌ನೊಂದಿಗೆ ನಮ್ಮ ಪಕ್ಷ ಯಾವುದೇ ಮೈತ್ರಿ ಹೊಂದಿಲ್ಲ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಗುಜರಾತ್‌ನಲ್ಲಿ ಆಡಳಿತಾರೂಢ ಬಿಜೆಪಿಗೆ ಕಾಂಗ್ರೆಸ್ ಸಹಾಯ ಮಾಡುತ್ತಿದೆ. ಎಎಪಿ ಹಾಗೂ ಕಾಂಗ್ರೆಸ್ ಮಧ್ಯೆ ಯಾವುದೇ ಮೈತ್ರಿ ಇಲ್ಲ. ಜುನಾಗಢ ಜಿಲ್ಲೆಯ ವಿಸಾವದರ್ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಏಕೆ ನಮ್ಮ ವಿರುದ್ಧ ಸ್ಪರ್ಧಿಸಿತು? ನಮ್ಮನ್ನು ಸೋಲಿಸಲು ಅದು ಹೀಗೆ ಮಾಡಿದೆ. ನಮ್ಮ ಮತಗಳನ್ನು ಒಡೆಯಲು ಬಿಜೆಪಿಯೇ ಕಾಂಗ್ರೆಸ್ ಅನ್ನು ಚುನಾವಣೆಗೆ ಕಳುಹಿಸಿತ್ತು' ಎಂದು ದೂರಿದರು.

## ಶ್ರೀನಾಥ್ ವಿರುದ್ಧ ಕ್ರಮಕ್ಕೆ ಪತ್ರ

ಒಂದನೇ ಪುಟದಿಂದ...

'ಅವರ ವಿರುದ್ಧ ತೆಗೆದುಕೊಂಡ ಕ್ರಮದ ಬಗ್ಗೆ ಲೋಕಾಯುಕ್ತಕ್ಕೆ ಮಾಹಿತಿ ನೀಡುವಂತೆಯೂ ಕೋರಲಾಗಿದೆ' ಎಂದೂ ಹೇಳಿದೆ.

'ಶ್ರೀನಾಥ್ ಮತ್ತು ನಿಂಗಪ್ಪ ಇಬ್ಬರೂ ವಾಟ್ಸ್‌ಆ್ಯಪ್ ಕರೆ ಮತ್ತು ಸಂದೇಶಗಳನ್ನು ಬಳಸುತ್ತಿದ್ದರು. ಇಬ್ಬರ ನಡುವಿನ ವಾಟ್ಸ್‌ಆ್ಯಪ್ ಚಾಟ್‌ನ ಸ್ಕ್ರೀನ್‌ಶಾಟ್‌ಗಳನ್ನು ಮುದ್ರಿಸಿ, ರಾಜ್ಯ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಲಾಗಿದೆ. ಆರೋಪಿಗಳಿಗೆ ಹಣ ನೀಡಿರುವ ಬಗ್ಗೆ ಬಿಬಿಎಂಪಿ ಎಇಇ ಒಬ್ಬರು ಮಾತ್ರ ಮಾಹಿತಿ ನೀಡಿದ್ದು, ಹಣ ನೀಡಿದ ಇನ್ನಿತರ ಅಧಿಕಾರಿಗಳ ವಿವರ ಕಲೆಹಾಕಲಾಗುತ್ತಿದೆ' ಎಂದು ಲೋಕಾಯುಕ್ತ ಪೊಲೀಸ್‌ನ ಮೂಲಗಳು ಖಚಿತಪಡಿಸಿವೆ.

**41 ಪ್ರಕರಣ ದಾಖಲು:** ಲೋಕಾಯುಕ್ತದ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕರನ್ನು ಬೆದರಿಸಿ, ಹಣ ವಸೂಲಿ ಮಾಡಿದ್ದರ ಸಂಬಂಧ ರಾಜ್ಯದಾದ್ಯಂತ 41 ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳು ತನಿಖೆಯ ಹಂತದಲ್ಲಿವೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

**29,209 ಪ್ರಕರಣಗಳು ಬಾಕಿ:** 'ಲೋಕಾಯುಕ್ತರ ವ್ಯಾಪ್ತಿಯಲ್ಲಿ 7,110, ಉಪಲೋಕಾಯುಕ್ತ–1ರ ವ್ಯಾಪ್ತಿಯಲ್ಲಿ 6,927 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ' ಎಂದು ಲೋಕಾಯುಕ್ತವು ತಿಳಿಸಿದೆ.

'ಉಪಲೋಕಾಯುಕ್ತ – 2ರ ಹುದ್ದೆ ತೆರವಾಗಿದ್ದ ಅವಧಿಯಲ್ಲಿ 1ನೇ ಉಪಲೋಕಾಯುಕ್ತರೇ ಆ ಪ್ರಕರಣಗಳನ್ನು ನಿರ್ವಹಿಸಿದ್ದು, ಆ ಅವಧಿಯಲ್ಲಿ ದಾಖಲಾಗಿದ್ದ 6,225 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ' ಎಂದಿದೆ.

'ಇನ್ನು ಉಪಲೋಕಾಯುಕ್ತ–2ರ ವ್ಯಾಪ್ತಿಯಲ್ಲಿರುವ 8,647 ದೂರುಗಳೂ ಸೇರಿ ಒಟ್ಟು 29,209 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ಒಟ್ಟು 1,739 ಪ್ರಕರಣಗಳು ಇಲಾಖಾ ವಿಚಾರಣೆಯ ಹಂತದಲ್ಲಿವೆ' ಎಂದು ಮಾಹಿತಿ ನೀಡಿದೆ.

## ಎಲ್ಲರ ವಿರುದ್ಧ ಹಣ ಅಕ್ರಮ ವರ್ಗಾವಣೆ ಆರೋಪ: ಇ.ಡಿ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಎಲ್ಲ ಆರೋಪಿಗಳ ವಿರುದ್ಧವೂ ಹಣ ಅಕ್ರಮ ವರ್ಗಾವಣೆಯ ಆರೋಪ ಹೊರಿಸಲಾಗಿದೆ. ಖಂಡಿತವಾಗಿಯೂ ಹಣ ಅಕ್ರಮ ವರ್ಗಾವಣೆಯಾಗಿರುವ ಪ್ರಕರಣ ಇದಾಗಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ದೆಹಲಿ ನ್ಯಾಯಾಲಯದಲ್ಲಿ ವಾದಿಸಿದೆ.

ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಮುಂದೆ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, 'ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಯಂಗ್ ಇಂಡಿಯನ್ ಕಂಪನಿಯ 'ಲಾಭ ಪಡೆಯುವ ಹಕ್ಕು ಹೊಂದಿರುವ ಮಾಲೀಕರು' ಆಗಿದ್ದಾರೆ. ಷೇರುದಾರರ ಮರಣದ ನಂತರ ಅವರು ಕಂಪನಿಯ ಮೇಲೆ ಶೇ 100ರಷ್ಟು ನಿಯಂತ್ರಣ ಪಡೆದುಕೊಂಡರು' ಎಂದು ಹೇಳಿದ್ದಾರೆ

# ಶುಭಮನ್ ಗಿಲ್ 'ಡಬಲ್' ಶತಕ

## ಇಂಗ್ಲೆಂಡ್ ಎದುರು ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮೊತ್ತ ದಾಖಲಿಸಿದ ಭಾರತ: ಆತಿಥೇಯರಿಗೆ ಆರಂಭಿಕ ಆಘಾತ

• ಸಿದ್ಧಿ ಕಿರಣ್



ದ್ವಿಶತಕ ದಾಖಲಿಸಿದ ಸಂಭ್ರಮದಲ್ಲಿ ಶುಭಮನ್ ಗಿಲ್ ಎಪಿ/ಪಿಟಿಐ ಚಿತ್ರ

ಎಜ್‌ಬಾಸ್ಟನ್: ಶುಭಮನ್ ಗಿಲ್ ಅವರು ದೇಶದ ಅತ್ಯಂತ ಕಠಿಣ ಸವಾಲಿನ ಕಾರ್ಯಗಳಲ್ಲಿ ಒಂದಾಗಿರುವ ಭಾರತ ಕ್ರಿಕೆಟ್ ನಾಯಕನಾಗಿ ಇನ್ನೂ ಪುಟ್ಟ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಆದರೆ ಹಲವು ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಆದರೂ ತಮ್ಮ ಬ್ಯಾಟಿಂಗ್ ಸೊಬಗನ್ನು ಮರೆತಿಲ್ಲ. ಬದಲಿಗೆ ರನ್‌ಗಳ ಹೊಳೆ ಹರಿಸುತ್ತಿದ್ದಾರೆ.

ಇಂಗ್ಲೆಂಡ್ ಎದುರು ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ದ್ವಿತೀಯ ದಿನದಾಟದಲ್ಲಿ ದ್ವಿಶತಕ ಗಳಿಸಿದರು. 25 ವರ್ಷದ ಗಿಲ್ ಅವರ ವೃತ್ತಿಜೀವನದ ಮೊದಲ ದ್ವಿಶತಕ ಇದಾಗಿದೆ. ಪಂದ್ಯದ ಮೊದಲ ದಿನವಾದ ಬುಧವಾರ ಗಳಿಸಿದ್ದ ಅಜೇಯ ಶತಕವನ್ನು ಅವರು ಗುರುವಾರ ತ್ರಿಶತಕದ ಸಮೀಪ ಒಯ್ದರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಭಾರತದ 19 ವರ್ಷದೊಳಗಿನ ತಂಡದ ಆಟಗಾರರು ಇದ್ದರು. 'ಕ್ರಿಕೆಟ್ ಪಠ್ಯ ಪುಸ್ತಕ'ದ ಚೆಂದದ ಹೊಡೆತಗಳನ್ನೆಲ್ಲ ಪ್ರಯೋಗಿಸಿದ ಗಿಲ್ ಆಟ ಅವರಿಗೆ ಪಾಠದಂತಿತ್ತು. 269 ರನ್ ಗಳಿಸಿದ್ದ ಗಿಲ್ ಅವರ ಆಟದಿಂದ ತಂಡವು 151 ಓವರ್‌ಗಳಲ್ಲಿ 587 ರನ್ ಕಲೆಹಾಕಿತು.

ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು ಎರಡನೇ ದಿನದಾಟದ ಅಂತ್ಯಕ್ಕೆ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 77 ರನ್ ಗಳಿಸಿ ಒತ್ತಡಕ್ಕೆ ಸಿಲುಕಿದೆ.

ಬಿಸಿಲು ಹರಡಿದ್ದ ವಾತಾವರಣದಲ್ಲಿ ಎರಡನೇ ದಿನದಾಟವನ್ನು ಪ್ರವಾಸಿ ತಂಡವು ಉತ್ತಮವಾಗಿ ಆರಂಭಿಸಿತು. ಲೀಡ್ಸ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದ ಮೊದಲ ದಿನ ಶತಕ ಹೊಡೆದು ಎರಡನೇ ದಿನಕ್ಕೆ ಆಟ ಕಾಯ್ದಿಟ್ಟುಕೊಂಡಿದ್ದರು ಗಿಲ್. ಆದರೆ ಅಲ್ಲಿ ಅವರೊಂದಿಗೆ ಕ್ರೀಸ್‌ನಲ್ಲಿ ರಿಷಭ್ ಪಂತ್ ಇದ್ದರು. 3ಕ್ಕೆ359 ರನ್‌ಗಳ ಸ್ಕೋರ್ ದಾಖಲಾಗಿತ್ತು. ಇಲ್ಲಿ 5ಕ್ಕೆ310ರ ಸ್ಕೋರ್‌ನಲ್ಲಿ ಜಡೇಜ ಅವರೊಂದಿಗೆ ಜೊತೆಯಾಗಿದ್ದರು. ಆದರೂ ದೊಡ್ಡ ಮೊತ್ತ ಕಲೆಹಾಕುವ ಗುರಿ ಗಿಲ್ ಮನದಲ್ಲಿತ್ತು. ಆದ್ದರಿಂದ ಏಕಾಗ್ರಚಿತ್ತದಿಂದ ಆಡಿದರು. ಇನ್ನೊಂದು ಬದಿಯಲ್ಲಿ ಜಡೇಜ ಕೂಡ ಚೆಂದದ ಬ್ಯಾಟಿಂಗ್ ಮಾಡಿದರು. ಇಬ್ಬರೂ 6ನೇ ವಿಕೆಟ್ ಜೊತೆಯಾಟದಲ್ಲಿ 203 ರನ್ ಸೇರಿಸಿದರು. ಜಡೇಜ ಅವರು (89; 137ಎಸೆತ) ಶತಕ ತಪ್ಪಿಸಿಕೊಂಡರು.

ಕ್ರೀಸ್‌ಗೆ ಬಂದ ವಾಷಿಂಗ್ಟನ್ ಸುಂದರ್ ಅವರು ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳುವಂತೆ ಆಡಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ ವಾಷಿಂಗ್ಟನ್ ಮತ್ತು ಗಿಲ್ 144 ರನ್ ಸೇರಿಸಿದರು. ಎಡಗೈ ಸ್ಪಿನ್ನರ್ ಕುಲದೀಪ್ ಅವರನ್ನು ಆಯ್ಕೆ ಮಾಡದೇ ವಾಷಿಂಗ್ಟನ್ ಅವರಿಗೆ ಸ್ಥಾನ ನೀಡಿದ್ದಕ್ಕಾಗಿ ಬುಧವಾರ ಹಲವು ಟೀಕೆಗಳು ವ್ಯಕ್ತವಾಗಿದ್ದವು.

ಆದರೆ ಎಲ್ಲ ಟೀಕೆ, ವ್ಯಂಗ್ಯಗಳಿಗೆ ತಮ್ಮ ಸಾಮರ್ಥ್ಯ ಮತ್ತು ಚೈತನ್ಯಯುತ ಆಟದ ಮೂಲಕ ಉತ್ತರ ಕೊಡುವ ಸಾಮರ್ಥ್ಯ ಶ್ರೇಷ್ಠ ಆಟಗಾರರಿಗೆ ಮಾತ್ರ ಇರುತ್ತದೆ. ಆ ಕಾರ್ಯವನ್ನು ಇಲ್ಲಿ ಗಿಲ್ ಮಾಡಿದರು. ಅವರು 380 ಎಸೆತಗಳನ್ನು ಎದುರಿಸಿದರು. ಈ ಪೈಕಿ ಶೇ 93ರಷ್ಟು ನಿಯಂತ್ರಣ ಸಾಧಿಸಿದ್ದರು. ಆದರೆ 250 ರನ್ ಮುಟ್ಟುವ ಹಂತದಲ್ಲಿ ಒಂದು ಕೆಟ್ಟ ಹೊಡೆತವನ್ನು ಪ್ರಯೋಗಿಸಿದ್ದು ಬಿಟ್ಟರೆ ಉಳಿದೆಲ್ಲವೂ ನಿಖರವಾಗಿದ್ದವು. ಸುಮಾರು ಆರು ತಾಸುಗಳ ಕಾಲ ಕ್ರೀಸ್‌ನಲ್ಲಿದ್ದ ಬ್ಯಾಟರ್ ಇಷ್ಟೊಂದು ನಿಖರತೆ ಸಾಧಿಸಿದ್ದು ಅಚ್ಚರಿ ಮೂಡಿಸಿದ್ದು ಸುಳ್ಳಲ್ಲ. ವಿರಾಟ್ ಕೊಹ್ಲಿ ಸ್ಥಾನವನ್ನು ತುಂಬಬಲ್ಲ ಆಟಗಾರನೆಂಬ ಭರವಸೆಗೆ ತಕ್ಕಂತೆ ಗಿಲ್ ಆಡಿದರು.

ಪಿಚ್ ಚೆನ್ನಾಗಿಯೇ ಇತ್ತು. ಆದರೆ ಇಂಗ್ಲೆಂಡ್ ದಾಳಿಯಲ್ಲಿ ಜೇಮ್ಸ್ ಆ್ಯಂಡರ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ಅವರಂತಹ ಪರಿಣಾಮಕಾರಿ ಬೌಲರ್‌ಗಳ ಕೊರತೆ ಕಂಡಿತು. ಆದರೆ ಸ್ಟೋಕ್ಸ್, ಕ್ರಿಸ್ ವೋಕ್ಸ್, ಜೋಶ್ ಟಂಗ್ ಮತ್ತು ಬ್ರೈಡನ್ ಕಾರ್ಸ್ ಅವರು ಗಿಲ್ ಅವರಿಗೆ ಕಠಿಣ ಸವಾಲು ಒಡ್ಡುವ ತಂತ್ರಗಾರಿಕೆ ಅನುಸರಿಸಿದರು. ಮೊದಲಿಗೆ ಶಾರ್ಟ್ ಬಾಲ್ ಅಸ್ತ್ರಗಳನ್ನು ಪ್ರಯೋಗಿಸಿದರು. ನಾಯಕ ಸ್ಟೋಕ್ಸ್ ಅವರು ಆನ್‌ಸೈಡ್‌ನಲ್ಲಿ ತಮ್ಮ ಫೀಲ್ಡರ್‌ಗಳನ್ನು ನಿಯೋಜಿಸಿದರು. ಬೌಲರ್‌ಗಳು ಗಿಲ್ ಅವರ ಪಕ್ಕೆಲುಬಿಗೆ ಗುರಿಯಿಟ್ಟು ಎಸೆತಗಳನ್ನು ಹಾಕಿದರು. ಆದರೆ ಭಾರತದ ಬ್ಯಾಟರ್ ಆ ಎಸೆತಗಳನ್ನು ಲೀಲಾಜಾಲವಾಗಿ ಎದುರಿಸಿದರು. ನಿರಂತರವಾಗಿ ಪುಲ್ ಮಾಡುತ್ತಿದ್ದರೂ ಚೆಂಡು ನೆಲಕಚ್ಚಿ ಸಾಗುವಂತೆ ನೋಡಿಕೊಂಡರು.

ನಂತರ ಫುಲ್ಲರ್ ಲೆಂಗ್ತ್ ತಂತ್ರಗಾರಿಕೆಗೆ ಸ್ಟೋಕ್ಸ್ ಬಳಗ ಮೊರೆಹೋಯಿತು. ಆಫ್‌ಸೈಡ್‌ನಲ್ಲಿ ಹೆಚ್ಚು ಫೀಲ್ಡರ್‌ಗಳನ್ನು ನಿಯೋಜಿಸಿದರು. ಬೌಲರ್‌ಗಳು ಆಫ್‌ಸ್ಟಂಪ್ ಗುರಿಯಾಗಿಸಿ ಎಸೆತಗಳನ್ನು ಹಾಕಿದರು. ಆದರೆ ಗಿಲ್ ಅವುಗಳಿಗೂ ಪ್ರತ್ಯುತ್ತರ ನೀಡಿದರು. ಗ್ಯಾಪ್‌ಗಳಲ್ಲಿ ಚೆಂಡನ್ನು ತಳ್ಳಿ ರನ್ ಸೂರೆ ಮಾಡಿದರು. ಎಲ್ಲ ತಂತ್ರಗಳೂ ವಿಫಲವಾದಾಗ ಬೌಲರ್‌ಗಳು ತಣ್ಣಗಾದರು. ಬ್ಯಾಟರ್ ತಪ್ಪೆಸಗುವುದನ್ನು ಕಾಯುತ್ತ ಬೌಲಿಂಗ್ ಮಾಡಿದರು. ಆದರೆ ಗಿಲ್ ಮೈಮರೆಯದೇ ದಾಖಲೆಯತ್ತ ಹೆಜ್ಜೆ ಹಾಕಿದರು. 311 ಎಸೆತಗಳಲ್ಲಿ ದ್ವಿಶತಕದ ಗಡಿ ಮುಟ್ಟಿ ಸಂಭ್ರಮಿಸಿದರು.

**ಆಂಗ್ಲರಿಗೆ ಆರಂಭಿಕ ಆಘಾತ:** ಭಾರತದ ವೇಗಿ ಆಕಾಶ್ ದೀಪ್ ಇಂಗ್ಲೆಂಡ್‌ಗೆ ಆರಂಭದಲ್ಲೇ ಆಘಾತ ನೀಡಿದರು. 13 ರನ್ ಗಳಿಸುವಷ್ಟರಲ್ಲಿ ಪ್ರಮುಖ ಎರಡು ವಿಕೆಟ್ ಪತನವಾದವು. ಆರಂಭಿಕ ಆಟಗಾರ ಬೆನ್ ಡಕೆಟ್ ಮತ್ತು ಓಲಿ ಪೋಪ್ ಅವರಿಗೆ ಖಾತೆ ತೆರೆಯಲು ಅವಕಾಶ ನೀಡದೆ ಆಕಾಶ್ ಪೆವಿಲಿಯನ್ ದಾರಿ ತೋರಿಸಿದರು. ನೆಲೆಯೂರಲು ಪ್ರಯತ್ನಿಸುತ್ತಿದ್ದ ಜ್ಯಾಕ್ ಕ್ರಾಲಿ (19) ಅವರನ್ನು ಮೊಹಮ್ಮದ್ ಸಿರಾಜ್ ಔಟ್ ಮಾಡಿದರು. ಜೋ ರೂಟ್ (ಔಟಾಗದೇ 18) ಮತ್ತು ಹ್ಯಾರಿ ಬ್ರೂಕ್ (ಔಟಾಗದೇ 30) ಕ್ರೀಸ್‌ನಲ್ಲಿದ್ದಾರೆ.

### ಗಿಲ್ ದಾಖಲೆ

ಶುಭಮನ್ ಗಿಲ್ ಇಲ್ಲಿ ದ್ವಿಶತಕ ಗಳಿಸುವುದರೊಂದಿಗೆ ದಿಗ್ಗಜರಾದ ಸುನಿಲ್ ಗಾವಸ್ಕರ್ (221 ರನ್) ಮತ್ತು ರಾಹುಲ್ ದ್ರಾವಿಡ್ (217) ಅವರ ದಾಖಲೆಗಳನ್ನು ಮೀರಿ ನಿಂತರು. ಇಂಗ್ಲೆಂಡ್ ನೆಲದಲ್ಲಿ ಅತಿ ಹೆಚ್ಚು ವೈಯಕ್ತಿಕ ಸ್ಕೋರ್ ದಾಖಲಿಸಿದ ಭಾರತೀಯ ಬ್ಯಾಟರ್ ಆದರು.

ಅಲ್ಲದೇ ನಾಯಕನಾಗಿ ದ್ವಿಶತಕ ಹೊಡೆದ ಪಟ್ಟಿಯಲ್ಲಿ ಸ್ಥಾನ ಪಡೆದರು. ಮನ್ಸೂರ್ ಅಲಿಖಾನ್ ಪಟೌಡಿ, ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್, ಮಹೇಂದ್ರಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಅವರ ನಂತರದ ಸ್ಥಾನ ಪಡೆದರು.

### ಇಂಗ್ಲೆಂಡ್ ಪ್ರವಾಸದಲ್ಲಿ ನಾಯಕರ ಅತ್ಯಧಿಕ ಸ್ಕೋರ್

| ರನ್ | ಆಟಗಾರ | ದೇಶ | ಸ್ಥಳ | ವರ್ಷ |
|---|---|---|---|---|
| 311 | ಬಾಬ್ ಸಿಂಪ್ಸನ್ | ಆಸ್ಟ್ರೇಲಿಯಾ | ಮ್ಯಾಂಚೆಸ್ಟರ್ | 1964 |
| 277 | ಗ್ರೇಮ್ ಸ್ಮಿತ್ | ದಕ್ಷಿಣ ಆಫ್ರಿಕಾ | ಬರ್ಮಿಂಗ್‌ಹ್ಯಾಮ್ | 2003 |
| 269 | ಶುಭಮನ್ ಗಿಲ್ | ಭಾರತ | ಬರ್ಮಿಂಗ್‌ಹ್ಯಾಮ್ | 2025 |
| 259 | ಗ್ರೇಮ್ ಸ್ಮಿತ್ | ದಕ್ಷಿಣ ಆಫ್ರಿಕಾ | ಲಾರ್ಡ್ಸ್ | 2003 |

### ಭಾರತೀಯ ಆಟಗಾರರ 250+ ರನ್ (ವಿದೇಶಿ ನೆಲ)

| ರನ್ | ಆಟಗಾರ | ಎದುರಾಳಿ | ಸ್ಥಳ | ವರ್ಷ |
|---|---|---|---|---|
| 309 | ವೀರೇಂದ್ರ ಸೆಹ್ವಾಗ್ | ಪಾಕಿಸ್ತಾನ | ಮುಲ್ತಾನ್ | 2004 |
| 270 | ರಾಹುಲ್ ದ್ರಾವಿಡ್ | ಪಾಕಿಸ್ತಾನ | ರಾವಲ್ಪಿಂಡಿ | 2004 |
| 269 | ಶುಭಮನ್ ಗಿಲ್ | ಇಂಗ್ಲೆಂಡ್ | ಎಜ್‌ಬಾಸ್ಟನ್ | 2025 |
| 254 | ವೀರೇಂದ್ರ ಸೆಹ್ವಾಗ್ | ಪಾಕಿಸ್ತಾನ | ಲಾಹೋರ್ | 2006 |

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್**

**ಭಾರತ: 1ನೇ ಇನಿಂಗ್ಸ್ 587 (151 ಓವರ್) (ಬುಧವಾರ 5ಕ್ಕೆ310)**

ಗಿಲ್ ಸಿ ಪೋಪ್ ಬಿ ಟಂಗ್ 269 (387ಎ, 4x30, 6x3)
ಜಡೇಜ ಸಿ ಸ್ಮಿತ್ ಬಿ ಟಂಗ್ 69 (137ಎ, 4x3, 6x1)
ಸುಂದರ್ ಬಿ ರೂಟ್ 42 (103ಎ, 4x10, 6x1)
ಆಕಾಶ್ ದೀಪ್ ಸಿ ಡಕೆಟ್ ಬಿ ಬಶೀರ್ 6
ಸಿರಾಜ್ ಸ್ಟಂ. ಸ್ಮಿತ್ ಬಿ ಬಶೀರ್ 8 (23ಎ, 4x1)
ಪ್ರಸಿದ್ಧ ಕೃಷ್ಣ ಔಟಾಗದೇ 5 (20ಎ)
**ಇತರೆ:** 22 (ಬೈ 6, ಲೆಗ್‌ಬೈ 6, ನೋಬಾಲ್ 8, ವೈಡ್ 2)
**ವಿಕೆಟ್ ಪತನ:** 6–414 (ರವೀಂದ್ರ ಜಡೇಜ, 107.3), 7–558 (ವಾಷಿಂಗ್ಟನ್ ಸುಂದರ್, 138.4), 8–574 (ಶುಭಮನ್ ಗಿಲ್, 143.3), 9–574 (ಆಕಾಶ್ ದೀಪ್, 144.2), 10–587 (ಮೊಹಮ್ಮದ್ ಸಿರಾಜ್, 150.6)
**ಬೌಲಿಂಗ್:** ಕ್ರಿಸ್ ವೋಕ್ಸ್ 25–6–81–2; ಬ್ರೈಡನ್ ಕಾರ್ಸ್ 24–3–83–1; ಜೋಶ್ ಟಂಗ್ 28–2–119–2; ಬೆನ್ ಸ್ಟೋಕ್ಸ್ 19–0–74–1; ಶೋಯೆಬ್ ಬಶೀರ್ 45–2–167–3; ಜೋ ರೂಟ್ 5-0-20-1; ಹ್ಯಾರಿ ಬ್ರೂಕ್ 5-0-31-0.

**ಇಂಗ್ಲೆಂಡ್: 3ಕ್ಕೆ 77 (20 ಓವರ್‌ಗಳಲ್ಲಿ)**

ಕ್ರಾಲಿ ಸಿ ಕರುಣ್ ಬಿ ಸಿರಾಜ್ 19 (30ಎ, 4x3)
ಡಕೆಟ್ ಸಿ ಗಿಲ್ ಬಿ ಆಕಾಶ್ 0 (5ಎ)
ಪೋಪ್ ಸಿ ರಾಹುಲ್ ಬಿ ಆಕಾಶ್ 0 (1ಎ)
ಜೋ ರೂಟ್ ಔಟಾಗದೇ 18 (37ಎ, 4x1)
ಹ್ಯಾರಿ ಬ್ರೂಕ್ ಔಟಾಗದೇ 30 (53ಎ, 4x4, 6x1)
**ಇತರೆ:** 10 (ಲೆಗ್‌ಬೈ 4, ನೋಬಾಲ್ 6)
**ವಿಕೆಟ್ ಪತನ:** 13-1 (ಬೆನ್ ಡಕೆಟ್, 2.4), 13-2 (ಓಲಿ ಪೋಪ್, 2.5), 25-3 (ಜ್ಯಾಕ್ ಕ್ರಾಲಿ, 7.1)
**ಬೌಲಿಂಗ್:** ಆಕಾಶ್ ದೀಪ್ 7–1–36–2, ಮೊಹಮ್ಮದ್ ಸಿರಾಜ್ 7–2–21–1, ಪ್ರಸಿದ್ಧ ಕೃಷ್ಣ 3–0–11–0, ನಿತೀಶ್ ಕುಮಾರ್ ರೆಡ್ಡಿ 1–0–1–0, ರವೀಂದ್ರ ಜಡೇಜ 2–0–4–0



## ಸೂರ್ಯವಂಶಿ ದಾಖಲೆ: ಯೂತ್ ಸರಣಿಯಲ್ಲಿ ಭಾರತಕ್ಕೆ 2–1 ಮುನ್ನಡೆ


ವೈಭವ್ ಸೂರ್ಯವಂಶಿ

ನಾರ್ತಂಪ್ಟನ್ (ಪಿಟಿಐ): ಹದಿಹರೆಯದ ವೈಭವ್ ಸೂರ್ಯವಂಶಿ ಅವರು 19 ವರ್ಷದೊಳಗಿನವರ ಇಂಗ್ಲೆಂಡ್ ತಂಡದ ಎದುರಿನ ಏಕದಿನ ಸರಣಿಯಲ್ಲಿ ಒಂಬತ್ತು ಸಿಕ್ಸರ್ ಸಿಡಿಸಿ ದಾಖಲೆ ಬರೆದರು. ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡವು ಇಂಗ್ಲೆಂಡ್ ಎದುರಿನ ಯೂತ್ ಸರಣಿಯ ಮೂರನೇ ಪಂದ್ಯದಲ್ಲಿ 4 ವಿಕೆಟ್‌ಗಳಿಂದ ಜಯಿಸಿತು. ಸರಣಿಯಲ್ಲಿ 2–1 ಮುನ್ನಡೆ ಸಾಧಿಸಿತು.

14 ವರ್ಷ ವಯಸ್ಸಿನ ವೈಭವ್ ಸರಣಿಯ ಆರಂಭಿಕ ಪಂದ್ಯಗಳಲ್ಲಿ ಅರ್ಧಶತಕಗಳ ಅಂಚಿನಲ್ಲಿ ಎಡವಿದ್ದರು. ಆದರೆ ಇಲ್ಲಿ 31 ಎಸೆತಗಳಲ್ಲಿ 86 ರನ್ ಗಳಿಸಿದರು. ಅದರಲ್ಲಿ ಆರು ಬೌಂಡರಿಗಳಿದ್ದವು. ಅವರು ಹೊಡೆದ ಒಂಬತ್ತು ಸಿಕ್ಸರ್‌ಗಳು ದಾಖಲೆ ಪುಟ ಸೇರಿದವು. 19 ವರ್ಷದೊಳಗಿನವರ ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಗಳಿಸಿದ ಆಟಗಾರನಾದರು. ಮನದೀಪ್ ಸಿಂಗ್ (8 ಸಿಕ್ಸರ್) ದಾಖಲೆಯನ್ನು ಮುರಿದರು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಆತಿಥೇಯ ತಂಡವು 40 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 268 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 34.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 274 ರನ್ ಗಳಿಸಿ ಗೆದ್ದಿತು.

**ಸಂಕ್ಷಿಪ್ತ ಸ್ಕೋರು:** ಇಂಗ್ಲೆಂಡ್: 40 ಓವರ್‌ಗಳಲ್ಲಿ 6ಕ್ಕೆ268 (ಡ್ವಾಕಿನ್ಸ್ 62, ಇಸಾಕ್ ಮೊಹಮ್ಮದ್ 41, ಬೆನ್ ಮಯೆಸ್ 31, ಥಾಮಸ್ ರೀವ್ 76, ರಾಲ್ಫಿ ಅಲ್ಬರ್ಟ್ 21, ಕೌಶಿಕ್ ಚೌಹಾಣ್ 30ಕ್ಕೆ3) ಭಾರತ: 34.3 ಓವರ್‌ಗಳಲ್ಲಿ 6ಕ್ಕೆ274 (ವೈಭವ್ ಸೂರ್ಯವಂಶಿ 86, ವಿಹಾನ್ ಮಲ್ಹೋತ್ರಾ 46, ರಾಹುಲ್ ಕುಮಾರ್ 27, ಕನಿಷ್ಕ್ ಚೌಹಾಣ್ 43, ಆರ್. ಅಂಬರೀಶ್ ಔಟಾಗದೆ 31, ಅಲೆಕ್ಸಾಂಡರ್ ವೇಡ್ 58ಕ್ಕೆ2) ಫಲಿತಾಂಶ: ಭಾರತ 19 ವರ್ಷದೊಳಗಿನವರ ತಂಡಕ್ಕೆ 4 ವಿಕೆಟ್‌ಗಳ ಜಯ.

## ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಶ್ರೀಕಾಂತ್



ಕ್ಯಾಲ್ಗರಿ (ಪಿಟಿಐ): ಚೀನಾ ತೈಪೆಯ ವಾಂಗ್ ಪೊ–ವೀ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿದ ಭಾರತದ ಕಿದಂಬಿ ಶ್ರೀಕಾಂತ್ ಅವರು ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಶ್ರೀಕಾಂತ್ ಗುರುವಾರ ನಡೆದ ಪಂದ್ಯದಲ್ಲಿ 21–19, 21–12 ರಿಂದ ವಿಶ್ವ ಕ್ರಮಾಂಕದಲ್ಲಿ 71ನೇ ಸ್ಥಾನದಲ್ಲಿರುವ ವಾಂಗ್ ಅವರ ಸವಾಲನ್ನು ಬದಿಗೊತ್ತಿದರು.

ಭಾರತದ ಆಟಗಾರನಿಗೆ ಎಂಟರ ಘಟ್ಟದ ಪಂದ್ಯದಲ್ಲಿ ಚೀನಾ ತೈಪೆಯ ಅಗ್ರ ಆಟಗಾರ ಚೌ ಟಿಯೆನ್ ಚೆನ್ ಅವರ ಸವಾಲು ಎದುರಾಗುವ ಸಾಧ್ಯತೆಯಿದೆ.

### ಚುಟುಕು ಸುದ್ದಿ

#### ಎರಡನೇ ಸುತ್ತಿಗೆ ಬಾಲಾಜಿ– ವರೇಲಾ

ಲಂಡನ್ (ಪಿಟಿಐ): ಭಾರತದ ಶ್ರೀರಾಮ್ ಬಾಲಾಜಿ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್– ವರೇಲಾ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಗುರುವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಬಾಲಾಜಿ–ವರೇಲಾ ಜೋಡಿಯು 6-4 6-4 ರಿಂದ ಅಮೆರಿಕದ ಲರ್ನರ್ ಟಿಯೆನ್ ಮತ್ತು ಅಲೆಕ್ಸಾಂಡರ್ ಕೊವಾಸೆವಿಕ್ ಅವರನ್ನು ಮಣಿಸಿತು.

ಇಂಡೊ–ಮೆಕ್ಸಿಕೊ ಜೋಡಿಯು ಎರಡನೇ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕಿತ ಸ್ಪೇನ್‌ನ ಮಾರ್ಸೆಲ್ ಗ್ರಾನೋಲ್ಲರ್ಸ್ ಮತ್ತು ಅರ್ಜೆಂಟೀನಾದ ಹೊರಾಸಿಯೊ ಜೆಬಲ್ಲೋಸ್ ವಿರುದ್ಧ ಹೋರಾಟ ನಡೆಸಲಿದೆ.

#### 10ರಂದು ಟ್ರಯಲ್ಸ್

ಬೆಂಗಳೂರು: ಆಂಧ್ರಪ್ರದೇಶದ ಕಾಕಿನಾಡದಲ್ಲಿ ಆಗಸ್ಟ್ 1ರಿಂದ 12ರವರೆಗೆ ನಡೆಯಲಿರುವ ಹಾಕಿ ಇಂಡಿಯಾ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಯಾಗಿ ಹಾಕಿ ಕರ್ನಾಟಕವು ಟ್ರಯಲ್ಸ್ ಆಯೋಜಿಸಿದೆ.

ಶಾಂತಿನಗರ ಕೆ.ಎಂ.ಕಾರ್ಯಪ್ಪ ಹಾಕಿ ಅರೆನಾದಲ್ಲಿ ಇದೇ 10ರಂದು ಬೆಳಿಗ್ಗೆ 9.30ರಿಂದ ಟ್ರಯಲ್ಸ್ ನಡೆಯಲಿದೆ. 2006ರ ಜ.1ರ ನಂತರ ಜನಿಸಿದ ಆಟಗಾರ್ತಿಯರು ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು ಎಂದು ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

#### ಚೆಸ್: ಮುನ್ನಡೆ ಹಂಚಿಕೊಂಡ ಗುಕೇಶ್

ಝಾಗ್ರೆಬ್ (ಕ್ರೊವೇಷ್ಯಾ), (ಪಿಟಿಐ): ಸತತ ಎರಡು ಪಂದ್ಯಗಳನ್ನು ಗೆದ್ದ ವಿಶ್ವ ಚಾಂಪಿಯನ್ ಗುಕೇಶ್, ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ಗುರುವಾರ ಮೂರನೇ ಸುತ್ತಿನ ನಂತರ ಇತರ ಮೂವರು ಆಟಗಾರರೊಡನೆ ಅಗ್ರಸ್ಥಾನಕ್ಕೇರಿದರು.

ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ), ಯಾನ್ ಕ್ರಿಸ್ಟೋಫ್ ಡೂಡ (ಪೋಲೆಂಡ್) ಮತ್ತು ವೆಸ್ಲಿ ಸೊ (ಅಮೆರಿಕ) ಕೂಡ ಗುಕೇಶ್ ಜೊತೆ ತಲಾ ನಾಲ್ಕು ಅಂಕ ಗಳಿಸಿದ್ದಾರೆ.

ಗುಕೇಶ್ ಗುರುವಾರ ನಡೆದ ಪಂದ್ಯಗಳಲ್ಲಿ ಅಲಿರೇಝಾ ಫಿರೋಜ್ ಮತ್ತು ಸ್ವದೇಶದ ಆರ್.ಪ್ರಜ್ಞಾನಂದ ಅವರನ್ನು ಸೋಲಿಸಿದರು. ಅಲಿರೇಝಾ ಮತ್ತು ಪ್ರಜ್ಞಾನಂದ ತಲಾ 2 ಅಂಕ ಗಳಿಸಿದ್ದಾರೆ.

## ವಿಂಬಲ್ಡನ್ ಟೆನಿಸ್: ಜಾಸ್ಮಿನ್ ಪಾವೊಲಿನಿ, ಜಾಕ್ ಡ್ರೇಪರ್‌ಗೆ ಆಘಾತ

# ಜೊಕೊವಿಚ್, ಅಲ್ಕರಾಜ್ ಮುನ್ನಡೆ


ನೊವಾಕ್ ಜೊಕೊವಿಚ್ —ಎಎಫ್‌ಪಿ ಚಿತ್ರ

ವಿಂಬಲ್ಡನ್ (ಎಪಿ): ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಗುರುವಾರ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತು ಪ್ರವೇಶಿಸಿದರು. ಹಾಲಿ ಚಾಂಪಿಯನ್, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಗೆಲುವಿನ ಓಟ ಮುಂದುವರಿಸಿದರು.

ಮತ್ತೊಂದೆಡೆ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಮತ್ತಷ್ಟು ಶ್ರೇಯಾಂಕಿತರು ಗಂಟುಮೂಟೆ ಕಟ್ಟಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಹಾಲಿ ರನ್ನರ್ ಅಪ್, ನಾಲ್ಕನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ (ಇಟಲಿ) ಆಘಾತ ಅನುಭವಿಸಿದರು. 12ನೇ ಶ್ರೇಯಾಂಕದ ಡಯಾನಾ ಶ್ನೈಡರ್ (ರಷ್ಯಾ), 21ನೇ ಶ್ರೇಯಾಂಕದ ಬೀಟ್ರಿಜ್ ಹದ್ದದ್ ಮಾಯಾ (ಬ್ರೆಜಿಲ್), 22ನೇ ಶ್ರೇಯಾಂಕದ ಡೊನ್ನಾ ವೆಕಿಕ್ (ಕ್ರೊವೇಷ್ಯಾ), 29ನೇ ಶ್ರೇಯಾಂಕದ ಲೇಲಾ ಫೆರ್ನಾಂಡಿಸ್ (ಕೆನಡಾ) ಎರಡನೇ ಸುತ್ತಿನಲ್ಲಿ ಹೊರಬಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಜಾಕ್ ಡ್ರೇಪರ್ ನಿರಾಸೆ ಅನುಭವಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ 13 ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ 10 ಸೇರಿದಂತೆ ಒಟ್ಟು 23 ಶ್ರೇಯಾಂಕಿತರು ನಿರ್ಗಮಿಸಿದಂತಾಗಿದೆ. ಇಷ್ಟೊಂದು ಶ್ರೇಯಾಂಕಿತರು ಮೊದಲೆರಡು ಸುತ್ತಿನಲ್ಲೇ ಆಘಾತ ಅನುಭವಿಸಿರುವುದು ಕಳೆದ 25 ವರ್ಷಗಳ ಯಾವುದೇ ಗ್ರ್ಯಾನ್ ಸ್ಲಾಮ್ ಟೂರ್ನಿಗಳಲ್ಲಿ ದಾಖಲೆಯಾಗಿದೆ.

ಮೊದಲ ಐದು ಶ್ರೇಯಾಂಕಿತ ಆಟಗಾರ್ತಿಯರ ಪೈಕಿ ಅರಿನಾ ಸಬಲೆಂಕಾ (ಬೆಲರೂಸ್) ಮಾತ್ರ ಸ್ಪರ್ಧೆಯಲ್ಲಿ ಉಳಿದಿದ್ದಾರೆ. ಮೂರು ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದಿರುವ ಅಗ್ರ ಶ್ರೇಯಾಂಕದ ಸಬಲೆಂಕಾ ಇಲ್ಲಿ ಚೊಚ್ಚಲ ಪ್ರಶಸ್ತಿ ಎದುರು ನೋಡುತ್ತಿದ್ದಾರೆ. ಎರಡನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ), ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ (ಅಮೆರಿಕ) ಮತ್ತು ಐದನೇ ಶ್ರೇಯಾಂಕದ ಝೆಂಗ್ ಕ್ವಿನ್ವೆನ್ (ಚೀನಾ) ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದ್ದರು.

**ಡ್ರೇಪರ್‌ಗೆ ಆಘಾತ:** 2017ರಲ್ಲಿ ರನ್ನರ್ ಅಪ್ ಆಗಿದ್ದ ಮರಿನ್ ಸಿಲಿಕ್ 6-4, 6-3, 1-6, 6-4 ರಿಂದ ಬ್ರಿಟನ್‌ನ ಜಾಕ್ ಡ್ರೇಪರ್ ಅವರಿಗೆ ಆಘಾತ ನೀಡಿದರು.

2014ರಲ್ಲಿ ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿರುವ ಕ್ರೊವೇಷ್ಯಾದ 36 ವರ್ಷ ವಯಸ್ಸಿನ ಸಿಲಿಕ್ ಈತನಕ ಮೂರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಫೈನಲ್ ತಲುಪಿದ್ದಾರೆ. 2017ರ ವಿಂಬಲ್ಡನ್ ಮತ್ತು 2018ರ ಆಸ್ಟ್ರೇಲಿಯನ್ ಓಪನ್ ಫೈನಲ್‌ನಲ್ಲಿ ರೋಜರ್ ಫೆಡರರ್ ವಿರುದ್ಧ ಸೋತಿದ್ದರು.

**ಜೊಕೊವಿಚ್‌ಗೆ ಗೆಲುವು:** ಏಳು ಬಾರಿಯ ಚಾಂಪಿಯನ್ ಜೊಕೊವಿಚ್ 6-3, 6-2, 6-0ರಿಂದ ಆತಿಥೇಯ ದೇಶದ ವೈಲ್ಡ್‌ಕಾರ್ಡ್ ಸ್ಪರ್ಧಿ ಡಾನ್ ಇವಾನ್ಸ್ ವಿರುದ್ಧ ಗೆಲುವು ಸಾಧಿಸಿದರು. ಇದರೊಂದಿಗೆ ಓಪನ್ ಯುಗದಲ್ಲಿ ದಾಖಲೆಯ 19ನೇ ಸಲ ಮೂರನೇ ಸುತ್ತು ಪ್ರವೇಶಿಸಿದರು. ಇದು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 38 ವರ್ಷ ವಯಸ್ಸಿನ ಆಟಗಾರನಿಗೆ 99ನೇ ಗೆಲುವಾಗಿದೆ.

ಜೊಕೊವಿಚ್, 2023ರ ಅಮೆರಿಕ ಓಪನ್ ಚಾಂಪಿಯನ್ ಆದ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಪ್ರಶಸ್ತಿಯ ಬರ ಎದುರಿಸುತ್ತಿದ್ದಾರೆ. ವಿಂಬಲ್ಡನ್‌ನ ಕಳೆದ ಎರಡು ಆವೃತ್ತಿಗಳಲ್ಲಿ ಫೈನಲ್ ಪ್ರವೇಶಿಸಿರುವ ಅವರು, ಅಲ್ಕರಾಜ್ ವಿರುದ್ಧ ಸೋತು ನಿರಾಸೆ ಅನುಭವಿಸಿದ್ದರು.

ಹ್ಯಾಟ್ರಿಕ್ ಪ್ರಶಸ್ತಿಯ ಛಲದಲ್ಲಿರುವ ಎರಡನೇ ಶ್ರೇಯಾಂಕದ ಅಲ್ಕರಾಜ್ 6-1, 6-4, 6-4ರಿಂದ ಆಲಿವರ್ ಟಾರ್ವೆಟ್ (ಬ್ರಿಟನ್) ಅವರನ್ನು ಸೋಲಿಸಿ ಮೂರನೇ ಸುತ್ತು ಪ್ರವೇಶಿಸಿದರು.


### ರಾಖಿಮೋವಾ ಮಿಂಚು

ಮಹಿಳೆಯರ ಸಿಂಗಲ್ಸ್‌ನಲ್ಲಿ ರಷ್ಯಾದ ಕಮಿಲ್ಲಾ ರಾಖಿಮೋವಾ ಅವರು ಪಾವೊಲಿನಿ ಅವರಿಗೆ ಆಘಾತ ನೀಡಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 62ನೇ ಸ್ಥಾನದಲ್ಲಿರುವ ರಾಖಿಮೋವಾ 4-6, 6-4, 6-4ರಿಂದ ಇಟಲಿಯ ಆಟಗಾರ್ತಿಯನ್ನು ಮಣಿಸಿದರು. ಕಳೆದ ವರ್ಷ ಫೈನಲ್‌ನಲ್ಲಿ ಪಾವೊಲಿನಿ, ಝೆಕ್ ರಿಪಬ್ಲಿಕ್‌ನ ಬಾರ್ಬೊರಾ ಕ್ರೆಜ್ಸಿಕೋವಾ ವಿರುದ್ಧ ಸೋತಿದ್ದರು.

ಹಾಲಿ ಚಾಂಪಿಯನ್ ಬಾರ್ಬೊರಾ 6-4, 3-6, 6-2ರ ಮೂರು ಸೆಟ್‌ಗಳ ಹೋರಾಟದಲ್ಲಿ 67ನೇ ಕ್ರಮಾಂಕದ ಕ್ಯಾರೋಲಿನ್ ಡೋಲ್ಹೈಡ್ (ಅಮೆರಿಕ) ಅವರನ್ನು ಸೋಲಿಸಿ, ಪ್ರಶಸ್ತಿ ಉಳಿಸಿಕೊಳ್ಳುವತ್ತ ಹೆಜ್ಜೆಯಿಟ್ಟರು.

# ಕಾರು ಅಪಘಾತ: ಜೋಟಾ ಸಾವು

## ಕಳೆದ ತಿಂಗಳಷ್ಟೇ ವಿವಾಹವಾಗಿದ್ದ ಲಿವರ್‌ಪೂಲ್ ತಾರೆ


ಡಿಯಾಗೊ ಜೋಟಾ ಎಕ್ಸ್ ಚಿತ್ರ

ಮ್ಯಾಡ್ರಿಡ್ (ಎಪಿ): ಲಿವರ್‌ಪೂಲ್ ತಾರೆ, ಪೋರ್ಚುಗಲ್ ಫುಟ್‌ಬಾಲ್ ತಂಡದ ಫಾರ್ವರ್ಡ್ ಆಟಗಾರ ಡಿಯಾಗೊ ಜೋಟಾ (28) ಮತ್ತು ಅವರ ಸೋದರ ಆ್ಯಂಡ್ರೆ ಸಿಲ್ವಾ (25) ಅವರು ಬುಧವಾರ ತಡರಾತ್ರಿ ಕಾರು ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ. ಅವರ ಸಾವಿಗೆ ಫುಟ್‌ಬಾಲ್ ವಲಯದಲ್ಲಿ ತೀವ್ರ ಶೋಕ ವ್ಯಕ್ತವಾಗಿದೆ.

ಸ್ಪೇನ್‌ನ ವಾಯುವ್ಯ ಭಾಗದ ಝಮೋರಾ ನಗರದ ಸೆರ್ನಾಡಿಲಾ ಎಂಬಲ್ಲಿ ಅವರಿದ್ದ ಲ್ಯಾಂಬೋರ್ಗಿನಿ ಸೂಪರ್ ಕಾರು ನಿಯಂತ್ರಣ ತಪ್ಪಿ ಹೆದ್ದಾರಿಯಿಂದ ಬದಿಗೆ ಸರಿದು ಬೆಂಕಿಗೆ ಆಹುತಿಯಾಗಿದೆ. ಇಬ್ಬರೂ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಇಬ್ಬರಲ್ಲಿ ಕಾರು ಚಲಾಯಿಸುತ್ತಿದ್ದವರು ಯಾರೆಂದು ತಿಳಿದುಬಂದಿಲ್ಲ. ಇನ್ನೊಂದು ವಾಹನವನ್ನು ಓವರ್‌ಟೇಕ್ ಮಾಡುವ ವೇಳೆ ಟೈರ್ ಸಿಡಿದಿರಬಹುದು ಎಂದು ಪೊಲೀಸರು ಪ್ರಾಥಮಿಕ ತನಿಖೆಯ ನಂತರ ಶಂಕಿಸಿದ್ದಾರೆ.

ಕಳೆದ ತಿಂಗಳಷ್ಟೇ (ಜೂನ್ 22) ಜೋಟಾ ಅವರ ವಿವಾಹ ನಡೆದಿತ್ತು. ಜೋಟಾ (ಪೂರ್ಣ ಹೆಸರು ಡಿಯಾಗೊ ಜೋಸ್ ಟೆಕ್ಸೀರಾ ಡ ಸಿಲ್ವಾ) ಮತ್ತು ಆ್ಯಂಡ್ರೆ ಸಿಲ್ವಾ ಇಬ್ಬರೂ ಪೋರ್ಚುಗಲ್ ತಂಡದ ಆಟಗಾರರು.

'ಬೆಂಕಿಯಿಂದ ಕರಕಲಾದ ಕಾರಿನ ಅವಶೇಷಗಳ ವಿಡಿಯೊ ಕ್ಲಿಪ್‌ಗಳನ್ನು ಸ್ಥಳೀಯ ಮಾಧ್ಯಮಗಳು ಪ್ರಕಟಿಸಿವೆ. ಪಕ್ಕದ ಕುರುಚಲು ಕಾಡಿಗೆ ಬೆಂಕಿ ವ್ಯಾಪಿಸಿತು. ಅಗ್ನಿಶಾಮಕ ವಾಹನಗಳು ಬೆಂಕಿ ನಿಯಂತ್ರಿಸಿದವು.

ಪೋರ್ಚುಗಲ್ ತಂಡದ ಸೂಪರ್‌ಸ್ಟಾರ್ ಕ್ರಿಸ್ಟಿಯಾನೊ ರೊನಾಲ್ಡೊ ಅವರು 'ಎಕ್ಸ್'ನಲ್ಲಿ ಸಂತಾಪ ಸೂಚಿಸಿದ್ದು, 'ನಿಮ್ಮ ಸಾವು ನಮ್ಮನ್ನು ಕಾಡಲಿದೆ' ಎಂದು ಬರೆದಿದ್ದಾರೆ.

ಕಳೆದ ತಿಂಗಳು ಪೋರ್ಚುಗಲ್‌ಗೆ ಆಡಿದ್ದ ಜೋಟಾ ಅವರು ತಂಡವು ನೇಷನ್ಸ್ ಲೀಗ್ ಗೆಲ್ಲಲು ನೆರವಾಗಿದ್ದರು.

'ಜೋಟಾ ಅವರ ದುರಂತ ಸಾವಿನಿಂದ ಆಘಾತವಾಗಿದೆ' ಎಂದು ಲಿವರ್‌ಪೂಲ್ ಕ್ಲಬ್ ತಿಳಿಸಿದೆ. ಅವರು 2020ರಲ್ಲಿ ವೋಲ್ವ್ಸ್ ಕ್ಲಬ್‌ನಿಂದ ಲಿವರ್‌ಪೂಲ್‌ಗೆ ಸೇರ್ಪಡೆಯಾಗಿದ್ದರು.

ಪೋರ್ಚುಗೀಸ್ ಫುಟ್‌ಬಾಲ್ ಫೆಡರೇಷನ್ ಕೂಡ ಹೇಳಿಕೆಯೊಂದನ್ನು ಬಿಡುಗಡೆ ಮಾಡಿ ಇಬ್ಬರು ಆಟಗಾರರ ಸಾವಿಗೆ ಆಘಾತ ಸೂಚಿಸಿದೆ. ಪೋರ್ಚುಗಲ್ ತಂಡದ ಪರ 50ಕ್ಕೂ ಹೆಚ್ಚು ಪಂದ್ಯಗಳನ್ನು ಅವರು ಆಡಿದ್ದಾರೆ. 'ಅವರನ್ನು ತಂಡದ ಸಹೋದ್ಯೋಗಿಗಳು, ಎದುರಾಳಿ ಆಟಗಾರರೂ ಗೌರವಿಸುತ್ತಿದ್ದರು. ನಾವು ಇಬ್ಬರು ಚಾಂಪಿಯನ್ನರನ್ನು ಕಳೆದುಕೊಂಡಿದ್ದೇವೆ' ಎಂದು ಫೆಡರೇಷನ್ ಅಧ್ಯಕ್ಷ ಪೆಡ್ರೊ ಪ್ರೊಯನ್ಕಾ ತಿಳಿಸಿದ್ದಾರೆ.

ಮಹಿಳಾ ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಪೋರ್ಚುಗಲ್–ಸ್ಪೇನ್ ನಡುವಣ ಗುರುವಾರ ನಡೆದ ಪಂದ್ಯಕ್ಕೆ ಅವರ ಗೌರವಾರ್ಥ ಒಂದು ನಿಮಿಷ ಮೊದಲು ಮೌನ ಆಚರಿಸಲಾಯಿತು.

'ಜೋಟಾ ಸಾವಿನ ಸುದ್ದಿಯಿಂದ ತೀವ್ರ ಆಘಾತಗೊಂಡಿದ್ದೇನೆ' ಎಂದು ಲಿವರ್‌ಪೂಲ್ ಮ್ಯಾನೇಜರ್ ಯಾರ್ಗನ್ ಕ್ಲಾಪ್ ಪ್ರತಿಕ್ರಿಯಿಸಿದ್ದಾರೆ.


ಪ್ರತೀತಿ ಬೋರ್ದೋಲಾಯಿ (ಬಲಗಡೆ) ಮತ್ತು ಆದ್ಯಾ ಗೌಡ

## ಚಿನ್ನ ಗೆದ್ದ ಪ್ರತೀತಿ, ಆದ್ಯಾಗೆ ಬೆಳ್ಳಿ

ಬೆಂಗಳೂರು: ಬೆಂಗಳೂರಿನ ಪ್ರತೀತಿ ಬೋರ್ದೋಲಾಯಿ ಮತ್ತು ಆದ್ಯಾ ಗೌಡ ಅವರು ಜಾರ್ಜಿಯಾದ ಬಟುಮಿ ನಗರದಲ್ಲಿ ನಡೆದ ಫಿಡೆ ವಿಶ್ವ ಕೆಡೆಟ್ಸ್ ಕಪ್ (12 ವರ್ಷದೊಳಗಿನವರ) ಚೆಸ್ ಚಾಂಪಿಯನ್‌ಷಿಪ್ ಬಾಲಕಿಯರ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಶಿಷ್ಯ ಬೆಮೆಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಪ್ರತೀತಿ ಮತ್ತು ಕೇಂಬ್ರಿಜ್ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿನಿ ಆದ್ಯಾ ತಮ್ಮ ತಮ್ಮ ಗುಂಪಿನಲ್ಲಿ ಅಗ್ರಸ್ಥಾನ ಪಡೆದರು. ಪ್ರತೀತಿ 'ಬಿ' ಗುಂಪಿನಲ್ಲಿ ಅಜೇಯ ಸಾಧನೆ ತೋರಿ 7 ಸುತ್ತುಗಳಿಂದ 6.5 ಪಾಯಿಂಟ್ಸ್ ಸಂಗ್ರಹಿಸಿದರೆ, ಆದ್ಯಾ 'ಎ' ಗುಂಪಿನಲ್ಲಿ 7 ಸುತ್ತುಗಳಿಂದ 6 ಪಾಯಿಂಟ್ಸ್ ಕಲೆಹಾಕಿದಳು. ಪ್ರಶಸ್ತಿಗಾಗಿ ಇವರಿಬ್ಬರ ನಡುವೆ ನಡೆದ ಅಂತಿಮ ಮುಖಾಮುಖಿಯಲ್ಲಿ ಪ್ರತೀತಿ ಎರಡೂ ಕ್ಲಾಸಿಕಲ್ ಪಂದ್ಯಗಳನ್ನು ಗೆದ್ದು ಚಾಂಪಿಯನ್ ಕಿರೀಟ ಧರಿಸಿದಳು.

ಇವರಿಬ್ಬರು ಹೋದ ವರ್ಷ ಹೈದರಾಬಾದಿನಲ್ಲಿ ನಡೆದ 11 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಮತ್ತು ಎರಡನೇ ರನ್ನರ್ ಅಪ್ ಆಗಿ, ವಿಶ್ವ ಕೆಡೆಟ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದರು.

### ಕರ್ನಾಟಕ ಒಲಿಂಪಿಕ್ ಸಂಸ್ಥೆ ವತಿಯಿಂದ ಜಾವೆಲಿನ್ ತಾರೆಗೆ ಗೌರವ

# ಬೆಂಗಳೂರಿನಲ್ಲಿ ಕಣಕ್ಕಿಳಿಯಲು ನೀರಜ್ ಉತ್ಸುಕ

ಪ್ರಜಾವಾಣಿ ವಾರ್ತೆ


ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಬೆಂಗಳೂರಿನ ಕೆಒಎ ಭವನದ ಹಾಲ್ ಆಫ್ ಫೇಮ್‌ನಲ್ಲಿ ತಮ್ಮ ಚಿತ್ರವನ್ನು ಅನಾವರಣಗೊಳಿಸಿದರು. ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಮಹಾ ಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಅವರೂ ಭಾಗವಹಿಸಿದ್ದರು.

ಬೆಂಗಳೂರು: ಎನ್‌ಸಿ ಕ್ಲಾಸಿಕ್ ಕೂಟದ ಮೂಲಕ ಮೊದಲ ಬಾರಿ ಉದ್ಯಾನ-ಗರಿಯಲ್ಲಿ ವಿಶ್ವ ಮಟ್ಟದ ಜಾವೆಲಿನ್ ಥ್ರೊ ಕೂಟಕ್ಕೆ ಕ್ಷಣಗಣನೆ ನಡೆದಿದೆ. ಜಾವೆಲಿನ್ ತಾರೆ ನೀರಜ್ ಚೋಪ್ರಾ ಸಹ ಬೆಂಗಳೂರಿನಲ್ಲಿ ಮೊದಲ ಬಾರಿ ಸ್ಪರ್ಧಾಕಣದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆ ಬಗ್ಗೆ ಖುಷಿಯಾಗಿಯೂ ಇದ್ದಾರೆ.

'ಮೊದಲ ಬಾರಿ ನಾನು ಬೆಂಗಳೂರಿನಲ್ಲಿ ಸ್ಪರ್ಧಿಸುತ್ತಿದ್ದೇನೆ. ತುಂಬಾ ಖುಷಿಯಾಗುತ್ತಿದೆ. ಅಲ್ಪಾವಧಿಯಲ್ಲೇ ಈ ಕೂಟಕ್ಕೆ ಸರ್ಕಾರ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಸಹಾಯಹಸ್ತ ಚಾಚಿದೆ. ಬೆಂಬಲಿಸಲು ತುಂಬಾ ಅಭಿಮಾನಿಗಳು ಬರುವ ವಿಶ್ವಾಸವಿದೆ' ಎಂದು ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದಿರುವ ಚೋಪ್ರಾ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶನಿವಾರ ಸಂಜೆ 7 ಗಂಟೆಗೆ ಕೂಟ ಆರಂಭವಾಗಲಿದೆ. ಐದು ಮಂದಿ ಭಾರತದ ಸ್ಪರ್ಧಿಗಳು ಸೇರಿ 12 ಮಂದಿ ಕಣಕ್ಕಿಳಿಯುತ್ತಿದ್ದಾರೆ.

'ಈ ಕೂಟಕ್ಕೆ ಅಥ್ಲೀಟುಗಳನ್ನು ಕರೆಸಲಾಗುತ್ತಿದೆ. ಸ್ಥಳೀಯ ಅಥ್ಲೀಟುಗಳೂ ಬರುತ್ತಿದ್ದಾರೆ. ಪೋಷಕರೂ ಮಕ್ಕಳನ್ನು ಕರೆತರಬೇಕು ಎಂಬುದು ನಮ್ಮ ಆಸೆ. ಮುಂದಿನ ದಿನಗಳಲ್ಲಿ ಜಾವೆಲಿನ್ ಜೊತೆಗೆ ಇತರ ಕೆಲವು ಸ್ಪರ್ಧೆಗಳನ್ನೂ ನಡೆಸುವ ಯೋಜನೆಯಿದೆ. ಇದರಿಂದ ದೇಶದ ಉದಯೋನ್ಮುಖ ಅಥ್ಲೀಟುಗಳಿಗೆ ಇಲ್ಲಿಯೇ ದೊಡ್ಡ ಮಟ್ಟದ ಕೂಟಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಲಿದೆ' ಎಂದರು.

'ಈ ಹಿಂದೆ ಹಲವು ಬಾರಿ ಇಲ್ಲಿಗೆ ಬಂದಿದ್ದೇನೆ. ಇಲ್ಲಿ ಕ್ರೀಡೆಯ ಬಗ್ಗೆ ಒಲವು ಇದೆ' ಎಂದರು. 'ಕ್ರೀಡಾಕೂಟ ಆಯೋಜಿಸುವುದು ಮತ್ತು ಭಾಗವಹಿಸುವುದು ಎರಡೂ ಕಷ್ಟದ ಕೆಲಸ. ಅಭ್ಯಾಸ ನಡೆಸಲು ಸಮಯ ಸಾಲುವುದಿಲ್ಲ. ಸ್ಪರ್ಧೆಗಳನ್ನು ಆಯೋಜಿಸುವ ಬಗ್ಗೆ ಅಥ್ಲೀಟುಗಳ ಜೊತೆ ಮಾತನಾಡಬೇಕಾಗುತ್ತದೆ. ಜೊತೆಜೊತೆಯಲ್ಲೇ ಕಣಕ್ಕೂ ಇಳಿಯಬೇಕಾಗುತ್ತದೆ' ಎಂದರು.

'ಇಲ್ಲಿ ಉತ್ತಮ ಸಾಧನೆ ತೋರಿ ವಿಶ್ವ ಚಾಂಪಿಯನ್‌ಷಿಪ್‌ಗೆ ಸಜ್ಜಾಗುವ ಗುರಿ ಹೊಂದಿದ್ದೇನೆ' ಎಂದರು. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಟೋಕಿಯೊದಲ್ಲಿ ಸೆಪ್ಟೆಂಬರ್ 13 ರಿಂದ 21ರವರೆಗೆ ನಿಗದಿಯಾಗಿದೆ.


**ಕೆಒಎ ಗೌರವ:** ಇದೇ ವೇಳೆ, ಗುರುವಾರ ಸಂಜೆ ಕೆಒಎ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೀರಜ್ ಚೋಪ್ರಾ ಅವರಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆ ವತಿಯಿಂದ ಸ್ಮರಣಿಕೆ ಮತ್ತು ₹5 ಲಕ್ಷ ನೀಡಲಾಯಿತು. ಕೆಒಎ ಅಧ್ಯಕ್ಷ ಕೆ.ಗೋವಿಂದ ರಾಜ್, ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕೆಒಎ ಮಹಾ ಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಹಾಜರಿದ್ದರು.

**ಮುಖ್ಯಮಂತ್ರಿ ಗೌರವ:** ಚೋಪ್ರಾ ಬೆಳಿಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೌಹಾರ್ದ ಭೇಟಿ ಮಾಡಿದರು. ಈ ವೇಳೆ ಚೋಪ್ರಾ ಅವರಿಗೆ ಸಿ.ಎಂ ಅವರು ಮೈಸೂರು ಪೇಟಾ ತೊಡಿಸಿ ಸನ್ಮಾನಿಸಿದರು.

**ಟಿಕೆಟ್ ಎಲ್ಲಿ ಲಭ್ಯ?:** ಜಾವೆಲಿನ್ ಥ್ರೋ ಸ್ಪರ್ಧೆಯನ್ನು ವೀಕ್ಷಿಸಲು ₹299 ರಿಂದ ₹9,999 ವರೆಗೆ ಟಿಕೆಟ್ ದರ ನಿಗದಿ ಮಾಡಲಾಗಿದೆ. ಟಿಕೆಟ್ ಪಡೆಯಲು ಲಿಂಕ್: https://www.district.in/events/neeraj-chopra-classic-2025-may24-2025-buy-tickets.



# ಚಂದನವನದ ತಾರೆಗಳ ಹೊಳಪು





ಸಿನಿ ಸಮ್ಮಾನದ ಸಮಾರಂಭದಲ್ಲಿ ನಟಿ ರಾಧಿಕಾ ನಾರಾಯಣ್, ಖುಷಿ ರವಿ, ಚಂದನ ಅನಂತಕೃಷ್ಣ ಪ್ರಸ್ತುತಪಡಿಸಿದ ನೃತ್ಯಗಳ ಝಲಕ್

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿ ಕಳೆದ ಜೂನ್ 27ರ ಶುಕ್ರವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ವೈಟ್‌ಪೆಟಲ್ಸ್ ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಯಿತು. ಇಲ್ಲಿ ಚಂದನವನದ ಪ್ರತಿಭಾವಂತ ಕಲಾವಿದರು, ತಂತ್ರಜ್ಞರು ಪ್ರಶಸ್ತಿ ಪಡೆದು ಸಂಭ್ರಮಿಸಿದರು.

ಅದ್ದೂರಿಯಾಗಿ ಪೃಥ್ವಿ ಅಂಬಾರ್ ಪ್ರವೇಶ



ಇಳಿ ಸಂಜೆಯ ಹೊತ್ತು. ಶಾಪಗ್ರಸ್ತ ಗಂಧರ್ವರೇನೋ ಎಂಬಂತೆ ಕಟ್ಟುಮಸ್ತಾದ ಯುವಕರ ತಂಡವೊಂದು ಕಪ್ಪು ಉಡುಗೆಯಲ್ಲಿ ಅಲ್ಲಲ್ಲಿ ಕೈಕಟ್ಟಿ ನಿಂತಿದ್ದರು. ಮತ್ಸ್ಯಕನ್ಯೆಯರಂತಹ ಮೈಕಟ್ಟಿನ ಅಪ್ಸರೆಯರು ಅಲ್ಲಲ್ಲಿ ತೇಲಾಡುವಂತೆ ನಡೆಯುತ್ತಿದ್ದರು. ಅವರ ವಸ್ತ್ರವೈವಿಧ್ಯದ ಮಿಣಮಿಣ ಮಿಂಚುವ ಚುಕ್ಕಿಗಳು, ಬೆಳಕಿಗೆ ಕಣ್ಹೊಡೆದು ನಗುತ್ತಿದ್ದವು. ನಟ–ನಟಿಯರು ಕೆಂಪುಹಾಸಿನ ಮೇಲೆ ಪಕಳೆಗಳ ಮೇಲೆ ಪಾದ ಇಟ್ಟವರಂತೆ ಸಭಾಂಗಣ ಪ್ರವೇಶಿಸಿದಾಗ, ಕಣ್ಣುಕೋರೈಸುವ ಬೆಳಕು. ಅವರ ನಡಿಗೆ, ಅವರ ನಿಲುವು, ಅವರ ನೋಟ ಎಲ್ಲವನ್ನೂ ಸೆರೆಹಿಡಿಯುವ ಧಾವಂತ ಅಲ್ಲಿರುವ ಮೂರನೆಯ ಕಣ್ಣ ಕ್ಯಾಮೆರಾಗಳಿಗೆ. ನೂರಾರು ಕಣ್ಣು ಅವರ ಮೇಲೆ.

ಸಮಾರಂಭ ಆರಂಭವಾದಾಗ ಅನುಶ್ರೀ, ನಕ್ಷತ್ರ ತುಂಬಿದ ರಾತ್ರಿಯನ್ನೇ ಉಟ್ಟುಬಂದಂಥ ಉಡುಗೆಯಲ್ಲಿದ್ದರು. ವಜ್ರಾಭರಣಗಳಿಗೆ ಮೆರಗು ನೀಡುವ ಪಚ್ಚೆಯ ಪದಕ ಅವರ ನಗೆಮಿಂಚಿಗೆ ಸವಾಲೊಡ್ಡುತ್ತಿತ್ತು. ಸದಾ ವಿಶೇಷ ಎಂಟ್ರಿ ನೀಡುವ ನಿರೂಪಕ ಅಕುಲ್ ಬಾಲಾಜಿ, ಈ ಸಲವೂ ವೀಕ್ಷಕರಿಗೆ ನಿರಾಸೆ ಮಾಡಲಿಲ್ಲ. ಪಲ್ಲಕ್ಕಿಯಲ್ಲಿ ಬಂದು ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದರು.

ಕೆಂಪುಡುಗೆಯಲ್ಲಿ ಬಂದ ಪ್ರಿಯಾಂಕಾ ಉಪೇಂದ್ರ, ಹೊನ್ನ ಬಣ್ಣದ ಸೀರೆಯಲ್ಲಿ ಬಂದ ತಾರಾ ಅನೂರಾಧಾ, ನಕ್ಷತ್ರಗಳನ್ನೇ ಕಣ್ಣಾಗಿಸಿಕೊಂಡಿರುವ ಮಾಳವಿಕಾ, ಹಸಿರು ಷರ್ಟಿನಲ್ಲಿ ಬಂದ ಕರ್ನಾಟಕದ ಮನೆಮಗನಂತಿರುವ, ಕನ್ನಡಿಗರ ಶಿವಣ್ಣ, ಸೂಟುಬೂಟುಗಳಲ್ಲಿ ಠಾಕು ಠೀಕಾಗಿ ಬಂದ ರಮೇಶ ಅರವಿಂದ, ಆಕಾಶನೀಲಿ ಜುಬ್ಬಾದಲ್ಲಿ ಬಂದ ಅಜಾನುಬಾಹುವಿನಂತೆ ಕಾಣುತ್ತಿದ್ದ ಮುಖ್ಯಮಂತ್ರಿ ಚಂದ್ರು, ಪಾಠ ಮಾಡಲು ಈಗಲೂ ರೆಡಿ ಎಂದು ಬಂದ ಪ್ರೀತಿಯ ಮೇಷ್ಟ್ರು ನಾಗತಿಹಳ್ಳಿ ಚಂದ್ರಶೇಖರ, ಕಪ್ಪು ಬಣ್ಣದ ತುಂಬುತೋಳಿನ ಟೀಷರ್ಟಿನಲ್ಲಿ ಕಂಗೊಳಿಸುತ್ತಿದ್ದ ಪ್ರಣಯರಾಜ ಶ್ರೀನಾಥ, ಕಪ್ಪಂಗಿ, ವಿಶೇಷ ವಿನ್ಯಾಸದ ಬೂಟ್ಸುಗಳನ್ನು ತೊಟ್ಟು, ರಾತ್ರಿಯ ಝಗಮಗಿಸುವ ಬೆಳಕಿಗೆ ಅಡ್ಡಲಾಗಿ ತಂಪುಕನ್ನಡಕ ಧರಿಸಿ ಬಂದ ರವಿಚಂದ್ರನ್, ರೇಷ್ಮೆಯ ಕಫ್ತಾನಿನಲ್ಲಿ ನಗುತ್ತಿದ್ದ ಮಾಲಾಶ್ರೀ, ಬಿಳಿಯಂಗಿ ನೀಲಿ ಜೀನ್ಸು ತೊಟ್ಟು ಸಹಜವಾಗಿ ಬಂದ ವಿ.ಮನೋಹರ್, ಕೆಂಪಂಗಿಯಲ್ಲಿ ವಿ.ನಾಗೇಂದ್ರಪ್ರಸಾದ್ ಎಲ್ಲರೂ ತಮ್ಮ ಮನೆಯ ಸಂಭ್ರಮವೇನೋ ಎಂಬಂತೆ, ಸಭಾಂಗಣದಲ್ಲೆಲ್ಲ ನಗು ಚೆಲ್ಲುತ್ತ, ಕಣ್ಣರಳಿಸುತ್ತ, ಕೈಬೀಸುತ್ತ, ಗಾಳಿಯಲ್ಲೆಲ್ಲ ಪ್ರೀತಿ ತೂರಿದರು.

ಅಗೋ.. ಅಲ್ಲಿ.. ಸಾಯಿಕುಮಾರ್.. ಅಲ್ಲಿ ವಿನಯ್ ರಾಘವೇಂದ್ರ, ಯುವ ರಾಜ್‌ಕುಮಾರ್. ಅಲ್ನೋಡಿ ಅವರು ಬಂದ್ರು, ಇಲ್ನೋಡಿ ಅನುಪ್ರಭಾಕರ್ ಬಂದ್ರು.. ಓಹ್... ಅವರ ಉಡುಗೆ ನೋಡಿ.. ಆಹ್ ರಂಗಾಯಣ ರಘು ಬಂದ್ರು ಅವರ ಮೀಸೆ ಎಷ್ಟು ಚಂದ... ಅಲ್ಲಿ.. ಜನರ ನಡುವೆ.. ಕೊನೇಗೆ ಕಿಶೋರ್ ಕಾಣ್ತಿದಾರೆ ನೋಡು... ಏಯ್.. ಅವರು ಯಾಕೆ ಅಲ್ಲಿ ಕೂರ್ತಾರೆ... ಬೆಟ್ ಬೇಕಾದ್ರೆ, ಅಲ್ಲಿರೋರು ಕಿಶೋರ್.. ಹೀಗೆ ಪರಸ್ಪರ ಪಂದ್ಯ ಕಟ್ಟುತ್ತ, ತಮ್ಮ ಇಷ್ಟದ ನಟ–ನಟಿಯರನ್ನು ಕಣ್ತುಂಬಿಸಿಕೊಳ್ಳುತ್ತಿದ್ದರು. ಚೂರು, ಈ ಕಡೆ ತಲೆ ಮಾಡ್ಕೊ.. ತುಸು ಕುರ್ಚಿ ತುದಿಗೆ ಬಂದು ನೋಡು, ಕತ್ತು ಜಿರಾಫ್ ಮಾಡಿಕೊಂಡು, ವೇದಿಕೆಯ ಅಕ್ಕಪಕ್ಕದಲ್ಲಿರುವ ಟೀವಿ ಪರದೆಯಲ್ಲೊಮ್ಮೆ, ವೇದಿಕೆಯನ್ನೊಮ್ಮೆ ನೋಡಿ ಖುಷಿ ಪಡುತ್ತಿದ್ದ ಪ್ರೇಕ್ಷಕರು.

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ–2025’ ಮೂರನೆಯ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭದ ಝಲಕುಗಳಿವು.

ಇಳಿಸಂಜೆಯಲ್ಲಿ ನಟಿ ಚಂದನ ಅನಂತಕೃಷ್ಣ ಮತ್ತು ಖುಷಿ ರವಿ ಅವರ ಫ್ಯೂಷನ್ ನೃತ್ಯ, ಪೃಥ್ವಿ ಅಂಬಾರ್ ಅವರ ‘ಜಾಕಿ ಜಾಕಿ’ ನೃತ್ಯಗಳು ಚಪ್ಪಾಳೆ, ಸಿಳ್ಳೆಗಳ ನಡುವೆ ಮನರಂಜನೆ ನೀಡಿದವು.

ಪ್ರಶಸ್ತಿ ಪ್ರದಾನಕ್ಕೆ ಮೊದಲು ನಾಮನಿರ್ದೇಶಿತರ ಪಟ್ಟಿ ಬಿಡುಗಡೆಯಾದಂತೆ, ಪರದೆಯ ಮೇಲೆ ಆಯಾ ಸಿನಿಮಾಗಳ ತುಣುಕು ಬಂದಂತೆ, ಅಭಿಮಾನಿಗಳು ಸಿಳ್ಳೆ ಹಾಕುತ್ತಿದ್ದರು. ತಮ್ಮ ಬೆಂಬಲ ತೋರಿಸುತ್ತಿದ್ದರು. ತೀರ್ಪುಗಾರರೊಂದಿಗೆ ‘ಪ್ರಜಾವಾಣಿ’ಯ ಓದುಗರೂ ತೀರ್ಪು ನೀಡಿ, ಜನಮೆಚ್ಚುಗೆಯನ್ನು ಪಡೆದ ವಿಜೇತರ ಘೋಷಣೆ ಆದಾಗ ಈ ಹರ್ಷೋದ್ಗಾರ ಸೂರು ಮುಟ್ಟುತ್ತಿತ್ತು.

ನಟ ಶಿವರಾಜ್‌ಕುಮಾರ್ ಅವರು ವೇದಿಕೆ ಹತ್ತಿದಾಗ ಎಲ್ಲರಿಗೂ ಭಾವುಕ ಕ್ಷಣ. ನೃತ್ಯಕ್ಕಾಗಿ ಅಪ್ಪುನನ್ನು ನೆನಪಿಸಿಕೊಂಡಾಗ ಕೇಕೆಗಳು, ಸಿಳ್ಳೆ ಚಪ್ಪಾಳೆಗಳು ಮಾರ್ದನಿಸತೊಡಗಿದ್ದವು.

ದುನಿಯಾ ವಿಜಯ್ ತಮ್ಮ ಸಂಭಾಷಣೆಯನ್ನು ಹೇಳಿದಾಗಲೂ, ತಮ್ಮ ನಡುವಿನ ವ್ಯಕ್ತಿಯೊಬ್ಬ ಹೀರೊ ಆಗಿ ಬೆಳೆದಿದ್ದನ್ನು ಮೆಚ್ಚುವಂತಹ ಕರತಾಡನ.

ಮಾಲಾಶ್ರೀ, ರವಿಚಂದ್ರನ್ ಜೊತೆಗೆ ಹೆಜ್ಜೆ ಹಾಕಿದರೆ ಕಾಲಚಕ್ರ ಮೂರು ದಶಕ ಹಿಂದೆ ಓಡಿದ ಅನುಭವ.

‘ಹಿತ್ತಲಕ ಕರಿಬ್ಯಾಡ ಮಾವ’ ಅಂತ ಹಾಡು ಹಾಡುತ್ತಾ ಅತ್ಯುತ್ತಮ ಗಾಯಕಿ ಪ್ರಶಸ್ತಿ ಪಡೆದ ಶೃತಿ ಪ್ರಹ್ಲಾದ ಪ್ರಶಸ್ತಿಯನ್ನು ಅಪ್ಪ–ಅಮ್ಮನಿಗೆ ಸಮರ್ಪಿಸಿದರು. ಅವರೊಟ್ಟಿಗೆ ಬಂದಿದ್ದ ಅಮ್ಮ ಸಾಮಾನ್ಯರ ನಡುವೆ ಕುಳಿತು ತಮ್ಮ ಕಣ್ಣಪಸೆಯನ್ನು ಒರೆಸಿಕೊಂಡರು.

ಈ ಎಲ್ಲ ಸಂಭ್ರಮಗಳಿಗೆ ಕಳಶವಿಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸಿನಿಮಾದೊಂದಿಗಿನ ತಮ್ಮ ನಂಟನ್ನು, ತಮ್ಮ ಯೌವ್ವನದ ದಿನಗಳನ್ನು ನೆನಪಿಸಿಕೊಂಡರು.

‘ಇವರು ಬಣ್ಣ ಹಚ್ಚಿದಾಗಷ್ಟೇ ನಟಿಸುತ್ತಾರೆ, ನಾವು ದಿನಾಲೂ ಅದನ್ನೇ ಮಾಡುತ್ತೇವೆ’ ಎಂದು ಡಿ.ಕೆ.ಶಿವಕುಮಾರ್ ಅವರು ತಮ್ಮ ಮಾತಿನ ಕೊನೆಗೆ ಹೇಳಿದಾಗ ಸಭಾಂಗಣ ಜೋರಾದ ಚಪ್ಪಾಳೆಗೆ ಸಾಕ್ಷಿಯಾಯಿತು. ❖

## ರಾಜಕುಮಾರ್ ಅಂದ್ರೆ ಮುತ್ತು ಡಾನ್ಸ್ ಅಂದ್ರೆ ಅಪ್ಪು

‘ನಡೆದಲ್ಲಿ ನೃತ್ಯ, ನಿಂತಲ್ಲಿ ಬಳಕು. ಅಪ್ಪುನ ಛವಿ ಹಂಗಿತ್ತು. ನಾನು ಸದಾ ಅವನನ್ನು ಸೋಜಿಗದಿಂದಲೇ ನೋಡುತ್ತಿದ್ದೆ. ಕೈ, ಮೈ ಅವ ಬಳ್ಳಿಯಂತೆ ತೂಗುತ್ತಿದ್ದ. ಡಾನ್ಸ್ ಅಂದ್ರೆ ನನಗೆ ಅಪ್ಪೂನೆ..’ ನೆನಪಿನಂಗಳದಲ್ಲಿ ಮೂಡುತ್ತಿದ್ದ ಕಣ್ಪಸೆಯನ್ನು ಅಭಿಮಾನದ ನೋಟದಿಂದಲೇ ಮುಚ್ಚಿಟ್ಟುಕೊಂಡವರು ಶಿವಣ್ಣ.

ಅಭಿಮಾನಿಗಳಿಗೇ ತಾವು ಅಭಿಮಾನಿ ಎನ್ನುತ್ತ, ಸಿನಿಮಾರಂಗದ ಎಲ್ಲರ ಪ್ರೋತ್ಸಾಹ ಮತ್ತು ಪ್ರೀತಿ ಅದ್ಹೇಗೆ ಅವರಿಗೆ ಶ್ರೀರಕ್ಷೆಯಾಯಿತು ಎಂದು ಋಣಿಯಾಗುತ್ತ ಮಾತಾಡಿದಾಗ, ವೇದಿಕೆಯ ಮುಂದೆ ಕುಳಿತಿದ್ದ ಪತ್ನಿ ಗೀತಾ ಶಿವರಾಜ್‌ಕುಮಾರ್ ಗದ್ಗದಿತರಾಗುತ್ತಿದ್ದರು. ಶಿವಣ್ಣ ತಮ್ಮ ಅನಾರೋಗ್ಯದ ದಿನಗಳನ್ನು ನೆನಪಿಸುವಾಗಲೂ ಗೀತಾ ಅವರು ಭಾವುಕರಾಗಿದ್ದರು. ಮತ್ತೆ ಸಭೆ ತಿಳಿಯಾಗಿದ್ದು ಅಪ್ಪುವಿನ ನೆನಪಿನಿಂದ. ‘ಅಪ್ಪಾಜಿ, ರಾಜಕುಮಾರ್ ಅಂದ್ರೆ’ ಅಂತ ಅನುಶ್ರೀ ಪ್ರಶ್ನೆ ಕೇಳಿದಾಗ, ಮುತ್ತು ಎಂದು ಶಿವಣ್ಣ ಉತ್ತರಿಸಿದರು.



# ಸರ್ವಸಜ್ಜಿತ ನೆಲೆ ಕೈಗೆಟುಕುವ ಬೆಲೆ

**ಬಣ್ಣಬಣ್ಣದ** ಚಿತ್ತಾರಗಳನ್ನು ಮೂಡಿಸುತ್ತಿದ್ದ ವೇದಿಕೆ, ರಂಗುರಂಗಿನ ಉಡುಪು ತೊಟ್ಟು ಯಕ್ಷಲೋಕವನ್ನೇ ಧರೆಗಿಳಿಸಿದಂತೆ ಕಂಗೊಳಿಸುತ್ತಿದ್ದ ಬಣ್ಣದ ಲೋಕದ ಮಂದಿ.. ಬೆಂಗಳೂರಿನ ಅರಮನೆ ಮೈದಾನದಲ್ಲೊಂದು ವರ್ಣರಂಜಿತ ಕಾರ್ಯಕ್ರಮ.. ಅದು ‘ಪ್ರಜಾವಾಣಿ’ ಸಿನಿ ಸಮ್ಮಾನ ಸಮಾರಂಭ. ಕನ್ನಡ ಚಿತ್ರರಂಗದ ಹಲವು ತಲೆಮಾರುಗಳ ನಟ, ನಟಿ, ನಿರ್ದೇಶಕ, ನಿರ್ಮಾಪಕರು, ಚಿತ್ರರಂಗಕ್ಕೆ ಸಂಬಂಧಿಸಿದ ಬಹುತೇಕ ಎಲ್ಲ ವಿಭಾಗಗಳ ಪರಿಣತರೂ ಅಲ್ಲಿದ್ದರು. ಅಷ್ಟೇ ಮುಖ್ಯವಾಗಿ, ಅವರನ್ನು ನೋಡಲು ಜನರೂ ನೆರೆದಿದ್ದರು. ವೈವಿಧ್ಯಮಯ ಮಾತು–ಕಥೆ, ಪ್ರದರ್ಶನಗಳಿಂದ ನೆರೆದಿದ್ದವರ ಮನಸೂರೆಗೊಂಡ ಆ ಅದ್ದೂರಿ ಸಮಾರಂಭದಲ್ಲಿ ‘ಕಾಸಾಗ್ರಾಂಡ್’ ಒಂದು ಮುಖ್ಯ ಆಕರ್ಷಣೆಯಾಗಿತ್ತು.

ಕಾಸಾಗ್ರಾಂಡ್‌ನ ವಸತಿ ಯೋಜನೆಗಳ ಅಚ್ಚುಕಟ್ಟು, ವಿನ್ಯಾಸ, ನಾವೀನ್ಯ ಎಲ್ಲವೂ ‘ಪ್ರಜಾವಾಣಿ ಸಿನಿ ಸಮ್ಮಾನ’ ಕಾರ್ಯಕ್ರಮದಲ್ಲಿಯೂ ಪ್ರತಿಬಿಂಬಿತವಾದವು; ಕಾರ್ಯಕ್ರಮಕ್ಕೆ ಆಗಮಿಸಿದವರ ಕಣ್ಮನಗಳನ್ನು ಸೆಳೆದವು. ಪರದೆಗಳ ಮೇಲೆ ಕಂಗೊಳಿಸುತ್ತಿದ್ದ ಕಾಸಾಗ್ರಾಂಡ್ ವಿಲ್ಲಾ, ವಸತಿ ಸಮುಚ್ಚಯದ ಚಿತ್ರಗಳನ್ನು ಕಣ್ತುಂಬಿಕೊಂಡ ಜನ, ಅವುಗಳ ಬಳಿ ನಿಂತು ಫೋಟೊ ತೆಗೆಸಿಕೊಂಡು ಆನಂದಿಸಿದರು. ಸಮಾರಂಭಕ್ಕೆ ಆಗಮಿಸಿದ ಗಣ್ಯರು, ಸಿನಿ ತಾರೆಯರು ಕೂಡ ‘ಕಾಸಾಗ್ರಾಂಡ್’ ಬಗ್ಗೆ ಮನದುಂಬಿ ಮಾತನಾಡಿದರು. ಈ ವೇಳೆ ಅಲ್ಲಿ ಹಾಜರಿದ್ದ ‘ಕಾಸಾಗ್ರಾಂಡ್’ ಪ್ರತಿನಿಧಿಗಳು ಅದನ್ನು ಕಂಡು, ಕೇಳಿ ಖುಷಿ ಪಟ್ಟರು.

**ಕೈಗೆಟುಕುವ ಬೆಲೆ:** ‘ಕಾಸಾಗ್ರಾಂಡ್’ ದಕ್ಷಿಣ ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಕಂಪನಿ. ಚೆನ್ನೈ ಮೂಲದ ಈ ಕಂಪನಿ ಇಂದು ದೇಶದಾದ್ಯಂತ ವಿಸ್ತರಿಸಿದ್ದು, ಬೆಂಗಳೂರು, ಹೈದರಾಬಾದ್, ಕೊಯಮತ್ತೂರು ಮತ್ತು ಪುಣೆಯಲ್ಲಿ ಹಲವು ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಅಷ್ಟೇ ಅಲ್ಲದೇ, ಐಷಾರಾಮಿ ಬಂಗಲೆಗಳಿಗೆ ಹೆಸರಾದ ದುಬೈನಲ್ಲಿಯೂ ಯೋಜನೆಯೊಂದನ್ನು ಕೈಗೆತ್ತಿಕೊಳ್ಳುವ ಮೂಲಕ ಭಾರತದ ಹೊರಗೂ ಅಡಿಯಿಟ್ಟಿದೆ; ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ತನ್ನ ಛಾಪು ಮೂಡಿಸುವ ಪ್ರಯತ್ನ ನಡೆಸುತ್ತಿದೆ.

2003ರಲ್ಲಿ ಚೆನ್ನೈನಲ್ಲಿ ಆರಂಭವಾದ ಈ ಕಂಪನಿ, ಇಂದು ದೇಶ–ವಿದೇಶಗಳಲ್ಲಿ ಯಶಸ್ವಿಯಾಗಿ ತನ್ನ ಯೋಜನೆಗಳನ್ನು ವಿಸ್ತರಿಸುತ್ತಿರುವುದಕ್ಕೆ ಕಾರಣ ಗ್ರಾಹಕರ ಬಗೆಗಿನ ಅದರ ಬದ್ಧತೆ. ಒಂದು ಕುಟುಂಬ ಸುಖ ಸಂತೃಪ್ತಿಯಿಂದ ಬಾಳಲು ಅಗತ್ಯವಾದ ಸೌಲಭ್ಯಗಳೆಲ್ಲವನ್ನೂ ಒಳಗೊಂಡ ಫ್ಲ್ಯಾಟ್‌ಗಳಿಂದ ಹಿಡಿದು ಐಷಾರಾಮಿ ಅನುಕೂಲ ಇರುವ ವಿಲ್ಲಾಗಳವರೆಗೆ ಭಾರತದ ಹಲವು ನಗರಗಳಲ್ಲಿ ಸಾವಿರಾರು ಮನೆಗಳನ್ನು ನಿರ್ಮಿಸಿರುವ ಕಂಪನಿಯು, ಲಕ್ಷಾಂತರ ಗ್ರಾಹಕರ ಮನ ಗೆದ್ದಿದೆ. ಕಂಪನಿಯು ಇತ್ತೀಚೆಗೆ ವ್ಯಾಪಾರಿ ಸಮುಚ್ಚಯ ಮತ್ತು ಕೈಗಾರಿಕಾ ದಾಸ್ತಾನುಗಳ ನಿರ್ಮಾಣ ಕ್ಷೇತ್ರಕ್ಕೂ ಅಡಿ ಇಟ್ಟಿದೆ. ❖



‘ಕಾಸಾಗ್ರಾಂಡ್’ ಪ್ರಸ್ತುತ ಜನಮೆಚ್ಚಿದ ನಟ ಪ್ರಶಸ್ತಿಯನ್ನು ಪಡೆದ ನಟ ರಂಗಾಯಣ ರಘು ಅವರನ್ನು ‘ಕಾಸಾಗ್ರಾಂಡ್’ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥರಾದ ಲಿಪಿ ಜಾಬ್ಸನ್ ಅಭಿನಂದಿಸಿದರು. ನಟ ಶಿವರಾಜ್‌ಕುಮಾರ್ ಅವರೂ ಇದ್ದರು.



## ‘ವಿಶ್ವಾಸಾರ್ಹ ಪತ್ರಿಕೆಯೊಂದಿಗೆ ಹೆಮ್ಮೆಯ ಸಹಭಾಗಿತ್ವ’

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮವು ಅತ್ಯಂತ ಅಚ್ಚುಕಟ್ಟಾಗಿತ್ತು, ಅದ್ದೂರಿಯಾಗಿತ್ತು. ಅದರಲ್ಲಿ ಭಾಗಿಯಾಗಿದ್ದು ನಮಗೆ ಅತ್ಯಂತ ಹರ್ಷದಾಯಕ ಅನುಭವವಾಗಿತ್ತು’ ಎಂದು ಅಭಿಪ್ರಾಯ ಹಂಚಿಕೊಂಡರು ‘ಕಾಸಾಗ್ರಾಂಡ್’ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥರಾದ ಲಿಪಿ ಜಾಬ್ಸನ್.

‘ಪ್ರಜಾವಾಣಿ ಕನ್ನಡಿಗರ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಯಾಗಿದೆ. ಏಳೂಮುಕ್ಕಾಲು ದಶಕಗಳಿಂದಲೂ ನಾಡಿನ ಜನರ ಪ್ರೀತಿ ವಿಶ್ವಾಸಗಳನ್ನು ಉಳಿಸಿಕೊಂಡು ಬಂದಿದೆ. ಇಂತಹ ಪತ್ರಿಕೆಯು ನಡೆಸುವ ಸಿನಿ ಸಮ್ಮಾನ ಕಾರ್ಯಕ್ರಮವನ್ನು ಪ್ರಸ್ತುತಪಡಿಸುತ್ತಿರುವುದು ನಮಗೆ ಹೆಮ್ಮೆಯೆನಿಸುತ್ತದೆ’ ಎಂದರು.

‘ಪತ್ರಿಕೆಯೊಂದಿಗೆ ಇದು ನಮ್ಮ ಎರಡನೇ ವರ್ಷದ ಸಹಭಾಗಿತ್ವ. ಇದು ಅತ್ಯಂತ ಉಪಯುಕ್ತವಾದ ಸಹಭಾಗಿತ್ವವಾಗಿದೆ. ‘ಪ್ರಜಾವಾಣಿ’ ಸಮಾರಂಭಗಳನ್ನು ನಡೆಸುವ ರೀತಿಯ ಬಗ್ಗೆ ನಮಗೆ ಅತ್ಯಂತ ಹೆಮ್ಮೆಯಿದೆ. ಪತ್ರಿಕೆಯು ತನ್ನ ಓದುಗರಿಗೆ ನೀಡಿದ ಭರವಸೆಯನ್ನು, ಜನರ ವಿಶ್ವಾಸವನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ. ಇದು ನಮಗೆ ಮಾದರಿಯಾಗಿದೆ. ಮುಂದೆಯೂ ನಾವು ‘ಪ್ರಜಾವಾಣಿ’ಯ ಜತೆ ಸಹಭಾಗಿತ್ವ ಮುಂದುವರಿಸುತ್ತೇವೆ’ ಎಂದು ನುಡಿದರು.




ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ‘ಕಾಸಾಗ್ರಾಂಡ್’ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥರಾದ ಲಿಪಿ ಜಾಬ್ಸನ್

ಕಾಸಾಗ್ರಾಂಡ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ನಟಿ ಪೂಜಾ ಗಾಂಧಿ




ಕಾಸಾಗ್ರಾಂಡ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ನಟ ಕಿಶೋರ್

# ತಾರೆಗಳ ತೋಟದ ತಂಪು ತಾರೆ



## ಪ್ರೇಮಕಥೆಗಳಲ್ಲಿ ನಟಿಸಿ 'ಪ್ರಣಯರಾಜ'ರಾದ ಶ್ರೀನಾಥ್

'ಪ್ರೇಮಕಥೆಗಳನ್ನು ಹೊಂದಿರುವ ಸಿನಿಮಾಗಳಲ್ಲಿಯೇ ಹೆಚ್ಚು ನಟಿಸಿರುವ ಕಾರಣಕ್ಕೆ ಶ್ರೀನಾಥ್ ಅವರಿಗೆ 'ಪ್ರಣಯರಾಜ' ಎಂಬ ಬಿರುದು ಬಂದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದಲ್ಲಿ ಶ್ರೀನಾಥ್ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, 'ಇಡೀ ಜೀವನವನ್ನು ಕಲಾಸೇವೆಯಲ್ಲಿಯೇ ಕಳೆದಿರುವ ಶ್ರೀನಾಥ್ ಅವರನ್ನು ಜೀವಮಾನದ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸರಿಯಾದ ವ್ಯಕ್ತಿಯನ್ನು ಈ ಪ್ರಶಸ್ತಿಗೆ 'ಪ್ರಜಾವಾಣಿ' ಆಯ್ಕೆ ಮಾಡಿದೆ' ಎಂದು ಶ್ಲಾಘಿಸಿದರು.

'ಸಿನಿಮಾ ಅಂದರೆ ಮನರಂಜನೆ ಒಂದೇ ಅಲ್ಲ. ಕನ್ನಡದ ಕಂಪು, ನಮ್ಮ ಸಂಸ್ಕೃತಿ, ಕನ್ನಡ ಭಾಷೆಯ ವೈಭವವನ್ನು ಎತ್ತಿ ಹಿಡಿಯುವ ಕೆಲಸ. ಇದನ್ನು ಶ್ರೀನಾಥ್ ಆಸಕ್ತಿಯಿಂದ ಮಾಡಿಕೊಂಡು ಬಂದಿದ್ದಾರೆ. ಸಿನಿಮಾರಂಗಕ್ಕೆ ಒಮ್ಮೆ ಬಂದ ಮೇಲೆ ಬಿಡಲಾಗುವುದಿಲ್ಲ. ನೀವು ಶಕ್ತಿ ಇರುವವರೆಗೆ ನಟಿಸುತ್ತಲೇ ಇರಿ' ಎಂದು ಹಾರೈಸಿದರು.


'ನಾನು ವಿದ್ಯಾರ್ಥಿಯಾಗಿದ್ದಾಗ, ವಕೀಲನಾಗಿದ್ದಾಗ ಬಹಳ ಸಿನಿಮಾಗಳನ್ನು ನೋಡಿದ್ದೇನೆ. ರಾಜಕುಮಾರ್ ಅವರ ಚಿತ್ರಗಳು, ಶ್ರೀನಾಥ್ ಅವರ ಚಿತ್ರಗಳನ್ನು ನೋಡುತ್ತಿದ್ದೆ. ಅದರಲ್ಲಿ ಮಂಜುಳಾ ಮತ್ತು ಶ್ರೀನಾಥ್ ಜೋಡಿಯ ಚಿತ್ರಗಳೇ ಹೆಚ್ಚು ಇದ್ದವು' ಎಂದು ನೆನಪು ಮಾಡಿಕೊಂಡರು.

'ಕಲಾವಿದರಿಗೆ ಕಲಾಸೇವೆ ಮುಖ್ಯ. ರಾಜಕೀಯದಲ್ಲಿ ಇರುವವರಿಗೆ ಜನಸೇವೆಯೇ ಮುಖ್ಯ. ಶ್ರೀನಾಥ್ ಅವರು ಒಂದು ಅವಧಿಗೆ ವಿಧಾನಪರಿಷತ್ ಸದಸ್ಯರಾಗಿ ಜನಪರ ಧೋರಣೆ ಇಟ್ಟುಕೊಂಡು ಕೆಲಸ ಮಾಡಿದ್ದರು' ಎಂದು ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಶ್ರೀನಾಥ್

**'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ–2025'ರ ಸಂಭ್ರಮದಲ್ಲಿ ಜೀವಮಾನ ಸಾಧನೆಯ ಪುರಸ್ಕಾರ ಪಡೆದಿರುವ ಶ್ರೀನಾಥ್ ಅವರ ಜೀವನ–ಸಾಧನೆ, ಕನ್ನಡ ಚಿತ್ರರಂಗದ ಮೋಹಕ ಅಧ್ಯಾಯಗಳಲ್ಲೊಂದು.**



ಶ್ರೀನಾಥ್ ಹಾಗೂ ಮಂಜುಳಾ

• ರಘುನಾಥ ಚ.ಹ.

**ಮೈಸೂರಿನ** ನಾರಾಯಣ ಸ್ವಾಮಿ ಎನ್ನುವ ಕನಸು ಕಂಗಳ ತರುಣ ಶ್ರೀನಾಥ್ ಹೆಸರಿನಲ್ಲಿ ಜನಪ್ರಿಯ ಕಲಾವಿದನಾಗಿ ರೂಪುಗೊಂಡಿದ್ದು ಕನ್ನಡ ಸಿನಿಮಾ ಚರಿತ್ರೆಯ ವಿಶೇಷ ಅಧ್ಯಾಯ. ಹವ್ಯಾಸಿ ರಂಗಭೂಮಿಯಲ್ಲಿ ಹುಮ್ಮಸ್ಸಿನಿಂದ ತೊಡಗಿಸಿಕೊಂಡಿದ್ದ ತರುಣ ನಟನಿಗೆ 'ಲಗ್ನಪತ್ರಿಕೆ' ಸಿನಿಮಾದ ಪುಟ್ಟ ಪಾತ್ರದ ಮೂಲಕ ಕನ್ನಡ ಚಿತ್ರರಂಗ ಬಾಗಿಲು ತೆರೆಯಿತು. ಪೂರ್ಣ ಪ್ರಮಾಣದ ನಾಯಕನಾಗಿ ನಟಿಸಿದ ಹಾಗೂ ಶ್ರೀನಾಥ್ ಎನ್ನುವ ಹೆಸರಿಗೆ ಕಾರಣವಾದ 'ಮಧುರ ಮಿಲನ' ಸಿನಿಮಾದ ಶೀರ್ಷಿಕೆ ಅವರ ಇಡೀ ವೃತ್ತಿಜೀವನಕ್ಕೂ ಅನ್ವಯಿಸುವಂತಹದ್ದು.

ಬೆಳ್ಳಿತೆರೆಯ ಬಣ್ಣದ ಓಣಿಗಳಲ್ಲಿ ಶ್ರೀನಾಥ್ ಅಳುಕಿನಿಂದ ಹೆಜ್ಜೆ ಹಾಕುತ್ತಿದ್ದ ಸಂದರ್ಭ, ಕನ್ನಡ ಚಿತ್ರರಂಗ ಹೊಸ ಹೊರಳಿಗೆ ತನ್ನನ್ನೊಡ್ಡಿಕೊಳ್ಳುತ್ತಿದ್ದ ಸಂದರ್ಭವೂ ಹೌದು. ಜನಪರತೆ ಮತ್ತು ಜನಪ್ರಿಯತೆಯ ಅಪೂರ್ವ ಸಮೀಕರಣದಂತೆ ರೂಪುಗೊಳ್ಳುತ್ತಿದ್ದ ಮುಖ್ಯವಾಹಿನಿ ಸಿನಿಮಾಗಳು ಸಹೃದಯರ ಮನಸ್ಸು ಗೆಲ್ಲುವುದರ ಜೊತೆಗೆ, ವ್ಯಾಪಾರಿ ಲೆಕ್ಕಾಚಾರದಲ್ಲೂ ಯಶಸ್ಸು ಕಾಣುತ್ತಿದ್ದವು. ಕಲಾತ್ಮಕ ಸಾಧ್ಯತೆಗಳ ಹುಡುಕಾಟವನ್ನೇ ಮುಖ್ಯವಾಗಿಸಿಕೊಂಡ ಪ್ರಯೋಗಶೀಲ ಸಿನಿಮಾಗಳೂ ಜನರ ಗಮನಸೆಳೆಯು-ತ್ತಿದ್ದವು. ಎಲ್ಲ ದೃಷ್ಟಿಯಿಂದಲೂ ಅದು ಕನ್ನಡ ಚಿತ್ರರಂಗಕ್ಕೆ ಉತ್ಕರ್ಷದ ಸಮಯ. ರಾಜ್‌ಕುಮಾರ್ ಮುಂಚೂಣಿಯಲ್ಲಿದ್ದ ಕಲಾವಿದರ ಬಳಗ ತಾರಾವರ್ಚಸ್ಸಿನ ಹೊಳಪು ಕುದುರಿಸಿಕೊಳ್ಳುತ್ತಿದ್ದ ದಿನಗಳಲ್ಲೇ ಎನ್. ಲಕ್ಷ್ಮೀನಾರಾಯಣ್, ಪುಟ್ಟಣ್ಣ ಕಣಗಾಲ್, ಸಿದ್ಧಲಿಂಗಯ್ಯ ಅವರಂಥ ನಿರ್ದೇಶಕರೂ ಜನಮನ್ನಣೆ ಪಡೆದಿದ್ದರು. ಮುಖ್ಯವಾಹಿನಿ ಹಾಗೂ ಕಲಾತ್ಮಕ ಎರಡೂ ಬಗೆಗಳಲ್ಲಿ ಕನ್ನಡ ಚಿತ್ರರಂಗ ತನ್ನ ಅತ್ಯುತ್ತಮ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿದ್ದ ದಿನಗಳಲ್ಲಿ, ಶ್ರೀನಾಥ್ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ದಾರಿ ಕಂಡುಕೊಳ್ಳುವ ಪ್ರಯತ್ನ ನಡೆಸಿದರು, ಯಶಸ್ವಿಯೂ ಆದರು.


ಶ್ರೀನಾಥ್ ಅವರದ್ದು ತಾರೆಗಳ ತೋಟದಲ್ಲಿ ಪ್ರಖರವಾಗಿ ಕಾಣಿಸುವ ಮುಖವಲ್ಲ. ಆದರೆ, ಮಂದಸ್ಮಿತ ತಾರೆಯೊಂದು ತನ್ನ ತಂಪಿನ ಕಾರಣದಿಂದಲೇ ಸಹೃದಯರ ಗಮನಸೆಳೆಯುವಂತೆ, ಶ್ರೀನಾಥ್ ಚಿತ್ರರಸಿಕರ ಚಿತ್ತಭಿತ್ತಿಯಲ್ಲಿ ತಮ್ಮದೂ ಒಂದು ರುಜು ಮೂಡಿಸಿದರು.



ಈ ಪೋಸ್ ಓಕೆನಾ...ಶ್ರೀನಾಥ್ ಜೊತೆ ನಟಿಯರಾದ ಜಯಂತಿ ಹಾಗೂ ಪದ್ಮಾ ವಾಸಂತಿ.

ಪುರಾಣ ಇಲ್ಲವೇ ಐತಿಹಾಸಿಕ ಕಥನಗಳ ಗಡುಸು ಪಾತ್ರಗಳಿಗೆ ಅಹುದಹುದೆನ್ನುವ ಶರೀರ ಮತ್ತು ಶಾರೀರ ಎರಡೂ ಅವರದಾಗಿರಲಿಲ್ಲ. ತಾರಾವರ್ಚಸ್ಸಿನ ನಾಯಕನಟರು ಸಾಹಸಪ್ರಧಾನ ಪಾತ್ರಗಳಲ್ಲಿ ಮಿಂಚುತ್ತಿದ್ದಾಗ, ಶ್ರೀನಾಥರ ಸೌಮ್ಯ ವ್ಯಕ್ತಿತ್ವಕ್ಕೆ ಹೊಂದುವ ಪಾತ್ರಗಳು ಅವರನ್ನು ಹುಡುಕಿಕೊಂಡು ಬಂದವು. ಪ್ರೇಮಸೌಗಂಧಿಕಾ ಸ್ಪರ್ಶದ ಕಥನಗಳಿಗವರು ಜೀವತುಂಬಿದರು. ಅವರ ಕಣ್ಣುಗಳಲ್ಲಿನ ಆರ್ದ್ರತೆ ಮಾತಿನಲ್ಲೂ ತುಳುಕುವಂತಿದ್ದುದು ಚಿತ್ರರಸಿಕರಿಗೆ ಇಷ್ಟವಾಯಿತು. ಹಾಗೆ ಇಷ್ಟಪಟ್ಟವರು ಪ್ರೀತಿಯಿಂದ 'ಪ್ರಣಯರಾಜ' ಎಂದು ಕರೆದರು. 'ಗರುಡರೇಖೆ', 'ರಾಮ ಪರಶುರಾಮ', 'ಮಾನಸ ಸರೋವರ'ದಂಥ ವಿಭಿನ್ನ ಕಥನಗಳ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದ್ದರೂ, ಶ್ರೀನಾಥ್ ಜನಮನದಲ್ಲಿ ನೆಲೆ ನಿಂತಿರುವುದು ಪ್ರಣಯ ಪ್ರಧಾನ ಪಾತ್ರಗಳಲ್ಲೇ.

ಸಿನಿಮಾ ಜೀವನದ ಷಷ್ಟ್ಯಬ್ದಿಯ ಹೊಸ್ತಿಲಲ್ಲಿ ನಿಂತಿರುವ ಶ್ರೀನಾಥ್ ಅವರ ಆರು ದಶಕಗಳ ಅವಧಿಯ ಸಾಧನೆ ನಿಬ್ಬೆರಗುಗೊಳಿಸುವಂತಹದ್ದು. ಮುನ್ನೂರೈವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಹಿರಿಮೆ ಅವರದು. ನಟನಾಗಿ, ನಿರ್ಮಾಪಕನಾಗಿ ಕನ್ನಡ ಚಿತ್ರರಂಗಕ್ಕೆ ಕೊಡುಗೆ ನೀಡಿರುವ ಅವರು, ಅಕ್ಕರೆ ತುಂಬಿದ ಮೆಲು ಮಾತು ಹಾಗೂ ವಿನಯಕ್ಕೆ ಮಾದರಿ. 'ಬೆಸುಗೆ', 'ಶುಭಮಂಗಳ', 'ಮಾನಸ ಸರೋವರ', 'ಗರುಡರೇಖೆ', 'ಪಾಯಿಂಟ್ ಪರಿಮಳ', 'ಯಾರಿವನು', 'ಶ್ರೀರಾಘವೇಂದ್ರ ವೈಭವ', 'ಬಂಗಾರದ ಮನುಷ್ಯ', 'ಶ್ರಾವಣ ಬಂತು', 'ಬಡ್ಡಿ ಬಂಗಾರಮ್ಮ', 'ಗಂಡ ಮನೆ ಮಕ್ಕಳು', 'ಪಟ್ಟಣಕ್ಕೆ ಬಂದ ಪತ್ನಿಯರು', 'ರಾಮ ಪರಶುರಾಮ', 'ಧರಣಿ ಮಂಡಲ ಮಧ್ಯದೊಳಗೆ' – ಕನ್ನಡ ಚಿತ್ರರಸಿಕರ ಎದೆಯಂಗಳ-ದಲ್ಲಿ ಶ್ರೀನಾಥ್ ನೆಟ್ಟ ಸೌಗಂಧಿಕಾಪುಷ್ಪಗಳು ಹಲವು. 'ಮಾನಸ ಸರೋವರ' ಚಿತ್ರದಲ್ಲಿನ ಹೃದಯವಂತ ಮನೋವೈದ್ಯ, 'ಶುಭಮಂಗಳ'ದಲ್ಲಿ ನಾಯಕಿಗೆ ಬದುಕಿನ ಲೆಕ್ಕ ಹೇಳಿಕೊಟ್ಟ ನಾಯಕ, 'ಶ್ರೀರಾಘವೇಂದ್ರ ವೈಭವ'ದಲ್ಲಿ ರಾಯರ ಪಾತ್ರ, 'ರಾಮ ಪರಶುರಾಮ' ಚಿತ್ರದಲ್ಲಿನ ಪುರಾಣಪ್ರಭೆಯ ಪರಶುಧಾರಿ – ಶ್ರೀನಾಥ್ ಪ್ರತಿಭಾವಿಲಾಸಕ್ಕೆ ಕೆಲವು ನಿದರ್ಶನಗಳಷ್ಟೇ.



ರಾಘವೇಂದ್ರ ಸ್ವಾಮಿ ಪಾತ್ರದಲ್ಲಿ ಶ್ರೀನಾಥ್

'ಶಿಕಾರಿ', 'ಬಾಳೊಂದು ಭಾವಗೀತೆ' ಹಾಗೂ 'ಮಾನಸ ಸರೋವರ' ಶ್ರೀನಾಥ್‌ರಿಗೆ ನಿರ್ಮಾಪಕರಾಗಿ ಹೆಸರು ತಂದುಕೊಟ್ಟ ಸಿನಿಮಾಗಳು. ಪುಟ್ಟಣ್ಣ ಕಣಗಾಲ್ ಅವರಿಗೆ ಸಂಕಷ್ಟದ ಸಮಯದಲ್ಲಿ ಧೈರ್ಯ ತುಂಬಿ, ಹೊಸ ಸಿನಿಮಾದ ನಿರ್ದೇಶನಕ್ಕೆ ಗುರುವಿಗೆ ಆಸರೆಯಾಗಿ ನಿಂತದ್ದು ಶ್ರೀನಾಥ್‌ರ ಸಿನಿಮಾ ಜೀವನದ ಸಾರ್ಥಕ ಕ್ಷಣಗಳಲ್ಲೊಂದು. ಶ್ರೀನಾಥ್ ಹಾಗೂ ಮಂಜುಳಾ ಅವರದು ಕನ್ನಡ ಚಿತ್ರರಂಗದ ಜನಪ್ರಿಯ ಜೋಡಿಗಳಲ್ಲೊಂದು.

'ಶ್ರೀರಾಘವೇಂದ್ರ ವೈಭವ' ಚಿತ್ರದಲ್ಲಿನ ನಟನೆಗಾಗಿ ಶ್ರೇಷ್ಠ ನಟ ರಾಜ್ಯ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಗಾಗಿ ಕರ್ನಾಟಕ ಸರ್ಕಾರದ 'ರಾಜ್‌ಕುಮಾರ್ ಪ್ರಶಸ್ತಿ' ಶ್ರೀನಾಥ್ ಅವರಿಗೆ ಸಂದಿರುವ ಪ್ರಮುಖ ಗೌರವಗಳು. ಎಂಬತ್ತೆರಡು ವಸಂತಗಳ ಈ ಅನನ್ಯ ಕಲಾವಿದನಿಗೆ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ–2025'ರ ಸಂಭ್ರಮದ ಸಂದರ್ಭದಲ್ಲಿ ಜೀವಮಾನ ಸಾಧನೆಯ ಪುರಸ್ಕಾರ.

ತೊಂಬತ್ತು ವರ್ಷಗಳನ್ನು ದಾಟಿ ನೂರನೇ ವರ್ಷದತ್ತ ಹೆಜ್ಜೆ ಇಟ್ಟಿರುವ ಚಿತ್ರೋದ್ಯಮ, ಬದಲಾದ ಕಾಲಘಟ್ಟಕ್ಕೆ ಹೊಂದಿಕೊಳ್ಳಲು ಏದುಸಿರುಪಡುತ್ತಿರುವ ದಿನಗಳಿವು. ಈ ಕಾಲಘಟ್ಟದಲ್ಲಿ ಕನ್ನಡ ಚಿತ್ರರಂಗಕ್ಕೆ ಎಂಬತ್ತರ ಏರು ದಾಟಿ ಮುನ್ನಡೆದಿರುವ ಶ್ರೀನಾಥ್ ಅವರ ಜೀವನ–ಸಾಧನೆಯಲ್ಲಿ ಪ್ರೇರಣೆಯ ಬೀಜಗಳಿವೆ. ❖



ರಾಜ್‌ಕುಮಾರ್ ದಂಪತಿಯೊಂದಿಗೆ ಶ್ರೀನಾಥ್



ಸಮಾರಂಭದಲ್ಲಿ ಆಶಾ ಪರೇಖ್ ಧ್ವನಿ ಕೇಳಿ ಶ್ರೀನಾಥ್ ಆಶ್ಚರ್ಯಚಕಿತರಾದರು



ಸಿಳ್ಳೆಗೆ ಸಿಳ್ಳೆಯ ಪ್ರತ್ಯುತ್ತರ

# ಚಂದನವನದ ಶೋಮ್ಯಾನ್ ರವಿಚಂದ್ರನ್





ರವಿಚಂದ್ರನ್ ಅವರಿಗೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾದ ಚೈತನ್ಯ ನೆಟ್ಟಕಲ್ಲಪ್ಪ ಹಾಗೂ ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕರಾದ ರವೀಂದ್ರ ಭಟ್ಟ ಪ್ರಶಸ್ತಿ ಪ್ರದಾನ ಮಾಡಿದರು.

### ಮೌಲಿಕ ರಿವ್ಯೂ

'ಪ್ರತಿ ಶುಕ್ರವಾರ ತಪ್ಪದೇ 'ಪ್ರಜಾವಾಣಿ' ಓದು. ಸಿನಿಮಾ ವಿಮರ್ಶೆಯಲ್ಲಿರೋದನ್ನ ತಲೆಗೆ ಹಚ್ಕೊ, ಹೊಗಳಿದ್ದರೆ ಕೋಡು ಬರದಿರಲಿ, ಟೀಕಿಸಿದ್ದರೆ ಸರಿಪಡಿಸಿಕೊ ಎಂದು ಅಪ್ಪ ಹೇಳಿದ್ದರು' ಎಂದ ನಟ ರವಿಚಂದ್ರನ್ ಅವರು ತಮ್ಮ ತಂದೆ ವೀರಾಸ್ವಾಮಿ ಅವರನ್ನು ನೆನಪಿಸಿ-ಕೊಳ್ಳುತ್ತಲೇ 'ಪ್ರಜಾವಾಣಿ'ಯೊಂ-ದಿಗಿನ ತಮ್ಮ ನಂಟನ್ನು ವೀಕ್ಷಕರ ಎದುರಿಗೆ ಬಿಚ್ಚಿಟ್ಟರು.

• ರಶ್ಮಿ ಎಸ್

**ಟ್ರಿಂಗ್... ಟ್ರಿಂಗ್... ಟ್ರಿಂಗ್ ಟ್ರಿಂಗ್...**

ರವಿಚಂದ್ರನ್: ಹಲೋ..

ಮಾಲಾಶ್ರೀ: ರೆಡಿ

ಇಂಥದ್ದೊಂದು ಕುತೂಹಲಕಾರಿ ಪ್ರಹಸನ 'ಪ್ರಜಾವಾಣಿ ಸಿನಿ ಸಮ್ಮಾನ'ದ ಮೂರನೆಯ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭದ ವೇದಿಕೆಯಲ್ಲಿ ನಡೆಯಿತು.

ಕತೆ ಇಷ್ಟೇ. ಮಾಲಾಶ್ರೀ ಅವರಿಗೆ ರವಿಚಂದ್ರನ್, ಹಿಂದೊಮ್ಮೆ ನಾನು ಯಾವತ್ತಾದರೂ ಕಾಲ್ ಮಾಡಿದ್ರೆ, ದೂಸರಾ ಮಾತಿಲ್ದೆ ಹೂಂ ಅಥವಾ ರೆಡಿ ಅಂತಷ್ಟೇ ಹೇಳಬೇಕು ಅಂದಿದ್ರಂತೆ. ರಾಮಾಚಾರಿ ಸಿನಿಮಾ ಕುರಿತು ಯೋಜಿಸುವಾಗ ರವಿಚಂದ್ರನ್ ಕಾಲ್ ಮಾಡಿದ ತಕ್ಷಣ ಮಾಲಾಶ್ರೀ ನಾನು ರೆಡಿ ಅಂದ್ರಂತೆ.

ನಲ್ವತ್ತು ದಿನಗಳಲ್ಲಿ ಸಿನಿಮಾ ಮುಗಿಸಿದ್ದು, ಹನ್ನೆರಡು ದಿನಗಳಲ್ಲಿ ಮಾಲಾಶ್ರೀ ಅವರ ದೃಶ್ಯಗಳ ಚಿತ್ರೀಕರಣ, ನಾಲ್ಕು ದಿನಗಳಲ್ಲಿ ಬೆಳಗಿನ ದೃಶ್ಯಗಳ ಚಿತ್ರೀಕರಣ, ಹೀಗೆ ಎಲ್ಲವೂ ಅವರ ಸ್ಮೃತಿಪಟಲದಲ್ಲಿ ನಿನ್ನೆ ಮೊನ್ನೆ ನಡೆದಿದೆಯೇನೋ ಎಂಬಂತೆ ನಿರೂಪಿ-ಸುತ್ತಿದ್ದರು ರವಿಚಂದ್ರನ್.

ಹೆಚ್ಚೂಕಮ್ಮಿ ಮೂರು ದಶಕಗಳ ಹಿಂದಿನ ಕತೆ ಇದು. ಹಿನ್ನೆಲೆಯಲ್ಲಿ 'ಯಾರಿವಳು.. ಯಾರಿವಳು..' ಹಾಡು ಬಂದ ತಕ್ಷಣ, ಅದೇ ಕೆನ್ನೆ ಮೇಲೆ ಸೇಬಿರಿಸಿಕೊಂ-ಡಂತೆಯೇ ನಸುನಾಚಿದ, ತುಸುಗುಲಾಬಿ ವರ್ಣಕ್ಕೆ ತಿರುಗಿದ ಮಾಲಾಶ್ರೀ ಹೆಜ್ಜೆ ಹಾಕಿದರು. ರವಿಚಂದ್ರನ್ ಜೊತೆಗೂಡಿದರು. ನೆರೆದವರಿಂದ ಜೋರು ಚಪ್ಪಾಳೆ, ಸಿಳ್ಳೆಗಳ ಮೊರೆತ. ಮುಂದಿನ ಸಾಲಿನಲ್ಲಿ ಕುಳಿತಿದ್ದ ಹಂಸಲೇಖ ಅವರ ಮುಗುಳ್ನಗು ಮರೆಯಾಗಲೇ ಇಲ್ಲ. ಅದೆಂಥ ಗಳಿಗೆ.. ಆ ಗಳಿಗೆಗೆ ಸಾಕ್ಷಿಯಾದವರು ಅದೆಷ್ಟೋ ಜನರು.

### ಹಾರ್ಟು–ಹಾರ್ಟ್‌ಬೀಟು

ನಾನು ಹಾರ್ಟು, ಹಂಸಲೇಖ ಹಾರ್ಟ್‌ಬೀಟು, ನಮ್ಮಿಬ್ಬರ ಸ್ನೇಹ ಸಾಂಗತ್ಯದ ಬಗ್ಗೆ ಹೆಚ್ಚು ಮಾತಾಡುವುದೇ ಬೇಡ. ನನ್ನ ಸ್ನೇಹ ಮತ್ತು ಪ್ರೀತಿ ಎರಡೂ ಅವರೇನೆ. ನಮ್ಮಿಬ್ಬರ ಸಾಂಗತ್ಯವನ್ನು ಹೀಗೆ ಮಾತ್ರ ಹೇಳಬಲ್ಲೆ ನಾನು

'ಪ್ರಜಾವಾಣಿ ಸಿನಿ ಸಮ್ಮಾನ–2025' ಮೂರನೆ ಆವೃತ್ತಿಯ 'ಕನ್ನಡ ಸಿನಿ ಧ್ರುವತಾರೆ' ಪ್ರಶಸ್ತಿ ಸ್ವೀಕರಿಸಿ ಮಾತಾಡುವಾಗ ರವಿಚಂದ್ರನ್ ಕೆಲ ಗಳಿಗೆ ಭಾವುಕರಾದರು. ಇನ್ನೂ ಕೆಲವು ಗಳಿಗೆ ತಮ್ಮ ಸಂಘರ್ಷವನ್ನು ಹೇಳುತ್ತ ಹೊಂಗನಸಿನ ಯುವಕರಿಗೆ ಸ್ಫೂರ್ತಿಯೇ ಮೈದಳೆದಂತೆ ನಿಂತರು. ನಿರೂಪಕ ಅಕುಲ್ ಬಾಲಾಜಿ, ರವಿಚಂದ್ರನ್ ನೆನಪಿನ ಬತ್ತಳಿಕೆಯಿಂದ ಒಂದೊಂದೇ ಬಾಣ ತೆಗೆಯುವಂತೆ ಪುಸಲಾಯಿಸುತ್ತಲೇ ಇದ್ದರು.

ಸಣ್ಣದೊಂದು ಬೈಕಿನ ಪ್ರತಿಕೃತಿ ಅದಕ್ಕಂಟಿದ ಕೋಳಿಮೊಟ್ಟೆ ನೋಡಿದ ತಕ್ಷಣ, 'ಮಲ್ಲ' ಸಿನಿಮಾ ಹಾಡಿನ ಚಿತ್ರೀಕರಣವನ್ನು ನೆನಪಿಸಿಕೊಂಡರು.

ಕೋಳಿಪಿಳ್ಳೆಗಳೆಲ್ಲ ಬೆಚ್ಚಗಿರುವ ತಾಣವನ್ನು ಅರಸುತ್ತವೆ. ಒಂದು ಮೂಲೆಯಲ್ಲಿ ಲೈಟ್ ಇರಿಸಿದಾಗ ಅದರ ಸುತ್ತ ಅವು ನೆರೆಯುತ್ತಿದ್ದವು. ಸೆಟ್‌ನಲ್ಲಿದ್ದ ಇತರ ಎಲ್ಲ ಲೈಟುಗಳನ್ನೂ ಆರಿಸಿ, ಸ್ಪಾಟ್‌ಲೈಟ್ ತಮ್ಮ ಮೇಲಿರಿಸಿದಾಗ ಅವು ಶಿಸ್ತುಬದ್ಧವಾಗಿ ತಮ್ಮ ಕಡೆ ನಡೆದುಕೊಂಡು ಬರುವ ದೃಶ್ಯ ಚಿತ್ರೀಕರಿಸಿದ್ದಾಗಿ ತಿಳಿಸಿದರು. ಸಿನಿಮಾ ನಿರ್ಮಾಣದಲ್ಲಿ ತಂತ್ರಜ್ಞಾನದ ಜೊತೆಗೆ ಇಂಥ ಕಾಮನ್ ಸೆನ್ಸ್ ಮತ್ತು ಜಾಣ್ಮೆ ಹೆಚ್ಚು ಉಪಯೋಗಕ್ಕೆ ಬರುತ್ತದೆ ಎಂದೂ ಹೇಳುವುದು ಮರೆಯಲಿಲ್ಲ.

'ರಾಜಾ ರಾಜಾ' ಹಾಡಿನ ಚಿತ್ರೀಕರಣದ ಸಂದರ್ಭವನ್ನೂ ನೆನ-ಪಿಸಿಕೊಂಡವರು, ರಾಜ್‌ಕುಮಾರ್ ಅವರ ಜೊತೆಗೆ ಬಾಲನಟರಾಗಿ ನಟಿಸಿದಾಗ ಅವರಿಂದ ಸಿಕ್ಕ ಅಪ್ಪುಗೆಯ ಬಿಸುಪು ಅವರನ್ನು ಸಿನಿಮಾರಂಗದತ್ತ ಸೆಳೆಯಿತು ಎಂದೂ ಹೇಳಿದರು. ಅವರ ಆಶೀರ್ವಾದವೇ ಯಶಸ್ಸಿನ ಉತ್ತುಂಗಕ್ಕೆ ಕರೆದೊಯ್ದಿತು ಎಂದು ಹೇಳಿದರು. ಆ ಸಿನಿಮಾ ದೃಶ್ಯದಲ್ಲಿದ್ದಂತೆ ಎಂಟು ನಾಣ್ಯಗಳ ಕುಡಿಕೆಯನ್ನು ಬಿಚ್ಚಿದವರೇ ರವಿಚಂದ್ರನ್ ತಮ್ಮ ಸಿನಿಯಾನದ ಹಲವಾರು ನೆನಪುಗಳನ್ನು ಹಂಚಿಕೊಂಡರು. ❖

'ಯಾರಿವಳು ಯಾರಿವಳು.. ಹಾಡಿಗೆ ಹೆಜ್ಜೆ ಹಾಕಿದ ನಟ ರವಿಚಂದ್ರನ್ ಹಾಗೂ ನಟಿ ಮಾಲಶ್ರೀ ಪ್ರೇಕ್ಷಕರನ್ನು ಮೂರು ದಶಕಗಳ ಹಿಂದಕ್ಕೆ ಕರೆದೊಯ್ದರು...

### ಆರನೇ ಕ್ಲಾಸು ಫೇಲು, ಬದುಕಿನಲ್ಲಿ ಪಾಸು

ಓದುವುದರಲ್ಲಿ ಆರನೇ ಕ್ಲಾಸು ಫೇಲು. ಆದ್ರೆ ಸಿನಿಮಾದಿಂದ ಜೀವನ ಕಟ್ಕೊಂಡು, ಉಳಿದವರಿಗೂ ಆ ಅವಕಾಶ ಮಾಡಿಕೊಡುವುದರಲ್ಲಿ ಪಾಸಾದೆ. ಪ್ಯಾನ್ ಇಂಡಿಯಾ ಎನ್ನುವ ಪರಿಕಲ್ಪನೆಯನ್ನು ತಂದಿದ್ದೇ ಆ ಕಾಲದಲ್ಲಿ. ಆಗ ಬೇರೆ ಭಾಷೆಗಳಿಂದ ರಿಮೇಕ್ ಮಾಡಿದರೂ ಕನ್ನಡದ ನೆಲದ ಕತೆಗೆ ಹೊಂದಿಕೊಳ್ಳುವಂತೆ ಮಾಡಿದೆ. ರಣಧೀರ ನೋಡಿ ಹೀರೊ ಸಿನಿಮಾ ನಿರ್ದೇಶಕ ಸುಭಾಷ್ ಘೈ ಸಹ ಅಚ್ಚರಿ ಪಟ್ಟಿದ್ದರು. ನಮ್ಮೊಳಗಿನ ಸೃಜನಶೀಲ ಮನಸನ್ನು ಕ್ರಿಯಾಶೀಲವಾಗಿ ದುಡಿಸಿಕೊಂಡರೆ ಇದೆಲ್ಲವೂ ಸಾಧ್ಯವಾಗುತ್ತದೆ ಎಂದು ರವಿಚಂದ್ರನ್ ಹೇಳಿದರು.

# ವಿಐಪಿಗಳ ನೆಚ್ಚಿನ ನಟನಿಗೆ ಸಮ್ಮಾನದ ಗರಿ



### ವರ್ಷದ ಅತ್ಯುತ್ತಮ ಸಾಧನೆ: ಧ್ರುವ ಸರ್ಜಾ

'ಅದ್ದೂರಿ' ಸಿನಿಮಾ ಮುಖಾಂತರ ಚಂದನವನ ಪ್ರವೇಶಿಸಿದ್ದ ಧ್ರುವ ಸರ್ಜಾ ಪ್ರೇಕ್ಷ-ಕರನ್ನು ಚಿತ್ರಮಂದಿರಗಳತ್ತ ಸೆಳೆಯುವ ಸಾಮರ್ಥ್ಯವುಳ್ಳ ನಟ. ಮಾಡಿರುವುದು ಐದೇ ಸಿನಿಮಾಗಳಾದರೂ ಅವರ ಅಭಿಮಾನಿಗಳ ಸಂಖ್ಯೆ ಬೃಹದಾಗಿದೆ.

'ಅದ್ದೂರಿ'ಯಾಗಿ ತೆರೆ ಪ್ರವೇಶಿಸಿ 'ಬಹದ್ದೂರ್' ಆಗಿ ಮಿಂಚಿ 'ಭರ್ಜರಿ'ಯಾಗಿ ನಟನೆಯ 'ಪೊಗರು' ತೋರಿಸಿದ್ದ ಧ್ರುವ 'ಮಾರ್ಟಿನ್'ನಲ್ಲಿ ಪ್ಯಾನ್ ಇಂಡಿಯಾಗೆ ಹೆಜ್ಜೆ ಇಟ್ಟವರು. ಅಭಿ-ಮಾನಿಗಳನ್ನು ವಿಐಪಿಗಳೆಂದು ಕರೆಯುವ ಇವರು ಹೊಸಬರ ಸಿನಿಮಾಗಳಿಗೆ ಒಂದಲ್ಲಾ ಒಂದು ರೀತಿಯಲ್ಲಿ ಸದಾ ಬೆನ್ನೆಲುಬಾಗಿ ನಿಂತವರು. ಸಿನಿಮಾ ಮೇಲಿನ ಅವರ ಶ್ರದ್ಧೆ, ಆಸಕ್ತಿ ಆಶ್ಚರ್ಯ ಹುಟ್ಟಿಸುತ್ತದೆ. ಅರ್ಜುನ್ ಸರ್ಜಾ ಅವರನ್ನೇ ದ್ರೋಣನಂತೆ ಕಂಡು ಏಕಲವ್ಯನಂತೆ ನಟನೆಯಲ್ಲಿ ಪಳಗಿದವರು ಧ್ರುವ ಸರ್ಜಾ. ಇತ್ತೀಚೆಗೆ 'ಪಪ್ಪಿ' ಎಂಬ ಅಪ್ಪಟ ಉತ್ತರ ಕರ್ನಾಟಕ ಭಾಷೆಯ ಸೊಗಡಿನ ಸಿನಿಮಾವನ್ನು ಧ್ರುವ ಪ್ರಸ್ತುತಪಡಿಸಿದ್ದರು. ಇವರ ಈ ಎಲ್ಲಾ ಸಾಧನೆಗಳೇ 'ವರ್ಷದ ಅತ್ಯುತ್ತಮ ಸಾಧನೆ' ಪ್ರಶಸ್ತಿಯನ್ನು ಅವರ ಮುಡಿಗೇರಿಸಿದೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಧ್ರುವ ಸರ್ಜಾ, 'ಪ್ರಜಾವಾಣಿಗೆ ಧನ್ಯವಾದ. ನನ್ನ 'ಅದ್ದೂರಿ' ಚಿತ್ರಕ್ಕೆ ವಿಮರ್ಶೆ ನೋಡಿಕೊಂಡು ಸಾಕಷ್ಟು ಜನ ಚಿತ್ರಮಂದಿರಕ್ಕೆ ಬಂದಿದ್ದರು. 'ಪ್ರಜಾವಾಣಿ'ಯಿಂದ ಜೀವನಕಟ್ಟಿ-ಕೊಂಡ ಸಾಕಷ್ಟು ಕಲಾವಿದರಲ್ಲಿ ನಾನೂ ಒಬ್ಬ. ಈ ವೇದಿಕೆಯಲ್ಲಿ ನಾನು ನನ್ನ ಅಣ್ಣ ಚಿರಂಜೀವಿ ಸರ್ಜಾನನ್ನು ನೆನಪಿಸಿಕೊಳ್ಳುತ್ತೇನೆ. 'ವಿಮರ್ಶೆ-ಗಳನ್ನು ನೋಡು. ಅದರಲ್ಲಿ ನಿನ್ನ ತಪ್ಪುಗಳನ್ನು ಹೇಳುತ್ತಾರೆ. ಅದರಿಂದ ಕಲಿ' ಎಂದು ಆತ ಹೇಳುತ್ತಿದ್ದ. ನಾನು ಹಿರಿಯರ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದೇನೆ. ಈ ಪ್ರಶಸ್ತಿ ನನ್ನ ಸಿನಿಪಯಣದ ಬಹುಮುಖ್ಯ ಭಾಗ' ಎಂದರು.

'ಈ ಕಾರ್ಯಕ್ರಮಕ್ಕೆ ಎರಡನೇ ಬಾರಿ ಬರುತ್ತಿದ್ದೇನೆ. ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿದೆ. ಇದೊಂದು ದೊಡ್ಡ ಪ್ರೋತ್ಸಾಹ. ನಮ್ಮ ದಿನ ಪ್ರಾರಂಭವಾಗುವುದೇ 'ಪ್ರಜಾವಾಣಿ' ಓದುವ ಮೂಲಕ. ಐಎಎಸ್, ಕೆಎಎಸ್ ಮಾಡುವವರು ಪ್ರಜಾವಾಣಿಯ ಸುದ್ದಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು. ❖




ಪ್ರಶಸ್ತಿಯನ್ನು ಧ್ರುವ ಸರ್ಜಾ ಅವರಿಗೆ ಸಚಿವ ಶಿವರಾಜ್ ತಂಗಡಗಿ, ನಾಗತಿಹಳ್ಳಿ ಚಂದ್ರಶೇಖರ್ ಪ್ರದಾನ ಮಾಡಿದರು.

### 'ಹೊಸಬರ ಮೇಲೆ ಭರವಸೆ ಇದೆ'

ಎಲ್ಲಾ ಕಾಲಘಟ್ಟದಲ್ಲೂ ಕಲಾಕಾರ ತಾವು ಬದುಕುತ್ತಿರುವ ಸಮಾಜಕ್ಕೆ ತಮ್ಮ ಮಾಧ್ಯಮದ ಮೂಲಕ ಏನನ್ನಾದರೂ ಹೇಳುತ್ತಿರುತ್ತಾರೆ. ಅದು ಅವರ ಜವಾಬ್ದಾರಿ. ಇತ್ತೀಚಿನ ದಿನಮಾನಗಳಲ್ಲಿ ತುಂಬಾ ಸೂಕ್ಷ್ಮವಾಗಿ ಕಥೆ ಹೇಳುವ ಪ್ರಯತ್ನವನ್ನು ಹೊಸಬರು ಮಾಡುತ್ತಿದ್ದಾರೆ. ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಉದ್ಯಮ ಸಂಕಷ್ಟದಲ್ಲಿದ್ದರೂ ಕೂಡ ಹೊಸ ಪ್ರತಿಭೆಗಳ ಬಗ್ಗೆ ನನಗೆ ಭರವಸೆ ಇದೆ. ಪ್ರತಿಭೆಗಳಿಗೆ ಇಲ್ಲಿ ಬಡತನವಿಲ್ಲ. ಸಮಾಜ ಬದಲಾಗುತ್ತಿರುವ ವೇಗಕ್ಕೆ ತಕ್ಕ ಕಥೆ ಹೇಳುವಂಥ ಅನೇಕ ಹೊಸಬರು ಬರುತ್ತಿದ್ದಾರೆ. ಸೋಲುಗಳ ನಡುವೆ ಭರವಸೆಗಳು ಇವೆ. ಇಂತಹ ಭರವಸೆ ಮೂಡಿಸುವ ಪ್ರತಿಭೆಗಳನ್ನು ಗುರುತಿಸುವ, ಉತ್ತೇಜಿಸುವ ಕೆಲಸವನ್ನು ಪ್ರಜಾವಾಣಿ ಮಾಡುತ್ತಿದೆ. ಪ್ರಶಸ್ತಿಗೆ ನಾಮನಿರ್ದೇಶನಗೊಂಡವರಿಗೆ, ಪ್ರಶಸ್ತಿ ಪಡೆದವರಿಗೆ ಇದೊಂದು ಸಾರ್ಥಕವಾದ ಕ್ಷಣ.

–ನಾಗತಿಹಳ್ಳಿ ಚಂದ್ರಶೇಖರ, ನಿರ್ದೇಶಕ.


# ಐದು ಪ್ರಶಸ್ತಿ ಬಾಚಿದ ‘ಕೃಷ್ಣ’

## ವರ್ಷದ ಅತ್ಯುತ್ತಮ ಚಿತ್ರ: ಕೃಷ್ಣಂ ಪ್ರಣಯ ಸಖಿ

ನಟ ಗಣೇಶ್ ಅಭಿನಯದ ‘ಕೃಷ್ಣಂ ಪ್ರಣಯ ಸಖಿ’ ವರ್ಷದ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿತು. ನಿರ್ದೇಶಕ ಶ್ರೀನಿವಾಸ ರಾಜು ಅವರು, ಟಿಪಿಎಂಎಲ್‌ನ ಸಿಒಒ ಕಿರಣ್ ಸುಂದರರಾಜನ್ ಮತ್ತು ಪ್ರಜಾವಾಣಿ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರಿಂದ ಈ ಪ್ರಶಸ್ತಿ ಸ್ವೀಕರಿಸಿದರು.

ಈ ಸಿನಿಮಾ ಬಿಡುಗಡೆ ಮುನ್ನವೇ ತನ್ನ ಹಾಡುಗಳಿಂದಲೇ ಜನರನ್ನು ತಲುಪಿತ್ತು. ವಿ.ನಾಗೇಂದ್ರ ಪ್ರಸಾದ್ ಹಾಗೂ ಅರ್ಜುನ್ ಜನ್ಯ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ‘ದ್ವಾಪರ’ ಹಾಗೂ ‘ಚಿನ್ನಮ್ಮ’ ಹಾಡುಗಳು ಈ ಚಿತ್ರದ ಯಶಸ್ಸಿನ ಭಾಗವಾಗಿತ್ತು. ಗಣೇಶ್, ಮಾಳವಿಕ ನಾಯರ್, ಶರಣ್ಯ ಶೆಟ್ಟಿ, ಸಾಧು ಕೋಕಿಲ ಮುಖ್ಯಭೂಮಿಕೆಯಲ್ಲಿದ್ದ ಈ ಸಿನಿಮಾ ಗುಣಮಟ್ಟದಲ್ಲಿ ಹಾಗೂ ರಿಚ್‌ನೆಸ್‌ನಲ್ಲಿ ಉತ್ಕೃಷ್ಟವಾಗಿ ಮೂಡಿಬಂದಿತ್ತು. ಗಣೇಶ್ ಹಾಗೂ ಸಾಧು ಕೋಕಿಲ ಅವರ ಕಾಮಿಡಿ ಟೈಮಿಂಗ್ ಈ ಸಿನಿಮಾದ ಪ್ರಮುಖ ಅಂಶ. ನಿರ್ದೇಶನ ಹಾಗೂ ಗಣೇಶ್ ಅವರ ಸಿನಿಮಾಗಳಲ್ಲಿ ಕಾಣಸಿಗುವ ಫ್ಯಾಮಿಲಿ ಎಂಟರ್‌ಟೈನರ್ ಅಂಶಗಳು ಸಿನಿಮಾದ ಯಶಸ್ಸಿಗೆ ಕಾರಣವಾದವು.

‘ನಮ್ಮ ಚಿತ್ರ ಈ ಪ್ರಶಸ್ತಿಯೂ ಸೇರಿದಂತೆ ಒಟ್ಟು ಐದು ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಒಂದು ರೀತಿ ಫಸ್ಟ್ ರ‍್ಯಾಂಕ್ ವಿದ್ಯಾರ್ಥಿಯಂತೆ. ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ, ಅರ್ಜುನ್ ಜನ್ಯ ಸಂಗೀತ ಎಲ್ಲವೂ ಯಶಸ್ಸಿಗೆ ಕಾರಣ. ಇದರಲ್ಲಿ ನನ್ನ ಕೆಲಸ ಬಹಳ ಕಡಿಮೆ. ಚಿತ್ರಕ್ಕಾಗಿ ಕೆಲಸ ಮಾಡಿದ ಎಲ್ಲ ತಂತ್ರಜ್ಞರಿಗೆ ಧನ್ಯವಾದಗಳು. ಈ ಚಿತ್ರ ಪ್ರಾರಂಭಿಸುವಾಗಲೇ ಕುಟುಂಬದವರೆಲ್ಲ ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡಬೇಕೆಂಬ ಪರಿಕಲ್ಪನೆಯೊಂದಿಗೆ ಪ್ರಾರಂಭಿಸಿದ್ದು. ಕಥೆ, ಸಂಗೀತ, ಛಾಯಾಚಿತ್ರಗ್ರಹಣ ಎಲ್ಲವೂ ಅದೇ ರೀತಿ. ಜನ ಬಂದು ಚಿತ್ರ ನೋಡಿ ಹರಸಿದ್ದಾರೆ. ಪ್ರಶಸ್ತಿಗಾಗಿ ಪ್ರಜಾವಾಣಿ ಬಳಗಕ್ಕೆ ಧನ್ಯವಾದಗಳು’ ಎಂದರು ಶ್ರೀನಿವಾಸ ರಾಜು.


ಶ್ರೀನಿವಾಸ ರಾಜು

### ‘ದ್ವಾಪರ’ಕ್ಕೆ ಎಲ್ಲರೂ ಫಿದಾ

### ಜನಮೆಚ್ಚಿದ ಚಿತ್ರಗೀತೆ: ದ್ವಾಪರ ಚಿತ್ರ: ಕೃಷ್ಣಂ ಪ್ರಣಯ ಸಖಿ

ಶ್ರೀನಿವಾಸ ರಾಜು ನಿರ್ದೇಶನದ, ಗಣೇಶ್ ನಟನೆಯ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯಲ್ಲಿ ಐದು ಪ್ರಶಸ್ತಿಗಳನ್ನು ಬಾಚಿಕೊಂಡಿತು. ವಿಶೇಷವೆಂದರೆ ಈ ಪೈಕಿ ನಾಲ್ಕು ಪ್ರಶಸ್ತಿಗಳು ಆ ಸಿನಿಮಾದ ‘ದ್ವಾಪರ ದಾಟುತ..’ ಹಾಡಿಗೆ ಲಭಿಸಿತು. ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ ಪ್ರಸ್ತುತ ಜನಮೆಚ್ಚಿದ ಚಿತ್ರಗೀತೆ ಪ್ರಶಸ್ತಿಯನ್ನೂ ಈ ಹಾಡು ಬಾಚಿಕೊಂಡಿತು. ಇದೇ ಹಾಡಿಗೆ ‘ಅತ್ಯುತ್ತಮ ಹಿನ್ನೆಲೆ ಗಾಯಕ’ ಪ್ರಶಸ್ತಿಯನ್ನು ಜಸ್ಕರಣ್ ಸಿಂಗ್ ಪಡೆದರೆ, ಸಾಹಿತ್ಯಕ್ಕೆ ‘ಅತ್ಯುತ್ತಮ ಗೀತ ಸಾಹಿತ್ಯ’ ಪ್ರಶಸ್ತಿಯನ್ನು ವಿ.ನಾಗೇಂದ್ರಪ್ರಸಾದ್ ಪಡೆದರು. ಸಂಗೀತ ನಿರ್ದೇಶನಕ್ಕೆ ಅರ್ಜುನ್ ಜನ್ಯ ‘ಅತ್ಯುತ್ತಮ ಸಂಗೀತ ನಿರ್ದೇಶನ’ ಪ್ರಶಸ್ತಿ ಪಡೆದರು. ಶೇಖರ್ ಮಾಸ್ಟರ್ ‘ಅತ್ಯುತ್ತಮ ನೃತ್ಯ ನಿರ್ದೇಶನ’ ಪ್ರಶಸ್ತಿ ಪಡೆದರು.

# ‘ಶಾಖಾಹಾರಿ’ಯ ಸುಬ್ಬಣ್ಣನಿಗೆ ಪ್ರಶಸ್ತಿ


## ಜನಮೆಚ್ಚಿದ ನಟ: ರಂಗಾಯಣ ರಘು ಚಿತ್ರ: ಶಾಖಾಹಾರಿ

‘ಶಾಖಾಹಾರಿ’ ಸಿನಿಮಾ ಬಳಿಕ ‘ಅಭಿನಯಾಸುರ’ ಎಂಬ ಬಿರುದು ಪಡೆದಿರುವ ನಟ ರಂಗಾಯಣ ರಘು ಕನ್ನಡ ಚಿತ್ರರಂಗದಲ್ಲಿ ತಮ್ಮ ನಟನೆಯ ಶೈಲಿಯಿಂದಲೇ ಗುರುತಿಸಿಕೊಂಡಿದ್ದಾರೆ. ನಾಯಕ ನಟನಾಗಿ ಇರುವವರು ಸಮಯ ಉರುಳಿದಂತೆ ಪೋಷಕ ನಟನಾಗಿ ಹೆಜ್ಜೆ ಇಡುವುದು ಸಾಮಾನ್ಯ. ಆದರೆ ಖಳನಾಯಕ, ಹಾಸ್ಯ, ಪೋಷಕ ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಮನ ಗೆದ್ದಿರುವ ರಂಗಾಯಣ ರಘು ಅವರು ಸದ್ಯ ನಾಯಕ ನಟನಾಗಿ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 250ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಇವರು ‘ಶಾಖಾಹಾರಿ’ ಚಿತ್ರದಲ್ಲಿನ ನಟನೆಗಾಗಿ ‘ಕಾಸಾಗ್ರಾಂಡ್’ ಪ್ರಸ್ತುತ ಜನಮೆಚ್ಚಿದ ನಟ ಪ್ರಶಸ್ತಿ ಪಡೆದಿದ್ದಾರೆ.

ನಟ ಶಿವರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ‘ಶಿವಣ್ಣನ ಕೈಯಲ್ಲಿ ಪ್ರಶಸ್ತಿ ತೆಗೆದುಕೊಳ್ಳುತ್ತಿರುವುದು ಖುಷಿಯಾಗಿದೆ. ಅವರಿಂದ ನಾನು ಚಿತ್ರರಂಗಕ್ಕೆ ಬಂದೆ. ಕಳೆದ ವರ್ಷ ‘ಟಗರುಪಲ್ಯ’ ಚಿತ್ರಕ್ಕೆ ಪೋಷಕ ನಟ ಪ್ರಶಸ್ತಿ ಪಡೆದಿದ್ದೆ. ಈಗ ‘ಶಾಖಾಹಾರಿ’ಗೆ ಪ್ರಶಸ್ತಿ ಪಡೆದಿದ್ದೇನೆ. ಶಿವಮೊಗ್ಗದ ಹುಡುಗರು ಸೇರಿ ಮಾಡಿದ ಸಿನಿಮಾ ಇದು. ಆ ತಂಡಕ್ಕೆ ಈ ಪ್ರಶಸ್ತಿ ಅರ್ಪಿಸುತ್ತೇನೆ. ಗಣೇಶ್, ವಿಜಯ್ ಹಾಗೂ ಅಪ್ಪು ಅವರನ್ನು ನನ್ನ ಈ ಸಿನಿಪಯಣದಲ್ಲಿ ಮರೆಯಲು ಸಾಧ್ಯವಿಲ್ಲ. ಸಂದೀಪ್ ಸುಂಕದ್ ಅವರು ಈ ಚಿತ್ರದಲ್ಲಿನ ನನ್ನ ಪಾತ್ರವನ್ನು ವಿವರಿಸಿದಾಗ, ಇದು ನಟನೆ ಮಾಡುವ ಪಾತ್ರ ಎಂದು ಅರಿತುಕೊಂಡೆ’ ಎಂದರು ರಂಗಾಯಣ ರಘು.


ರಂಗಾಯಣ ರಘು

### ‘ವಯಸ್ಸು 63, ಆದ್ರೆ ರಿವರ್ಸ್ ಮಾಡಬಹುದು’



ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ನಟ ಶಿವರಾಜ್‌ಕುಮಾರ್, ‘ಕಲಾವಿದರಿಗೆ, ತಂತ್ರಜ್ಞರಿಗೆ ಈ ರೀತಿ ಪ್ರಶಸ್ತಿಗಳು ಪ್ರೋತ್ಸಾಹ ನೀಡುತ್ತವೆ. ಮುಂದಿನ ಹೆಜ್ಜೆ ಇಡಲು ಒಂದು ರೀತಿ ಔಷಧದಂತೆ ಕೆಲಸ ಮಾಡುತ್ತವೆ. ಪ್ರಸ್ತುತ ನಮ್ಮ ಕನ್ನಡ ಚಿತ್ರರಂಗ ಇರುವ ಪರಿಸ್ಥಿತಿಯಲ್ಲಿ ಇಂತಹ ಪ್ರಶಸ್ತಿಗಳು ಬಹುಮುಖ್ಯ. ಯಾವುದೇ ಸಿನಿಮಾ ಬರಲಿ ಮೊದಲು ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವಿಮರ್ಶೆಗಳನ್ನೇ ನೋಡುತ್ತೇವೆ. ಇವುಗಳಿಂದ ಕಲಿತಿದ್ದೇವೆ, ತಿದ್ದುಕೊಂಡಿದ್ದೇವೆ. ಪ್ರಾಮಾಣಿಕವಾಗಿ ಇಲ್ಲಿನ ಲೇಖನಗಳು, ವಿಮರ್ಶೆಗಳು ಇರುತ್ತವೆ’ ಎಂದರು.

ನಿರೂಪಕಿ ಅನುಶ್ರೀ ಅವರ ಒಂದು ಪದದ ಪ್ರಶ್ನೆಗಳಿಗೆ ಉತ್ತರಿಸಿದ ಶಿವಣ್ಣ, ‘ಆನಂದ್ ಎಂದರೆ ಅಮ್ಮ, 45 ಎಂದರೆ ಅರ್ಜುನ್ ಜನ್ಯ, ಗೀತಕ್ಕ ಎಂದರೆ ಜೀವನ, ಕರುನಾಡು ಎಂದರೆ ಬೆಳೆಸಿದ ಊರು, ಲಾಂಗ್ ಎಂದರೆ ಲೈಫ್’ ಎಂದರು.

ವಯಸ್ಸಿನ ಪ್ರಶ್ನೆಗೆ ‘63 ಆಗಿದೆ, ಆದರೆ ರಿವರ್ಸ್ ಮಾಡಬಹುದು’ ಎಂದು ನಕ್ಕರು ಚಂದನವನದ ‘ಶಿವಣ್ಣ’.


ನರ್ತನ್

# ‘ಭೈರತಿ ರಣಗಲ್’ ಸೂತ್ರಧಾರನಿಗೆ ಪ್ರಶಸ್ತಿ

## ಅತ್ಯುತ್ತಮ ನಿರ್ದೇಶನ: ನರ್ತನ್ ಚಿತ್ರ: ಭೈರತಿ ರಣಗಲ್

2017ರಲ್ಲಿ ತೆರೆಕಂಡಿದ್ದ ‘ಮಫ್ತಿ’ ನಟ ಶಿವರಾಜ್‌ಕುಮಾರ್ ಅವರ ಸಿನಿಪಯಣಕ್ಕೊಂದು ತಿರುವು ನೀಡಿದ ಚಿತ್ರ. ಆ ಸಿನಿಮಾದಲ್ಲಿನ ಅವರ ‘ಭೈರತಿ ರಣಗಲ್’ ಪಾತ್ರದ ಗತ್ತು ಇಂದಿಗೂ ಪ್ರೇಕ್ಷಕರ ಮನಸ್ಸಿನಲ್ಲಿದೆ. ಇಂತಹ ಸಿನಿಮಾದ ಮೂಲಕ ಸ್ವತಂತ್ರ ನಿರ್ದೇಶಕರಾದ ನರ್ತನ್, ಅದೇ ಪಾತ್ರವನ್ನು ಹಿಗ್ಗಿಸಿ ಪ್ರೀಕ್ವೆಲ್ ರಚಿಸಿದರು. ‘ಭೈರತಿ ರಣಗಲ್’ ಅವರ ನಿರ್ದೇಶನದ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿತು. ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದಲ್ಲಿ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ ನರ್ತನ್ ಮುಡಿಗೇರಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ನರ್ತನ್, ‘ಪ್ರಜಾವಾಣಿ ಪತ್ರಿಕೆ ಯಾರಿಗೂ ಹೊಸತಲ್ಲ. ಆದರೆ ‘ಪ್ರಜಾವಾಣಿ’ ನೀಡುತ್ತಿರುವ ಪ್ರಶಸ್ತಿ ನನಗೆ ಹೊಸದು. ಇದಕ್ಕಾಗಿ ಪತ್ರಿಕೆಗೆ ಧನ್ಯವಾದ. ಕಿಶೋರ್ ಅವರಿಂದ ಪ್ರಶಸ್ತಿ ಪಡೆದಿರುವುದು ಸಂತೋಷ ತಂದಿದೆ. ನಮ್ಮ ನಿರ್ಮಾಪಕರಾದ ಗೀತಾ ಶಿವರಾಜ್‌ಕುಮಾರ್, ಶಿವಣ್ಣ, ಚಿತ್ರದ ತಾಂತ್ರಿಕ ವರ್ಗಕ್ಕೆ ಈ ವೇದಿಕೆ ಮೂಲಕ ಧನ್ಯವಾದ ಹೇಳುತ್ತೇನೆ’ ಎಂದರು.

# ಚೊಚ್ಚಲ ನಿರ್ದೇಶನದ ನಿಧಿ ಶ್ರೀನಿಧಿಗೆ

## ಅತ್ಯುತ್ತಮ ಚೊಚ್ಚಲ ನಿರ್ದೇಶನ: ಶ್ರೀನಿಧಿ ಬೆಂಗಳೂರು ಸಿನಿಮಾ: ಬ್ಲಿಂಕ್

ಸಿನಿ ಪ್ರೇಕ್ಷಕರಿಂದ ಹಾಗೂ ವಿಮರ್ಶಕರಿಂದ ಶಹಬ್ಬಾಸ್ ಎನಿಸಿಕೊಂಡಿದ್ದ ‘ಬ್ಲಿಂಕ್’ ಸಿನಿಮಾ ಒಟಿಟಿಯಲ್ಲಿಯೂ ಬಹಳ ಸದ್ದು ಮಾಡಿದ್ದ ಚಿತ್ರ. ವೈಜ್ಞಾನಿಕ ಟೈಂ ಟ್ರಾವೆಲರ್ ಕಥಾಹಂದರದ ಈ ಸಿನಿಮಾ ಗೆಲುವು, ನಿರ್ದೇಶಕರಾಗಿ ಮೊದಲ ಹೆಜ್ಜೆ ಇಟ್ಟಿದ್ದ ಶ್ರೀನಿಧಿ ಬೆಂಗಳೂರು ಅವರಿಗೆ ಆತ್ಮವಿಶ್ವಾಸವನ್ನು ತಂದುಕೊಟ್ಟಿತು.

ಇದೀಗ ‘ಅತ್ಯುತ್ತಮ ಚೊಚ್ಚಲ ನಿರ್ದೇಶನ’ ಪ್ರಶಸ್ತಿಯು ಅವರ ಆತ್ಮವಿಶ್ವಾಸಕ್ಕೆ ಇನ್ನಷ್ಟು ಇಂಬು ನೀಡಿದೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹಾಗೂ ನಿರ್ದೇಶಕ ಜಯತೀರ್ಥ ಅವರು ಶ್ರೀನಿಧಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.


ಅತ್ಯುತ್ತಮ ಚೊಚ್ಚಲ ನಿರ್ದೇಶನ ಪ್ರಶಸ್ತಿಯನ್ನು ಶ್ರೀನಿಧಿ ಬೆಂಗಳೂರು ಅವರಿಗೆ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಹಾಗೂ ನಿರ್ದೇಶಕ ಜಯತೀರ್ಥ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡ ಸಚಿವ ರಾಮಲಿಂಗಾ ರೆಡ್ಡಿ, ‘ಕಾಲೇಜು ದಿನಗಳಲ್ಲಿ ಬಹಳ ಸಿನಿಮಾಗಳನ್ನು ನೋಡುತ್ತಿದ್ದೆ. ರಾಜ್‌ಕುಮಾರ್ ಅವರ ಸಿನಿಮಾ ಎಂದರೆ ಬಹಳ ಇಷ್ಟ. ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಎಲ್ಲ ಭಾಷೆಯ ಸಿನಿಮಾಗಳನ್ನು ನೋಡುತ್ತಿದ್ದೆವು’ ಎಂದು ತಮ್ಮ ಹಿಂದಿನ ದಿನಗಳನ್ನು ಮೆಲುಕು ಹಾಕಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀನಿಧಿ ಬೆಂಗಳೂರು, ‘ನಮ್ಮಂಥ ಸ್ವತಂತ್ರ ತಂಡವನ್ನು ಗುರುತಿಸಿ ವೇದಿಕೆ ಕೊಟ್ಟಿದ್ದಾರೆ. ನಾವು ಮಧ್ಯಮ ವರ್ಗದವರು. ನಮ್ಮ ಕಪ್ಪು ಬಿಳುಪಿನ ಬದುಕಿಗೆ ಬಣ್ಣ ತುಂಬಿದ್ದೇ ಸಿನಿಮಾಗಳು. ಸಣ್ಣ ವಯಸ್ಸಿನಿಂದ ನನ್ನನ್ನು ತುಂಬಾ ಪ್ರಭಾವಗೊಳಿಸಿದ್ದು ಪುಟ್ಟಣ್ಣ ಕಣಗಾಲ್ ಅವರು. ‘ಚಲನಚಿತ್ರ ಓದು ಬಾರದವರ, ಓದು ಬಲ್ಲವರ, ಎಲ್ಲರನ್ನೂ ಮುಟ್ಟುವ ಮಹಾಶಕ್ತಿ ಪಡೆದಿದೆ’ ಎಂದು ಅವರು ಹೇಳುತ್ತಿದ್ದರು. ಹೀಗಾಗಿ ಈ ಕ್ಷೇತ್ರಕ್ಕೆ ಸಣ್ಣ ವಯಸ್ಸಿಗೇ ಬಲಿಪಶುವಾದೆ. ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವಾಗ ಜೊತೆಯಾಗಿ ನಿಂತದ್ದು ಗೆಳೆಯರು. ನಾವು ಗೆಳೆಯರು ಸೇರಿಯೇ ಬ್ಲಿಂಕ್ ಸಿನಿಮಾ ಮಾಡಿದ್ದು’ ಎಂದು ನೆನಪಿಸಿಕೊಂಡರು.

‘ನಾನು ರಂಗಭೂಮಿಯಿಂದ ಬಂದದ್ದು. ಜಯತೀರ್ಥ ಅವರು ರಂಗಭೂಮಿಯವರೇ. ಅವರಿಂದ ಪ್ರಶಸ್ತಿ ಪಡೆಯುತ್ತಿರುವುದು ಬಹಳ ಖುಷಿ. ಈ ಸಿನಿಮಾ ಟೈಂ ಟ್ರಾವೆಲರ್ ಆದ್ದರಿಂದ ಎಲ್ಲ ಕಡೆ ಅಪ್ರೋಚ್ ಮಾಡುವುದು ಕಷ್ಟ ಎನ್ನುತ್ತಿದ್ದರು. ಪ್ರೇಕ್ಷಕರು ಇದನ್ನು ಒಪ್ಪಿಕೊಂಡು ಇಲ್ಲಿಯವರೆಗೂ ಕರೆದುತಂದರು’ ಎಂದು ಭಾವುಕವಾಗಿ ಮಾತನಾಡಿದರು.

# ಜನರು ಶ್ಲಾಘಿಸಿದ ‘ಶಾಖಾಹಾರಿ’



ಜನಮೆಚ್ಚಿದ ಚಿತ್ರ ಪ್ರಶಸ್ತಿಯನ್ನು ನಟ ಸಾಯಿಕುಮಾರ್ ಹಾಗೂ ನಿರ್ಮಾಪಕಿ ಪುಷ್ಪ ಅರುಣ್‌ಕುಮಾರ್ ‘ಶಾಖಾಹಾರಿ’ ನಿರ್ಮಾಪಕ ರಾಜೇಶ್ ಕೀಳಂಬಿ ಹಾಗೂ ನಿರ್ದೇಶಕ ಸಂದೀಪ್ ಸುಂಕದ್ ಅವರಿಗೆ ಪ್ರದಾನಿಸಿದರು. ಚಿತ್ರತಂಡ ವೇದಿಕೆಯಲ್ಲಿತ್ತು.

## ಜನಮೆಚ್ಚಿದ ಸಿನಿಮಾ: ಶಾಖಾಹಾರಿ

ಸಂದೀಪ್ ಸುಂಕದ್ ನಿರ್ದೇಶನದ ಈ ಸಿನಿಮಾ 2024ರಲ್ಲಿ ಸದ್ದು ಮಾಡಿತ್ತು. ಚಿತ್ರದಲ್ಲಿ ನಟರಾದ ರಂಗಾಯಣ ರಘು ಹಾಗೂ ಗೋಪಾಲಕೃಷ್ಣ ದೇಶಪಾಂಡೆ ಅವರ ನಟನೆ ಪ್ರೇಕ್ಷಕರನ್ನು ಸೆಳೆದಿತ್ತು. ಚೊಚ್ಚಲ ಚಿತ್ರದಲ್ಲೇ ಸಂದೀಪ್ ಭಿನ್ನವಾದ ಸಿನಿಮಾವೊಂದನ್ನು ತೆರೆಗೆ ತಂದಿದ್ದರು. ಈ ಸಿನಿಮಾ ಅತಿ ಹೆಚ್ಚಿನ ಮತಗಳನ್ನು ಪಡೆದು ‘ಟ್ರೆಂಡ್ಸ್’ ಪ್ರಸ್ತುತ ಜನಮೆಚ್ಚಿದ ಚಿತ್ರ ಪ್ರಶಸ್ತಿಯನ್ನು ಬಾಚಿಕೊಂಡಿತು.

‘ಟ್ರೆಂಡ್ಸ್’ ಜನಮೆಚ್ಚಿದ ಪ್ರಶಸ್ತಿಯನ್ನು ನಟ ಸಾಯಿಕುಮಾರ್ ಮತ್ತು ನಿರ್ಮಾಪಕಿ ಪುಷ್ಪ ಅರುಣ್‌ಕುಮಾರ್ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಚಿತ್ರದ ನಿರ್ಮಾಪಕ ರಾಜೇಶ್ ಕೀಳಂಬಿ, ‘ಚಿತ್ರರಂಗದ ಪ್ರತಿಭೆಗಳನ್ನು ಗುರುತಿಸುತ್ತಿರುವ ‘ಪ್ರಜಾವಾಣಿ’ ಚಿತ್ರರಂಗದ ಪ್ರಗತಿಗೆ ಕಾರಣವಾಗುತ್ತಿದೆ. ಪತ್ರಿಕೆಯ ಏಜೆಂಟ್ ಆಗಿ ನಾನು ನನ್ನ ಮೊದಲ ವ್ಯವಹಾರ ಆರಂಭಿಸಿದ್ದೆ. ಹೀಗಾಗಿ ಪ್ರಜಾವಾಣಿಯ ಈ ಪ್ರಶಸ್ತಿ ತುಂಬಾ ವಿಶೇಷ. ಈ ಪ್ರಶಸ್ತಿಯ ಸಂಪೂರ್ಣ ಶ್ರೇಯಸ್ಸು ಚಿತ್ರದ ನಿರ್ದೇಶಕ ಸಂದೀಪ್ ಸುಂಕದ್ ಮತ್ತು ಇಡೀ ತಂಡಕ್ಕೆ ಸಿಗಬೇಕು. ಪ್ರಶಸ್ತಿಗಳು ಸಂತೋಷ ಕೊಡುತ್ತದೆ, ಆದರೆ ಕನ್ನಡ ಚಿತ್ರರಂಗ ಉಳಿಯಬೇಕು ಎಂದರೆ ಚಿತ್ರಮಂದಿರಗಳಲ್ಲಿ ಜನ ತುಂಬಬೇಕು. ಕನ್ನಡದಲ್ಲೂ ಒಳ್ಳೊಳ್ಳೆಯ ಚಿತ್ರಗಳು ಬರುತ್ತಿವೆ. ಅವುಗಳನ್ನು ಪ್ರೋತ್ಸಾಹಿಸಿ’ ಎಂದರು.

‘1975 ನನ್ನ ಮೊದಲ ಸಿನಿಮಾ ರಿಲೀಸ್ ಆಗಿತ್ತು. 2025ಕ್ಕೆ ಚಿತ್ರರಂಗದಲ್ಲಿ 50 ವರ್ಷ ಪೂರೈಸಿದ್ದೇನೆ. ಈ ಸ್ವರ ಅಪ್ಪ ಕೊಟ್ಟಿದ್ದು, ಸಂಸ್ಕಾರವನ್ನು ಅಮ್ಮ ನೀಡಿದರು. ಆಶೀರ್ವಾದ ಕಲಾದೇವಿಯದ್ದು. ನನ್ನ 50 ವರ್ಷಗಳ ಸಿನಿ ಮೆಲುಕನ್ನು ‘ಪ್ರಜಾವಾಣಿ’ ವೇದಿಕೆ ಮುಖಾಂತರ ಹಂಚಿಕೊಳ್ಳುತ್ತಿರುವುದು ಖುಷಿಯಾಗುತ್ತಿದೆ’ ಎಂದರು ನಟ ಸಾಯಿಕುಮಾರ್.

‘ನಾನು ಸಿನಿಮಾ ನಿರ್ಮಾಣಕ್ಕಿಳಿದು ಒಂದು ಸಣ್ಣ ಪ್ರಯತ್ನ ಮಾಡಿದ್ದೇನೆ. ಜನರು ಹೇಗೆ ಸ್ವೀಕರಿಸುತ್ತಾರೆ ಎಂದು ನೋಡಬೇಕು. ಯಶ್ ಹುಟ್ಟುವುದಕ್ಕಿಂತ ಮೊದಲೇ ನಾನು ಸಾಯಿಕುಮಾರ್ ಅವರ ಚಿತ್ರಗಳನ್ನು ನೋಡಿದ್ದೇನೆ. ದೊಡ್ಡ ಕಲಾವಿದರು ಈಗಾಗಲೇ ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಅದರಲ್ಲಿ ಯಶ್ ಹೆಜ್ಜೆ ಇಡುತ್ತಿದ್ದಾನೆ’ ಎಂದರು ನಿರ್ಮಾಪಕಿ ಪುಷ್ಪ ಅರುಣ್‌ಕುಮಾರ್.

# ಅಪ್ಪಟ ಚಿನ್ನ ಅಂದ್ರೆ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್


ಅತ್ಯುತ್ತಮ ನಟ ಪ್ರಶಸ್ತಿಯನ್ನು ನಟ ದುನಿಯಾ ವಿಜಯ್‌ಗೆ ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ನ ಸಂಸ್ಥಾಪಕ, ಮಾಲೀಕ ಹಾಗೂ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಟಿ.ಎ. ಶರವಣ ಹಾಗೂ ನಟ ರಮೇಶ್ ಅರವಿಂದ್ ಪ್ರದಾನಿಸಿದರು.

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮದ ಪ್ರಾಯೋಜಕರಲ್ಲಿ ಒಬ್ಬರಾದ ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ ಸಂಸ್ಥಾಪಕ, ಮಾಲೀಕ ಹಾಗೂ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಟಿ.ಎ. ಶರವಣ ಅವರು ತಮ್ಮ ಉದ್ಯಮ ಮತ್ತು ಕಲಾವಿದರ ಪುರಸ್ಕಾರ ಕುರಿತು ಮನದುಂಬಿ ಮಾತನಾಡಿದ್ದಾರೆ.

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮ ವಿಭಿನ್ನ ಮತ್ತು ವಿಶೇಷವಾಗಿ ಆಯೋಜಿಸುತ್ತಿದ್ದಾರೆ. ಸಿನಿಮಾ ರಂಗದ ತಂತ್ರಜ್ಞರು, ಕಲಾವಿದರನ್ನು ಸೂಕ್ಷ್ಮ ಮತ್ತು ವಿಮರ್ಶಾತ್ಮಕ ದೃಷ್ಟಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಗುರುತಿಸಲಾಗುತ್ತಿದೆ. ಸಿನಿ ರಂಗದ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಒಂದು ಅರ್ಥಪೂರ್ಣ ವೇದಿಕೆಯನ್ನು ಕಲ್ಪಿಸಿದೆ. ಪ್ರತಿ ವರ್ಷ ವೈವಿಧ್ಯ ಸಾಧಕರನ್ನು ಭವ್ಯವಾದ ವೇದಿಕೆಯಲ್ಲಿ ಗೌರವಿಸುವುದು ಹೆಮ್ಮೆಯ ಸಂಗತಿ. ಇದು ನನಗಂತೂ ಅಪಾರ ಖುಷಿ ಕೊಟ್ಟಿದೆ. ಇದು ಮೂರನೇ ವರ್ಷದ ಪುರಸ್ಕಾರದ ಸಂಭ್ರಮ. ಈ ವರ್ಷ ಗೌರವಕ್ಕೆ ಪಾತ್ರರಾಗಿರುವ ಚಂದನವನದ ಎಲ್ಲ ಕಲಾವಿದರು ತಂತ್ರಜ್ಞರಿಗೆ ಜವಾಬ್ದಾರಿ ಹಚ್ಚಿಸಿದೆ ಎಂದು ಅಂದುಕೊಂಡಿದ್ದೇನೆ. ಅವರ ಕೆಲಸವನ್ನು ಈ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ ಎನ್ನುವುದು ನನ್ನ ಭಾವನೆ. ಈ ಸಂದರ್ಭದಲ್ಲಿ ಪ್ರಜಾವಾಣಿಗೂ ಮತ್ತು ಪುರಸ್ಕೃತರಿಗೂ ಹೃದಯಪೂರ್ವಕವಾಗಿ ಅಭಿನಂದಿಸಲು ಬಯಸುತ್ತೇನೆ.

ನಾನೂ ಕಲಾಭಿಮಾನಿ. ಸಿನಿ ರಂಗದ ಒಲವು ಈಗಲೂ ನನ್ನಲ್ಲಿ ಇದೆ. ಅದಕ್ಕಿಂತ ನಾನು ಯಶಸ್ವಿ ಉದ್ಯಮಿ. 1987ರಲ್ಲಿ ವ್ಯಾಸಂಗ ಮುಗಿಸಿದ ನಂತರ ಆಭರಣ ಕ್ಷೇತ್ರದಲ್ಲಿ ಯಶಸ್ವಿ ಉದ್ಯಮಿ ಆಗಬೇಕು ಎಂದು ಸಂಕಲ್ಪ ಮಾಡಿದೆ. ಹಾಗೆಂದು ದಿಢೀರೆಂದು ಉದ್ಯಮಿ ಆಗಲು ಸಾಧ್ಯವೂ ಇಲ್ಲ. ಅದರ ಒಳಹೊರಗುಗಳನ್ನು ತಿಳಿದುಕೊಳ್ಳಲು ಅದೇ ಉದ್ಯಮದಲ್ಲಿ ಕೆಲಸಕ್ಕೆ ಸೇರಿದೆ. ಒಂದು ಸಂಸ್ಥೆಯಲ್ಲಿ ವ್ಯವಸ್ಥಾಪಕನಾಗಿ ಗೋಲ್ಡ್ ಬಿಜಿನೆಸ್ ಬಗ್ಗೆ ಆಳವಾದ ಅರಿವನ್ನು ಗಳಿಸಿದೆ. ನಂತರ ಬಸವನಗುಡಿಯಲ್ಲಿ ಚಿಕ್ಕದಾಗಿ ನನ್ನ ಕನಸಿನ ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ ಸ್ಥಾಪನೆ ಮಾಡಿದೆ. ಅದು ಇವತ್ತು ರಾಜ್ಯದಾದ್ಯಂತ ಮನೆ ಮಾತಿನಂತೆ ವಿಸ್ತಾರವಾಗಿ ಬೆಳೆದಿದೆ. ರಾಜ್ಯದ ಮೂಲೆ ಮೂಲೆಗೂ ಅದರ ಖ್ಯಾತಿ ತಲುಪಿದೆ. ನನ್ನ ಪ್ರಾಮಾಣಿಕ ಸೇವೆಯೇ ರಾಜ್ಯದ ಮನೆ ಮಾತಾಗಿ ಬೆಳೆಯಲು ಪ್ರೇರಕವಾಗಿದೆ. ನಮ್ಮ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಅನ್ನು ತಮ್ಮ ಮನೆ ಮನಗಳಲ್ಲಿ ತುಂಬಿಕೊಂಡಿರುವ ರಾಜ್ಯದ ಜನತೆಯ ಪ್ರೋತ್ಸಾಹಕ್ಕೆ ಆಭಾರಿಯಾಗಿದ್ದೇನೆ. ಬೆಂಗಳೂರು ಮಹಾನಗರದಲ್ಲಿ ಏಳು ಅಂಗಡಿಗಳು ಈಗಾಗಲೇ ದೊಡ್ಡಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನ ಎಲ್ಲ ದಿಕ್ಕಿನಲ್ಲೂ ನಮ್ಮ ಅಂಗಡಿ ನಿಮಗೆ ಕಾಣಸಿಗುತ್ತಿವೆ. ನಮ್ಮ ಗ್ರಾಹಕರಿಗೆ ಉತ್ತಮ ಬೆಲೆಗೆ ಗುಣಮಟ್ಟದ ಚಿನ್ನವನ್ನು ನೀಡಬೇಕು ಎನ್ನುವ ಉದ್ದೇಶದಿಂದಲೇ ನಾನು ನನ್ನ ಕಾಯಕವನ್ನು ನಿರ್ವಹಿಸುತ್ತಿದ್ದೇನೆ. ಗುಣಮಟ್ಟ ಮತ್ತು ಉತ್ತಮ ಬೆಲೆಗೆ ನಮ್ಮ ಗ್ರಾಹಕರಿಗೆ ಚಿನ್ನವನ್ನು ಕೊಡಬೇಕು ಎನ್ನುವುದು ನನ್ನ ಉದ್ದೇಶ ಮತ್ತು ಆಶಯ. ಈ ಕಾರಣಕ್ಕೆ ಗ್ರಾಹಕರು ಪ್ರೀತಿಯಿಂದಲೇ ನಮ್ಮ ಜೊತೆ ಬಾಂಧವ್ಯವನ್ನು ಬೆಸೆದುಕೊಂಡಿದ್ದಾರೆ.

**ಶ್ರೀ ಸಾಯಿ ಗೋಲ್ಡ್ ಎಂಬ ವಿಶಿಷ್ಟ ಆಭರಣ**

ಉದ್ಯಮ ಬೆಳೆದಂತೆ ಸ್ವಂತ ವಿನ್ಯಾಸ ಮತ್ತು ಉತ್ಪಾದನೆಯತ್ತ ಗಮನ ಹರಿಸಿದ್ದೇವೆ. ಬಗೆ ಬಗೆ ವಿನ್ಯಾಸ, ವೈವಿಧ್ಯ ಸ್ವರೂಪ, ಹಗುರದ ಆಭರವಣವನ್ನು ತಯಾರಿಸುತ್ತಿದ್ದೇವೆ. ಮಧ್ಯಮ ವರ್ಗ, ಬಡವರು, ದುಡಿಯುವ ಮಹಿಳೆಯರಿಗೆ ಅನುಕೂಲ ಆಗುವ ರೀತಿಯಲ್ಲಿ ಚಿನ್ನಾಭರಣ ರೂಪಿಸುತ್ತಿದ್ದೇವೆ. ಅದಕ್ಕೆ ಸೂಕ್ತವಾದ ಆಧುನಿಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅಪ್ಪಟ ಚಿನ್ನ, ಅಂದರೆ ಹಾಲ್ ಮಾರ್ಕ್. ಅದನ್ನೇ ನಾವು ನಮ್ಮ ಎಲ್ಲ ಶಾಖೆಗಳಲ್ಲಿ ಕೊಡುತ್ತಿದ್ದೇವೆ.

‘ಬಂಗಾರ ಬಲುಭಾರ’ ಎನ್ನುವ ಮಾತು ಎಷ್ಟು ನಿಜವೋ, ‘ಚಿನ್ನ ಯಾವುತ್ತೂ ಚೆನ್ನ’ ಎನ್ನುವ ಮಾತೂ ಅಷ್ಟೇ ನಿಜ. ಸಮಾಜದಲ್ಲಿ ಚಿನ್ನಾಭರಣ ಪ್ರತಿಷ್ಠೆಯ ಪ್ರತೀಕ ಕೂಡ. ಚಿನ್ನವನ್ನು ಧರಿಸುವುದು ಮನಸಿನ ಸಂತೋಷದ ಜೊತೆಗೆ ಸಾಮಾಜಿಕ ಗೌರವ ಮನ್ನಣೆಯನ್ನು ಕೊಡುತ್ತದೆ. ಇದು ಆಸ್ತಿ ಕೂಡ ಹೌದು. ಚಿನ್ನವನ್ನು ಖರೀದಿ ಮಾಡುತ್ತೇವೆ. ಅಂದರೆ, ಹಣವನ್ನು ಹೂಡಿಕೆ ಮಾಡುತ್ತಿದ್ದೇವೆ ಎಂದೇ ಅರ್ಥ. ದಿನೇ ದಿನೇ ಚಿನ್ನದ ಬೆಲೆ ಏರುಗತಿಯಲ್ಲಿ ಸಾಗುತ್ತದೆ. ಇವತ್ತು ಚಿನ್ನ ಖರೀದಿ ಮಾಡಿದರೆ, ಅದನ್ನು ಮುಂದೆ ಒಂದು ದಿನ ಮಾರಿದರೂ ಅದರಿಂದ ಲಾಭವೇ ಆಗುತ್ತದೆ. ಇದು ಉತ್ತಮ ಮತ್ತು ಗೌರವಯುತವಾದ ಉದ್ಯಮ ಎಂದು ಇದನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇದರ ನಂತರ ಅನೇಕ ಬೇರೆ ಬೇರೆ ಅವಕಾಶಗಳು ಬಂದರೂ ನನಗೆ ಚಿನ್ನೋದ್ಯಮವೇ ಚಂದ ಎಂದು ಅಪ್ಪಿದ್ದೇನೆ. ಇದನ್ನೇ ಇಷ್ಟ ಮತ್ತು ಪ್ರೀತಿಯಿಂದ ಮಾಡುತ್ತಿದ್ದೇನೆ. ನಾನು ನಂಬಿರುವ ಶಿರಡಿ ಸಾಯಿಬಾಬಾ ಮತ್ತು ತಿರುಪತಿ ತಿಮ್ಮಪ್ಪನ ಆಶೀರ್ವಾದ, ತಂದೆ ತಾಯಿಯವರ ಸಹಕಾರ ನನ್ನ ಯಶಸ್ಸಿಗೆ ಕಾರಣ ಆಯಿತು ಎಂದು ಭಾವಿಸಿದ್ದೇನೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಗ್ರಾಹಕರನ್ನು ಯಾವತ್ತೂ ವ್ಯಾಪಾರಿ ಮನೋಭಾವದಲ್ಲಿ ನೋಡುವುದಿಲ್ಲ. ನಮ್ಮ ಗ್ರಾಹಕರು ಸ್ನೇಹಮಯ ವಲಯವನ್ನು ನನ್ನಲ್ಲಿ ಕಂಡಿದ್ದಾರೆ. ಯಾವುದೇ ಗ್ರಾಹಕ ಬಂದರೆ ನಮ್ಮ ನೌಕರರು ಗೌರವದಿಂದ ಸ್ವಾಗತಿಸಿ ಅವರನ್ನು ಕೂರಿಸಿ ಮೊದಲು ಉಪಚರಿಸುತ್ತಾರೆ. ನಂತರವೇ ನಮ್ಮ ವ್ಯಾಪಾರದ ವಿಷಯ. ಏನೇ ಆದರೂ ಅವರ ಅಗತ್ಯಕ್ಕೆ ಸ್ಪಂದಿಸುವ ಮತ್ತು ಗುಣಮಟ್ಟದ ಸೇವೆಯನ್ನು ಕೊಡುವುದು ನಮ್ಮ ಕರ್ತವ್ಯ. ಫ್ಯಾಮಿಲಿ ಡಾಕ್ಟರ್, ಫ್ಯಾಮಿಲಿ ಟೈಲರ್ ಹೇಗೆಯೋ, ಹಾಗೆ ನಮ್ಮ ಗ್ರಾಹಕರಿಗೆ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಫ್ಯಾಮಿಲಿ ಜ್ಯೂಯಲರ್ಸ್ ಅನ್ನುವಂತೆ ಈ ಕಾರಣಕ್ಕೆ ಆಗಿದೆ. ಮುಂದೆ ರಾಜ್ಯದ ಬೇರೆ ಕಡೆಯೂ ನಮ್ಮ ಶಾಖೆಯನ್ನು ತೆರೆಯುವ ಬಯಕೆಯಿದೆ.

ನಮ್ಮದೇ ಚಿತ್ರ ನಿರ್ಮಾಣ ಸಂಸ್ಥೆಯೂ ಇದೆ. ‘ಶಿರಡಿ ಸಾಯಿ ಬಾಬಾ’ ಧಾರಾವಾಹಿಯನ್ನು ನಿರ್ಮಿಸಿದ್ದೇನೆ. ಅದನ್ನು ಅಪಾರ ಭಕ್ತಿಭಾವದಿಂದ ಮಾಡಿದ್ದೆ. ಈಗಲೂ ಆ ರೀತಿಯ ಕೆಲಸ ಮಾಡಬೇಕು ಎನ್ನುವ ಕೋರಿಕೆಗಳು ಮೇಲಿಂದ ಮೇಲೆ ಬರುತ್ತಿವೆ. ಮುಂದೆ ಸಮಯ ಬಂದರೆ ಚಂದನ ವನದಲ್ಲಿಯೂ ಮತ್ತೆ ನಮ್ಮ ಕನಸುಗಳು ಗರಿಗೆದರಬಹುದು. ನನ್ನ ಉದ್ಯಮದ ಜೊತೆ ಜನರ ನೋವು ನಲಿವಿಗೂ ಸ್ಪಂದಿಸುತ್ತಿದ್ದೇನೆ. ಸಮಾಜಮುಖಿ ಕೆಲಸ ಮಾಡುತ್ತಾ, ರಾಜಕಾರಣವನ್ನು ಪ್ರವೇಶಿಸಿದ್ದೇನೆ. ಈಗ ಎರಡನೇ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೇನೆ. ಭರವಸೆ ಸಮಿತಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಂತ ಹಂತವಾಗಿ ಬೆಳವಣಿಗೆ ಹೊಂದುತ್ತಿದ್ದೇನೆ. ಈ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ನೀಡುವ ಕೆಲಸವನ್ನೂ ಮಾಡುತ್ತಿದ್ದೇನೆ.



‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ನ ಸಂಸ್ಥಾಪಕ, ಮಾಲೀಕ ಹಾಗೂ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಟಿ.ಎ. ಶರವಣ

### ಟಿ.ಎ.ಶರವಣ–ವಿಜಯ್ ನಗೆ ಚಟಾಕಿ

ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕರಾದ ಟಿ.ಎ. ಶರವಣ ಹಾಗೂ ನಟ ದುನಿಯಾ ವಿಜಯ್ ನಡುವೆ ಹಾಸ್ಯ ಸಂಗತಿಯೊಂದು ನಡೆಯಿತು. ‘ಚಿನ್ನದ ಅಂಗಡಿ ಮಾಲೀಕರು ಪ್ರಶಸ್ತಿ ಕೊಡುತ್ತಾರೆ ಎಂದರೆ ಗೋಲ್ಡ್ ಚೈನ್ ಕೊಡ್ತಾರೆ ಅಂದ್ಕೊಂಡಿದ್ದೆ’ ಎಂದು ವಿಜಯ್ ನಗೆ ಚಟಾಕಿ ಹಾರಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಶರವಣ ಅವರು ನಗುತ್ತಲೇ, ‘ವಿಜಯ್ ನಮ್ಮ ಕಾಯಂ ಗ್ರಾಹಕ’ ಎಂದರು. ‘ಮುಂದಿನ ಬಾರಿ ಚಿನ್ನದಲ್ಲೇ ಕಿರೀಟ, ಗದೆ ಮಾಡಿಸಿಕೊಡಿ’ ಎಂದು ತಮಾಷೆಯ ಚಟಾಕಿ ಹಾರಿಸಿದರು ವಿಜಯ್.

### ನಮ್ಮ ಕುಟುಂಬದ ಸದಸ್ಯರು

ಗ್ರಾಹಕರು ಅಲ್ಲದೆ, ಸಿಬ್ಬಂದಿ ಜೊತೆಗೂ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಕೌಟುಂಬಿಕ ಬಾಂಧವ್ಯವನ್ನು ಹೊಂದಿದೆ. ನಾವು ಒಂದು ಅಂಗಡಿಯನ್ನು ನಡೆಸಬೇಕು ಅಂದರೆ ಕನಿಷ್ಠ 70–80 ಸಿಬ್ಬಂದಿ ಇರಬೇಕಾಗುತ್ತದೆ. ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ನಲ್ಲಿ ಅದೇ ಪ್ರಮಾಣದಲ್ಲಿ ಉದ್ಯೋಗಿಗಳು ಇದ್ದಾರೆ. ಅವರನ್ನು ನೌಕರರು ಎನ್ನುವುದಕ್ಕಿಂತ ಅವರನ್ನು ನಮ್ಮ ಕುಟುಂಬದ ಸದಸ್ಯರು ಎಂದು ಹೇಳಲು ಬಯಸುತ್ತೇನೆ. ಶೀಘ್ರದಲ್ಲಿ ಕನಕಪುರ ಮಾರ್ಗದಲ್ಲಿ ಮತ್ತೊಂದು ಅಂದರೆ, ಎಂಟನೆಯ ನಮ್ಮ ಅಂಗಡಿ ತಲೆ ಎತ್ತಲಿದೆ.

ನನ್ನ ಉದ್ಯಮದ ಜೊತೆ ಸಾಮಾಜಿಕ ಕೆಲಸ ಕಾರ್ಯಗಳನ್ನೂ ಮಾಡಿಕೊಂಡು ಬರುತ್ತಿದ್ದೇನೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹೆಸರಿನಲ್ಲಿ ‘ಅಪ್ಪಾಜಿ ಕ್ಯಾಂಟೀನ್’ ನಡೆಸುತ್ತಿದ್ದೇನೆ. ಹಸಿದವರಿಗೆ ಅನ್ನ ನೀಡಬೇಕು ಎನ್ನುವುದು ದೇವೇಗೌಡರ ಕನಸಾಗಿತ್ತು. ಅದರ ಸಾಂಕೇತಿಕ ರೂಪದಂತೆ ಕ್ಯಾಂಟೀನ್ ರೂಪಿಸಿದ್ದು, ಕಡಿಮೆ ಬೆಲೆಗೆ ರುಚಿ ಮತ್ತು ಶುಚಿಯ ಊಟವನ್ನು ಕೊಡುತ್ತಿದ್ದೇನೆ. ನಮ್ಮ ಕ್ಯಾಂಟೀನ್‌ನ ವಿಶೇಷ ಮುದ್ದೆ ಊಟ. ಅದನ್ನು ಸವಿಯಲೂ ದೂರದ ಸ್ಥಳದಿಂದಲೂ ಕೆಲವರು ಬರುತ್ತಾರೆ ಎನ್ನುವುದು ಸಮಾಧಾನದ ವಿಷಯ.

## ಭೀಮನಿಗೆ ಡಬಲ್ ಧಮಾಕ



### ಅತ್ಯುತ್ತಮ ನಟ ಹಾಗೂ ಅತ್ಯುತ್ತಮ ಚಿತ್ರಕಥೆ


**ದುನಿಯಾ ವಿಜಯ್, ಚಿತ್ರ: ಭೀಮ**

‘ಭೀಮ’ ಚಿತ್ರದ ನಟನೆಗಾಗಿ ದುನಿಯಾ ವಿಜಯ್ ಈ ಪ್ರಶಸ್ತಿ ಮುಡಿಗೇರಿಸಿಕೊಂಡರು. ನಟ ರಮೇಶ್ ಅರವಿಂದ್ ಈ ಪ್ರಶಸ್ತಿಯನ್ನು ವಿತರಿಸಿದರು. ‘ಸಲಗ’ ಬಳಿಕ ‘ಭೀಮ’ ಹಿಟ್ ಆಯಿತು. ನಿರ್ದೇಶಕನಾಗಿ ನನ್ನನ್ನು ಕರೆದುಕೊಂಡು ಹೋಗುತ್ತಿರುವ ಕನ್ನಡದ ಜನತೆಗೆ ಈ ಪ್ರಶಸ್ತಿ ಅರ್ಪಣೆ. ನನ್ನ ಚಿತ್ರದಲ್ಲಿ, ಹಾಡುಗಳಲ್ಲಿ ತುಂಬ ಬಿಲ್ಡಪ್ ಇಡುವುದಿಲ್ಲ. ಗ್ರೌಂಡ್ ಲೆವೆಲ್ ಜನ ಸಿನಿಮಾ ನೋಡುವುದು. ಅವರಿಗೆ ಸಹಜ ಎನ್ನಿಸಬೇಕು. ಅವರಿಗೆ ಸಿನಿಮಾ ಮಾಡಬೇಕು. ಎಲ್ಲರಿಗೂ ಸಿನಿಮಾದಲ್ಲಿ ನಡೆಯುತ್ತಿರುವುದು ನಮ್ಮ ಮನೆಯಲ್ಲಿ ನಡೆಯುತ್ತಿರುವ ಸನ್ನಿವೇಶ ಅನ್ನಿಸಬೇಕು. ಚಿತ್ರದ ಪ್ರತಿಯೊಬ್ಬ ಕಲಾವಿದ ಅನುಭವಿಸುವ ಅವಮಾನಗಳು ಪಾತ್ರವಾಗಬೇಕು. ಅದಕ್ಕೆ ಯಶಸ್ಸು ಜಾಸ್ತಿ. ಉತ್ತರ ಕರ್ನಾಟಕ ನನ್ನ ಬದುಕಿನ ಮತ್ತೊಂದು ತವರು. ಅದು ಯಾರಿಗೂ ಬೆಲೆ ಕಟ್ಟಲಾಗದಷ್ಟು ಋಣವನ್ನು ನನ್ನ ತಲೆ ಮೇಲೆ ಇಟ್ಟಿದೆ. ಹೀಗಾಗಿ ನನ್ನ ಚಿತ್ರಗಳಲ್ಲಿ ಉತ್ತರ ಕರ್ನಾಟಕದ ಸೊಗಡು ಇರುತ್ತದೆ’ ಎಂದರು.

## ಪ್ರತಿಭಾವಂತ ನಟನಿಗೆ ಸಂದ ಗೌರವ

### ಅತ್ಯುತ್ತಮ ಪೋಷಕ ನಟ

**ಗೋಪಾಲಕೃಷ್ಣ ದೇಶಪಾಂಡೆ, ಚಿತ್ರ: ಶಾಖಾಹಾರಿ**



**ಗೋಪಾಲಕೃಷ್ಣ ದೇಶಪಾಂಡೆ** ‘ಶಾಖಾಹಾರಿ’ ಸಿನಿಮಾದಲ್ಲಿನ ನಟನೆಗಾಗಿ ‘ಅತ್ಯುತ್ತಮ ಪೋಷಕ ನಟ’ ಪ್ರಶಸ್ತಿ ಮುಡಿಗೇರಿದೆ. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಗೋಪಾಲಕೃಷ್ಣ ದೇಶಪಾಂಡೆ, ‘ಪ್ರಜಾವಾಣಿ ಪತ್ರಿಕೆಯನ್ನು ತುಂಬಾ ಚಿಕ್ಕವನಿದ್ದಾಗಿನಿಂದಲೂ ಓದುತ್ತಿದ್ದೇನೆ. ಆಗ ನಮ್ಮ ತಂದೆ ಓದುತ್ತಿದ್ದರು. ಈಗ ನಾನು ಓದುತ್ತಿದ್ದೇನೆ. ನನ್ನ ಮಗನೂ ಓದಲು ಆರಂಭಿಸಿದ್ದಾನೆ. ಪ್ರಜಾವಾಣಿ ನಮ್ಮಲ್ಲಿ ಒಂದು ಪ್ರಜ್ಞೆ ಬೆಳೆಸಿದೆ. ಸಾಮಾಜಿಕವಾಗಿ, ರಾಜಕೀಯವಾಗಿ ಜಾಗೃತಿ ಮೂಡಿಸಿದೆ. ನನ್ನನ್ನು ಹೆಚ್ಚು ಹೆಚ್ಚು ಜಾಗೃತನನ್ನಾಗಿ ಮಾಡಿದೆ. ಇದೇ ಪತ್ರಿಕೆ ಇಂದು ನನಗೆ ಪ್ರಶಸ್ತಿ ಕೊಟ್ಟು ನನ್ನ ಕೆಲಸದ ಬಗ್ಗೆ ಇನ್ನೂ ಹೆಚ್ಚು ಜಾಗೃತನಾಗಿರಬೇಕು ಎಂಬ ಎಚ್ಚರಿಕೆಯನ್ನೂ ನೀಡಿದೆ’ ಎಂದರು.

ಪ್ರಶಸ್ತಿ ತಂದುಕೊಟ್ಟ ಸಿನಿಮಾದ ಕುರಿತು ಮಾತನಾಡಿ, ‘ಈ ಸಿನಿಮಾದ ಯುವ ತಂಡವು ನನಗೆ ಅವಕಾಶ ಕೊಟ್ಟಿದೆ. ತಂಡದ ಹುಡುಗರಿಗೆಲ್ಲ ಧನ್ಯವಾದ’ ಎನ್ನುತ್ತಾ, ‘ನನ್ನ ಕಾಲದ ತುಂಬಾ ಜನರಿಗೆ ಸ್ಫೂರ್ತಿ ತುಂಬಿರುವ ಇಬ್ಬರು ನಟರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ’ ಎಂದು ನಟರಾದ ರಂಗಾಯಣ ರಘು ಹಾಗೂ ಅಚ್ಯುತ್ ಕುಮಾರ್ ಅವರಿಗೆ ಪ್ರಶಸ್ತಿ ಅರ್ಪಿಸಿದರು.

## ‘ಅನಾಹಿತ’ಗೆ ದುಪ್ಪಟ್ಟು ಸಂಭ್ರಮ



### ಅತ್ಯುತ್ತಮ ನಟಿ ಹಾಗೂ ಜನಮೆಚ್ಚಿದ ನಟಿ

**ಅಂಕಿತಾ ಅಮರ್, ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ**

**ಕಿರುತೆರೆಯಿಂದ** ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ಅಂಕಿತಾ ಅಮರ್ ಸದ್ಯ ಚಂದನವನದಲ್ಲಿ ತಮ್ಮ ಸಿನಿ ಬ್ಯಾಂಕ್ ಹಿಗ್ಗಿಸಿಕೊಳ್ಳುತ್ತಿರುವ ನಟಿ. ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿ ನಟನೆಗಾಗಿ ಇದೀಗ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದಲ್ಲಿ ಅತ್ಯುತ್ತಮ ನಟಿ ಹಾಗೂ ‘ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್’ ಪ್ರಸ್ತುತ ಜನಮೆಚ್ಚಿದ ನಟಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅಂಕಿತಾ, ‘ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಬಳಿಕ ನನಗೆ ಸಿಗುತ್ತಿರುವ ಮೊದಲ ಪ್ರಶಸ್ತಿಯಿದು. ಒಂದೇ ದಿನ ಎರಡು ಪ್ರಶಸ್ತಿ ಪಡೆದುಕೊಳ್ಳುತ್ತಿರುವುದು ಇನ್ನೂ ಖುಷಿ ತಂದಿದೆ. ಪ್ರಶಸ್ತಿಯ ವಿನ್ಯಾಸದಲ್ಲೇ ಕರ್ನಾಟಕವಿದೆ. ಇದು ಬಹಳ ಖುಷಿಕೊಟ್ಟಿತು. ಪ್ರಜಾವಾಣಿ ತಂಡಕ್ಕೆ ಧನ್ಯವಾದ. ನನ್ನ ನಿರ್ದೇಶಕ ಚಂದ್ರಜಿತ್ ಬೆಳ್ಯಪ್ಪ ಅವರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ. ಗುರುವಿನ ಸ್ಥಾನದಲ್ಲಿ ನಿಂತು ಅನಾಹಿತ ಪಾತ್ರಕ್ಕೆ ಜೀವ ತುಂಬಿಸಿದ್ದರು. ನಮ್ಮ ತಂಡದ ಮೇಲೆ ನಂಬಿಕೆ ಇಟ್ಟ ನಿರ್ಮಾಪಕರಾದ ರಕ್ಷಿತ್ ಶೆಟ್ಟಿ ಅವರಿಗೂ ಧನ್ಯವಾದ’ ಎಂದರು.

## ‘ಕೆರೆಬೇಟೆ’ಗೆ ಪ್ರಶಸ್ತಿಗಳ ಗರಿ

**ಅತ್ಯುತ್ತಮ ಸಂಕಲನ: ಜ್ಞಾನೇಶ್ ಬಿ. ಮಠದ್, ಚಿತ್ರ: ಕೆರೆಬೇಟೆ**

**ಮಲೆನಾಡಿನ** ಸೊಗಡು, ಅಲ್ಲಿನ ಆಚರಣೆ, ಭಾಷೆಯ ಜೊತೆಗೆ ವಿಶಿಷ್ಟ ಕಥಾ ನಿರೂಪಣಾ ಶೈಲಿಯಿಂದ ಗಮನಸೆಳೆದಿದ್ದ ಸಿನಿಮಾ ‘ಕೆರೆಬೇಟೆ’. ಕಥೆಯೊಂದಿಗೆ ದೃಶ್ಯ ನಿರೂಪಣಾ ವೈವಿಧ್ಯದಿಂದಲೂ ಸಿನಿಪ್ರಿಯರ ಮನ ಗೆದ್ದಿತ್ತು. 2024ರ ಮಾರ್ಚ್ ತಿಂಗಳಿನಲ್ಲಿ ತೆರೆಕಂಡ ಈ ಸಿನಿಮಾ ಹಲವು ಸಿನಿಮೋತ್ಸವಗಳಲ್ಲಿ ಪ್ರದರ್ಶನ ಕಂಡಿದ್ದು, ಹೊಸ ಪ್ರಯತ್ನವಾಗಿ ಹೆಸರು ಮಾಡಿತು.

2025ರ ಸಿನಿ ಸಮ್ಮಾನ ಅತ್ಯುತ್ತಮ ಧ್ವನಿಗ್ರಹಣ, ಶಬ್ದವಿನ್ಯಾಸ ವಿಭಾಗದಲ್ಲಿಯೂ ಪ್ರಶಸ್ತಿ ಗಳಿಸಿಕೊಂಡ ಈ ಸಿನಿಮಾದ ‘ಅತ್ಯುತ್ತಮ ಸಂಕಲನ’ಕ್ಕಾಗಿ ಜ್ಞಾನೇಶ್ ಬಿ. ಮಠದ್ ಅವರಿಗೆ ಪ್ರಶಸ್ತಿ ನೀಡಲಾಯಿತು. ಚಂದನವನದ ಸಂಕಲನಕಾರರಾದ ಕೆಂಪರಾಜ್ ಹಾಗೂ ಬಸವರಾಜ ಅರಸ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಸಿನಿಮಾದ ಸಂಕಲನ ಕುರಿತು ಮಾತನಾಡಿದ ಬಸವರಾಜ್ ಅರಸ್ ಅವರು, ‘ಎಡಿಟಿಂಗ್ ಎನ್ನುವುದು ಸವಾಲಿನ ಕೆಲಸ. ಅದನ್ನು ಕಲಿತು ಉತ್ತಮವಾಗಿ ದುಡಿಸಿಕೊಳ್ಳುವುದು ಒಂದು ಸವಾಲು. ಸಿನಿಮಾವನ್ನು ಎಷ್ಟು ಪರಿಣಾಮಕಾರಿಯಾಗಿ ರೂಪಿಸಿಕೊಡಬೇಕು ಎಂಬ ಜವಾಬ್ದಾರಿ ಸಂಕಲನಕಾರನದ್ದು. ಸಿನಿಮಾದ ಪ್ರತಿ ಫ್ರೇಮ್ ಅನ್ನೂ ಜವಾಬ್ದಾರಿಯುತವಾಗಿ ನಿರ್ಧರಿಸಬೇಕಾಗುತ್ತದೆ. ನಮ್ಮ ಸಂಕಲನದ ಮೇಲೆ ನಂಬಿಕೆ ಇಟ್ಟು ಕೆಲಸ ಕೊಟ್ಟ ನಿರ್ದೇಶಕರು, ನಿರ್ಮಾಪಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ’ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜ್ಞಾನೇಶ್ ಬಿ. ಮಠದ್, ‘ಪ್ರಶಸ್ತಿ ನೀಡಿದ ಪ್ರಜಾವಾಣಿಗೆ ಧನ್ಯವಾದ. ನಿರ್ದೇಶಕ ರಾಜ್‌ಗುರು ಹಾಗೂ ನಾಯಕ ಗೌರಿಶಂಕರ್, ಇಡೀ ಸಿನಿಮಾ ತಂಡಕ್ಕೆ ಧನ್ಯವಾದಗಳು. ಹಿರಿಯ ಸಂಕಲನಕಾರರಿಂದ ಈ ಪ್ರಶಸ್ತಿ ಪಡೆದುಕೊಂಡಿರುವುದು ಬಹಳ ಹೆಮ್ಮೆ ಎನಿಸುತ್ತಿದೆ’ ಎಂದು ಸಂತಸ ವ್ಯಕ್ತಪಡಿಸಿದರು.



ಜ್ಞಾನೇಶ್ ಬಿ.ಮಠದ್‌ಗೆ ಅತ್ಯುತ್ತಮ ಸಂಕಲನ ಪ್ರಶಸ್ತಿ ವಿತರಿಸಿದ ಬಸವರಾಜ್ ಅರಸ್, ಕೆಂಪರಾಜು



## ಶೃತಿಗೆ ಒಲಿದ ಪ್ರಶಸ್ತಿ

**ಅತ್ಯುತ್ತಮ ಹಿನ್ನೆಲೆ ಗಾಯಕಿ: ಶೃತಿ ಪ್ರಹ್ಲಾದ, ಚಿತ್ರ: ಕರಟಕ ದಮನಕ –‘ಹಿತ್ತಲಕ ಕರಿಬ್ಯಾಡ ಮಾವ’**

**ಯಾವುದೇ** ಸಿನಿಮಾದ ಹೆಸರು ಹೆಚ್ಚು ಕೇಳಿಬರುತ್ತಿದೆ ಎಂದರೆ, ಆ ಸಿನಿಮಾದ ಹಾಡೊಂದು ಜನರ ಬಾಯಲ್ಲಿ ಗುನುಗುತ್ತಿದೆ ಎಂದೇ ಅರ್ಥ. ಉತ್ತರ ಕರ್ನಾಟಕ ಭಾಷಾ ಶೈಲಿಯಲ್ಲಿ ಮೂಡಿಬಂದ ‘ಕರಟಕ ದಮನಕ’ ಸಿನಿಮಾದ ‘ಹಿತ್ತಲಕ ಕರಿಬ್ಯಾಡ ಮಾವ...’ ಹಾಡು ಕೂಡ ಬಹಳ ಫೇಮಸ್ ಆದ ಈಚಿನ ಹಾಡು. ಈ ಹಾಡನ್ನು ಹಾಡಿರುವ ಗಾಯಕಿ ಶೃತಿ ಪ್ರಹ್ಲಾದ ಅವರಿಗೆ ಈ ಬಾರಿಯ ‘ಅತ್ಯುತ್ತಮ ಗಾಯಕಿ’ ಪ್ರಶಸ್ತಿ ದೊರೆತಿದ್ದು, ನಟಿ ಪ್ರಿಯಾಂಕಾ ಉಪೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಟ್ರಾವೆಲ್ ಮಾರ್ಟ್‌ನ ಮೋಹನ್ ಸುಂದರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ತಮ್ಮ ಸಿನಿಮಾ ನಂಟಿನ ಕುರಿತು ಮಾತನಾಡಿದ ಆರ್. ಅಶೋಕ್, ‘ನಾನು ಈಚೆಗೆ ನೋಡಿದ್ದು ಗಣೇಶ್ ಅಭಿನಯದ ಸಿನಿಮಾ. ನಾನು ರಾಜ್‌ಕುಮಾರ್ ಅಭಿಮಾನಿ. ಅವರ ಚಿತ್ರ ಬಿಡುಗಡೆಯಾದ ಮೊದಲ ದಿನವೇ ಥಿಯೇಟರ್‌ಗೆ ನುಗ್ಗಿಕೊಂಡು ಹೋಗಿ ನೋಡುತ್ತಿದ್ದೆ. ‘ಆಪರೇಷನ್ ಡೈಮಂಡ್ ರಾಕೆಟ್’ ಸಿನಿಮಾವನ್ನು ಗೀತಾಂಜಲಿ ಥಿಯೇಟರ್‌ನಲ್ಲಿ ಹೀಗೇ ನುಗ್ಗಿಕೊಂಡು ಹೋಗಿದ್ದೆ’ ಎನ್ನುತ್ತಾ, ‘ನಾನು ಕೂಡ ಬಾತ್‌ರೂಂ ಸಿಂಗರ್’ ಎಂದು ನಗೆಚಟಾಕಿ ಹಾರಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಗಾಯಕಿ ಶೃತಿ ಪ್ರಹಾದ, ಪ್ರಶಸ್ತಿಯನ್ನು ತಂದೆ–ತಾಯಿಗೆ ಅರ್ಪಿಸಿದರು. ಹಾಡಲು ಅವಕಾಶ ಕೊಟ್ಟ ಯೋಗರಾಜ್ ಭಟ್ಟರಿಗೆ, ಹರಿಕೃಷ್ಣ, ವಾಣಿಯವರಿಗೆ ಧನ್ಯವಾದ ಸಲ್ಲಿಸಿ, ‘ಹಿತ್ತಲಕ ಕರಿಬ್ಯಾಡ ಮಾವ...’ ಹಾಡನ್ನು ಹಾಡಿ ರಂಜಿಸಿದರು.

## ಶ್ರಮಕ್ಕೆ ಸಿಕ್ಕ ಪ್ರತಿಫಲ

**ಅತ್ಯುತ್ತಮ ಛಾಯಾಚಿತ್ರಗ್ರಹಣ ಶೇಖರ್ ಚಂದ್ರ ಚಿತ್ರ: ಮ್ಯಾಕ್ಸ್**




ಅತ್ಯುತ್ತಮ ಛಾಯಾಚಿತ್ರಗ್ರಹಣ ಪ್ರಶಸ್ತಿಯನ್ನು ಶೇಖರ ಚಂದ್ರ ಅವರಿಗೆ ಸತ್ಯ ಹೆಗಡೆ ಮತ್ತು ಜೆ.ಜೆ.ಕೃಷ್ಣ ನೀಡಿದರು.

**ಸುಮಾರು** ಎರಡೂವರೆ ವರ್ಷಗಳ ನಂತರ ನಟ ಸುದೀಪ್ ಅವರನ್ನು ತೆರೆ ಮೇಲೆ ತಂದ ‘ಮ್ಯಾಕ್ಸ್’ ಸಿನಿಮಾ, ಮಾಸ್ ಪ್ರೇಕ್ಷಕರಲ್ಲಿ ಹೊಸ ಹುರುಪು ತುಂಬಿತ್ತು. ಸಿನಿಮಾದ ಆ್ಯಕ್ಷನ್ ಸನ್ನಿವೇಶಗಳು ಅಭಿಮಾನಿಗಳಲ್ಲಿ ಕಿಚ್ಚು ಹೊತ್ತಿಸಿದ್ದವು. ವಿಜಯ್ ಕಾರ್ತಿಕೇಯ ನಿರ್ದೇಶನದಲ್ಲಿ ಮೂಡಿಬಂದ ಈ ಚಿತ್ರ 2024ರ ಸಾಲಿನ ‘ಅತ್ಯುತ್ತಮ ಛಾಯಾಚಿತ್ರಗ್ರಹಣ’ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡಿದೆ.

ಮ್ಯಾಕ್ಸ್ ಛಾಯಾಚಿತ್ರಗ್ರಾಹಕ ಶೇಖರ್ ಚಂದ್ರ ಅವರಿಗೆ ಈ ಪ್ರಶಸ್ತಿ ಸಂದಿದ್ದು, ಹಿರಿತೆರೆಯ ಛಾಯಾಚಿತ್ರಗ್ರಾಹಕ ಸತ್ಯ ಹೆಗಡೆ ಹಾಗೂ ಕರ್ನಾಟಕ ಚಲನಚಿತ್ರ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಜೆ.ಜಿ. ಕೃಷ್ಣ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಛಾಯಾಗ್ರಹಣದ ವೈಭವದ ಕುರಿತು ಮಾತನಾಡಿದ ಜೆ.ಜಿ. ಕೃಷ್ಣ ಅವರು, ‘ಮನೆಯೊಂದರಲ್ಲಿ ಮಗು ಇದ್ದರೆ, ಆ ಮನೆಯಲ್ಲಿ ಎಲ್ಲರೂ ಮಗುವನ್ನು ನೋಡುತ್ತಾರೆ, ಆಡುತ್ತಾರೆ. ಆದರೆ ತಾಯಿಗೆ ಮಗು ಕಾಣುವುದೇ ಬೇರೆ ರೀತಿ. ಮಗುವಿನ ಫೋಟೊವನ್ನು ಹೇಗೆಲ್ಲಾ ತೆಗೆದು ಅದರ ಅಂದವನ್ನು, ಮುದ್ದಾಟವನ್ನು ಸೆರೆಹಿಡಿಯಬಹುದು ಎಂಬ ತವಕ. ಫೋಟೊ ತೆಗೆದು ಎಲ್ಲರಿಗೂ ತೋರುವ ಆಸೆ. ಅದೇ ಆಕೆಗೆ ಸಂತೋಷ. ಛಾಯಾಗ್ರಹಣ ಎಂದರೆ ಹಾಗೇ’ ಎಂದು ಸುಂದರವಾಗಿ ಹೋಲಿಕೆ ಮಾಡಿ ಹೇಳಿದರು.

ಪ್ರಶಸ್ತಿ ಪಡೆದ ಶೇಖರ್ ಚಂದ್ರ ಮಾತನಾಡಿ, ‘ಪ್ರಜಾವಾಣಿ ನನ್ನ ಕೆಲಸವನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಬಹಳ ಖುಷಿಯಾಗಿದೆ. ಚಿತ್ರೀಕರಣದ ಸಂದರ್ಭದಲ್ಲಿಯೇ ಕಥೆಯ ಸಾಮರ್ಥ್ಯ ಅರಿವಿಗೆ ಬಂದಿತ್ತು. ನನ್ನನ್ನು ಗುರುತಿಸುವಷ್ಟು ಸ್ಪೇಸ್ ನನಗಿದೆ ಅನಿಸಿತ್ತು. ಪ್ರಾಮಾಣಿಕವಾಗಿ ಶ್ರಮ ಹಾಕಿ ಕೆಲಸ ಮಾಡಿದ್ದೆ. ಆ ಶ್ರಮಕ್ಕೆ ಪ್ರಶಸ್ತಿಯ ಮೂಲಕ ಫಲ ಸಿಕ್ಕಿದೆ’ ಎಂದು ಖುಷಿಯಿಂದ ಹೇಳಿಕೊಂಡರು.

ಸಿನಿಮಾ ಚಿತ್ರೀಕರಣ ನಡೆದ 130 ದಿನಗಳ ಪೈಕಿ 110 ದಿನಗಳು ರಾತ್ರಿ ವೇಳೆಯೇ ಚಿತ್ರೀಕರಣ ನಡೆದಿದ್ದು, ತಮ್ಮ ಸವಾಲುಗಳೇ ಸಿನಿಮಾದ ವಿಶೇಷ ಸಂಗತಿಗಳಾದ ಬಗೆಯನ್ನು ಹಂಚಿಕೊಂಡರು.

# ಸಮ್ಮಾನ ಸಂಭ್ರಮ



ರಾಧಿಕಾ ನಾರಾಯಣ್ ತಂಡದ ನೃತ್ಯ




ಹಂಸಲೇಖ



ದಿಗ್ಗಜರ ಉಭಯ ಕುಶಲೋಪರಿ



ಗೀತಾ ಶಿವರಾಜ್‌ಕುಮಾರ್, ಶಿವರಾಜ್‌ಕುಮಾರ್ ಜತೆಗೆ ಮಾಲಾಶ್ರೀ ಅವರ ಸುಂದರ ಕ್ಷಣ



ಮಮತಾ ರಾಹುತ್



ನಟ ಪೃಥ್ವಿ ಅಂಬಾರ್ ತಂಡದಿಂದ ನೃತ್ಯ

# ರಂಗಭೂಮಿ ಕಲಾವಿದೆಗೆ ಒಲಿದ ಗೌರವ

## ಅತ್ಯುತ್ತಮ ಪೋಷಕ ನಟಿ: ಪ್ರಿಯಾ ಶಠಮರ್ಷಣ, ಚಿತ್ರ:ಭೀಮ



ರಂಗಭೂಮಿ ಕಲಾವಿದೆ ಪ್ರಿಯಾ ಶಠಮರ್ಷಣ 'ಭೀಮ' ಚಿತ್ರದಲ್ಲಿ ತಮ್ಮ ಅದ್ಭುತ ಅಭಿನಯಕ್ಕಾಗಿ ಈ ಪ್ರಶಸ್ತಿ ಪಡೆದರು. 'ಕಲಾವಿದೆಯಾಗಿ 16 ವರ್ಷಗಳಾದವು. ನನ್ನ ವೃತ್ತಿ ಬದುಕಿನಲ್ಲಿ ತೆಗೆದು-ಕೊಳ್ಳುತ್ತಿರುವ ಮೊದಲ ಪ್ರಶಸ್ತಿ. ತುಂಬಾ ವಿಶೇಷವಿದು. ಪ್ರಶಸ್ತಿ ನೀಡಿ ಜವಾಬ್ದಾರಿ ಹೆಚ್ಚಿಸಿದ್ದಕ್ಕೆ ಪ್ರಜಾವಾಣಿಗೆ ಧನ್ಯವಾದಗಳು. ನನ್ನ ಬದುಕಿನಲ್ಲಿ ಆದ ಮ್ಯಾಜಿಕ್‌ಗೆ ಸೂತ್ರಧಾರ 'ಭೀಮ' ಚಿತ್ರದ ನಿರ್ದೇಶಕ ದುನಿಯಾ ವಿಜಯ್. ಇವತ್ತು ನಾನು ಜೀವನದಲ್ಲಿ ದುಡಿದು ತಿನ್ನುತ್ತಿರುವ ಪ್ರತಿ ತುತ್ತಿನಲ್ಲಿ ವಿಜಯ್ ಅವರ ಋಣವಿದೆ. ಇಂಥ ಒಂದು ಪವರ್‌ಫುಲ್ ಪಾತ್ರವನ್ನು ರಿಸ್ಕ್ ತೆಗೆದುಕೊಂಡು ಹೊಸ ಹುಡುಗಿಗೆ ನೀಡಿದ್ದಕ್ಕೆ ಅವರಿಗೆ ಧನ್ಯವಾದಗಳು. ನಾನು ಚಿಕ್ಕಂದಿನಿಂದ ಪ್ರಜಾವಾಣಿ ಪತ್ರಿಕೆ ಓದುಗಳು' ಎಂದರು ಪ್ರಿಯಾ.

# ಗುನು ಗುನುಗುವ 'ದ್ವಾಪರ'ಕ್ಕೆ ಗರಿ

## ಅತ್ಯುತ್ತಮ ಗೀತಸಾಹಿತ್ಯ:ವಿ. ನಾಗೇಂದ್ರ ಪ್ರಸಾದ್, ಚಿತ್ರ: ಕೃಷ್ಣಂ ಪ್ರಣಯ ಸಖಿ– ದ್ವಾಪರ



ಹೊಸ ಧಾಟಿಯ ಹಾಡುಗಳಿಂದ ಜನಪ್ರಿಯತೆ ಗಳಿಸಿರುವ ಕನ್ನಡ ಸಿನಿಮಾರಂಗದ ಗೀತರಚನೆಕಾರ ವಿ. ನಾಗೇಂದ್ರ ಪ್ರಸಾದ್ ಅವರಿಗೆ ಈ ಬಾರಿ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದ 'ದ್ವಾಪರ ದಾಟುತ' ಹಾಡಿಗೆ 'ಅತ್ಯುತ್ತಮ ಗೀತಸಾಹಿತ್ಯ' ಪ್ರಶಸ್ತಿ ಸಂದಿದೆ.

ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಹಾಗೂ ಟಿಪಿಎಂಎಲ್ ನಿರ್ದೇಶಕಿ ಸೌಭಾಗ್ಯಲಕ್ಷ್ಮಿ, ನಟಿ ಮಾಲಾಶ್ರೀ ಅವರು ಪ್ರಶಸ್ತಿ ಪ್ರದಾನ ಮಾಡಿದರು.

'ಪ್ರಶಸ್ತಿ ಎಂಬುದು ಕಲಾವಿದರಿಗೆ ಎಷ್ಟು ಮುಖ್ಯವೋ, ಪ್ರಶಸ್ತಿ ನೀಡುತ್ತಿರುವ ಮಾಧ್ಯಮ ಕೂಡ ಅಷ್ಟೇ ಮುಖ್ಯ. ಪ್ರಜಾವಾಣಿ ಸಿನಿಮಾ ಕ್ಷೇತ್ರದಲ್ಲಿನ ಕಲಾವಿದರನ್ನು ಉತ್ತೇಜಿಸಿ ಸಿನಿಮಾ ಗೆಲ್ಲೋಕೆ ಬೆಂಬಲ ನೀಡುತ್ತಿದೆ' ಎಂದರು ನಟಿ ಮಾಲಾಶ್ರೀ.

ಪ್ರಶಸ್ತಿ ಪಡೆದ ವಿ. ನಾಗೇಂದ್ರ ಪ್ರಸಾದ್ ಅವರು ಮಾತನಾಡಿ, 'ಪ್ರಜಾವಾಣಿ ಸಿನಿ ಸಮ್ಮಾನದ ಎರಡನೇ ಪ್ರಶಸ್ತಿ ಇದು. ಈ ಹಾಡಿಗೆ ದೊರೆಯುತ್ತಿರುವ ಐದನೇ ಪ್ರಶಸ್ತಿ. 'ದ್ವಾಪರ...' ಹಾಡಿನ ಸಾಹಿತ್ಯದ ಬಗ್ಗೆ ಜನ ಮಾತನಾಡಿದರು, ಚರ್ಚೆ ಮಾಡಿದರು, ರೀಲ್ಸ್ ಮಾಡಿದರು. ಅದೇ ಈ ಹಾಡಿನ ಬಹಳ ದೊಡ್ಡ ಯಶಸ್ಸು ಹಾಗೂ ಶಕ್ತಿ. ಈ ಹಾಡನ್ನು ದೊಡ್ಡ ಹಿಟ್ ಮಾಡಿದವರು ಕನ್ನಡಿಗರು. ಈ ಹಾಡಿನ ಮಾಲೀಕರು– ನಿರ್ದೇಶಕ, ಹಾಡುಗಾರ, ಸಂಗೀತ ನಿರ್ದೇಶಕ' ಎಂದರು.

ಈ ಪ್ರಶಸ್ತಿಯನ್ನು 'ಆಪರೇಷನ್ ಸಿಂದೂರ'ನ ಸೈನಿಕರಿಗೆ ಅರ್ಪಿಸಿ ಮಾತನಾಡಿ, 'ನನ್ನ ನೆಚ್ಚಿನ ಕವಿ ಬಿ.ಆರ್. ಲಕ್ಷ್ಮಣ್‌ರಾವ್ ಅವರ ಸಮ್ಮುಖದಲ್ಲಿ ಈ ಪ್ರಶಸ್ತಿ ಪಡೆಯುತ್ತಿರುವುದು ಸಂತೋಷವಾ-ಗುತ್ತಿದೆ. ಪ್ರಜಾವಾಣಿ ನಮಗೆ ಮೇಷ್ಟ್ರು ಹಾಗೆ. ಬಾಲ್ಯದ ದಿನಗಳಲ್ಲಿ ಕನ್ನಡವನ್ನು ಕಲಿಸಿದ ಪತ್ರಿಕೆ. ಪದಬಂಧವನ್ನು ಬಿಡಿಸುತ್ತಿದ್ದೆ. ಪ್ರಜಾವಾಣಿ ಕನ್ನಡವಾಗಿ ನಮ್ಮ ಬದುಕಿನ ಜೊತೆ ಸೇರಿದೆ' ಎಂದು ಪತ್ರಿಕೆಯೊಂದಿಗಿನ ತಮ್ಮ ಅವಿನಾಭಾವ ಸಂಬಂಧದ ಕುರಿತು ಮಾತನಾಡಿದರು.

# ಜಸ್ಕರಣ್‌ಗೆ ಕನ್ನಡದ ಪ್ರಶಸ್ತಿ

## ಅತ್ಯುತ್ತಮ ಹಿನ್ನೆಲೆ ಗಾಯಕ: ಜಸ್ಕರಣ್ ಸಿಂಗ್ ಚಿತ್ರ: ಕೃಷ್ಣಂ ಪ್ರಣಯ ಸಖಿ– ದ್ವಾಪರ



ತೀವ್ರ ಪೈಪೋಟಿಯ ನಡುವೆ ಈ ಪ್ರಶಸ್ತಿ ಜಸ್ಕರಣ್ ಸಿಂಗ್ ಅವರ ಪಾಲಾಗಿದೆ. ರಾಜೇಶ್ ಕೃಷ್ಣನ್, ಕಪಿಲ್ ಕಪಿಲನ್‌ರಂಥ ಗಾಯಕರ ನಡುವೆ 'ಕೃಷ್ಣಂ ಪ್ರಣಯ ಸಖಿ' ಚಿತ್ರದ 'ದ್ವಾಪರ' ಗೀತೆಗಾಗಿ ಅವರು ಈ ಪ್ರಶಸ್ತಿ ಮುಡಿಗೇರಿಸಿಕೊಂ-ಡರು. ಸರಿಗಮಪ ರಿಯಾಲಿಟಿ ಶೋನಿಂದ ಕನ್ನಡಕ್ಕೆ ಬಂದ ಪಂಜಾಬಿನ ಗಾಯಕ, ಕಳೆದ ವರ್ಷ ಈ ಹಾಡಿನಿಂದಾಗಿ ಮನೆ ಮಾತಾದರು. ರೀಲ್ಸ್‌ನಲ್ಲಿ ಟ್ರೆಂಡ್ ಆದ ಈ ಗೀತೆ ಲಕ್ಷಾಂತರ ವ್ಯೂ ಮೂಲಕ ದಾಖಲೆ ಬರೆದಿತ್ತು. ಸಿನಿಮಾ ಯಶಸ್ಸಿನಲ್ಲಿ ಈ ಗೀತೆಯ ಪಾಲು ಹೆಚ್ಚಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಜಸ್ಕರಣ್, 'ಈ ಪ್ರಶಸ್ತಿ ಪಡೆಯಲು ನನಗೆ ಅತ್ಯಂತ ಸಂತಸವಾಗುತ್ತಿದೆ. ಇದರ ಎಲ್ಲ ಶ್ರೇಯಸ್ಸು ಕರ್ನಾಟಕದ ಜನತೆಗೆ ಸಲ್ಲುತ್ತದೆ. ಅವರು ನನ್ನನ್ನು ಪ್ರೀತಿಸಿ ಈ ಪ್ರಶಸ್ತಿ ಪಡೆಯಲು ಯೋಗ್ಯ ವ್ಯಕ್ತಿಯ-ನ್ನಾಗಿ ಮಾಡಿದ್ದಾರೆ. ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ, ಅರ್ಜುನ್ ಜನ್ಯ ಸಂಗೀತ ಎಲ್ಲವೂ ಈ ಹಾಡಿನ ಯಶಸ್ಸಿಗೆ ಕಾರಣ. ಅವಕಾಶಕ್ಕಾಗಿ ಚಿತ್ರದ ನಿರ್ದೇಶಕ ಶ್ರೀನಿವಾಸು ರಾಜು ಹಾಗೂ 'ಕೃಷ್ಣಂ ಪ್ರಣಯ ಸಖಿ' ತಂಡಕ್ಕೆ ಧನ್ಯವಾದಗಳು. ನಾನು ಇನ್ನಷ್ಟು ಕನ್ನಡ ಹಾಡುಗಳನ್ನು ಹಾಡಲು ಬಯಸುತ್ತೇನೆ. ನಾನು ಇಲ್ಲಿಗೆ ಬಂದಾಗ ಕರ್ನಾಟಕದವನು. ಪಂಜಾಬ್‌ನಲ್ಲಿದ್ದಾಗ ಮಾತ್ರ ಜಸ್ಕರಣ್ ಸಿಂಗ್, ಇಲ್ಲಿ ಜಸ್ಕರಣ್. ಇಲ್ಲಿನ ಜನರ ಪ್ರೀತಿ ಅಮೂಲ್ಯವಾದುದು' ಎಂದರು.

# ನೃತ್ಯಸಖನಿಗೆ ಪ್ರಶಸ್ತಿಯ ಖುಷಿ

## ಅತ್ಯುತ್ತಮ ನೃತ್ಯ ನಿರ್ದೇಶನ ಶೇಖರ್ ಮಾಸ್ಟರ್, ಚಿತ್ರ: ಕೃಷ್ಣಂ ಪ್ರಣಯ ಸಖಿ

ಕನ್ನಡದಲ್ಲಿ ಈಚೆಗೆ ಅತಿ ಹೆಚ್ಚು ವೈರಲ್ ಆದ ಹಾಡು ಹಾಗೂ ನೃತ್ಯ ಎನ್ನ-ಬಹುದಾದರೆ, 'ಕೃಷ್ಣಂ ಪ್ರಣಯ ಸಖಿ' ಸಿನಿಮಾದ 'ದ್ವಾಪರ ದಾಟುತಾ...' ಹಾಡು. 'ಸರಿಗಮಪ' ಸ್ಪರ್ಧಿ ಜಸ್ಕರಣ್ ಸಿಂಗ್ ದನಿಯೊಂದಿಗೆ ಹಾಡಿನಲ್ಲಿ ಗಣೇಶ್ ಹಾಕಿದ್ದ ಸ್ಟೆಪ್‌ಗಳು ಫೇಮಸ್ ಆದವು. ಮಾತ್ರವಲ್ಲ, ಅದನ್ನು ಅನುಕರಿಸಿದ ರೀಲ್ಸ್‌ಗಳು ಒಂದಾದ ಮೇಲೊಂದರಂತೆ ವೈರಲ್ ಆದವು.

ಈ ಸ್ಟೆಪ್‌ಗಳ ಹಿಂದಿನ ಕೊರಿಯೊಗ್ರಾಫರ್, ತಮಿಳು, ತೆಲುಗು, ಹಿಂದಿ, ಕನ್ನಡ ಎಲ್ಲೆಡೆಯೂ ಟ್ರೆಂಡಿಂಗ್ ಹೆಸರಾಗಿರುವ ಶೇಖರ್ ಮಾಸ್ಟರ್‌ಗೆ ಈ ಬಾರಿ 'ಅತ್ಯುತ್ತಮ ನೃತ್ಯ ನಿರ್ದೇಶನ' ಪ್ರಶಸ್ತಿ ಮುಡಿಗೇರಿದ್ದು, ಹಿರಿಯ ನಿರ್ದೇಶಕ ಪಿ.ಎಚ್. ವಿಶ್ವನಾಥ್ ಹಾಗೂ ನಟಿ ಪೂಜಾ ಗಾಂಧಿ ಪ್ರಶಸ್ತಿ ಪ್ರದಾನ ಮಾಡಿದರು.

ಸಿನಿಮಾಗಳಲ್ಲಿ ನೃತ್ಯದ ಪ್ರಾಮುಖ್ಯದ ಕುರಿತು ಮಾತನಾಡಿದ ವಿಶ್ವನಾಥ್ ಅವರು, 'ಹಾಡು, ನೃತ್ಯಗಳು ನಾಟಕಗಳಿಂದ ಬಂದಿದ್ದು. ನೃತ್ಯಕ್ಕೆ ಪರಂಪರೆಯೇ ಇದೆ. ಹಾಡು, ನೃತ್ಯಗಳು ಸಿನಿಮಾದ ಆಕರ್ಷಣೆ' ಎನ್ನುತ್ತಾ, 'ಎಷ್ಟೊ ಹೀರೊಗಳನ್ನು ಹುಟ್ಟುಹಾಕಿದ್ದೇ ನೃತ್ಯ ಹಾಗೂ ನೃತ್ಯಗಾರರು. ನೃತ್ಯವೇ ಸಿನಿಮಾಗೆ ಅಲಂಕಾರ' ಎಂದು ಹೇಳಿದರು.

ನಟ ಪೂಜಾ ಗಾಂಧಿ, ದ್ವಾಪರ ಹಾಡಿಗೆ ಹೆಜ್ಜೆ ಹಾಕಿದ ನಂತರ ಮಾತನಾಡಿ, 'ಡಾನ್ಸ್ ಎಂದರೆ ನನಗೆ ಆಗುವುದಿಲ್ಲ, ತುಂಬಾ ಕಷ್ಟಪಟ್ಟು ನನ್ನಿಂದ ನೃತ್ಯ ಮಾಡಿಸುತ್ತಾರೆ. ಈಗ ನಟ ನಟಿಯರು ಎಲ್ಲವನ್ನೂ ಕಲಿತು ಬರುತ್ತಾರೆ. ನನಗೆ ಚೆನ್ನಾಗಿ ಡಾನ್ಸ್ ಮಾಡಲು ಬರುವುದಿಲ್ಲ ಎಂಬ ಬೇಜಾರಿದೆ' ಎಂದು ನಕ್ಕರು.

ಪ್ರಶಸ್ತಿ ಸ್ವೀಕರಿಸಿದ ಶೇಖರ್ ಮಾಸ್ಟರ್, 'ಎಲ್ಲರಿಗೂ ನಮಸ್ಕಾರ' ಎಂದು ಕನ್ನಡದಲ್ಲಿ ಮಾತನಾಡಿ, 'ಕನ್ನಡ ಭಾಷೆ ಕೇಳಲು ಸುಲಭ. ಮಾತಾಡುವುದು ಕಷ್ಟ. ಆದರೆ ನನಗೆ ಕನ್ನಡದಲ್ಲಿ ಮಾತನಾಡಬೇಕೆಂಬ ಆಸೆಯಿದೆ. ಕನ್ನಡ ಪ್ರೇಕ್ಷಕರಿಗೆ ಬಹಳ ಧನ್ಯವಾದ. ತುಂಬಾ ಜನರು ಈ ಹಾಡು, ನೃತ್ಯವನ್ನು ನೋಡಿದ್ದಾರೆ. ಡಾನ್ಸ್ ರೀಲ್ಸ್ ಕೂಡ ಮಾಡಿದ್ದಾರೆ' ಎಂದು ಅಭಿಮಾನ ತುಂಬಿ ಮಾತನಾಡಿದರು.






ಅರ್ಜುನ್ ಜನ್ಯ ಅವರಿಗೆ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿಯನ್ನು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ನೀಡಿದರು. ಸಚಿವ ಶಿವರಾಜ್ ತಂಗಡಗಿ, ಟಿಪಿಎಂಎಲ್‌ನ ನಿರ್ದೇಶಕಿ ಸೌಭಾಗ್ಯ ಲಕ್ಷ್ಮಿ ಇದ್ದರು.

# ಸಂಗೀತದಲ್ಲಿ ಜನ್ಯ ಜಪ

## ಅತ್ಯುತ್ತಮ ಸಂಗೀತ ನಿರ್ದೇಶನ- ಅರ್ಜುನ್ ಜನ್ಯ, ಚಿತ್ರ: ಕೃಷ್ಣಂ ಪ್ರಣಯ ಸಖಿ

ಹೊಸ ತಲೆಮಾರಿನವರ ನಾಡಿಮಿಡಿತ ಅರಿತಿರುವ ಸಂಗೀತ ನಿರ್ದೇಶಕ, ಗಾಯಕ ಅರ್ಜುನ್ ಜನ್ಯ ಕನ್ನಡದ ಹಲವಾರು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿ ಜನಪ್ರಿಯತೆ ಪಡೆದವರು. ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರರಾಗಿದ್ದು, ಇಷ್ಟು ಮಾತ್ರವಲ್ಲದೆ ಸಂಗೀತ ಕ್ಷೇತ್ರದಲ್ಲಿ ಹೊಸ ಪ್ರತಿಭೆಗಳಿಗೆ ಮಣೆ ಹಾಕಿ ಅವಕಾಶಗಳನ್ನು ನೀಡಿ ಸಾಕಷ್ಟು ಗಾಯಕರನ್ನು ಚಿತ್ರರಂಗಕ್ಕೆ ಪರಿಚಯಿ-ಸಿದವರು ಕೂಡ.

ಈ ಬಾರಿ 'ಕೃಷ್ಣಂ ಪ್ರಣಯ ಸಖಿ' ಸಿನಿಮಾಗೆ ಟ್ರೆಂಡ್ಸ್ ಪ್ರಸ್ತುತ 'ಅತ್ಯುತ್ತಮ ಸಂಗೀತ ನಿರ್ದೇಶನ' ಪ್ರಶಸ್ತಿಯನ್ನು ಅವರು ತಮ್ಮದಾಗಿಸಿಕೊಂಡಿದ್ದಾರೆ. ಟಿಪಿಎಂಎಲ್ ಸಂಸ್ಥೆಯ ನಿರ್ದೇಶಕಿ ಸೌಭಾಗ್ಯಲ-ಕ್ಷ್ಮಿ ಅವರು ಅರ್ಜುನ್ ಜನ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅರ್ಜುನ್ ಅವರು, 'ಇಡೀ ಸಿನಿಮಾ ತಂಡಕ್ಕೆ ಧನ್ಯವಾದ. ಇಲ್ಲಿ ನನ್ನ ಹಿರಿಮೆ ಏನೂ ಇಲ್ಲ. ನಿರ್ದೇಶಕರ ನಿರ್ದೇಶನದಲ್ಲಿ ನಮ್ಮ ಕೆಲಸ ನಡೆಯುತ್ತದೆ. ನಿರ್ದೇಶಕರು ಏನು ಮಾಡಿಸುತ್ತಾರೆ, ಏನು ಹೇಳುತ್ತಾರೆ, ಅವರ ಅಭಿರುಚಿ ಹೇಗಿರುತ್ತದೆ ಎಂಬುದರ ಮೇಲೆ ಸಂಗೀತ ಸೃಷ್ಟಿಯಾಗುತ್ತದೆ. ಹೀಗಾಗಿ ಈ ಪ್ರಶಸ್ತಿಯ ಗರಿಮೆ ಅವರಿಗೇ ಸಲ್ಲಬೇಕು' ಎಂದು ಹೇಳಿದರು.



ಧನ್ಯಾ ರಾಮ್‌ಕುಮಾರ್



ಮಹದೇವ ಹಡಪದ, ಉತ್ಸವ್ ಗೋನವಾರ



ಅರವಿಂದ್ ಶಾಸ್ತ್ರಿ




ವಿನಯ್ ರಾಜ್‌ಕುಮಾರ್, ಯುವ ರಾಜ್‌ಕುಮಾರ್



ಸಮಾರಂಭದಲ್ಲಿ ಪಾಲ್ಗೊಂಡಿದ್ದ ಗಣ್ಯರು



ಮಹಾಲಕ್ಷ್ಮಿ



ನಿರೂಪಕ ಅಕುಲ್ ಬಾಲಾಜಿ ನೃತ್ಯ



ನೃತ್ಯ ನಿರ್ದೇಶಕ ಶೇಖರ್ ಮಾಸ್ಟರ್ ಜತೆ ಹೆಜ್ಜೆ ಹಾಕಿದ ನಟಿ ಪೂಜಾಗಾಂಧಿ, ನಿರೂಪಕಿ ಅನುಶ್ರೀ

ನಿರ್ದೇಶಕ ನರ್ತನ್‌ಗೆ ನಟ ಕಿಶೋರ್ ಮತ್ತು ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆಯ ಸಂಸ್ಥಾಪಕ ಮತ್ತು ನಿರ್ದೇಶಕ ಜಿ.ಬಿ.ವಿನಯ್ ಕುಮಾರ್ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ ನೀಡಿದರು.



# ಯುಪಿಎಸ್‌ಸಿ: ದೇಶದಲ್ಲಿ ಮೋಸ್ಟ್ ವಿಸಿಟೆಡ್ ವೆಬ್‌ಸೈಟ್ ‘ಇನ್‌ಸೈಟ್ಸ್’

**‘ಪ್ರತಿ ವರ್ಷ ಭಾರತೀಯ** ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಸುಮಾರು 900–1000 ಜನರಲ್ಲಿ ಕನಿಷ್ಠ ನೂರು ಜನ ಕನ್ನಡಿಗರಿರಬೇಕು’ ಹೀಗೆ ತಮ್ಮ ಕನಸನ್ನು ಬಿಚ್ಚಿಟ್ಟಿದ್ದು, ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆಯ ಸಂಸ್ಥಾಪಕ ಮತ್ತು ನಿರ್ದೇಶಕ ಹಾಗೂ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ.ವಿನಯ್ ಕುಮಾರ್.

ಕಳೆದ 11 ವರ್ಷಗಳಲ್ಲಿ ನಮ್ಮ ಸಂಸ್ಥೆ ಕರ್ನಾಟಕದಲ್ಲಿ ಸುಮಾರು 1,500 ಜನ ಅಧಿಕಾರಿಗಳನ್ನು ನೀಡಿದೆ. ಇನ್‌ಸೈಟ್ಸ್, ಭಾರತದ ಟಾಪ್ 3 ತರಬೇತಿ ಸಂಸ್ಥೆಗಳಲ್ಲೊಂದು. ಹಿಂದೆಲ್ಲ ಐಎಎಸ್ ಪಾಸು ಮಾಡಲು ಕೋಚಿಂಗ್‌ಗಾಗಿ ದೆಹಲಿಯಂತಹ ದೊಡ್ಡ ನಗರಗಳಿಗೆ ಹೋಗಬೇಕಿತ್ತು. ಈಗ ದೆಹಲಿ ನಂತರ ನಮ್ಮ ಬೆಂಗಳೂರು ಅಗ್ರಸ್ಥಾನದಲ್ಲಿದ್ದು, ಯುಪಿಎಸ್‌ಸಿ ಹಬ್ ಆಗಿದೆ. ಇದೀಗ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಐಎಎಸ್ ಅಧಿಕಾರಿಗಳಾಗುತ್ತಿದ್ದಾರೆ ಎಂದು ಖುಷಿಪಟ್ಟರು.

ಪ್ರಜಾವಾಣಿಯೊಂದಿಗೆ ನಮ್ಮ ಸಂಸ್ಥೆ ಉತ್ತಮ ಸಂಬಂಧ ಹೊಂದಿದೆ. ಜಂಟಿಯಾಗಿ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಇದನ್ನು ಹೊರತುಪಡಿಸಿದರೆ ನಾನೂ ಪ್ರಜಾವಾಣಿ ಓದುಗ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಪ್ರಜಾವಾಣಿ ಪತ್ರಿಕೆ ಉತ್ತಮ ಆಯ್ಕೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವನ್ನು ಯಾವುದೇ ಹಿಂಜರಿಕೆಯಿಲ್ಲದೇ ನಂಬಬಹುದು ಎಂದು ಅಭಿಮಾನದಿಂದ ಹೇಳಿದರು.

ನಾನು ಐಎಎಸ್ ಆಕಾಂಕ್ಷಿಯಾಗಿದ್ದೆ. ಪಿಡಿಒ ಹಾಗೂ ಕೆಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದೇನೆ. ಆ ಸಮಯದಲ್ಲಿ ಕರ್ನಾಟಕದಲ್ಲಿ ತರಬೇತಿಗೆ ಹೆಚ್ಚು ಅವಕಾಶಗಳಿರಲಿಲ್ಲ. ಹೀಗಾಗಿ ತರಬೇತಿ ಸಂಸ್ಥೆ ಸ್ಥಾಪಿಸುವ ನಿರ್ಧಾರ ಕೈಗೊಂಡೆ. ಅಂತೆಯೇ ನಾವು ಯಶಸ್ವಿಯಾಗಿದ್ದೇವೆ. ಅನೇಕ ಅಧಿಕಾರಿಗಳ ಮಕ್ಕಳೂ ನಮ್ಮಲ್ಲೇ ತರಬೇತಿ ಪಡೆಯುತ್ತಿದ್ದಾರೆ ಎಂದರು.

ಕನ್ನಡ ಮಾಧ್ಯಮದಲ್ಲಿ ಓದಿದ ಅನೇಕರು ತರಬೇತಿ ಪಡೆಯಲು ಬರುತ್ತಾರೆ. ಯುಪಿಎಸ್‌ಸಿ ಪರೀಕ್ಷೆಗೆ ಅಗತ್ಯವಿರುವಷ್ಟು ಇಂಗ್ಲಿಷ್ ಅನ್ನು ನಾವೇ ಕಲಿಸುತ್ತೇವೆ. ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಓದಲು ಸಲಹೆ ನೀಡುತ್ತೇವೆ. ಒಂದೇ ಸುದ್ದಿಯನ್ನು ಎರಡು ಭಾಷೆಗಳಲ್ಲಿ ಓದಿದಾಗ ಬರವಣಿಗೆ ಹಾಗೂ ಭಾಷೆ ಮೇಲಿನ ಹಿಡಿತ ಇಮ್ಮಡಿಯಾಗುತ್ತದೆ ಎಂದು ಹೇಳಿದರು.

ಬರುವ ನಾಲ್ಕೈದು ವರ್ಷಗಳಲ್ಲಿ 100 ಜನ ಕನ್ನಡಿಗರು ಐಎಎಸ್ ಉತ್ತೀರ್ಣರಾಗಬೇಕೆಂಬ ಗುರಿಯೊಂದಿಗೆ ‘ಮಿಷನ್ 100’ ಪ್ರಾರಂಭಿಸಿದ್ದೇವೆ. ಪ್ರತಿಯೊಬ್ಬ ಆಕಾಂಕ್ಷಿಗೂ ವೈಯಕ್ತಿಕವಾಗಿ ತರಬೇತಿ ನೀಡುತ್ತೇವೆ. ನಮ್ಮ ಸಂಸ್ಥೆ ನಡೆಸುವ ಪೂರ್ವ ತಯಾರಿ ಪರೀಕ್ಷೆ ಸರಣಿಗೆ ಹೆಚ್ಚು ಪ್ರಶಂಸೆ ವ್ಯಕ್ತವಾಗಿದೆ. ದೇಶಕ್ಕೆ ಅನೇಕ ಅಧಿಕಾರಿಗಳನ್ನು ನೀಡಿದ ಹೆಮ್ಮೆ ನಮಗಿದೆ ಎಂದು ವಿನಯ್.

ಸಿನಿ ಸಮ್ಮಾನ ಕಾರ್ಯಕ್ರಮದ ಮೂರು ಆವೃತ್ತಿಗಳಿಗೂ ಇನ್‌ಸೈಟ್ಸ್ ಸಂಸ್ಥೆ ಸಹಭಾಗಿಯಾಗಿದೆ.

# ಮದುವೆ ಜವಳಿಗೆ ಮತ್ತೊಂದು ಹೆಸರು ಬಿಎಸ್‌ಸಿ



ನಟ ಎಂ.ಎಸ್. ಉಮೇಶ್ ಮತ್ತು ಬಿ.ಆರ್.ಲಕ್ಷ್ಮಣ ರಾವ್ ಅವರು ಗೋಪಾಲಕೃಷ್ಣ ದೇಶಪಾಂಡೆ ಅವರಿಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ನೀಡಿದರು. ಬಿ.ಎಸ್ ಚನ್ನಬಸಪ್ಪ ಆ್ಯಂಡ್ ಸನ್ಸ್ ಸಂಸ್ಥೆಯ ನಿರ್ದೇಶಕ ಮೃಣಾಲ್ ಬಂಕಾಪುರ್ ಹಾಜರಿದ್ದರು.

**ಜವಳಿ ಉದ್ಯಮದಲ್ಲಿ** ನಾಡಿನ ಹೆಸರಾಂತ ಬಿ.ಎಸ್ ಚನ್ನಬಸಪ್ಪ ಸಂಸ್ಥೆಯು ‘ಪ್ರಜಾವಾಣಿ ಸಿನಿ ಸಮ್ಮಾನ’ ಕಾರ್ಯಕ್ರಮಕ್ಕೆ ಕೈಜೋಡಿಸಿದೆ.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂಸ್ಥೆಯ ನಿರ್ದೇಶಕರಾದ ಮೃಣಾಲ್ ಬಂಕಾಪುರ್ ಅವರು ಪ್ರಜಾವಾಣಿಯೊಂದಿಗೆ ತಮ್ಮ ಸಂಸ್ಥೆ ಹೊಂದಿರುವ ಸಂಬಂಧ ಹಾಗೂ ಕಾರ್ಯಕ್ರಮ ಕುರಿತು ಖುಷಿಯಿಂದ ಮಾತನಾಡಿದರು.

ನಮ್ಮ ತಂದೆಯ ಕಾಲದಿಂದಲೂ ಪ್ರಜಾವಾಣಿಯೊಂದಿಗೆ ನಾವು ಉತ್ತಮ ಸಂಬಂಧವನ್ನು ಹೊಂದಿದ್ದೇವೆ. ಪ್ರಜಾವಾಣಿ ಮೂಲಕ ನಮಗೂ ಹಲವಾರು ಅವಕಾಶಗಳು ದೊರೆತಿವೆ. ಜನರನ್ನು ನೇರವಾಗಿ ತಲುಪಲು ಈ ಪತ್ರಿಕೆ ನಮಗೆ ಅವಕಾಶ ನೀಡಿದೆ. ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಾರ್ಯಕ್ರಮಕ್ಕೆ ಬಂದಾಗ ಸಿನಿಮಾ ಸೇರಿದಂತೆ ನಮಗೆ ಬೇರೆ ಉದ್ಯಮಿಗಳ ಪರಿಚಯವಾಗುತ್ತದೆ. ಅವರಿಂದಲೂ ಕಲಿಯುವುದು ಬಹಳಷ್ಟಿರುತ್ತದೆ. ಈ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪ್ರಜಾವಾಣಿಯ ಬಹಳ ಒಳ್ಳೆಯ ಪ್ರಯತ್ನವಾಗಿದ್ದು, ನಮ್ಮ ಸಹಕಾರವೂ ಮುಂದುವರಿಯುತ್ತದೆ ಎಂದು ಹೇಳಿದರು.

ನಮ್ಮ ಬಿ.ಎಸ್. ಚನ್ನಬಸಪ್ಪ ಸಂಸ್ಥೆ 1938 ಸ್ಥಾಪನೆಯಾಯಿತು. ನಾನು ನಾಲ್ಕನೇ ತಲೆಮಾರಿನವ. ನಂಬಿಕೆ ಮತ್ತು ಉತ್ತಮ ಕೆಲಸವೇ ಸಂಸ್ಥೆಯ ತಳಹದಿ. ದಾವಣಗೆರೆಯಿಂದ ಬೆಳಗಾವಿವರೆಗೆ ನಮ್ಮ ಉದ್ದಿಮೆ ವಿಸ್ತರಿಸಿದೆ. ಕರ್ನಾಟಕದಾದ್ಯಂತ ಮಳಿಗೆ ತೆರೆಯುವ ಯೋಜನೆ ಇದೆ. ಈ ವರ್ಷ ಬಿ.ಎಸ್.ಸಿ. ಎಕ್ಸ್‌ಪ್ರೆಸ್ ಎಂಬ ಹೊಸ ಸಬ್ ಬ್ರ್ಯಾಂಡ್ ಲಾಂಚ್ ಮಾಡಿದ್ದೇವೆ. ಇದರಲ್ಲಿರುವ ಎಲ್ಲಾ ಬಟ್ಟೆಗಳ ಬೆಲೆಯೂ ₹999ಕ್ಕಿಂತ ಕಡಿಮೆ ಇದೆ. ಗ್ರಾಹಕರ ಕೈಗೆಟಕುವ ದರದಲ್ಲಿ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ನೀಡುವುದೇ ನಮ್ಮ ಗುರಿ ಎಂದರು.

ಪ್ರತಿ ದಿನ ಮುಂಜಾನೆ 10 ಗಂಟೆಗೆ ಅಂಗಡಿಯಲ್ಲಿರಲೇಬೇಕು. ನಮ್ಮ ಕೆಲಸ ಎಷ್ಟು ಪರಿಣಾಮಕಾರಿಯಾಗಿರುತ್ತೋ ಫಲಿತಾಂಶವೂ ಹಾಗೆ ಇರುತ್ತದೆ. ಪ್ರತಿಯೊಬ್ಬ ಗ್ರಾಹಕನಿಗೂ ಬೇಕಾದ ಎಲ್ಲಾ ರೀತಿಯ ಬಟ್ಟೆಗಳು ನಮ್ಮ ಆದ್ಯತೆ. ಹೊಸ ಟ್ರೆಂಡ್ ಸೃಷ್ಟಿಸುವ ಹಂಬಲ ನಮಗೆ ಯಾವಗಲೂ ಇದೆ. ಅದರಲ್ಲಿ ಯಶಸ್ವಿಯೂ ಆಗಿರುವುದು ಸಂತಸ ತಂದಿದೆ. ಕಳೆದ 88 ವರ್ಷಗಳಿಂದ ಗ್ರಾಹಕರ ನಂಬಿಕೆ ಉಳಿಸಿಕೊಂಡು ಬಂದಿರುವುದು ಖುಷಿಯಿದೆ. ಅದು ನಮ್ಮ ಜವಾಬ್ದಾರಿಯೂ ಹೌದು ಎಂದು ತಿಳಿಸಿದರು.

ಪ್ರತಿ ದಿನ ಹೊಸದೇನು ಮಾಡಬಹುದು ಎಂಬ ಕುರಿತಾದ ಪ್ರಯತ್ನ ನಡೆಯುತ್ತಲೇ ಇರುತ್ತದೆ. ಸಂಸ್ಥೆಯಾಗಿ ನಮ್ಮ ಯಶಸ್ಸಲ್ಲಿ ಸಾವಿರಾರು ಜನರ ಪಾತ್ರವಿದೆ. ಎಲ್ಲರೂ ಒಗ್ಗಟ್ಟಿನಿಂದ ದುಡಿಯುತ್ತ ನಮ್ಮ ಕೆಲಸವನ್ನು ಪ್ರೀತಿಸುತ್ತೇವೆ. ಬಟ್ಟೆ ವ್ಯಾಪಾರಿಯಾಗಿ ಸ್ಟಾಕ್ ಟರ್ನ್ ಓವರ್‌ನಲ್ಲಿ ಹೆಚ್ಚು ಗಮನ ನೀಡುತ್ತೇವೆ. ಸದಾ ಹರಿಯುವ ನೀರಿನಂತೆ ವ್ಯಾಪಾರದಲ್ಲಿ ಚಲನವಲನಗಳಿರಬೇಕು. ನಮ್ಮ ಸಂಸ್ಥೆ ಬಿ.ಎಸ್.ಸಿ ಕೇವಲ ವ್ಯಾಪಾರ ಸಂಸ್ಥೆಯಾಗಿ ಮಾತ್ರ ಉಳಿದಿಲ್ಲ. ಇದು ಗ್ರಾಹಕರ ಭಾವನೆಗಳೊಂದಿಗೆ ಬೆಸೆದುಕೊಂಡಿದೆ. ತಲೆಮಾರುಗಳಿಂದ ಮಳಿಗೆಯಲ್ಲಿ ಮದುವೆ ಜವಳಿ ಖರೀದಿಸುವ ಸಾವಿರಾರು ಕುಟುಂಬಗಳಿವೆ. ನಮ್ಮೆಲ್ಲ ಗ್ರಾಹಕರೂ ನಮ್ಮ ಕುಟುಂಬ ಸದಸ್ಯರಾಗಿದ್ದಾರೆ ಎಂದರು ಮೃಣಾಲ್ ಬಂಕಾಪುರ್.



ಬಿ.ಎಸ್ ಚನ್ನಬಸಪ್ಪ ಆ್ಯಂಡ್ ಸನ್ಸ್ ದಿರಿಸಿನಲ್ಲಿ ನಿರೂಪಕಿ ಅನುಶ್ರೀ

# ಟಿಟಿಕೆ ಪ್ರೆಸ್ಟೀಜ್ ಅಡುಗೆಮನೆ ಸಂಗಾತಿ



ಟಿಟಿಕೆ ಪ್ರೆಸ್ಟೀಜ್‌ನ ಎಜಿಎಂ–ಮಾರ್ಕೆಟಿಂಗ್ ಜಸ್ಟಿನ್ ಆ್ಯಂಟೊನಿ, ನಟ ದುನಿಯಾ ವಿಜಯ್, ನಟಿ ತಾರಾ ಅವರು ಪ್ರಿಯಾ ಶಠಮರ್ಷಣ ಅವರಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ನೀಡಿದರು.

**ಭಾರತದ ಅತ್ಯಂತ** ವಿಶ್ವಾಸರ್ಹ ಬ್ರ್ಯಾಂಡ್‌ಗಳಲ್ಲಿ ಒಂದಾದ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್ ದೇಶದ ನಂಬರ್ 1 ಅಡುಗೆಮನೆ ಮತ್ತು ಗೃಹೋಪಯೋಗಿ ಉತ್ಪನ್ನಗಳ ತಯಾರಕ ಮತ್ತು ಮಾರಾಟ ಸಂಸ್ಥೆ. ಪ್ರೆಸ್ಟೀಜ್ ಬ್ರ್ಯಾಂಡ್ ಯಶಸ್ವಿ ಏಳು ದಶಕಗಳ ಮೈಲುಗಲ್ಲನ್ನು ದಾಟಿ 75ನೇ ವರ್ಷದ ಸಂಭ್ರಮಾಚರಣೆಯತ್ತ ಮುನ್ನುಗ್ಗುತ್ತಿದೆ.

ಪ್ರೆಷರ್ ಕುಕ್ಕರ್ ಎಂದರೆ ಪ್ರೆಸ್ಟೀಜ್ ಎಂಬಷ್ಟು ಖ್ಯಾತಿ ಹೊಂದಿರುವ ಸಂಸ್ಥೆ ಜನಪ್ರಿಯ ಅಡುಗೆಮನೆ ಮತ್ತು ಗೃಹೋಪಯೋಗಿ ಉತ್ಪನ್ನಗಳ ಜತೆ ನವನವೀನ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಭಾರತೀಯ ಮಹಿಳೆಯರ ನೆಚ್ಚಿನ ಬ್ರ್ಯಾಂಡ್ ಎಂದೇ ಗುರುತಿಸಿಕೊಂಡಿರುವ ಪ್ರೆಸ್ಟೀಜ್ ಎಂದರೆ ಪ್ರೆಷರ್ ಕುಕ್ಕರ್ ಎಂಬಷ್ಟು ಖ್ಯಾತಿ ಹೊಂದಿದೆ

ಅಡುಗೆ ಮನೆ ಸಂಗಾತಿ ಎನಿಸಿರುವ ಪ್ರೆಸ್ಟೀಜ್ ಪ್ರೆಷರ್ ಕುಕ್ಕರ್‌ಗಳ ಜತೆ ಮಿಕ್ಸರ್ ಗ್ರೈಂಡರ್, ಗ್ಯಾಸ್ ಸ್ಟೌ, ಕುಕ್‌ವೇರ್ ಉತ್ಪನ್ನಗಳು, ಕಡಾಯಿಗಳು, ಫ್ರೈಯಿಂಗ್ ಪಾನ್, ಇಂಡಕ್ಷನ್ ಸ್ಟೌ, ರೈಸ್ ಕುಕ್ಕರ್, ಒಟಿಜಿ (ಒವನ್), ಸ್ಟೈನ್‌ಲೆಸ್ ಸ್ಟೀಲ್ ಅಡುಗೆ ಪರಿಕರಗಳು, ನ್ಯೂಟ್ರಿ–ಮಿಕ್ಸರ್, ಎಲೆಕ್ಟ್ರಿಕ್ ಕೆಟಲ್, ಚಿಮಿನಿ ಹಾಗೂ ಮಲ್ಟಿ ಶೆಫ್ ‘ಆಲ್ ಇನ್ ಒನ್ ಏರ್ ಪ್ರೈಯರ್’ ಸೇರಿದಂತೆ ನಾನಾ ರೀತಿ ಉತ್ಪನ್ನಗಳು ಪ್ರಚಲಿತದಲ್ಲಿವೆ.

ಆಧುನಿಕ ಗ್ರಾಹಕರ ಅನುಕೂಲಕ್ಕೆ ತಕ್ಕಂತ ಉತ್ಪನ್ನಗಳನ್ನು ಹೊರತರುವಲ್ಲಿ ಹೆಸರುವಾಸಿಯಾದ ಪ್ರೆಸ್ಟೀಜ್ ಇತ್ತೀಚೆಗೆ ಅತ್ಯಾಧುನಿಕ ‘ಏರ್‌ಫ್ಲಿಪ್ ಏರ್ ಫ್ರೈಯರ್’ ಅನ್ನು ಬಿಡುಗಡೆ ಮಾಡಿದೆ. ಇದರ ಮೂಲಕ ಗ್ರಿಲ್ ಅಥವಾ ಫ್ರೈ ಮಾಡಿಕೊಳ್ಳಬಹುದಾಗಿದೆ.

> ಪ್ರಜಾವಾಣಿ ಜತೆ ನಮ್ಮ ಸಂಸ್ಥೆ ಉತ್ತಮ ಒಡನಾಟ ಇಟ್ಟುಕೊಂಡಿದೆ. ಒಂದು ರೀತಿ ‘ಹ್ಯಾಟ್ರಿಕ್ ಜತೆಗಾರಿಕೆ’ಯಾಗಿದೆ. ಅಲ್ಲದೆ, ಈ ಪತ್ರಿಕಾ ಸಮೂಹ ನಾಡಿನ ಜನತೆಯ ಗುಣವನ್ನು ಚೆನ್ನಾಗಿ ಅರಿತಿದೆಯಾದ್ದರಿಂದ ನಾವು ಕೂಡ ನಮ್ಮ ಪರಂಪರೆಯನ್ನು ಪತ್ರಿಕೆ ಜತೆ ಮುಂದುವರಿಸಿದ್ದೇವೆ.
> **ಜಸ್ಟಿನ್ ಆ್ಯಂಟೊನಿ, ಎಜಿಎಂ–ಮಾರ್ಕೆಟಿಂಗ್,** ಟಿಟಿಕೆ ಪ್ರೆಸ್ಟೀಜ್

ಟಿಟಿಕೆ ಪ್ರೆಸ್ಟೀಜ್ ಸಂಸ್ಥೆಯ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಜಸ್ಟಿನ್ ಆ್ಯಂಟೊನಿ ಅವರು ಮಾತನಾಡಿ, ನಮ್ಮ ಸಂಸ್ಥೆ ತನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಇತ್ತೀಚೆಗೆ ನವೀನ ಉತ್ಪನ್ನಗಳೊಂದಿಗೆ ಹೊರಬರುತ್ತಿದ್ದೇವೆ. ಮೂಲತಃ ಪ್ರೆಷರ್ ಕುಕ್ಕರ್ ಉತ್ಪನ್ನದಿಂದ ಆರಂಭಿಸಿದ ಕಂಪನಿ, ಕಳೆದ ಮೂರು ದಶಕಗಳಲ್ಲಿ ಬಹಳಷ್ಟು ಬದಲಾವಣೆಯೊಂದಿಗೆ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಗ್ರಾಹಕರ ನಂಬಿಕೆ ಮತ್ತು ವಿಶ್ವಾಸಕ್ಕೆ ಪಾತ್ರವಾಗಿರುವ ಪ್ರೆಸ್ಟೀಜ್ ಉತ್ಪನ್ನಗಳನ್ನು ಆಧುನಿಕರ ಗ್ರಾಹಕರ ಅನುಕೂಲಕ್ಕೆ ಅನುಗುಣವಾಗಿ ಗುಣಮಟ್ಟದ ಉತ್ಪನ್ನಗಳನ್ನು ಹೊರತಂದಿದ್ದೇವೆ ಎಂದರು.

ನಮ್ಮ ಕೇಂದ್ರ ಕಚೇರಿ ಬೆಂಗಳೂರು ಆಗಿರುವುದರಿಂದ ಕರ್ನಾಟಕ ಮಾರುಕಟ್ಟೆಗೆ ಹೆಚ್ಚಿನ ಒತ್ತು ನೀಡಿದ್ದೇವೆ. ನಮ್ಮ ಉತ್ಪನ್ನಗಳ ಬಗ್ಗೆ ಗ್ರಾಹಕರು ಚೆನ್ನಾಗಿ ಅರಿತಿದ್ದಾರೆ. ಅಲ್ಲದೆ, ಸ್ಥಳೀಯ ಮಹತ್ವ ಮತ್ತು ಬೇಡಿಕೆ ಅರಿತು ಉತ್ಪನ್ನಗಳನ್ನು ತಯಾರಿಸುತ್ತಿದ್ದೇವೆ. ಪ್ರೆಷರ್ ಕುಕ್ಕರ್ ಮತ್ತು ಗ್ಯಾಸ್ ಸ್ಟೌ ಸೇರಿದಂತೆ ಏಳು ಉತ್ಪನ್ನಗಳ ಮಾರುಕಟ್ಟೆಯಲ್ಲಿ ನಾವು ಅಗ್ರಗಣ್ಯರೆನಿಸಿದ್ದೇವೆ. ಇನ್ನೂ ಕರ್ನಾಟಕದ ಮಾರುಕಟ್ಟೆಯನ್ನು ಮಾತ್ರ ಪರಿಗಣಿಸಿದರೆ ಉತ್ತಮ ಮಾರುಕಟ್ಟೆ ಪಾಲನ್ನು ಹೊಂದಿದ್ದೇವೆ ಎಂದು ಹೆಮ್ಮೆಯಿಂದ ಹೇಳಿದರು.

ಅಡುಗೆ ಮನೆ ಉತ್ಪನ್ನಗಳಲ್ಲಿ ಎಲ್ಲವನ್ನೂ ನೀಡಿದ್ದೇವೆ. ಆದರೆ, ಈಗ ಯುವಪೀಳಿಗೆಯತ್ತ ಗಮನಹರಿಸಿ, ಅವರ ಇಚ್ಛೆ ಹಾಗೂ ಆಹಾರಶೈಲಿಗೆ ಅನುಗುಣವಾಗಿ ವಿವಿಧ ಶ್ರೇಣಿ ನವೀನ ಏರ್ ಫ್ರೈಯರ್ ಪರಿಚಯಿಸಿದ್ದೇವೆ. ಒಂದೇ ಏರ್ ಫ್ರೈಯ್ ಅನ್ನು ಗ್ರಿಲ್ಲರ್ ಆಗಿಯೂ ಬಳಸಬಹುದಾಗಿದೆ. ಟೂ ಇನ್ ಒನ್ ಏರ್ ಫ್ರೈಯರ್ ವಿತ್ ಗ್ರಿಲ್ಲರ್. ಕರ್ನಾಟಕದಲ್ಲಿ ಇದಕ್ಕೆ ಬಹಳ ಬೇಡಿಕೆ ಇದೆ. ಕೇವಲ ಇಲ್ಲಿ ಮಾತ್ರವಲ್ಲ ಪ್ಯಾನ್ ಇಂಡಿಯಾ ಮಾರುಕಟ್ಟೆಯಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ಈ ಉತ್ಪನ್ನದಲ್ಲಿ ನಾವು ಮೊದಲ ಸ್ಥಾನದಲ್ಲಿ ಬರಬಹುದೆಂಬ ನಂಬಿಕೆ ಇದೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿದರು.



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದಲ್ಲಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಸಿಇಒ ವಿನೋದಾ ಶಿವರಾಮಯ್ಯ, ಉಪಾಧ್ಯಕ್ಷ ಅರವಿಂದ್, ನಿರ್ದೇಶಕ ಆರ್. ಅಶ್ವತ್ಥ್

# ಪ್ರಗತಿ ಪಥದಲ್ಲಿ ಜನತಾ ಕೋ–ಆಪರೇಟಿವ್ ಬ್ಯಾಂಕ್

**ಜನತಾ ಕೋ–ಆಪರೇಟಿವ್** ಬ್ಯಾಂಕ್ ಪ್ರಜಾವಾಣಿಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಚಂದನವನದ ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡುವ ಸಿನಿ ಸಮ್ಮಾನ ಸಮಾರಂಭ ಆಯೋಜಿಸಿದ ಪ್ರಜಾವಾಣಿಯೊಂದಿಗೆ ಕೈ ಜೋಡಿಸಿರುವುದು ಬಹಳ ಸಂತೋಷವಾಗುತ್ತಿದೆ ಎಂದು ಜನತಾ ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಆರ್. ಅಶ್ವತ್ಥ ಅಭಿಪ್ರಾಯಪಟ್ಟರು.

ಬೆಂಗಳೂರು ನಗರದಲ್ಲಿ ನಮ್ಮ ಬ್ಯಾಂಕ್‌ನ ಏಳು ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, 60 ವರ್ಷಗಳನ್ನು ಪೂರೈಸಿದೆ. ಈ ಸಾಲಿನಲ್ಲಿ ಒಟ್ಟು ₹ 17 ಕೋಟಿ ಲಾಭ ಗಳಿಸಿದೆ. ಪ್ರಜಾವಾಣಿಯೊಂದಿಗೆ ನಮ್ಮ ಬ್ಯಾಂಕ್ ನಿಕಟ ಸಂಪರ್ಕ ಹೊಂದಿದೆ. 16ನೇ ವಯಸ್ಸಿನಿಂದ ಇದುವರೆಗೆ ನಾನು ಪ್ರಜಾವಾಣಿ ಪತ್ರಿಕೆಯ ಓದುಗನಾಗಿದ್ದೇನೆ. ಪತ್ರಿಕೆ ಓದದೇ ಇದ್ದರೆ ಕಾಫಿ, ತಿಂಡಿ ಮಾಡುವುದೇ ಇಲ್ಲ. ಪ್ರಜಾವಾಣಿ ನಮ್ಮ ನರನಾಡಿಗಳಲ್ಲಿ ಸೇರಿಕೊಂಡಿದೆ’ ಎಂದು ಹೆಮ್ಮೆಯಿಂದ ಹೇಳಿದರು.

‘ಎರಡು ವರ್ಷಗಳ ಹಿಂದೆ ವಿದ್ಯಾರಣ್ಯಪುರದಲ್ಲಿ ಕುಡಿಯುವ ನೀರು ಪೂರೈಕೆ ಆಗಿಲ್ಲವೆಂದು ನನ್ನ ನೇತೃತ್ವದಲ್ಲಿ ಪ್ರತಿಭಟನೆ ನಡೆದಿತ್ತು. ಈ ಪ್ರತಿಭಟನೆಯ ಸುದ್ದಿ ಪ್ರಜಾವಾಣಿಯ ಮುಖಪುಟದಲ್ಲಿ ಪ್ರಕಟವಾಗಿತ್ತು. ಮರುದಿನವೇ ನಮಗೆ ಕುಡಿಯುವ ನೀರು ಪೂರೈಕೆ ಮಾಡಲಾಗಿತ್ತು. ಪ್ರಜಾವಾಣಿಯಲ್ಲಿ ಏನಾದರೂ ಒಂದು ಜನಪರ ಸುದ್ದಿ ಪ್ರಕಟವಾದರೇ, ಆ ಸಮಸ್ಯೆಗೆ ಪರಿಹಾರ ಸಿಗುತ್ತದೆ’ ಎಂದು ನೆನಪಿಸಿಕೊಂಡರು.

‘ಸಿನಿ ಸಮ್ಮಾನ ಕಾರ್ಯಕ್ರಮದ ಮೂಲಕ ಸ್ಯಾಂಡಲ್‌ವುಡ್‌ನ ದಿಗ್ಗಜ ಕಲಾವಿದರಿಗೆ ಗೌರವಿಸುವುದು, ಪ್ರತಿಭಾವಂತ ಯುವ ಕಲಾವಿದರನ್ನು ಸನ್ಮಾನಿಸುತ್ತಿರುವುದು ಶ್ಲಾಘನೀಯ. ಇಂತಹ ಸಮಾರಂಭದಲ್ಲಿ ನಾವು ಭಾಗವಹಿಸುತ್ತಿರುವುದು ಹೆಮ್ಮೆ ಆಗುತ್ತಿದೆ. ಪ್ರಜಾವಾಣಿ ಈಗ 77 ವರ್ಷ ಪೂರೈಸಿದ್ದು, ಶತಕ ಸಾಧನೆ ಮಾಡಿ ಮುನ್ನುಗ್ಗಲಿ ಎಂದು ಹಾರೈಸಿದರು. ಜನರ ಮನಸಿನಲ್ಲಿ ಪ್ರಜಾವಾಣಿ ಪತ್ರಿಕೆ ನಂಬರ್ 1 ಸ್ಥಾನ ಪಡೆದುಕೊಂಡಿದೆ ಎಂದು ಹೇಳಿದರು.

ಉಪಾಧ್ಯಕ್ಷ ಅರವಿಂದ್, ಸಿಇಒ ವಿನೋದಾ ಶಿವರಾಮಯ್ಯ ಜೊತೆಗಿದ್ದರು.

# ಶತಮಾನ ಕಂಡ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್



ಶೇಷಾದ್ರಿ

**ಪ್ರಜಾವಾಣಿ** ಸದಭಿರುಚಿಯ ಪತ್ರಿಕೆ ಆಗಿದ್ದು, ಸಿನಿಮಾ ರಂಗದಲ್ಲಿ ಸಾಧನೆ ಮಾಡಿದ ಕಲಾವಿದರಿಗೆ ಪ್ರಶಸ್ತಿ ನೀಡುವ ಸಿನಿ ಸಮ್ಮಾನ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದು ಬ್ಯಾಂಕ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕ ಶೇಷಾದ್ರಿ ಹೇಳಿದರು.

‘ಶತಮಾನ ಕಂಡ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಕರ್ನಾಟಕದ ಪ್ರತಿಷ್ಠಿತ ಕೋ–ಆಪರೇಟಿವ್ ಬ್ಯಾಂಕ್ ಆಗಿದೆ. ಈ ಬ್ಯಾಂಕ್ 1907 ಸ್ಥಾಪನೆಯಾಗಿದ್ದು, 118 ವರ್ಷಗಳಿಂದ ಗ್ರಾಹಕರಿಗೆ ಅತ್ಯುತ್ತಮ ಬ್ಯಾಂಕಿಂಗ್ ಸೇವೆ ನೀಡುತ್ತಿದೆ. ಈ ಸಾಲಿನಲ್ಲಿ ₹28.27 ಕೋಟಿ ಲಾಭಗಳಿಸಿದೆ’ ಎಂದು ವಿವರ ನೀಡಿದರು.

‘ಮೈಸೂರು ಸಂಸ್ಥಾನದ ಪ್ರಥಮ ಪಟ್ಟಣ ಸಹಕಾರ ಬ್ಯಾಂಕ್ ಎಂಬ ಕೀರ್ತಿಗೆ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಭಾಜನವಾಗಿತ್ತು. ಸಮಾಜದ ಎಲ್ಲ ವರ್ಗಗಳ ಜನರಲ್ಲಿ ಮಿತವ್ಯಯ ಮತ್ತು ಉಳಿತಾಯ ಮನೋಭಾವವನ್ನು ಉತ್ತೇಜಿಸಲು ಮತ್ತು ಅವರ ಆರ್ಥಿಕ ಅವಶ್ಯಕತೆಗಳಿಗೆ ಸ್ಪಂದಿಸಲು ಹಾಗೂ ಲೇವಾದೇವಿಗಾರರ ಬಿಗಿಮುಷ್ಟಿಯಿಂದ ಸಾಮಾನ್ಯ ಜನರನ್ನು ಪಾರು ಮಾಡಲು ಸಹಕಾರ ತತ್ವಗಳ ಆಧಾರದ ಮೇಲೆ ಈ ಬ್ಯಾಂಕ್ ಸ್ಥಾಪಿಸಲಾಗಿದೆ’ ಎಂದು ತಿಳಿಸಿದರು.

ಬ್ಯಾಂಕ್ ಆರಂಭಿಕ ದಿನದಿಂದಲೂ ಜನಸಾಮಾನ್ಯರನ್ನು ಗಮನದಲ್ಲಿರಿಸಿಕೊಂಡು ವ್ಯವಹಾರ ನಡೆಸುತ್ತಿದೆ. ಪ್ರಾರಂಭಿಕ ವರ್ಷಗಳಲ್ಲಿ ಸದಸ್ಯರ ಅನುಕೂಲಕ್ಕಾಗಿ ಪ್ರತಿ ತಿಂಗಳು ₹1 ರಂತೆ ಕಂತುಗಳಲ್ಲಿ ಷೇರು ಸಂಗ್ರಹಿಸಿದೆ. ಸೇವೆಯೇ ಗುರಿಯಾಗಿಸಿಕೊಂಡು ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಮೂಲಕ ಗ್ರಾಹಕ ಸ್ನೇಹಿಯಾಗಿ ಷೇರು ಸಂಗ್ರಹಣೆ, ನಿಧಿ ಸಂಗ್ರಹಣೆ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ ಮತ್ತು ಲಾಭ ಗಳಿಕೆಯಲ್ಲಿ ಉತ್ತಮ ಸಾಧನೆ ಮಾಡಿದೆ. 2024-25ನೇ ಸಾಲಿನಲ್ಲೂ ಕರ್ನಾಟಕ ರಾಜ್ಯದ ‘ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕಾಗಿ’ ಮುಂದುವರಿದಿದೆ ಎಂದು ಹೆಮ್ಮೆಯಿಂದ ಹೇಳಿದರು.

# ಕಡಿಮೆ ಬೆಲೆ ಉತ್ಕೃಷ್ಟ ಉತ್ಪನ್ನಗಳು

**‘ರಾಜ್ಯದಲ್ಲಿ ಸುಮಾರು** 77 ವರ್ಷಗಳಿಂದ ಪ್ರಜಾವಾಣಿ ಪತ್ರಿಕೆ ವಿಶಿಷ್ಟ ಛಾಪು ಮೂಡಿಸಿದೆ. ಕರ್ನಾಟಕದ ಜನತೆಗೆ ಒಂದೇ ಸೂರಿನಡಿಯಲ್ಲಿ ಸಮಗ್ರ ಸುದ್ದಿಗಳನ್ನು ಬಿತ್ತರಿಸುತ್ತಿದೆ. ಇದೀಗ ಚಿತ್ರರಂಗದ ಕಲಾವಿದರಿಗೆ ಪ್ರೋತ್ಸಾಹ, ಬೆಂಬಲ ನೀಡುವ ಉದ್ದೇಶದಿಂದ ಕಳೆದ ಮೂರು ವರ್ಷಗಳಿಂದ ಸಿನಿ ಸಮ್ಮಾನ ಕಾರ್ಯಕ್ರಮ ಆಯೋಜಿಸುತ್ತಿದೆ. ನಮ್ಮ ಸಂಸ್ಥೆಯ ಸಹಭಾಗಿತ್ವದ ಈ ಸಮಾರಂಭ ನಡೆಯುತ್ತಿರುವುದು ಖುಷಿ ನೀಡಿದೆ’ ಎಂದು ಸದ್ಗುರು ಆಯುರ್ವೇದ ಉತ್ಪನ್ನಗಳ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಡಿ.ಎಸ್. ಹೇಳಿದರು.

‘ಸಿನಿರಂಗದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ಅವರ ಬೆನ್ನು ತಟ್ಟುವ ಕೆಲಸವನ್ನು ಪ್ರಜಾವಾಣಿ ಮಾಡುತ್ತಿದ್ದು, ಅದಕ್ಕೆ ಸದ್ಗುರು ಆಯುರ್ವೇದ ಕೈಜೋಡಿಸಿದೆ. ಸಿನಿ ಸಮ್ಮಾನ ಪ್ರಶಸ್ತಿ ನೀಡುವ ಮೂಲಕ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಕೆಲಸ ಮಾಡುತ್ತಿದೆ. ಇಂತಹ ಒಂದು ಸಮಾರಂಭವನ್ನು ಆಯೋಜಿಸಿದ ಪ್ರಜಾವಾಣಿಗೆ ಸಮಸ್ತ ಕರ್ನಾಟಕದ ಜನತೆ ಹಾಗೂ ಸದ್ಗುರು ಆಯುರ್ವೇದ ಉತ್ಪನ್ನಗಳ ಪರವಾಗಿ ಅಭಿನಂದನೆಗಳು ತಿಳಿಸುತ್ತೇನೆ’ ಎಂದರು.



ಡಾ.ಸ್ವಾತಿ ಪ್ರದೀಪ್ ಡಿ., ಪ್ರದೀಪ್ ಡಿ.ಎಸ್, ವ್ಯವಸ್ಥಾಪಕ ನಿರ್ದೇಶಕರು

‘ಗ್ರಾಮೀಣ ಕ್ಷೇತ್ರದಲ್ಲಿ ಮಹಿಳೆಯರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ 6 ರಿಂದ 8 ಜನ ಸೇರಿ ₹ 50 ಸಾವಿರ ಬಂಡವಾಳದಿಂದ ಸಂಸ್ಥೆಯು ಪ್ರಾರಂಭವಾಯಿತು. ಈಗ ನಮ್ಮಲ್ಲಿ 300ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ 220ಕ್ಕೂ ಹೆಚ್ಚು ಮಹಿಳೆಯರೇ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಮಾಹಿತಿ ಹಂಚಿಕೊಂಡಿದರು.

‘ನಮ್ಮಲ್ಲಿ ಕಡ್ಲೆಹಿಟ್ಟಿನ ಸಾಬೂನು, ತುಳಸಿ, ಆಲೋವೆರಾ ಶಾಂಪೂ, ಸೊಳ್ಳೆ ನಿರೋಧಕ ಬತ್ತಿಗಳು ಸೇರಿದಂತೆ ಹಲವಾರು ಉತ್ಪನ್ನಗಳು ತಯಾರಿಸಲಾಗುತ್ತಿದೆ. ಪುರಾತನ ಪದ್ಧತಿಗೆ ಆಧುನಿಕ ಸ್ಪರ್ಶ ನೀಡಿ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ರಾಜ್ಯಾದ್ಯಂತ ಮಾರಾಟ ಮಾಡುತ್ತಿದ್ದೇವೆ. ಗ್ರಾಹಕರು ಸಹ ನಮ್ಮ ಉತ್ಪನ್ನಗಳನ್ನು ಮೆಚ್ಚಿಕೊಂಡು, ಕಳೆದ 12 ವರ್ಷಗಳಿಂದ ನಮ್ಮ ಯಶಸಿನಲ್ಲಿ ಭಾಗಿದ್ದಾರೆ ಎಂದು ತಿಳಿಸಿದರು.

# ಗ್ರಾಹಕರ ನಂಬಿಕೆಯ ಎಚ್‌ಎಂಎಸ್‌ಐ

**ಪ್ರಜಾವಾಣಿ** ಮತ್ತು ಹೊಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ (ಎಚ್‌ಎಂಎಸ್‌ಐ) ಒಡನಾಡ ಹಲವಾರು ವರ್ಷಗಳಿಂದಲೂ ಇದೆ. ಪ್ರಜಾವಾಣಿಯ ಸಹಭಾಗಿತ್ವವನ್ನು ನಮ್ಮ ಸಂಸ್ಥೆಯೊಂದಿಗೆ ಹೊಂದಿರುವುದಕ್ಕೆ ತುಂಬಾ ಖುಷಿ ಆಗುತ್ತಿದೆ.

ಪ್ರಜಾವಾಣಿ ಪತ್ರಿಕೆಯನ್ನು ನಮ್ಮ ತಂದೆಯವರು ಕಾಲದಿಂದಲೂ ಓದಿಕೊಂಡು ಬರುತ್ತಿದ್ದೇವೆ. ಈಗ ಪ್ರಜಾವಾಣಿಯ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸುತ್ತಿರುವುದು ಹೆಮ್ಮೆಯ ಕ್ಷಣ. ಸಿನಿ ಸಮ್ಮಾನ ಎರಡನೇ ಆವೃತ್ತಿಯಿಂದ ನಾನು ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದೇನೆ. ಹೋದ ವರ್ಷಕ್ಕಿಂತ ಈ ಬಾರಿ ನಮಗೆ ಹೆಚ್ಚು ನಿರೀಕ್ಷೆಗಳಿದ್ದವು. ಅದರಂತೆಯೇ ಸಮಾರಂಭ ಯಶಸ್ವಿಯಾಗಿದೆ. ಇಂತಹ ಕಾರ್ಯಕ್ರಮಕ್ಕೆ ಎಚ್‌ಎಂಎಸ್‌ಐನ ಸಹಭಾಗಿತ್ವ ಇರುವುದು ಕಂಪನಿ ಹಾಗೂ ನನಗೆ ಹೆಮ್ಮೆ ಸಂಗತಿ. ಪ್ರಜಾವಾಣಿ ನಮ್ಮ ಕುಟುಂಬದವರ ಅಚ್ಚುಮೆಚ್ಚಿನ ದಿನಪತ್ರಿಕೆಯಾಗಿದೆ.

ಹೋಂಡಾ ಮೋಟಾರ್ ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾ ಪ್ರೈ. ಲಿ. ಜಪಾನ್‌ನ ಮೋಟಾರ್ ಕಂಪನಿಯ ಅಂಗಸಂಸ್ಥೆಯಾಗಿದೆ. ಭಾರತದ 2 ನೇ ಅತಿದೊಡ್ಡ ದ್ವಿಚಕ್ರ ವಾಹನ ಕಂಪನಿಯಾಗಿ ಬೆಳೆದಿದೆ ಎಂದು ಅವರು ತಿಳಿಸಿದರು.



ಸಂತೋಷ್ ಅಲಿಬಾದಿ

> ಪ್ರಜಾವಾಣಿ ಸಿನಿ ಸಮ್ಮಾನ ಸಮಾರಂಭದಲ್ಲಿ ಚಂದನವನದ ತಾರೆಯರಿಗೆ ಪ್ರಶಸ್ತಿ ಪ್ರದಾನ ಮಾಡುವ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗುತ್ತಿರುವುದು ಮರೆಯಲಾರದ ಕ್ಷಣ.
> **ಸಂತೋಷ್ ಅಲಿಬಾದಿ,** ಎಚ್‌ಎಂಎಸ್‌ಐನ ಪ್ರಾದೇಶಿಕ ವ್ಯವಸ್ಥಾಪಕ

# ಗ್ರಾಹಕ ಸ್ನೇಹಿ ನ್ಯಾಷನಲ್ ಇನ್ಶುರೆನ್ಸ್ ಕಂಪನಿ



ವಿಜಯ್ ಕುಮಾರ್ ಬಿ.ಕೆ.

ದಿನಮಾನದ ಆಗುಹೋಗುಗಳಿಗಾಗಿ ಪ್ರತಿ ಬೆಳಗು ಅವಲಂಬಿಸುವ ‘ಪ್ರಜಾವಾಣಿ’ ಪತ್ರಿಕೆಯು ‘ಸಿನಿ ಸಮ್ಮಾನ’ದಂತಹ ದೊಡ್ಡ ಕಾರ್ಯಕ್ರಮ ಆಯೋಜಿಸಿರುವುದು ಸಂಭ್ರಮವನ್ನು ಹೆಚ್ಚಿಸಿದೆ ಎನ್ನುವುದು ನ್ಯಾಷನಲ್ ಇನ್ಶುರೆನ್ಸ್ ಕಂಪನಿಯ ಪ್ರಾದೇಶಿಕ ವ್ಯವಸ್ಥಾಪಕ ವಿಜಯ್ ಕುಮಾರ್ ಬಿ.ಕೆ. ಅವರ ಅಭಿಮಾನದ ಮಾತುಗಳು.

ಹಿರಿಯ ಕಲಾವಿದರನ್ನು ಗೌರವಿಸಲು, ಹೊಸ, ಹೊಸ ಪ್ರತಿಭೆಗಳನ್ನು ಗುರುತಿಸಲು ಇದೊಂದು ಸೂಕ್ತ ವೇದಿಕೆ. ಪ್ರತಿಭೆ, ಸಡಗರ, ವೈಭವ, ಸತ್ಕಾರಗಳಿಂದ ಕೂಡಿದ ಕಾರ್ಯಕ್ರಮ ಇದು ಎನ್ನುವುದನ್ನು ಅವರು ಮರೆಯಲಿಲ್ಲ.

ಈ ಸಂದರ್ಭದಲ್ಲಿ ಅವರು ತಮ್ಮ ಕಂಪನಿ ಕುರಿತು ಹೀಗೆ ಮಾತನಾಡಿದರು. ‘ನ್ಯಾಷನಲ್ ಇನ್ಶುರೆನ್ಸ್ ಕಂಪನಿ’ ದೇಶದ ಸಾರ್ವಜನಿಕ ವಲಯದ (ಪಬ್ಲಿಕ್ ಸೆಕ್ಟರ್) 4ನೇ ದೊಡ್ಡ ವಿಮಾ ಕಂಪನಿಯಾಗಿ ಗುರುತಿಸಿಕೊಂಡಿದೆ. ಜನರಲ್ ವಿಮೆ, ಆರೋಗ್ಯ, ತುರ್ತು ವಿಮೆ ಸೇರಿದಂತೆ ಹತ್ತಾರು ಸೇವೆ ಒದಗಿಸುತ್ತಿದೆ.

ಇಂದಿನ ದಿನಗಳಲ್ಲಿ ಎಲ್ಲ ಬಗೆಯ ವಿಮೆಗಳು ಅಗತ್ಯ. ಅದರಲ್ಲೂ ಆರೋಗ್ಯ ವಿಮೆ ಅನಿವಾರ್ಯವೇ ಆಗಿ ಹೋಗಿದೆ. ಆಸ್ಪತ್ರೆ ವೆಚ್ಚ ವರ್ಷದಿಂದ ವರ್ಷಕ್ಕೆ ದುಪ್ಪಟ್ಟಾಗುತ್ತಿದೆ. ವಿಮೆ ಇಲ್ಲದೆ ಆಸ್ಪತ್ರೆಗಳಿಗೆ ಹೋದರೆ ಒಂದೊ ಕೈ ಖಾಲಿಯಾಗಬೇಕು, ಇಲ್ಲವೆ ಚಿಕಿತ್ಸೆ ಪಡೆಯದೆ ಮನೆಗೆ ಮರಳಬೇಕು. ಬೇರೆ ಆಯ್ಕೆಗಳೇ ಇಲ್ಲದಾಗಿದೆ.

ವಿಮೆ ಪಡೆದವರು ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ದಾಖಲಾದಾಗ ನಮ್ಮ ಕಂಪನಿ ತುರ್ತಾಗಿ ಸ್ಪಂದಿಸುತ್ತದೆ. ಆಸ್ಪತ್ರೆಗೆ ಚಿಕಿತ್ಸಾ ವೆಚ್ಚವನ್ನು ಭರಿಸುವುದರಿಂದ ಯಾವುದೇ ತೊಂದರೆ ಇಲ್ಲದೆ ಸಲೀಸಾಗಿ ಕ್ಲೇಮ್ ಪಡೆಯುವ ಅವಕಾಶವಿದೆ.

# ಫ್ರೀಡಂ ಸನ್‌ಫ್ಲವರ್ ಆಯಿಲ್ ಮುಂಚೂಣಿ ಬ್ರ್ಯಾಂಡ್

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಮೂರನೇ ಆವೃತ್ತಿಯ ಸಮಾರಂಭದಲ್ಲಿ ಫ್ರೀಡಂ ಹೆಲ್ತಿ ಅಡುಗೆ ಎಣ್ಣೆಗಳ ಪ್ರಾದೇಶಿಕ ಮಾರಾಟ ವ್ಯವಸ್ಥಾಪಕ (ಕರ್ನಾಟಕ) ಅಭಿನವ್ ಪಾಂಡೆ ಅವರು ತಮ್ಮ ತಂಡದೊಂದಿಗೆ ಪಾಲ್ಗೊಂಡು ಸಂಭ್ರಮಿಸಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅಭಿನವ್ ಪಾಂಡೆ, ಕಳೆದ ಮೂರು ವರ್ಷಗಳಿಂದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ಕ್ಕೆ ನಮ್ಮ ಸಹಭಾಗಿತ್ವ ಇದೆ. ಇದೊಂದು ಅದ್ಭುತ ಕಾರ್ಯಕ್ರಮ. ನಮ್ಮ ಮಾರುಕಟ್ಟೆ ನಿರೀಕ್ಷೆಗಳೂ ಸಾಕಾರಗೊಂಡಿದ್ದರಿಂದ ಈ ಸಹಭಾಗಿತ್ವದಲ್ಲಿ ಪಾಲ್ಗೊಂಡಿದ್ದೇವೆ.

ಚಿತ್ರರಂಗದ ಸಾಧಕರನ್ನು, ಹೊಸ ಪ್ರತಿಭೆಗಳನ್ನು ಗುರುತಿಸಿ, ಗೌರವಿಸುವ ಸಿನಿ ಸಮ್ಮಾನ ವಿಭಿನ್ನವಾದ ಪರಿಕಲ್ಪನೆ. ಇದೊಂದು ಉತ್ತಮ ಕಾರ್ಯಕ್ರಮ. ಇದಕ್ಕೆ ಕನ್ನಡ ಸಿನಿಮಾರಂಗ ಹಾಗೂ ವೀಕ್ಷಕರ ಸಂಖ್ಯೆ ದೊಡ್ಡದಿದೆ. ಇಂತಹ ವೇದಿಕೆಯಲ್ಲಿ ನಮ್ಮನ್ನು ಗುರುತಿಸಿಕೊಳ್ಳಲು ಸಂತೋಷವಾಗುತ್ತದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಫ್ರೀಡಂ ಸನ್‌ಫ್ಲವರ್ ಆಯಿಲ್' ಈಗಾಗಲೇ ಭಾರತದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಕರ್ನಾಟಕ ದಲ್ಲಿ ಟಾಪ್ ಮೂರರಲ್ಲಿ ಸ್ಥಾನ ಪಡೆದಿದೆ. ನಮ್ಮ ಬ್ರ್ಯಾಂಡ್ ಮುಂದಿನ ಹಂತ ತಲುಪಬೇಕಾದರೆ ಇಂತಹ ವೇದಿಕೆಗಳು ನಮಗೆ ಮುಖ್ಯವಾಗುತ್ತವೆ. ನಾವು ಪರಿಚಯಿಸುವ ಹೊಸ ಉತ್ಪನ್ನಗಳು ಗ್ರಾಹಕರಿಗೆ ತಲುಪುವಲ್ಲಿ ಮಾಧ್ಯಮದ ಪಾತ್ರ ಪ್ರಮುಖವಾದುದು. ಅದರಲ್ಲೂ ನಮ್ಮ ಬ್ರ್ಯಾಂಡ್ ಮೌಲ್ಯ ಹೆಚ್ಚಿಸುವಲ್ಲಿ ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಕೊಡುಗೆ ದೊಡ್ಡದು' ಎಂದು ಅವರು ಹೇಳಿದರು.

'ಸಿನಿ ಸಮ್ಮಾನದಂತಹ ಜನಮೆಚ್ಚುಗೆಯ ಕಾರ್ಯಕ್ರಮಕ್ಕೆ ನಾವು ಸಾಥ್ ನೀಡುವುದರಿಂದ ನಮ್ಮ ಬ್ರ್ಯಾಂಡ್ ಮೌಲ್ಯವೂ ಹೆಚ್ಚುತ್ತದೆ. ನಮ್ಮ ಗ್ರಾಹಕರಿಗೆ ಉತ್ಪನ್ನಗಳ ಗುಣಮಟ್ಟದ ಬಗ್ಗೆ ನಾವು ಏನು ಹೇಳಬೇಕೊ ಅದನ್ನು ಸುಲಭವಾಗಿ ತಲುಪಲು ಪ್ರಜಾವಾಣಿ ನಮಗೆ ಉತ್ತಮ ಅವಕಾಶವನ್ನು ಒದಗಿಸಿದೆ' ಎಂದು ಖುಷಿಪಟ್ಟರು.

'ಹಲವಾರು ವರ್ಷಗಳಿಂದ ಪ್ರಜಾವಾಣಿ ಸಮೂಹದೊಂದಿಗೆ ಸಾಕಷ್ಟು ಕಾರ್ಯಕ್ರಮಗಳಿಗೆ ಸಹಭಾಗಿತ್ವ ನೀಡಿದ್ದೇವೆ. ಪ್ರಜಾವಾಣಿಯಿಂದ ನಮಗೆ ನಿರಂತರ ಬೆಂಬಲ ಸಿಗುತ್ತಿದೆ. ಹಾಗೆಯೇ ನಮ್ಮ ಕಡೆಯಿಂದಲೂ ಪ್ರೋತ್ಸಾಹ ನೀಡುತ್ತಿದ್ದೇವೆ. ವರ್ಷದಿಂದ ವರ್ಷಕ್ಕೆ ನಮ್ಮ ಸಂಬಂಧ ಇನ್ನಷ್ಟು ಗಟ್ಟಿಯಾಗುತ್ತಲಿದೆ' ಎಂದು ತಿಳಿಸಿದರು.

ಫ್ರೀಡಂ ಸನ್‌ಫ್ಲವರ್ ಆಯಿಲ್ ಭಾರತದಲ್ಲಿ ಖಾದ್ಯ ತೈಲಗಳ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ಬ್ರ್ಯಾಂಡ್ ಆಗಿದೆ. ದೇಶದ ಸೂರ್ಯಕಾಂತಿ ಎಣ್ಣೆ ಮಾರುಕಟ್ಟೆ ಪಾಲಿನ ಮಾರಾಟದ ಪ್ರಮಾಣದಲ್ಲಿ ನಂಬರ್ 1 ಬ್ರ್ಯಾಂಡ್ ಸ್ಥಾನ ಪಡೆಯಲು ಬಯಸುತ್ತಿದೆ.

ಗ್ರಾಹಕರಲ್ಲಿ ಆರೋಗ್ಯ ಪ್ರಜ್ಞೆ ಹೆಚ್ಚುತ್ತಿದೆ. ಆರೋಗ್ಯಕರ ಎಣ್ಣೆಗಳ ಪರವಾಗಿ ಜನರಲ್ಲಿ ಪರಿವರ್ತನೆ ಕಾಣಬಹುದು. ಸೂರ್ಯಕಾಂತಿ ಹೆಚ್ಚಿನ ತಾಪಮಾನದಲ್ಲಿ ಅದರ ಪೌಷ್ಟಿಕಾಂಶವನ್ನು ಹಿಡಿದಿಟ್ಟುಕೊಳ್ಳುವುದರಿಂದ ಸೂರ್ಯಕಾಂತಿ ಎಣ್ಣೆಯನ್ನು ಭಾರತೀಯ ಪಾಕ ಪದ್ಧತಿಗಳಿಗೆ ಸೂಕ್ತವೆಂದು ಪರಿಗಣಿಸಲಾಗುತ್ತದೆ. ಫ್ರೀಡಂ ಸೂರ್ಯಕಾಂತಿ ಎಣ್ಣೆಯನ್ನು ವಿಟಮಿನ್ ಎ ಮತ್ತು ಡಿ ಯಿಂದ ಬಲಪಡಿಸಲಾಗಿದೆ. ಇದರಲ್ಲಿ ನೈಸರ್ಗಿಕವಾಗಿ ವಿಟಮಿನ್–ಇ ಸಮೃದ್ಧವಾಗಿದೆ. ಆರೋಗ್ಯ ಪ್ರಜ್ಞೆ ಹೊಂದಿರುವ ಗ್ರಾಹಕರ ದೈನಂದಿನ ಬಳಕೆಗೆ ಇದು ಆದ್ಯತೆ ಆಯ್ಕೆಯಾಗಿದೆ.



ನಟಿ ಅಂಕಿತಾ ಅಮರ್‌ಗೆ ಜನ ಮೆಚ್ಚಿದ ನಟಿ ಪ್ರಶಸ್ತಿ ನೀಡುತ್ತಿರುವ ದತ್ತಣ್ಣ, ಫ್ರೀಡಂ ಹೆಲ್ತಿ ಅಡುಗೆ ಎಣ್ಣೆಗಳ ಪ್ರಾದೇಶಿಕ ಮಾರಾಟ ವ್ಯವಸ್ಥಾಪಕ (ಕರ್ನಾಟಕ) ಅಭಿನವ್ ಪಾಂಡೆ.




ನಟಿ ಅಂಕಿತಾ ಅಮರ್‌ಗೆ ಅತ್ಯುತ್ತಮ ನಟಿ ಪ್ರಶಸ್ತಿ ನೀಡುತ್ತಿರುವ ಲಹರಿ ವೇಲು, ಅಕ್ಷಯ ಮೋಟರ್ಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಕಾಸ್ ಎಂ.ಜೆ. ನಟಿ ಮಾಳವಿಕ ಅವಿನಾಶ್ ಹಾಜರಿದ್ದರು.

# ಮರ್ಸಿಡಿಸ್ ಬೆಂಜ್–ಅಕ್ಷಯ ಮೋಟರ್ಸ್ ಹದಿನೈದು ವರ್ಷಗಳ ಅನುಬಂಧ

**'ಅಕ್ಷಯ ಮೋಟರ್ಸ್'** ಒಂದು ಆಟೋಮೊಬೈಲ್ ರಿಟೇಲ್ ಚೈನ್ ಆಗಿದ್ದು, ಭಾರತದಲ್ಲಿನ ಅತಿದೊಡ್ಡ ವಾಹನ ಮಾರಾಟ ಜಾಲಗಳಲ್ಲಿ ಒಂದಾಗಿದೆ. ಮಾರಾಟ ಮತ್ತು ಸರ್ವಿಸ್ ಸೇರಿದಂತೆ ಎಲ್ಲ ವ್ಯವಹಾರ ಕಾರ್ಯಗಳಲ್ಲಿ ವಿಶ್ವ ದರ್ಜೆಯ ಗ್ರಾಹಕ ಅನುಭವವನ್ನು ಒದಗಿಸುವತ್ತ ಗಮನಹರಿಸುತ್ತದೆ.

ಮರ್ಸಿಡಿಸ್–ಬೆಂಜ್ ಅಕ್ಷಯ ಮೋಟರ್ಸ್ ವಾಹನಗಳ ಮಾರಾಟ ಮತ್ತು ಸೇವೆಗಳಲ್ಲಿ ಅಗಾಧ ಪರಿಣತಿ ಹೊಂದಿರುವ ಸಂಸ್ಥೆ, ಕಳೆದ 15 ವರ್ಷಗಳಿಂದ ಕರ್ನಾಟಕದ ಜನತೆ ಸೇವೆ ಸಲ್ಲಿಸುತ್ತಿರುವ ಹೆಸರಾಂತ ಕಂಪನಿ ಎಂಬ ಖ್ಯಾತಿಗೂ ಪಾತ್ರವಾಗಿದೆ.

2011 ರಲ್ಲಿ ಸ್ಥಾಪನೆಯಾದ ಅಕ್ಷಯ ಮೋಟರ್ಸ್ ಬೆಂಗಳೂರಿನಲ್ಲಿ ಕೆಂಗೇರಿ (ಮೈಸೂರು ರಸ್ತೆ), ಕೋಣನಕುಂಟೆ ಮತ್ತು ಹೊಸೂರು ರಸ್ತೆಯಲ್ಲಿ ಶಾಖೆಗಳನ್ನು ಹೊಂದಿದೆ. ಕೇವಲ ಕಾರುಗಳ ಮಾರಾಟವಲ್ಲದೆ, ಸೇವೆ (ಸರ್ವಿಸ್) ಮತ್ತು ದುರಸ್ತಿ ಸೇವೆಗಳನ್ನು ಒದಗಿಸುತ್ತಲಿದೆ.

ಮರ್ಸಿಡಿಸ್-ಬೆಂಜ್ ವಾಹನಗಳ ಅಧಿಕೃತ ವಿತರಕರಾಗಿರುವ ಅಕ್ಷಯ ಮೋಟರ್ಸ್ ವಿಶೇಷವಾಗಿ ಐಷಾರಾಮಿ ಕಾರುಗಳ ಮಾರಾಟ ಮತ್ತು ಸೇವೆಯನ್ನು ಸಲ್ಲಿಸುತ್ತಲಿದೆ. ಇವುಗಳ ವಿಶೇಷ ಸೇವೆಗಳಾಗಿ ಡೆಲಿವರಿ ಸೇವೆ, ಶಾಪ್ ಇನ್ ಸ್ಟೋರ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಸೌಲಭ್ಯ, ಕಂಪನಿ ಅಧಿಕೃತ ಡೀಲರ್, ಪಿಕ್‌ಅಪ್ ಮತ್ತು ಡ್ರಾಪ್ ಸೌಲಭ್ಯ, ಗ್ರಾಹಕ ಲಾಂಜ್ ಮುಂತಾದ ಸೇವೆಗಳನ್ನು ಒದಗಿಸುತ್ತದೆ.




ಗ್ರಾಹಕರು ಅಕ್ಷಯ ಮೋಟರ್ಸ್‌ನ ವೆಬ್‌ಸೈಟ್ ಮತ್ತು ಸಂಪರ್ಕ ವಿವರಗಳನ್ನು ತಿಳಿಯಲು CarWale, CarDekho ಅಥವಾ Justdial ನಂತಹ ವೆಬ್‌ಸೈಟ್‌ಗಳಿಗೆ ಭೇಟಿ ನೀಡಬಹುದು.

## ಪ್ರಜಾವಾಣಿ ಜತೆ ಅತ್ಯುತ್ತಮ ಒಡನಾಟ

ಕರ್ನಾಟಕದಲ್ಲಿ ಅತಿ ದೊಡ್ಡ ವಾಹನ ಮಾರಾಟ ಜಾಲ ಹೊಂದಿದ್ದೇವೆ. ನಾವು ರಾಜ್ಯದ ಐಷಾರಾಮಿ ಕಾರುಪ್ರಿಯರಿಗೆ ಕಳೆದ ಹದಿನೈದು ವರ್ಷಗಳಿಂದ ಮರ್ಸಿಡಿಸ್-ಬೆಂಜ್ ವಾಹನಗಳನ್ನು ಪೂರೈಸುತ್ತಿದ್ದೇವೆ. ಪ್ರಜಾವಾಣಿ ಪತ್ರಿಕೆ ಜತೆ ಒಡನಾಟವನ್ನು ಇಟ್ಟುಕೊಂಡಿದ್ದೇವೆ. ಅಲ್ಲದೆ, ಪ್ರಜಾವಾಣಿ ಪತ್ರಿಕಾ ಸಮೂಹದ ಜೊತೆಗಿನ ಸಂಬಂಧ ನಮಗೆ ಬಹಳ ಹೆಮ್ಮೆ ತಂದಿದೆ. ಅದರಲ್ಲೂ ಪ್ರಮುಖವಾಗಿ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕನ್ನಡ ಸಿನಿಮಾರಂಗದ ಅತ್ಯುತ್ತಮ ಪ್ರಶಸ್ತಿಗಳಲ್ಲಿ ಒಂದಾಗಿದೆ. ಇದಕ್ಕೆ ನಮ್ಮ ಸಂಪೂರ್ಣ ಸಹಕಾರ ಯಾವಾಗಲೂ ಇರುತ್ತದೆ. ಅದೇ ರೀತಿ ಪತ್ರಿಕೆಯ ಸಹಕಾರವೂ ನಮಗೆ ಬೇಕಾಗಿದೆ ಎಂದು ಅಕ್ಷಯ ಮೋಟರ್ಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಕಾಸ್ ಎಂ.ಜೆ. ಹೇಳಿದ್ದಾರೆ.

ಮರ್ಸಿಡಿಸ್–ಬೆಂಜ್ ಕಾರುಗಳ ಮಾರಾಟದಲ್ಲಿ ನಾವು ಅಗ್ರಗಣ್ಯ ಸ್ಥಾನ ಪಡೆದಿದ್ದೇವೆ ಎಂಬುದು ನಿಜ. ಇದಕ್ಕಾಗಿ ನಾವು 2023–24ನೇ ಸಾಲಿನಲ್ಲಿ ಅತ್ಯುತ್ತಮ ಮರ್ಸಿಡಿಸ್–ಬೆಂಜ್ ಕಾರುಗಳ ಮಾರಾಟಗಾರ ಪ್ರಶಸ್ತಿಗೂ ಪಾತ್ರರಾಗಿದ್ದೇವೆ. ಕರ್ನಾಟಕದಲ್ಲಿ ಈ ಕಾರುಗಳ ಮಾರಾಟ ಮತ್ತು ಸೇವೆಯನ್ನು ಮುಂದುವರಿಸುತ್ತೇವೆ. ಅದೇ ರೀತಿ ಪ್ರಜಾವಾಣಿ ಪತ್ರಿಕೆ ಜೊತೆ ಸಹಕಾರ, ಸಂಬಂಧ ಮುಂದುವರಿಯಲಿದೆ ಎಂದು ತಿಳಿಸಿದರು.

ನಮ್ಮ ನೂತನ ಮಾರಾಟ ಯೋಜನೆಗಳು ಎರಡು ಕಡೆಗಳಲ್ಲಿ ಬರುತ್ತಿವೆ. ಅದರ ಬಗ್ಗೆ ಹೆಚ್ಚಿನ ಗಮನ ಹರಿಸಿದ್ದೇವೆ. ಬೆಂಗಳೂರಿನ ಸದಾಶಿವನಗರ ಅಥವಾ ಸುತ್ತಮುತ್ತಲಿನಲ್ಲೊಂದು, ಇದರ ಜತೆ ಮತ್ತೊಂದು ಕಾರು ಸರ್ವಿಸ್ ನೆಟ್‌ವರ್ಕ್ ವಿಸ್ತರಿಸಲು ಇಚ್ಛಿಸಿದ್ದೇವೆ. ಈಗಾಗಲೇ ರಾಜ್ಯದಲ್ಲಿ ಐದು ಜಾಲಗಳಿವೆ. ಅವುಗಳಲ್ಲಿ ಬೆಂಗಳೂರಲ್ಲಿ ಮೈಸೂರು ರಸ್ತೆ, ಕೋರಮಂಗಲ ಹಾಗೂ ಹೊಸೂರು ರಸ್ತೆಯಲ್ಲಿ ಹಾಗೂ ಹುಬ್ಬಳ್ಳಿ ಮತ್ತು ಮೈಸೂರಲ್ಲಿವೆ. ಮಾರಾಟ ವ್ಯಾಪ್ತಿಯ ವಿಸ್ತರಣೆ ವಿಷಯಕ್ಕೆ ಬಂದಲ್ಲಿ, ಶೀಘ್ರದಲ್ಲಿ ಬೆಂಗಳೂರು ನಗರದಲ್ಲಿ ಎರಡು ಹಾಗೂ ಶಿವಮೊಗ್ಗದಲ್ಲಿ ಒಂದು ಶಾಖೆ ತೆರೆಯಲಿದ್ದೇವೆ ಎಂದರು.

# ಮೌಲ್ಯಾಧಾರಿತ ಶಿಕ್ಷಣಕ್ಕೆ ಗೀತಂ ವಿಶ್ವವಿದ್ಯಾಲಯ



ಕಿರಣ್ ಕೆರ್ಕೆಟ್ಟಾ

'ಪ್ರಜಾವಾಣಿ'ಯು ಗೀತಂ ವಿಶ್ವವಿದ್ಯಾಲಯ ಸಹಭಾಗಿತ್ವದ ಮೊದಲ ಆಯ್ಕೆಯಾಗಿದೆ. ಕರ್ನಾಟಕದ ಹೆಮ್ಮೆಯ ಈ ಪತ್ರಿಕೆಯೊಂದಿಗೆ ನಾವು ಸಹಭಾಗಿತ್ವ ಹೊಂದುವ ಅವಕಾಶ ದೊರೆತಿರುವುದು ಖುಷಿಯ ವಿಚಾರ ಎಂದು ಗೀತಂ ವಿಶ್ವವಿದ್ಯಾಲಯ ಬೆಂಗಳೂರಿನ ಅಡ್ಮಿಷನ್ ಆಫೀಸರ್ ಕಿರಣ್ ಕೆರ್ಕೆಟ್ಟಾ ಹೇಳಿದರು.

ಗೀತಂ ವಿಶ್ವವಿದ್ಯಾಲಯದ ಎಲ್ಲ ಅಭಿಯಾನಗಳಿಗೆ ಪತ್ರಿಕೆ ಪ್ರೋತ್ಸಾಹ ನೀಡುತ್ತಿದೆ. ನಮ್ಮ ಹಲವು ಕಾರ್ಯಕ್ರಮಗಳಿಗೆ ಪತ್ರಿಕೆಯ ಸಹಭಾಗಿತ್ವ ಹೊಂದಿರುವಂತೆಯೇ, ಪತ್ರಿಕೆಯ ಹಲವು ಕಾರ್ಯಕ್ರಮಗಳಿಗೆ ನಾವು ಸಹಭಾಗಿತ್ವ ಹೊಂದಿರುವುದು ಹೆಮ್ಮೆಯ ಸಂಗತಿ ಎಂದರು.

ಪರಸ್ಪರ ಒಡಂಬಡಿಕೆಯ ಮುಂದುವರಿದ ಭಾಗವಾಗಿ, ನಾವೀಗ ಈ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಮೂರನೇ ಆವೃತ್ತಿಯಲ್ಲಿ ಪತ್ರಿಕೆಯ ಬೆನ್ನಿಗೆ ನಿಂತಿದ್ದೇವೆ. ಕಾರ್ಯಕ್ರಮವು ತುಂಬಾ ಅದ್ಧೂರಿಯಾಗಿ ನಡೆದು, ಯಶಸ್ವಿಯೂ ಆಗಿದೆ. 'ಪ್ರಜಾವಾಣಿ' ಹಾಗೂ ಕನ್ನಡ ಸಿನಿಮಾ ರಂಗದ ನಂಟಿನ ಮತ್ತೊಂದು ಮಜಲೇ ಈ ಸಿನಿ ಸಮ್ಮಾನ. ಇಂತಹ ಕಾರ್ಯಕ್ರಮದ ಭಾಗಿಯಾಗಲು ಗೀತಂ ವಿಶ್ವವಿದ್ಯಾಲಯಕ್ಕೆ ಅವಕಾಶ ಸಿಕ್ಕಿದೆ ಎಂದು ಖುಷಿಪಟ್ಟರು.

ಕನ್ನಡ ನೆಲದ ಸಿನಿಮಾಗಳೆಲ್ಲವೂ ಇಲ್ಲಿನ ಸಂಸ್ಕೃತಿಯ ನೆಲೆಗಟ್ಟಿನಲ್ಲೇ ರೂಪುಗೊಳ್ಳುತ್ತವೆ. ಇದನ್ನು ಪರಿಗಣಿಸಿಯೇ ಸಮ್ಮಾನಕ್ಕೆ ಸಿನಿಮಾರಂಗದವರನ್ನು ಆಯ್ಕೆ ಮಾಡಿರುವುದು ಒಳ್ಳೆಯ ಬೆಳವಣಿಗೆ. ಸಿನಿಮಾ ರಂಗವನ್ನು ಗೌರವಿಸುತ್ತಿರುವ ಈ 'ಸಿನಿ ಸಮ್ಮಾನ'ದ ಭಾಗವಾಗಿರುವುದು ಅತ್ಯಂತ ಖುಷಿಯಾಗಿದೆ ಎನ್ನುವುದನ್ನು ಮರೆಯಲಿಲ್ಲ.

ಗೀತಂ ವಿಶ್ವವಿದ್ಯಾಲಯವು ದಕ್ಷಿಣ ಭಾರತದ ಮೂರು ರಾಜ್ಯಗಳಲ್ಲಿ ಹರಡಿಕೊಂಡಿದೆ. ವಿಶಾಖಪಟ್ಟಣಂ, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಗೀತಂ ವಿಶ್ವವಿದ್ಯಾಲಯದ ಕ್ಯಾಂಪಸ್‌ಗಳಿವೆ. ಗಾಂಧಿ ತತ್ವಗಳು ಮತ್ತು ಮೌಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುವುದರ ಜೊತೆಗೆ ಉದ್ಯಮಶೀಲತಾ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುತ್ತೇವೆ. ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಉತ್ತೇಜಿಸುತ್ತಿದೆ. ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಫಾರ್ಮಸಿ, ಆರ್ಕಿಟೆಕ್ಚರ್ ಸೇರಿದಂತೆ 12ಕ್ಕೂ ಹೆಚ್ಚು ವಿಭಾಗಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ.

# ಸದಾ ಟ್ರೆಂಡಿಂಗ್‌ನಲ್ಲಿರುವ ಟ್ರೆಂಡ್ಸ್

ಫ್ಯಾಷನ್ ಲೋಕ ಪ್ರತಿನಿತ್ಯವೂ ಬದಲಾವಣೆಗೆ ತೆರೆದುಕೊಳ್ಳುತ್ತದೆ. ಬದಲಾಗುತ್ತಿರುವ ಟ್ರೆಂಡ್‌ಗೆ ತಕ್ಕಂತೆ 'ಟ್ರೆಂಡ್ಸ್' ಸಹ ಅನಾವರಣಗೊಳ್ಳುತ್ತಿದೆ. ರಂಗುರಂಗಿನ ಫ್ಯಾಷನ್ ಪ್ರಪಂಚದಲ್ಲಿ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಸದಾ ಹೊಸತನ್ನು ಪರಿಚಯಿಸುತ್ತಿದೆ.

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿಯ ಕಾರ್ಯಕ್ರಮದ ಪ್ರಾಯೋಜಕತ್ವದಲ್ಲಿ ಒಂದಾದ 'ಟ್ರೆಂಡ್ಸ್' ಎಲ್ಲ ವರ್ಗದ ಜನತೆಯ ಭಾವನೆಗಳೊಂದಿಗೆ ಬೆಸೆದುಕೊಂಡಿದೆ. ದೇಶದ ಫ್ಯಾಷನ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಟ್ರೆಂಡ್ಸ್, ಉತ್ತಮ ಗುಣಮಟ್ಟಕ್ಕೆ ಹೆಸರುವಾಸಿ.

ಫ್ಯಾಷನ್ ಲೋಕದ ಅಸ್ಮಿತೆಯನ್ನು ಮರು ವ್ಯಾಖ್ಯಾನ ಮಾಡಿರುವ ಟ್ರೆಂಡ್ಸ್, ಮಹಿಳೆಯರು, ಪುರುಷರು, ಮಕ್ಕಳನ್ನು ಸೆಳೆಯುತ್ತಿದೆ. ಧರಿಸುವ ಉಡುಪುಗಳ ವಿನ್ಯಾಸಗಳಲ್ಲಿ ಬದಲಾವಣೆ ಸಾಮಾನ್ಯ. ಹಳೆಯ ಶೈಲಿಯ ಟ್ರೆಂಡ್‌ಗಳು ಇದೀಗ ಹೊಸರೂಪದಲ್ಲಿ ನಮ್ಮ ಮುಂದೆ ಕಾಣಿಸಿಕೊಳ್ಳಲಾರಂಭಿಸಿವೆ. ಇಂದಿನ ಫ್ಯಾಷನ್‌ಗೆ ಒಗ್ಗಿಕೊಂಡಿದ್ದೇವೆ ಎಂದು ಸಾಬೀತು ಪಡಿಸುವುದು ಎಲ್ಲರಿಗೂ ಖುಷಿ. ಗ್ರಾಹಕರ ಈ ಅಭಿಲಾಷೆಯನ್ನು ಈಡೇರಿಸುವ ನಿಟ್ಟಿನಲ್ಲಿ ಟ್ರೆಂಡ್ಸ್ ಸ್ಪಂದಿಸುತ್ತಿದೆ.

ಅತಿ ದೊಡ್ಡ ಮತ್ತು ವೇಗವಾಗಿ ಬೆಳೆಯುತ್ತಿರುವ ಉಡುಪು ಮತ್ತು ಪರಿಕರಗಳ ಟ್ರೆಂಡ್ಸ್ ದೇಶದಾದ್ಯಂತ ವಿಸ್ತರಿಸಿಕೊಂಡಿದೆ.

ಟ್ರೆಂಡ್‌ಸ್ ಮಳಿಗೆಗಳು ಆಧುನಿಕ ನೋಟ ಹಾಗೂ ವಾತಾವರಣ ಹೊಂದಿದ್ದು, ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ಉತ್ಪನ್ನಗಳು ಲಭ್ಯವಾಗಲಿವೆ. ಹಣಕ್ಕೆ ಹೆಚ್ಚಿನ ಮೌಲ್ಯವನ್ನು ಒದಗಿಸುವ ಆಕರ್ಷಕ ಶ್ರೇಣಿಯ ಉತ್ತಮ ಗುಣಮಟ್ಟದ ಮತ್ತು ಫ್ಯಾಷನ್ ಸರಕುಗಳನ್ನು ಒಳಗೊಂಡಿದೆ. ಅತ್ಯಾಕರ್ಷಕ ಶ್ರೇಣಿಯ ಉತ್ತಮ ಗುಣಮಟ್ಟದ ಮತ್ತು ಫ್ಯಾಷನ್ ದಿರಿಸುಗಳನ್ನು ಒಳಗೊಂಡಿದೆ. ಮಹಿಳೆಯರು, ಪುರುಷರು ಮತ್ತು ಮಕ್ಕಳಿಗೆ ವಿಶೇಷವಾದ ಉಡುಪುಗಳಿವೆ.

ಮೆಟ್ರೊ ನಗರಗಳು ಸೇರಿದಂತೆ ನಗರ, ಪಟ್ಟಣಗಳು ಮತ್ತು ಅವುಗಳಿಂದಾಚೆಗೆ ವ್ಯಾಪ್ತಿಯನ್ನು ಬಲಗೊಳಿಸುವ ಮೂಲಕ ಎಲ್ಲ ವರ್ಗದ ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಿ ಮುಂಚೂಣಿಯಲ್ಲಿದೆ.



ಟ್ರೆಂಡ್ಸ್ ಸ್ಟಾಲ್‌ನಲ್ಲಿ ನಟಿ ಪ್ರಿಯಾಂಕ ಉಪೇಂದ್ರ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿಯ ಕಾರ್ಯಕ್ರಮದ 'ಟ್ರೆಂಡ್ಸ್' ವೇದಿಕೆಯಲ್ಲಿ ಸಿನಿಮಾ ತಾರೆಯರು ತಮ್ಮ ಅನುಭವಗಳನ್ನು ಹಂಚಿಕೊಂಡು ಸಂತಸದ ಕ್ಷಣಗಳನ್ನು ಬಿಚ್ಚಿಟ್ಟರು.
ಟ್ರೆಂಡ್ಸ್‌ನಲ್ಲಿ ಬಟ್ಟೆ ಖರೀದಿಸಿದ್ದೇನೆ. ಉತ್ತಮ ಕಲೆಕ್ಷನ್‌ಗಳಿವೆ. ಅದರಲ್ಲೂ ಕಾಲೇಜು ಯುವಕರಿಗೆ ಮತ್ತು ಮಕ್ಕಳಿಗೆ ವಿಶೇಷ ವಿನ್ಯಾಸದ ಬಟ್ಟೆಗಳು ಚೆನ್ನಾಗಿವೆ. ಫ್ಯಾಷನ್ ತುಂಬಾ ಮುಖ್ಯವಾಗುತ್ತದೆ. ನಮ್ಮ ಸೃಜನಶೀಲತೆಯನ್ನು ಫ್ಯಾಷನ್ ಮೂಲಕವೂ ಅನಾವರಣಗೊಳಿಸಬಹುದು. ಜತೆಗೆ ಸಂತೋಷದಿಂದ ಇದ್ದರೆ ನಮ್ಮ ಸೌಂದರ್ಯವನ್ನು ಹೆಚ್ಚಿಸುತ್ತದೆ.

**ಪ್ರಿಯಾಂಕಾ ಉಪೇಂದ್ರ,** ನಟಿ



ಟ್ರೆಂಡ್ಸ್ ಸ್ಟಾಲ್‌ನಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್





ಟ್ರೆಂಡ್ಸ್ ಸ್ಟಾಲ್‌ನಲ್ಲಿ ನಟ ದುನಿಯಾ ವಿಜಯ್



ಪ್ರಶಸ್ತಿಗಳು ಪ್ರೇರಣೆ ನೀಡುತ್ತವೆ ಮತ್ತು ನಮ್ಮ ಜವಾಬ್ದಾರಿ ಹೆಚ್ಚಿಸುತ್ತವೆ. ಮೂರು ವರ್ಷಗಳಿಂದ ಪ್ರಜಾವಾಣಿ ಈ ಪ್ರಶಸ್ತಿ ನೀಡುತ್ತಿರುವುದು ಸಂತಸ ತಂದಿದೆ'

**ಯುವ ರಾಜ್‌ಕುಮಾರ್,** ನಟ



ಪ್ರಜಾವಾಣಿ ಸಿನಿ ಸಮ್ಮಾನ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಒಳಗಾಗಿದೆ. ಇಂತಹ ಕಾರ್ಯಕ್ರಮಗಳು ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ. ಮಾಲ್‌ನಲ್ಲಿ ಮೊದಲು ಬಟ್ಟೆ ಖರೀದಿಸಿದ್ದು ಟ್ರೆಂಡ್ಸ್‌ನಲ್ಲಿ.

**ಅಂಕಿತಾ ಅಮರ್ ಮತ್ತು ಅನನ್ಯ ಅಮರ್,** ನಟಿಯರು

ಟ್ರೆಂಡ್ಸ್ ಕೂಡ ಪ್ರಜಾವಾಣಿ ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ಭಾಗಿಯಾಗಿದೆ. ಸದ್ಯ ಬ್ಯಾಗಿ ಪ್ಯಾಂಟ್ ಶೈಲಿ ಟ್ರೆಂಡಿಂಗ್‌ನಲ್ಲಿದೆ. ಟ್ರೆಂಡ್ಸ್‌ನಲ್ಲಿ ಉತ್ತಮ ಕಲೆಕ್ಷನ್‌ಗಳಿವೆ. ಕಾಲೇಜು ದಿನಗಳಿಂದಲೇ ನಾನು ಇಲ್ಲಿ ಶಾಪಿಂಗ್ ಮಾಡಿದ್ದೇನೆ. ಕೈಗೆಟಕುವ ದರಗಳಲ್ಲಿ ಬಟ್ಟೆಗಳು ದೊರೆಯುತ್ತವೆ.

**ಖುಷಿ ರವಿ,** ನಟಿ

ಟ್ರೆಂಡ್ಸ್ ಟ್ರೆಂಡಿಂಗ್‌ನಲ್ಲಿರುತ್ತದೆ. ಟ್ರೆಂಡ್ಸ್‌ನಲ್ಲಿ ಟ್ರೆಂಡಿಂಗ್‌ನಲ್ಲಿರುವ ಉತ್ಪನ್ನಗಳೇ ದೊರೆಯುತ್ತವೆ. ಜನರಿಗೆ ಅಗತ್ಯವಿರುವುದು ಅಲ್ಲಿ ದೊರೆಯುತ್ತವೆ. ನಾವು ಧರಿಸುವ ಬಟ್ಟೆಗಳು ಆತ್ಮವಿಶ್ವಾಸಕ್ಕೆ ಪೂರಕವಾಗಿರಬೇಕು.

**ರಿಷಾ ಗೌಡ,** ನಟಿ



ಕಲಾವಿದರನ್ನು ಗುರುತಿಸಿ, ಗೌರವಿಸುವುದು ಖುಷಿಯ ಸಂಗತಿ. ಈ ನಿಟ್ಟಿನಲ್ಲಿ ಪ್ರಜಾವಾಣಿ ಕಾರ್ಯ ಶ್ಲಾಘನೀಯ. ಕನ್ನಡ ಭಾಷೆ ನಮ್ಮ ಉಸಿರು, ಜೀವ, ಪ್ರಾಣ, ತಾಯಿ. ಈ ಭಾಷೆಯನ್ನು ಬೆಳೆಸೋಣ. ಜತೆಗೆ, ಎಲ್ಲರೂ ಫಿಟ್ ಆಗಿರಬೇಕು. ಫಿಟ್ ಆಗಿದ್ದರೆ ಅದೇ ದೇಹದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಫಿಟ್‌ನೆಸ್‌ಗೂ ವಯಸ್ಸಿಗೂ ಸಂಬಂಧ ಇಲ್ಲ. ಒಂದು ಸಿನಿಮಾದಲ್ಲಿನ ಪಾತ್ರಧಾರಿ ಯಾವ ಬಟ್ಟೆಯನ್ನಾದರೂ ಹಾಕಿ ಪ್ರೇಕ್ಷಕರನ್ನು ಒಪ್ಪಿಸುತ್ತಾನೆಯೋ ಅದೇ ಟ್ರೆಂಡಿಗ್ ಶೈಲಿಯಾಗಬಹುದು.

**ದುನಿಯಾ ವಿಜಯ್,** ನಟ– ನಿರ್ದೇಶಕ

ಪ್ರಜಾವಾಣಿ ರಾಜ್ಯದ ಪ್ರಮುಖ ದಿನಪತ್ರಿಕೆ. ಇಂತಹ ಪತ್ರಿಕೆ ನಮ್ಮನ್ನು ಗುರುತಿಸಿರುವುದು ಹೆಮ್ಮೆಯ ಸಂಗತಿ ಎಂದರು.

**ಅರ್ಜುನ್ ಜನ್ಯ,** ಸಂಗೀತ ನಿರ್ದೇಶಕ

# ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಚಿತ್ರಗಳು

## ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ: ಹದಿನೇಳೆಂಟು

**ಜನರನ್ನು** ರಂಜಿಸುವುದು ಮಾತ್ರವಲ್ಲ, ಅರಿವು ಮೂಡಿಸುವಂಥ, ಸಮಾಜದ ಮೇಲೆ ಪರಿಣಾಮ ಬೀರುವಂಥ ಕಥೆಗಳನ್ನು ನೀಡುವುದು ಕೂಡ ಸಿನಿಮಾ ಮಾಧ್ಯಮದ ಜವಾಬ್ದಾರಿ ಎಂಬುದನ್ನು ಸಾರಿದ ಸಾಕಷ್ಟು ಸಿನಿಮಾಗಳು ಕನ್ನಡ ಸಿನಿಮಾ-ರಂಗದಲ್ಲಿ ಹೆಸರಾಗಿವೆ. ಹಾಗೆಯೇ 2024ರಲ್ಲಿ ತೆರೆಕಂಡಿರುವ ಸಿನಿಮಾಗಳಲ್ಲಿ ಪೃಥ್ವಿ ಕೊಣನೂರು ನಿರ್ದೇಶನದ 'ಹದಿನೇಳೆಂಟು' ಸಿನಿಮಾ, ಈ ಬಾರಿ 'ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಕಳೆದ ಬಾರಿಯೂ ಇದೇ ವಿಭಾಗದಲ್ಲಿ ಪೃಥ್ವಿ ಅವರ 'ಪಿಂಕಿ ಎಲ್ಲಿ' ಸಿನಿಮಾಗೆ ಪ್ರಶಸ್ತಿ ಲಭಿಸಿದ್ದು, ಈ ಬಾರಿಯೂ ಪ್ರಶಸ್ತಿ ಅವರ ಪಾಲಿಗೆ ಒಲಿದಿದೆ. ಹಿರಿಯ ನಿರ್ದೇಶಕ ಎಚ್.ಆರ್. ಭಾರ್ಗವ ಹಾಗೂ ನಟ, ನಿರ್ದೇಶಕ ಶಿವಧ್ವಜ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.


'ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ' ಪ್ರಶಸ್ತಿಯನ್ನು ನಿರ್ದೇಶಕ ಪೃಥ್ವಿ ಕೊಣನೂರು ಸ್ವೀಕರಿಸಿದರು.

'ಹಿಂದಿನ ಸಿನಿಮಾಗಳಲ್ಲಿ ಏನಾದರೂ ಸಂದೇಶ, ಉಪದೇಶ ಇರುತ್ತಿತ್ತು. 'ಬಂಗಾರದ ಮನುಷ್ಯ' ಸಿನಿಮಾ ನೋಡಿದ ಮೇಲೆ ಎಷ್ಟೋ ಜನ ನಗರ ಬಿಟ್ಟು ಹಳ್ಳಿಗಳಿಗೆ ಹೋಗಿ ಅಲ್ಲಿ ಕೃಷಿ ಮಾಡಿಕೊಂಡಿದ್ದರು. ಈಗಿನ ಚಿತ್ರಗಳ ವೈಖರಿ ಬೇರೆ. ಜನಕ್ಕೆ ಈಗ ಬೇಕಿರುವುದು ಮನರಂಜನೆ' ಎಂದು ನಿರ್ದೇಶಕ ಭಾರ್ಗವ ಹೇಳಿದರು.

ನಿರ್ದೇಶಕ ಶಿವಧ್ವಜ್ ಮಾತನಾಡಿ, 'ಸಿನಿಮಾಗಳಲ್ಲಿ ಕಂಟೆಂಟ್‌ಗೆ ಮಹತ್ವ. ಸಿನಿಮಾ ಗೆಲ್ಲಬೇಕೆಂದರೆ ಕಂಟೆಂಟ್ ಗೆಲ್ಲಬೇಕು. ಕಲಾತ್ಮಕ ಸಿನಿಮಾಗಳಲ್ಲಿ ಬಜೆಟ್, ಕಲಾವಿದರು ಎಲ್ಲದರ ಹೊರತಾಗಿ ಕಂಟೆಂಟ್ ಅದ್ಭುತವಾಗಿರುತ್ತದೆ. ಅದೇ ಗೆಲ್ಲುವುದು' ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪೃಥ್ವಿ ಕೊಣನೂರು, 'ನನಗೆ ವೈಯಕ್ತಿಕವಾಗಿ ಸಿನಿಮಾಗಳಲ್ಲಿ ಸಂದೇಶ ಕೊಡುವುದರಲ್ಲಿ ನಂಬಿಕೆ ಇಲ್ಲ. ನನ್ನ ಸಿನಿಮಾಗಳನ್ನು ಹಾಗೆ ರೂಪಿಸಿಯೂ ಇರುವುದಿಲ್ಲ. ಸಣ್ಣ ಕಥೆ ಹೇಳುವ ಪ್ರಯತ್ನ ನಡೆದಿರುತ್ತದೆ ಅಷ್ಟೆ. ನನ್ನ ಮೇಲೆ ಪ್ರೀತಿಯಿಟ್ಟು ಎರಡನೇ ವರ್ಷವೂ 'ಪ್ರಜಾವಾಣಿ' ಸಂಸ್ಥೆ ಈ ಪ್ರಶಸ್ತಿ ನೀಡಿದೆ' ಎಂದು ಸಂತಸ ವ್ಯಕ್ತಪಡಿಸಿದರು.

## ಅತ್ಯುತ್ತಮ ನಿರ್ಮಾಣ ವಿನ್ಯಾಸ: ಮ್ಯಾಕ್ಸ್

**ಯಾವುದೇ** ಸಿನಿಮಾದ ಯಶಸ್ಸಿನಲ್ಲಿ ಅದರ ನಿರ್ಮಾಣ ವಿನ್ಯಾಸದ ಪಾಲು ಹೆಚ್ಚೇ ಇರುತ್ತದೆ. 2024ರಲ್ಲಿ ಬಿಡುಗಡೆಯಾದ ಸಿನಿಮಾಗಳಲ್ಲಿ 'ಅತ್ಯುತ್ತಮ ನಿರ್ಮಾಣ ವಿನ್ಯಾಸ' ಪ್ರಶಸ್ತಿಯನ್ನು ಸುದೀಪ್ ಅಭಿನಯದ 'ಮ್ಯಾಕ್ಸ್' ಸಿನಿಮಾ ಪಡೆದುಕೊಂಡಿತು.

ನಿರ್ದೇಶಕ ಪಿ. ಶೇಷಾದ್ರಿ ಹಾಗೂ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಅವರು ಈ ಪ್ರಶಸ್ತಿ ಪ್ರದಾನ ಮಾಡಿದರು. 'ಕೆ.ಜಿ.ಎಫ್' ಖ್ಯಾತಿಯ ಕಲಾ ನಿರ್ದೇಶಕ ಶಿವಕುಮಾರ್ ಪ್ರಶಸ್ತಿ ಸ್ವೀಕರಿಸಿದರು.


ಬಳಿಕ ಮಾತನಾಡಿದ ಶಿವಕುಮಾರ್, 'ಸಿನಿಮಾದಲ್ಲಿ ಕೆಲವು ಕೆಲಸಗಳು ಕಾಣುವುದಿಲ್ಲ. ಆದರೆ ಅವು ಬಹಳ ಮುಖ್ಯವಾಗಿರು-ತ್ತವೆ. ಎಲ್ಲ ಸಿನಿಮಾದಲ್ಲಿಯೂ ಶ್ರಮ ಇರುತ್ತದೆ. 'ಮ್ಯಾಕ್ಸ್'ನಲ್ಲಿ-ಯೂ ಶ್ರಮ ಇತ್ತು. ಅದನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಾರೆ' ಎಂದು ಸಂತಸ ವ್ಯಕ್ತಪಡಿಸಿದರು.


ಅತ್ಯುತ್ತಮ ನಿರ್ಮಾಣ ವಿನ್ಯಾಸ ಪ್ರಶಸ್ತಿ ಪಡೆದ ಮ್ಯಾಕ್ಸ್ ಚಿತ್ರ. ಚಿತ್ರದ ಕಲಾನಿರ್ದೇಶಕ ಶಿವಕುಮಾರ್ ಪ್ರಶಸ್ತಿ ಸ್ವೀಕರಿಸಿದರು.

ಪ್ರಶಸ್ತಿ ನೀಡಿ ಮಾತನಾಡಿದ ಪಿ. ಶೇಷಾದ್ರಿ, 'ಕಮರ್ಷಿಯಲ್, ಕಲಾ ಸಿನಿಮಾ ಎಂದು ವಿಭಜಿಸುತ್ತಾರೆ. ನನ್ನ ಪ್ರಕಾರ ಇರುವುದು ಎರಡೇ ಸಿನಿಮಾ. ಒಳ್ಳೆಯ ಸಿನಿಮಾ ಹಾಗೂ ಕೆಟ್ಟ ಸಿನಿಮಾ. ಒಂದು ಕಮರ್ಷಿಯಲ್ ಸಿನಿಮಾದಲ್ಲಿ ಒಳ್ಳೆಯ ಸಿನಿಮಾ ಇರಲು ಸಾಧ್ಯ. ಹಾಗೇ ಕಲಾ ಸಿನಿಮಾದಲ್ಲಿ ಕೆಟ್ಟ ಸಿನಿಮಾ ಇರಲು ಸಾಧ್ಯ. ಮುಖ್ಯವಾಹಿನಿಗೆ ಬೇಕಾದಂಥ ಒಳ್ಳೆಯ ತಂತ್ರಜ್ಞಾನ, ಸೌಲಭ್ಯ, ಕಥೆ, ತಂತ್ರಜ್ಞರು ಸಿಕ್ಕರೆ ನಾನು ಕಮರ್ಷಿಯಲ್ ಸಿನಿಮಾ ಮಾಡಲು ಸಿದ್ಧ' ಎಂದರು.

'ಮಲಯಾಳಂನಲ್ಲಿ ಮಮ್ಮುಟಿ, ಮೋಹನ್‌ಲಾಲ್‌ನಂಥ ಸ್ಟಾರ್ ನಟರೂ ಎಲ್ಲ ಥರದ ಸಿನಿಮಾಗಳಲ್ಲಿ ನಟಿಸುತ್ತಾರೆ. ದುರದೃಷ್ಟವಶಾತ್ ಕನ್ನಡದ ಮಟ್ಟಿಗೆ ಆ ಪ್ರಯೋಗ ಯಶಸ್ವಿಯಾಗಿಲ್ಲ' ಎಂದರು. 'ಪುಟ್ಟಣ್ಣ ಕಣಗಾಲ್ ಒಂದು ಕಾಲಘಟ್ಟದಲ್ಲಿ ಒಳ್ಳೆಯ ಪ್ರೇಕ್ಷಕರನ್ನು ಬೆಳೆಸುವುದರ ಜೊತೆಗೆ ಸಿನಿಮಾರಂಗಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಈಗ ಸಿನಿಮಾಗಳ ಸಂಖ್ಯೆ ಜಾಸ್ತಿಯಾಗುತ್ತಿದೆ, ಪ್ರೇಕ್ಷಕರ ಸಂಖ್ಯೆ ಕಡಿಮೆಯಾ-ಗುತ್ತಿದೆ. ನಾವು ರಿವರ್ಸ್ ಕೆಲಸ ಮಾಡಬೇಕಿದೆ' ಎಂದರು.

## ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್: ಯುಐ


ಅತ್ಯುತ್ತಮ ವಿಎಫ್‌ಎಕ್ಸ್ ಪ್ರಶಸ್ತಿ ಪಡೆದ ಯುಐ ಚಿತ್ರ. ಚಿತ್ರದ ನಿರ್ಮಾಪಕ ನವೀನ್ ಮನೋಹರ್ ಪ್ರಶಸ್ತಿ ಸ್ವೀಕರಿಸಿದರು.

**ಸಿನಿಮಾ** ಕಥೆಯ ಜೊತೆಗೆ ಆ ಕಥೆಯನ್ನು ಪ್ರಸ್ತುತಪಡಿಸು-ವಲ್ಲಿ ತಂತ್ರಜ್ಞಾನವೂ ಅಷ್ಟೇ ಮುಖ್ಯ. ಈ ತಂತ್ರಜ್ಞಾನದ ಬಳಕೆ ಮಾಡಿಕೊಂಡು 2024ರಲ್ಲಿ ತೆರೆಕಂಡ ಸಿನಿಮಾಗಳಲ್ಲಿ, 'ಯುಐ' ಸಿನಿಮಾ 'ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್' ಪ್ರಶಸ್ತಿಗೆ ಭಾಜನವಾಯಿತು.

'ಯುಐ' ಸಿನಿಮಾ ನಿರ್ಮಾಪಕ ನವೀನ್ ಮನೋಹರ್ ಅವರು ಈ ಪ್ರಶಸ್ತಿ ಸ್ವೀಕರಿಸಿದರು. ಕನ್ನಡದ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಹಾಗೂ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು ಅವರು ಪ್ರಶಸ್ತಿ ಪ್ರದಾನ ಮಾಡಿದರು.

ನಿರ್ಮಾಪಕ ನವೀನ್ ಮಾತನಾಡಿ, 'ನನಗೂ ಪ್ರಜಾವಾಣಿಗೂ ಸುಮಾರು 40 ವರ್ಷಗಳ ನಂಟು. ಇದೇ ಪತ್ರಿಕೆಯಿಂದ ಪ್ರಶಸ್ತಿ ಪಡೆದುಕೊಳ್ಳುತ್ತಿರುವುದು ತುಂಬಾ ವಿಶೇಷ. ಸಿನಿಮಾಗಳಿಗೆ ಹಲವು ಪ್ರಶಸ್ತಿಗಳು ಬರುತ್ತವೆ. ಆದರೆ 'ವಿಎಫ್‌ಎಕ್ಸ್' ಎಂಬ ಪ್ರತ್ಯೇಕ ವಿಭಾಗದಲ್ಲಿ ಪ್ರಶಸ್ತಿ ನೀಡುವುದು ವಿರಳ. ಇದನ್ನು ಗುರುತಿಸಿ ಪ್ರಶಸ್ತಿ ಕೊಟ್ಟಿರುವುದು ಸಂತಸ ತಂದಿದೆ' ಎಂದು ಖುಷಿ ಹಂಚಿಕೊಂಡರು.

'ಆವತ್ತಿನ ಕಾಲಘಟ್ಟದಲ್ಲಿ ಸಿನಿಮಾ ತಂತ್ರಜ್ಞಾನ ಇಷ್ಟು ಮುಂದುವರೆದಿರಲಿಲ್ಲ. ಇವತ್ತಿನದು ವೇಗದ ತಂತ್ರಜ್ಞಾನ. ಈಗ ಮ್ಯಾಜಿಕ್ ಸೃಷ್ಟಿಸಬಹುದು' ಎಂದು ಅಚ್ಚರಿ ವ್ಯಕ್ತಪಡಿಸಿದರು ನಟ ಮುಖ್ಯಮಂತ್ರಿ ಚಂದ್ರು. ಇದೇ ಸಂದರ್ಭದಲ್ಲಿ 'ಪ್ರಜಾವಾಣಿ' ಪತ್ರಿಕೆ ಕುರಿತು ತಮ್ಮ ಮಾತು ಹಂಚಿಕೊಂಡ ಅವರು, 'ಸುದ್ದಿ ಮಾಧ್ಯಮಗಳು ಸುದ್ದಿಯನ್ನು ವೈಭವೀಕರಿಸುತ್ತಿವೆ. ವೈಯಕ್ತಿಕ ಅಭಿಪ್ರಾಯಗಳಾಗುತ್ತಿವೆ. ಆದರೆ ಇಂದಿಗೂ ತನ್ನ ವಿಶ್ವಾಸಾರ್ಹತೆಯನ್ನು 'ಪ್ರಜಾವಾಣಿ' ಉಳಿಸಿಕೊಂಡಿದೆ. ಪ್ರಶಸ್ತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ 'ಪ್ರಜಾವಾಣಿ' ನೀಡುವ ಪ್ರಶಸ್ತಿ ಅರ್ಹವಾಗಿಯೇ ಇರುತ್ತದೆಂಬುದು ನನ್ನ ನಂಬಿಕೆ' ಎಂದರು.

## ಅತ್ಯುತ್ತಮ ಧ್ವನಿಗ್ರಹಣ, ಶಬ್ದವಿನ್ಯಾಸ: ಕೆರೆಬೇಟೆ


ಅತ್ಯುತ್ತಮ ಧ್ವನಿಗ್ರಹಣ ಮತ್ತು ಶಬ್ದ ವಿನ್ಯಾಸ ಪ್ರಶಸ್ತಿ ಪಡೆದ ಕೆರೆಬೇಟೆ ಚಿತ್ರ. ಚಿತ್ರದ ನಿರ್ಮಾಪಕ, ನಟ ಗೌರಿಶಂಕರ್ ಪ್ರಶಸ್ತಿ ಸ್ವೀಕರಿಸಿದರು.

**ವಿಶಿಷ್ಟ** ಕಥೆಯೊಂದಿಗೆ ಮಲೆನಾಡಿನ ಆಚರಣೆ, ಸಂಗೀತ, ಶಬ್ದವಿನ್ಯಾಸ, ಕಥೆಯ ನಿರೂಪಣಾ ಶೈಲಿಯಿಂದಾಗಿ ಗಮನಸೆಳೆದಿದ್ದ 'ಕೆರೆಬೇಟೆ' ಸಿನಿಮಾ, 2024ರಲ್ಲಿ ಬಿಡುಗಡೆಗೊಂಡ ಸಿನಿಮಾಗಳ ಪೈಕಿ 'ಅತ್ಯುತ್ತಮ ಧ್ವನಿಗ್ರಹಣ, ಶಬ್ದವಿನ್ಯಾಸ' ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ರಾಜ್‌ಗುರು ನಿರ್ದೇಶನದಲ್ಲಿ ಮೂಡಿಬಂದಿರುವ ಈ ಸಿನಿಮಾಗೆ ಸಂಗೀತ ನಿರ್ದೇಶಕ ವಿ. ಮನೋಹರ್ ಹಾಗೂ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ ಕೆ. ವಿಶ್ವನಾಥ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭ, ತಂತ್ರಜ್ಞಾನ, ಶಬ್ದವಿನ್ಯಾಸದ ಕುರಿತು ಮಾತನಾಡಿದ ವಿ. ಮನೋಹರ್, 'ಸುಸಜ್ಜಿತ ಶಬ್ದ ವಿನ್ಯಾಸ ಸಿನಿಮಾದ ಬಹುಮುಖ್ಯ ಭಾಗ. ಸಿನಿಮಾದಲ್ಲಿ ಯಾವುದೇ ಶಬ್ದವಿರಲಿ, ಸಂಗೀತವಿರಲಿ ಒಂದಕ್ಕೊಂದು ಸಿಂಕ್ ಆದರೆ ಸಿನಿಮಾ ಚೆನ್ನಾಗಿ ಮೂಡಲು ಸಾಧ್ಯ' ಎಂದರು.

'ಕೆರೆಬೇಟೆ' ಸಿನಿಮಾದ ಗೌರಿಶಂಕರ್ ಅವರು ಈ ಪ್ರಶಸ್ತಿ ಸ್ವೀಕರಿಸಿದರು. 'ಕೆರೆಬೇಟೆ ಸಿನಿಮಾ ಹಲವು ವಿಭಾಗಗಳಲ್ಲಿ ಆಯ್ಕೆಯಾಗಿದ್ದು ತುಂಬಾ ಖುಷಿಯಾದ ಸಂಗತಿ. ನಿರ್ಮಾಪಕನಾಗಿ, ನಾಯಕನಾಗಿ, ಬರಹಗಾರನಾಗಿ ಕೆಲಸ ಮಾಡಿದ್ದೇನೆ. ಕನ್ನಡ ಸಿನಿಮಾರಂಗದಲ್ಲಿ ಸಹಾಯಕ ನಿರ್ದೇಶಕನಾಗಿ, ಹೀರೊ ಆಗಿ 'ಜೋಕಾಲಿ' ಮಾಡಿದ ನಂತರ ಕೆರೆಬೇಟೆ ಸಿನಿಮಾ ಒಂದು ಗುರುತು ನೀಡಿದೆ. ಸಿನಿಮೋತ್ಸವಗಳಲ್ಲಿ ಸಿನಿಮಾ ತೆರೆಕಂಡಿದೆ. ಬಿಸಿನೆಸ್‌ನಲ್ಲಿಯೂ ರೀಚ್ ಆಗುತ್ತಿದೆ' ಎಂದು ಸಂತಸ ವ್ಯಕ್ತಪಡಿಸಿದರು.

---

# ನ್ಯೂಮೆನ್ ಅಂದ್ರೆ ಎಲ್ಲರಿಗೂ ಒಪ್ಪುವ ಬ್ರ್ಯಾಂಡ್


ನವೀನ್ ಪೀಶೆ ಮತ್ತು ಕೇತನ್ ಪೀಶೆ, ವ್ಯವಸ್ಥಾಪಕ ಪಾಲುದಾರರು, ನ್ಯೂಮೆನ್ (ಫ್ರಂ ದಿ ಹೌಸ್ ಆಫ್ ಪಿ ಎನ್ ರಾವ್)

**ಪುರುಷರ** ಬಟ್ಟೆಗಳಿಗೆ ಪ್ರಸಿದ್ಧವಾದ, 102 ವರ್ಷ ಹಳೆಯ ಸಂಸ್ಥೆಯಾದ ಪಿ ಎನ್ ರಾವ್‌ನ ನ್ಯೂಮೆನ್ ಬ್ರ್ಯಾಂಡ್ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭಕ್ಕೆ ಸಹಭಾಗಿಯಾಗಿದೆ. ಸಂಸ್ಥೆಯ ಪಾಲು-ದಾರರಾಗಿರುವ ನವೀನ್ ಪೀಶೆ ಮತ್ತು ಕೇತನ್ ಪೀಶೆ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಪಿ ಎನ್ ರಾವ್ ಸಂಸ್ಥೆಗೆ 102 ವರ್ಷಗಳ ಇತಿಹಾಸವಿದೆ. 1923 ರಲ್ಲಿ ನಮ್ಮದೇ ಬೆಂಗಳೂರಿನಲ್ಲಿ ಹುಟ್ಟಿದ ಸಂಸ್ಥೆ, 2008ರ ಬಳಿಕ ನ್ಯೂಮೆನ್ ಎಂಬ ಹೊಸ ಬ್ರ್ಯಾಂಡ್‌ನೊಂದಿಗೆ ಜನರನ್ನು ಸೆಳೆಯುತ್ತಿದೆ. ಎಲ್ಲ ಸಮಾರಂಭಗಳಿಗೆ ಒಪ್ಪುವಂತಹ ಉಡುಗೆ ತೊಡುಗೆ, ನೂತನ ವಿನ್ಯಾಸಗಳು ನಮ್ಮಲ್ಲಿ ಲಭ್ಯವಿದೆ. ಪುರುಷರಿಗೆ ಎಲ್ಲ ರೀತಿಯ ಬಟ್ಟೆಗಳು ಒಂದೇ ಕಡೆ ಸಿಗುವ ಮಳಿಗೆ ನಮ್ಮದು. ಸೂಟ್ಸ್, ಕುರ್ತಾ, ಪೈಜಾಮ ಸೇರಿದಂತೆ ಎಲ್ಲಾ ವಿಧದ ಬಟ್ಟೆಗಳು ನಮ್ಮಲ್ಲಿ ಸಿಗುತ್ತದೆ ಎಂದರು ನವೀನ್ ಪೀಶೆ.

'ಪ್ರಜಾವಾಣಿ' ತುಂಬಾ ಹಳೆಯ ಪತ್ರಿಕೆ. ಅದೇ ರೀತಿ ಪಿ ಎನ್ ರಾವ್ ಕೂಡಾ ಹಳೆಯ ಬ್ರ್ಯಾಂಡ್. ಬೆಂಗಳೂರಿನ ಎರಡು ಹಳೆಯ ಸಂಸ್ಥೆಗಳು ಒಟ್ಟಾದರೆ ತುಂಬಾ ಶಕ್ತಿಯು-ತವಾಗಿರುತ್ತದೆ. ನಮಗೆ ಪ್ರಜಾವಾಣಿ ಜೊತೆಗಿನ ಸಹಭಾಗಿತ್ವ ತುಂಬಾ ಖುಷಿ ನೀಡಿದೆ.

ನಮ್ಮ ಉದ್ಯಮವನ್ನು ಮತ್ತಷ್ಟು ವಿಸ್ತರಿಸುವ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದೇವೆ. ಬೆಂಗಳೂರಿನಲ್ಲಿ ಈಗಾಗಲೇ ಐದು ಮಳಿಗೆಗಳಿವೆ. ಮೊದಲ ಬಾರಿಗೆ ಬೆಂಗಳೂರಿನಿಂದ ಹೊರಗೆ ಹುಬ್ಬಳ್ಳಿಯಲ್ಲಿ ಬೃಹತ್ ಮಳಿಗೆಯನ್ನು ತೆರೆಯುತ್ತಿದ್ದೇವೆ. ಹೈದರಾಬಾದ್ ಸೇರಿದಂತೆ 3 ರಿಂದ 4 ಕಡೆಗಳಲ್ಲಿ ಹೊಸ ಮಳಿಗೆಗಳು ಆರಂಭಗೊಳ್ಳಲಿವೆ.


ನ್ಯೂಮೆನ್ (ಫ್ರಂ ದಿ ಹೌಸ್ ಆಫ್ ಪಿ ಎನ್ ರಾವ್) ದಿರಿಸಿನಲ್ಲಿ ಮಿಂಚಿದ ನಿರೂಪಕ ಅಕುಲ್ ಬಾಲಾಜಿ

ಗ್ರಾಹಕರನ್ನು ಸಂತೃಪ್ತಿಗೊಳಿಸುವುದೇ ನಮ್ಮ ಗುರಿ. ನಮ್ಮ ಮೊದಲ ಆದ್ಯತೆ ಗುಣಮಟ್ಟ. ಹಲವಾರು ಸವಾಲುಗಳು ಎದುರಾದರೂ ನಮ್ಮ ತಂಡ, ಜನರು ನಮ್ಮ ಕೈಬಿಟ್ಟಿಲ್ಲ. ಅವರ ಸಹಕಾರದಿಂದ ಮತ್ತಷ್ಟು ಬೆಳೆಯುತ್ತಿದ್ದೇವೆ.

ಯುವಕರಿಗೆ ಸಾಕಷ್ಟು ಅವಕಾಶಗಳಿವೆ. ಆದರೆ ಅದನ್ನು ಬಳಸಿಕೊಳ್ಳುವುದು ಗೊತ್ತಿರಬೇಕು. ನಾವು ನಮ್ಮನ್ನು ಹೇಗೆ ಪ್ರಸ್ತುತಪಡಿಸಿಕೊಳ್ಳುತ್ತೇವೆ ಎಂಬವುದು ಮುಖ್ಯ. ಸುಮ್ಮನೆ ಹೂಡಿಕೆ ಮಾಡಿದರೆ ಉಪಯೋಗವಿಲ್ಲ. ಮೊದಲು ಅಧ್ಯಯನ ನಡೆಸಬೇಕು. ನಾವು ಯಾವ ವಲಯವನ್ನು ಗಮನದಲ್ಲಿಟ್ಟುಕೊಂಡು ಉದ್ಯಮ ಆರಂಭಿಸಬೇಕು. ಆಗ ಯಶಸ್ಸು ಲಭಿಸುತ್ತದೆ.

''ಪ್ರಜಾವಾಣಿ ಸಿನಿ ಸಮ್ಮಾನ' ಬರಿಯ ಪ್ರಶಸ್ತಿ ಪ್ರದಾನ ಸಮಾರಂಭವಲ್ಲ, ಇದು ಸಾಂಸ್ಕೃತಿಕ ಸಮ್ಮೇಳನ. ಕಲಾವಿದರು, ಸಂಗೀತಗಾರರು, ಬರಹಗಾರರು ಎಲ್ಲರನ್ನು ಒಂದೆಡೆ ಸೇರಿಸಿರುವುದು ಒಳ್ಳೆಯ ಕೆಲಸ. ಕನ್ನಡದಲ್ಲಿ ಇಂತಹ ಕಾರ್ಯಕ್ರಮ ನಡೆಯುತ್ತಿರುವುದು ತುಂಬಾ ಹೆಮ್ಮೆ ಎನಿಸುತ್ತಿದೆ. ಅದಕ್ಕಾಗಿಯೇ ನಾವು ಭಾಗಿಯಾಗಿದ್ದೇವೆ' ಎಂದು ಸಂತಸ ವ್ಯಕ್ತಪಡಿಸಿದರು.

# ಕಾಸಾಗ್ರಾಂಡ್ 22 ವರ್ಷಗಳ ಅನುಭವ, 160ಕ್ಕೂ ಅಧಿಕ ಪ್ರಾಜೆಕ್ಟ್ಸ್

**ಭಾರತದ** ಪ್ರಮುಖ ರಿಯಲ್ ಎಸ್ಟೇಟ್ ಕಂಪನಿ 'ಕಾಸಾಗ್ರಾಂಡ್' ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದ ಮೂರನೇ ಆವೃತ್ತಿಯನ್ನು ಪ್ರಸ್ತುತಪಡಿಸಿತ್ತು. ಕಾರ್ಯಕ್ರ-ಮದಲ್ಲಿ 'ಕಾಸಾಗ್ರಾಂಡ್'ನ ಎಕ್ಸ್‌ಪೀರಿಯನ್ಸ್ ಝೋನ್ ಸೆಲೆಬ್ರಿಟಿಗಳನ್ನು ಸೆಳೆಯಿತು.

ಇದೇ ಕಾರ್ಯಕ್ರಮದಲ್ಲಿ ತಮ್ಮ ಯೋಜನೆಗಳ ಮಾಹಿತಿ ನೀಡಿದ 'ಕಾಸಾಗ್ರಾಂಡ್'ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥರಾದ ಲಿಪಿ ಜಾಬ್ಸನ್ 'ಐಟಿ ಬಿಟಿ ಸಿಟಿ ಎಂದೇ ಹೆಸರಾಗಿರುವ ಬೆಂಗಳೂರಿನ ಹಲವು ಭಾಗಗಳಲ್ಲಿ 'ಕಾಸಾಗ್ರಾಂಡ್' ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ನಗರದಲ್ಲಿ ವೈವಿಧ್ಯಮ-ಯವಾದ ಉದ್ಯೋಗ ಜನ, ಸಂಸ್ಕೃತಿ, ಬದುಕಿನ ಶೈಲಿಗಳನ್ನು ಒಳಗೊಂಡ ಜನರು ಇದ್ದು, ಅವರ ಅಭಿರುಚಿಗೆ ತಕ್ಕಂತೆ ವಸತಿ ಯೋಜನೆಗಳನ್ನು ರೂಪಿ-ಸಲಾಗುತ್ತಿದೆ. ಕನಕಪುರ ರಸ್ತೆಯಲ್ಲಿ 'ಕಾಸಾಬ್ಲಾಂಕಾ', ಎಲೆಕ್ಟ್ರಾನಿಕ್ ಸಿಟಿಯಲ್ಲಿ 'ಕಾಸಾಗ್ರಾಂಡ್ ವಿವಾಸಿಟಿ', ಯಲಹಂಕದಲ್ಲಿ 'ಕಾಸಾಗ್ರಾಂಡ್ ಪ್ರೊಮನೇಡ್' ವಸತಿ ಸಮುಚ್ಚಯಗಳ ನಿರ್ಮಾಣ ನಡೆಯುತ್ತಿದೆ. ಇವುಗಳ ಜತೆಗೆ ಶ್ರೀನಿವಾಸಪುರ, ದೊಡ್ಡಗುಬ್ಬಿ ಸೇರಿದಂತೆ ನಗರದ ದಕ್ಷಿಣ, ಉತ್ತರ ಭಾಗಗಳಲ್ಲಿ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದೇವೆ' ಎಂದು ವಿವರಿಸಿದರು.

ಗ್ರಾಹಕರ ನಂಬಿಕೆ ಉಳಿಸಿಕೊಳ್ಳುವುದು ಮತ್ತು ಅವರಲ್ಲಿ ಸಕಾರಾತ್ಮಕ ಭಾವನೆ ಮೂಡಿಸುವುದು ನಮ್ಮ ಮುಖ್ಯ ಧ್ಯೇಯ ಎನ್ನುವುದು ಲಿಪಿ ಜಾಬ್ಸನ್ ಅವರ ಹೇಳಿಕೆ. ತನ್ನ ವಸತಿ ಯೋಜನೆಗಳಲ್ಲಿ ಪರಿಸರಸ್ನೇಹಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಕಾಸಾಗ್ರಾಂಡ್‌ನ ಹೆಚ್ಚುಗಾರಿಕೆ. ಮಳೆನೀರು ಸಂಗ್ರಹ, ಸೋಲಾರ್ ಪವರ್ ವ್ಯವಸ್ಥೆಯನ್ನೂ ಅಳವಡಿಸಲಾಗುತ್ತಿದೆ.

'ಕಾಸಾಗ್ರಾಂಡ್', ಜಾಗತಿಕ ಮಟ್ಟದ ಸೌಲಭ್ಯಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುತ್ತಿದ್ದು, ತನ್ನ ಯೋಜನೆಗಳಲ್ಲಿ ಸುಸ್ಥಿರ ಪದ್ಧತಿಗಳನ್ನು ಅಳವಡಿಸಿಕೊಂಡಿದೆ. ಆಧುನಿಕ ಜೀವನ ಶೈಲಿಗೆ ಹೊಂದಿಕೆ ಆಗುವಂತಹ, ಜನರ ಅಗತ್ಯಗಳಿಗೆ ಸರಿಹೊಂದುವಂತಹ ಮನೆ, ವಿಲ್ಲಾಗಳನ್ನು ನಿರ್ಮಿಸುತ್ತಿದೆ. ಪ್ರಸ್ತುತ ದಕ್ಷಿಣ ಭಾರತದ ಅಗ್ರ ಮೂರು ಬಿಲ್ಡರ್‌ಗಳಲ್ಲಿ ಇದು ಒಂದಾಗಿದೆ. ಸರ್ವಸಜ್ಜಿತವಾದ ಮನೆಗಳನ್ನು ಕೈಗೆಟುಕುವ ಬೆಲೆಗೆ ನೀಡುವುದು ನಮ್ಮ ವಿಶೇಷತೆ ಎನ್ನುತ್ತಾರೆ ಅವರು.

'ಇತರೆ ಬಿಲ್ಡರ್‌ಗಳಿಗೆ ಹೋಲಿಸಿದರೆ, ನಮ್ಮ ನಿರ್ಮಾಣದ ಮನೆಗಳ ಬೆಲೆ ಕಡಿಮೆ. ಹಾಗೆಂದು, ಯಾವುದೇ ಕಾರಣಕ್ಕೂ ನಾವು ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಅವುಗಳಲ್ಲಿ ಪಾಸಾದರೆ ಮಾತ್ರ ಅದನ್ನು ಗ್ರಾಹಕರಿಗೆ ಹಸ್ತಾಂತರಿಸುತ್ತೇವೆ. ಅತ್ಯಂತ ಕೌಶಲಯುಕ್ತ ವೃತ್ತಿಪರರು, ಕಟ್ಟಡ ನಿರ್ಮಾಣ ಕ್ಷೇತ್ರದ ನಿಪುಣರು ನಮ್ಮಲ್ಲಿದ್ದಾರೆ' ಎಂದರು.



ಕಾಸಾಗ್ರಾಂಡ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ನಟ ಸಾಯಿಕುಮಾರ್



ಕಾಸಾಗ್ರಾಂಡ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ



ಕಾಸಾಗ್ರಾಂಡ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ನಿರ್ದೇಶಕ ಟಿ.ಎಸ್. ನಾಗಾಭರಣ ಹಾಗೂ ಪನ್ನಗ ಭರಣ

'ಕಾಸಾಗ್ರಾಂಡ್' ಇಲ್ಲಿಯವರೆಗೆ 160ಕ್ಕೂ ಅಧಿಕ ರೆಸಿಡೆನ್ಶಿಯಲ್ ಪ್ರಾಜೆಕ್ಟ್‌ಗಳನ್ನು ಹಸ್ತಾಂತರಿಸಿದ್ದು, 5.3 ಕೋಟಿ ಚದರಡಿ ಜಾಗವನ್ನು ಅಭಿವೃದ್ಧಿಪ-ಡಿಸಿದೆ. ನಾವು 55 ಸಾವಿರಕ್ಕೂ ಅಧಿಕ ಸಂತೃಪ್ತ ಗ್ರಾಹಕರನ್ನು ಹೊಂದಿದ್ದೇವೆ. ನಿಗದಿತ ಸಮಯಕ್ಕೆ ವಸತಿ ಯೋಜನೆಗಳನ್ನು ಪೂರ್ಣಗೊಳಿಸುವುದು ನಮ್ಮ ಹೆಗ್ಗಳಿಕೆ. 22 ವರ್ಷಗಳಿಂದಲೂ ಇದನ್ನು ಕಾಪಾಡಿಕೊಂಡು ಬಂದಿದ್ದೇವೆ. ನಮ್ಮ ಫ್ಲ್ಯಾಟ್, ವಿಲ್ಲಾಗಳು ಜನರಿಗೆ ಬದುಕಿನ ಅತ್ಯುನ್ನತ ಅನುಭವ ನೀಡುತ್ತಿವೆ' ಎನ್ನುವುದು ಅವರ ನುಡಿ.

# ತಾಳ್ಮೆಯಿಂದ ಉದ್ಯಮದಲ್ಲಿ ಯಶಸ್ಸು ಕಾಣಿರಿ


ಕೆ. ಮೋಹನ್ ಸುಂದರ್, ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿದೇಶಕರು, ಟ್ರಾವೆಲ್‌ಮಾರ್ಟ್

**ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ** ಕಾರ್ಯಕ್ರಮದ ಸಹಭಾಗಿತ್ವ ವಹಿಸಿರುವುದು ಖುಷಿ ನೀಡಿದೆ. ಇದು ತುಂಬಾ ಹೆಮ್ಮೆ ಮತ್ತು ಗೌರವದ ಸಂಗತಿ... ಇದು ಪ್ರವಾಸೋದ್ಯಮ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿರುವ ಟ್ರಾವೆಲ್ ಮಾರ್ಟ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿದೇಶಕರು ಆಗಿರುವ ಕೆ.ಮೋಹನ್ ಸುಂದರ್ ಅವರ ಮಾತು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

21ನೇ ವಯಸ್ಸಿಗೆ ಸ್ವಂತ ಕಂಪನಿ ಹುಟ್ಟು ಹಾಕಿದ ಯಶಸ್ವಿ ಉದ್ಯಮಿ ಮೋಹನ್ ಸುಂದರ್, ಈ ಹಾದಿಯಲ್ಲಿ ತಮ್ಮ ಮೊದಲ ಹೆಜ್ಜೆಯನ್ನು ಮೆಲುಕು ಹಾಕುತ್ತ ಮಾತು ಆರಂಭಿಸಿದರು.

ಆರ್ಥಿಕವಾಗಿ ಅಷ್ಟೇನು ಸಬಲರಾಗಿಲ್ಲದ ಕಾರಣ ಶಿಕ್ಷಣ ಮುಂದುವರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ 17ನೇ ವಯಸ್ಸಿಗೆ ಕೆಲಸಕ್ಕೆ ಸೇರಬೇಕಾಯಿತು. ಮೊದಲ ದಿನದಿಂದಲೂ ನಾನು ಪ್ರವಾಸೋದ್ಯಮದಲ್ಲಿ ಕೆಲಸ ಮಾಡುತ್ತಿದ್ದೇನೆ. ಹೀಗಾಗಿ ಇದೇ ಕ್ಷೇತ್ರದಲ್ಲಿ ಮುಂದುವರಿಯುವ ಬಯಕೆ ಇತ್ತು. ಅದರಂತೆ 21ನೇ ವಯಸ್ಸಿಗೆ ನಾನು ಸ್ವಂತ ಟ್ರಾವೆಲ್ ಸಂಸ್ಥೆ ಆರಂಭಿಸಿದೆ. ಇದೀಗ 16 ವರ್ಷಗಳನ್ನು ಪೂರೈಸಿ ಯಶಸ್ವಿಯಾಗಿ ಕಂಪನಿ ಮುನ್ನಡೆಯುತ್ತಿದೆ.



ಅತ್ಯುತ್ತಮ ಗಾಯಕಿ ಪ್ರಶಸ್ತಿ ಪಡೆದ ಶೃತಿ ಪ್ರಹ್ಲಾದ ಅವರೊಂದಿಗೆ ಆರ್ ಅಶೋಕ್, ಪ್ರಿಯಾಂಕಾ ಉಪೇಂದ್ರ, ಕೆ.ಮೋಹನ್ ಸುಂದರ್.

ಜನರಿಗೆ ಅಂತರರಾಷ್ಟ್ರೀಯ ಪ್ರವಾಸದ ಸೌಲಭ್ಯಗಳನ್ನು ನಾವು ನೀಡುತ್ತೇವೆ. ಅಗ್ಗವಾಗಿ ವಿದೇಶ ಪ್ರವಾಸ ಮಾಡಲು ನಮ್ಮ ಸಂಸ್ಥೆ ಜನರಿಗೆ ಮೊದಲ ಆಯ್ಕೆ. ಸತತ ಮೂರು ವರ್ಷಗಳಿಂದ ಎಕನಾಮಿಕ್ ಟೈಮ್ಸ್ ಬೆಸ್ಟ್ ಟ್ರಾವೆಲ್ ಆಪರೇಟರ್ ಅವಾರ್ಡ್ ಪಡೆದುಕೊಂಡಿದ್ದೇವೆ. ಹಲವು ಅಂತರರಾಷ್ಟ್ರೀಯ ಪ್ರವಾಸೋದ್ಯಮ ಸಂಸ್ಥೆ ಮತ್ತು ಪ್ರವಾಸೋದ್ಯಮ ಸಚಿವಾಲಯಗಳ ಜೊತೆಗೆ ನಮ್ಮ ಸಂಸ್ಥೆ ಸಂಪರ್ಕದಲ್ಲಿದೆ.

ಪ್ರವಾಸದಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳಲ್ಲಿ ನಾವೂ ಗ್ರಾಹಕರಿಗೆ ಸಹಕಾರ ನೀಡುತ್ತೇವೆ. ಹಲವರು ವಿದೇಶಗಳಲ್ಲಿ ತಮ್ಮ ಪಾಸ್‌ಪೋರ್ಟ್‌ಗಳನ್ನು ಕಳೆದುಕೊಂಡ ಪ್ರಸಂಗಗಳೂ ನಡೆದಿವೆ. ಅಂತಹ ಸಂದರ್ಭಗಳಲ್ಲಿ ಕುಟುಂಬದವರಂತೆ ನಾವು ಅವರ ಜೊತೆಗಿದ್ದು, ಮರಳಿ ಕರೆತಂದಿದ್ದೇವೆ.

ಕರ್ನಾಟಕದಲ್ಲೀಗ ಎಲ್ಲ ಮನೆಗಳಿಗೂ ನಮ್ಮ ಟ್ರಾವೆಲ್‌ಮಾರ್ಟ್ ಪ್ರವಾಸಿ ಸಂಸ್ಥೆ ಗೊತ್ತಿದೆ. ಈ ಬಗ್ಗೆ ಜನರೇ ಮಾತನಾಡುತ್ತಿದ್ದಾರೆ. 'ಬೆಸ್ಟ್ ಟ್ರಾವೆಲ್ ಪಾರ್ಟನರ್' ಎಂದು ಹುರಿದುಂಬಿಸಿದ್ದಾರೆ.

ಸವಾಲುಗಳನ್ನು ಅನುಭವವಾಗಿ ಸ್ವೀಕರಿಸಬೇಕು. ಆರಂಭದ ದಿನಗಳಿಂದಲೂ ಪ್ರತಿದಿನವೂ ಹೊಸತನ್ನು ಕಲಿತಿದ್ದೇವೆ. ಕೋವಿಡ್ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳನ್ನು ಒಟ್ಟಾಗಿ ನಿಭಾಯಿಸಿದ್ದೇವೆ. ಯಾವುದೇ ಸವಾಲುಗಳನ್ನು ನಿಭಾಯಿಸಲು ತಾಳ್ಮೆ ಅತಿ ಮುಖ್ಯ.

ಯುವಕರು ಉದ್ಯಮದತ್ತ ಒಲವು ತೋರುವುದು ಒಳ್ಳೆಯ ವಿಚಾರ. ಆದರೆ ಉದ್ಯಮದಲ್ಲಿ ಸ್ಥಿರತೆ ಬೇಕು. ಮುಖ್ಯವಾಗಿ ತಾಳ್ಮೆ ಬೇಕು. ಮೊದಲ ಸಾವಿರ ದಿನ ಕಾಯಬೇಕು. ಉದ್ಯಮಕ್ಕೆ ಹಣ ಮಾತ್ರ ಬಂಡವಾಳವಲ್ಲ, ಸಮಯ ಮತ್ತು ಪರಿಶ್ರಮವೂ ಬಂಡವಾಳವೇ. ಅವಸರದ ನಿರ್ಧಾರ-ತೆಗೆದುಕೊಳ್ಳುವುದು ತಪ್ಪು. ಸರಿಯಾದ ಮಾರ್ಗದರ್ಶನ, ಯೋಜನೆ ಮತ್ತು ಪರಿಶ್ರಮ ಇದ್ದರೆ ಉದ್ಯಮದಲ್ಲಿ ಯಶಸ್ಸು ಸಾಧ್ಯ ಎಂದರು.